ಸಂಪುಟ ೧೬
ಸಂಚಿಕೆ ೧-೨

ಕರ್ನಾಟಕ ಭಾರತಿ

ಡಾ. ಫ. ಗು. ಹಳಕಟ್ಟಿ ಜನ್ಮಶತಮಾನೋತ್ಸವ

ವಿಶೇಷಾಂಕ

ಸ್ವಾತಂತ್ರ್ಯೋತ್ಸವ–ರಾಜ್ಯೋತ್ಸವ
ಸಂಯುಕ್ತ ಸಂಚಿಕೆ

ಅಗಸ್ಟ ಮತ್ತು ನವಂಬರ, ೧೯೮೩

ತ್ರೈಮಾಸಿಕ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ. ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸ ಬೇಕು.

ಲೇಖಕರಿಗೆ ಅದರ ಲೇಖನಗಳ ೨೫ ಪ್ರತಿಗಳನ್ನು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, ಕರ್ನಾಟಕ ಭಾರತಿ, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿ ಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಬರೆಯಬೇಕು.

'ಕರ್ನಾಟಕ ಭಾರತಿ'

೧ ಸ್ವಾತಂತ್ರ್ಯೋತ್ಸವ ಸಂಚಿಕೆ   ೨ ರಾಜ್ಯೋತ್ಸವ ಸಂಚಿಕೆ

೩ ಸಂಕ್ರಮಣ ಸಂಚಿಕೆ   ೪ ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ: ರೂ ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ರೂ. ಮಾತ್ರ ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲದೆ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೭ ಸಂಚಿಕೆ : ೧–೨

ಪ್ರಧಾನ ಸಂಪಾದಕರು :

ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು :

ಡಾ. ಎಂ. ಬಿ. ಕೊಟ್ರಶೆಟ್ಟಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೬ ಸಂಚಿಕೆ : ೧-

ಡಾ. ಫ. ಗು. ಹಳಕಟ್ಟಿ ಜನ್ಮಶತಮಾನೋತ್ಸವ ವಿಶೇಷಾಂಕ

ಸ್ವಾತಂತ್ರ್ಯೋತ್ಸವ-ರಾಜ್ಯೋತ್ಸವ ಸಂಯುಕ್ತ ಸಂಚಿಕೆ

ಅಗಸ್ಟ ಮತ್ತು ನವಂಬರ, ೧೯೮೩

ಪ್ರಕಾಶಕರು :

ಎಸ್. ಬಿ. ನಾಯಕ, ಎಂ. ಎ.
ನಿರ್ದೇಶಕರು
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಎಚ್. ಗಂಗಯ್ಯ, ಎಂ.ಎಸ್‌ಸಿ.
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಪ ರಿ ವಿ ಡಿ

ಹೀಗಿದ್ದರು, ಹಳಕಟ್ಟಿ

● ಸ. ಸ. ಮಾಳವಾಡ

೧. ಜೀವನವಾಹಿನಿ :

ಗುರುಬಸಪ್ಪ ಹಳಕಟ್ಟಿ ಧಾರವಾಡ ಪ್ರದೇಶದ ಕನ್ನಡ ಶಾಲಾ ಶಿಕ್ಷಕ. ಧಾರವಾಡದ ಮಿಶನ್ ಇಂಗ್ಲೀಷ್ ಶಾಲೆಯಲ್ಲಿ ಮತ್ತು ಕನ್ನಡ ಟ್ರೇನಿಂಗ ಕಾಲೇಜಿನಲ್ಲಿ ಶಿಕ್ಷಣ ಪಡೆದರು. ಮುಂದೆ ಟ್ರೇನಿಂಗ್ ಕಾಲೇಜಿನಲ್ಲಿ ಕೆಲ ಕಾಲ ಅಧ್ಯಾಪಕ ವೃತ್ತಿಯೂ ನಡೆಯಿತು. ಅಂದು ಕನ್ನಡ ಪುನರುಜ್ಜೀವನದ ಮಂತ್ರ ಬೋಧಿಸಿದ ಡೆಪೂಟಿ ಚೆನ್ನಬಸಪ್ಪನವರ ಪ್ರಭಾವಕ್ಕೆ ಒಳಗಾಗಿ ಅದರ ಅನುಷ್ಠಾನದಲ್ಲಿ ತೊಡಗಿದ ತರುಣರಲ್ಲಿ ಗುರುಬಸಪ್ಪ ಒಬ್ಬರಾಗಿದ್ದರು. ಕೆಲವು ಕನ್ನಡ ಗ್ರಂಥಗಳನ್ನೂ ಅವರು ರಚಿಸಿದ್ದಾರೆ. ಅವರು ೨–೭–೧೮೮೦ ರಂದು ಗಂಡುಮಗುವನ್ನು ಪಡೆದರು. ಆ ಮಗುವೇ ವಚನ ಪಿತಾಮಹ ಫ. ಗು. ಹಳಕಟ್ಟಿ. ಅವರಿಗೆ ಕನ್ನಡ ನುಡಿ ನಾಡುಗಳ ಪ್ರೇಮ ವ್ಯಾಸಂಗನಿಷ್ಠೆ, ಸದಾಚಾರಗಳು ತಂದೆಯಿಂದ ಬಳುವಳಿಯಾಗಿ ಬಂದವು. ಅಂದು ಕನ್ನಡದ ಪ್ರೌಢ ವ್ಯಾಸಂಗಕ್ಕೆ ಅನುಕೂಲತೆಗಳಿರಲಿಲ್ಲ. ಆದರೂ ಅಂತಹ ವ್ಯಾಸಂಗಕ್ಕಾಗಿ ತಾವು ಟ್ರೇನಿಂಗ್ ಕಾಲೇಜ ಅಧ್ಯಾಪಕರ ನೆರವು ಪಡೆದುದನ್ನು ಫ. ಗು. ಹಳಕಟ್ಟಿಯವರು ಉಲ್ಲೇಖಿಸಿದ್ದಾರೆ.

ಧಾರವಾಡದಲ್ಲಿ ಮಾಧ್ಯಮಿಕ ಶಾಲೆಯ ವ್ಯಾಸಂಗ ಪೂರೈಸಿದ ಫ. ಗು. ಹಳಕಟ್ಟಿ ಮುಂಬಯಿಯ ಸೇಂಟ್ ಜೇವಿಯರ್ ಕಾಲೇಜಿನಲ್ಲಿ ಪ್ರವೇಶ ಪಡೆದರು. ಅಂದು ಆ ಕಾಲೇಜಿನಲ್ಲಿ ಅಧ್ಯಾಪಕರಾದವರು ದೈವೀ ಸೇವಕರಾಗಿದ್ದರು. ವಿರಕ್ತ ಮನೋಭಾವದವರಾಗಿದ್ದರು. ಸಂಬಳ, ಸಂಸಾರದ ಪ್ರಯೋಜನ, ಪ್ರತಿಷ್ಠೆ, ಪ್ರಸಿದ್ಧಿಗಳನ್ನು ಗಮನಿಸದೆ ವ್ಯಾಸಂಗ ನಿಷ್ಠೆ, ಲೋಕಸೇವೆಗಳಿಗಾಗಿ ತಮ್ಮ ಬದುಕನ್ನು ಬುದ್ಧಿಶಕ್ತಿಯನ್ನು ಮುಡುಪಾಗಿಟ್ಟವರಾಗಿದ್ದರು. ಅಂತಹ ಅಧ್ಯಾಪಕರ ಆದರ್ಶದ ಪ್ರಭಾವ ವಿದ್ಯಾರ್ಥಿ ಫ. ಗು. ಹಳಕಟ್ಟಿ ಅವರಲ್ಲಿ ಮೂಡಿಬಂದಿತು.

ಎಳೆ ವಯಸ್ಸಿನಲ್ಲಿ ಮದುವೆಯಾದ ಫ. ಗು. ಹಳಕಟ್ಟಿ ಅವರಿಗೆ ರೆ। ಕಿಟೆಲ್ ಅವರು ಕನ್ನಡ ಡಿಕ್ಷನರಿಯನ್ನು ಉಡುಗೊರೆಯಾಗಿ ಕೊಟ್ಟರಂತೆ ! ಇದೊಂದು ಸಾಂಕೇತಿಕ ಘಟನೆಯಾಗಿದೆ.

ಒಂದು ಕಡೆಗೆ ತಂದೆಯ ಸದಾಚಾರ, ಸತ್ಪ್ರೇರಣೆಗಳು, ಇನ್ನೊಂದೆಡೆಗೆ ಅಂದಿನ ಅಧ್ಯಾಪಕರ ಧ್ಯೇಯನಿಷ್ಠೆ, ಸೇವಾಮನೋಭಾವಗಳು ಸೇರಿ ತರುಣ ಹಳಕಟ್ಟಿ ಅವರ

ಜೀವನದ ಗುರಿ ರೂಪಿತವಾಯಿತು. ೧೯೦೨ರಲ್ಲಿಯೇ ಪದವೀಧರನಾದ ಈ ತರುಣ ಸರಕಾರೀ ನೌಕರಿಯ ಸ್ವಯಂವರ ಮಂಟಪದತ್ತ ಸುಳಿಯುವ ಮನಸ್ಸು ಮಾಡಿದ್ದರೆ ಆ ರಾಜಕುಮಾರಿಯ ಹೂಮಾಲೆ ಬಹಳ ಸುಲಭವಾಗಿ ಆತನ ಕೊರಳಿಗೆ ಬೀಳು ತ್ತಿತ್ತು. ಹಾಗೆ ಆಗಿದ್ದರೆ ಫ. ಗು. ಹಳಕಟ್ಟಿ ರಿಟಾಯರ್ಡ್ ಕಲೆಕ್ಟರ್ ಆಗಿ ಉಳವಿ ಬಸಪ್ಪನ ಗುಡ್ಡದ ಮೇಲೆ ಭವ್ಯ ಬಂಗಲೆ ಕಟ್ಟಿಸಿ ಸಕಲ ಭೋಗಗಳಿಂದ ಅಲ್ಲಿ ತಮ್ಮ ಕುಟುಂಬದವರೊಂದಿಗೆ ಹಾಯಾಗಿ ಬಾಳಬಹುದಾಗಿತ್ತು. ಆದರೆ ಅವರು ಆರಿಸಿ ಕೊಂಡದ್ದು ಬಡತನದ ಬಾಳನ್ನು, ನಿಷ್ಠೆಯ ಜೀವನವನ್ನು, ಸೇವಾಭಾವದ ಚಟು ವಟಿಕೆಗಳನ್ನು. ಅಂತೆಯೇ ಈಗ ಅವರ ಮಗನ ವಾಸಕ್ಕಾಗಿ ಮನೆಕಟ್ಟಿಸಿಕೊಡುವ ವಿಚಾರವನ್ನು ಸಾರ್ವಜನಿಕರು ಮಾಡಬೇಕಾದ ಸನ್ನಿವೇಶ ತಲೆದೋರಿದೆ.

ಅವರು ನಡೆದ ಬಾಳಿನ ಹಾದಿಯಿಂದಾಗಿ 'ಫಕೀರ' ಎಂಬ ಅವರ ಅಂಕಿತನಾಮ ಅನ್ವರ್ಥಕವಾಗಿ ಪರಿಣಮಿಸಿತು. ಲಾಭದಾಯಕ ವಕೀಲಿ ಉದ್ಯೋಗವನ್ನು ಅಲಕ್ಷಿಸಿ ತಾಡವಾಲಿ ಹಸ್ತಪ್ರತಿಗಳ ಸಂಗ್ರಹದ ಕಾರ್ಯ ಕೈಕೊಂಡ ಅವರನ್ನು ಅಂದಿನ ಲೌಕಿಕ ಜಾಣರು 'ಹುಚ್ಚ' ಎಂದೂ ಕರೆದುದುಂಟು. ಮನೆ, ಮಡದಿ, ಮಕ್ಕಳನ್ನೂ ಮರೆತು ಕೈಬರಹದ ಗ್ರಂಥ, ಸಾರ್ವಜನಿಕ ಚಟುವಟಿಕೆಗಳ ಬಗೆಗೆ ಹೆಚ್ಚಿನ ಆಸ್ಥೆ ತೋರಿದ ಅವರು 'ಸನ್ಯೇಸಿ' ಎಂಬ ಬೈಗುಳವನ್ನೂ ಪಡೆದಿರಬಹುದು. ಆದರೆ ಅವರು ಒಬ್ಬ ಆಧುನಿಕ ಶರಣನಂತೆ ಬಾಳಿ, ವಚನ ಸಾಹಿತ್ಯಕ್ಕೆ ಕನ್ನಡ ನುಡಿಗೆ, ನಾಡಿಗೆ, ಜನಕ್ಕೆ ಅಮೋಘ ಸೇವೆ ಸಲ್ಲಿಸಿದರು. ಅವರನ್ನು ಕಾಣುವ, ಅವರೊಂದಿಗೆ ಕಾರ್ಯಮಾಡುವ ಅವಕಾಶ ಪಡೆದವರ ಧನ್ಯತೆಯೇ ಧನ್ಯತೆ !

ಡೆಪೂಟಿ ಚೆನ್ನಬಸಪ್ಪನವರ ಕನ್ನಡ ಮಂತ್ರಬೋಧೆಯ ಅವಧಿಯಲ್ಲಿ ಇನ್ನೊಂದು ಮಹತ್ವಪೂರ್ಣ ಸಂಗತಿಯು ನಡೆಯಿತು. ಅದೆಂದರೆ ಇಲ್ಲಿ ಆಗಮಿಸಿದ ಕ್ರಿಶ್ಚಿಯನ್ ಮಿಶನರಿಗಳಲ್ಲಿ ಕೆಲವರು ದೇಶಭಾಷೆಗಳ ಸಾಹಿತ್ಯದ ವ್ಯಾಸಂಗ ಕೈಕೊಂಡದ್ದು; ಅವುಗಳ ಪ್ರಚಾರದ ವ್ಯವಸ್ಥೆ ಮಾಡಿದ್ದು. ಇದರ ಫಲವಾಗಿ ರಾಯಲ್ ಏಸಿಯಾಟಿಕ್ ಸೊಸಾಯಿಟಿಯ ಮುಂಬಯಿ ವಿಭಾಗದ ವಿದ್ವತ್ಪತ್ರಿಕೆಯಲ್ಲಿ ಬಸವ ಪುರಾಣ, ಚೆನ್ನ ಬಸವ ಪುರಾಣಗಳ ಸಾರಸಂಗ್ರಹ ಆಂಗ್ಲ ಭಾಷೆಯಲ್ಲಿ ೧೮೬೦ರ ಸುಮಾರಿಗೇ ಪ್ರಕಟ ವಾದವು. ವೀರಶೈವ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ಕಾರ್ಯ ಈಗ ನಡೆದಂತಾಯಿತು. ಆದರೆ ವಚನ ಸಾಹಿತ್ಯದ ಪ್ರಕಟನೆ ಪ್ರಚುರತೆಗಳಿಗಾಗಿ ಮಿಶನರಿಗಳು ಕೈಯಿಕ್ಕಲಿಲ್ಲವೆಂಬುದು ಮಹತ್ವದ ಅಂಶವಾಗಿದೆ. ಅವರು ಹಾಗೆ ಬೇಕೆಂದೇ ಕೈಬಿಟ್ಟರೆಂಬ ಅಭಿಪ್ರಾಯವೂ ಒಂದಿದೆ. ಅದೇನಿದ್ದರೂ ಈ ಕಾರ್ಯವು ವಚನಪಿತಾಮಹ ಫ. ಗು. ಹಳಕಟ್ಟಿ ಅವರ ಆಗಮನವನ್ನು ನಿರೀಕ್ಷಿಸು ವಂತಿತ್ತು.

ಬಿ. ಎ. ಪದವೀಧರ ತರುಣ ಹಳಕಟ್ಟಿ ಸರಕಾರೀ ಸೇವೆಯತ್ತ ಸಾಗಲಿಲ್ಲ. ಲೋಕಸೇವೆಗೆ ಅನುಕೂಲವೆಂಬ ದೃಷ್ಟಿಯಿಂದ ಅವರು ವಕೀಲೀ ಅಭ್ಯಾಸವನ್ನು ಕೈಕೊಂಡರು. ಆದರೆ ವಕೀಲೀ ಪದವೀ ಪಡೆದು ಆ ವೃತ್ತಿಯನ್ನು ಆರಂಭಿಸುವ ಪೂರ್ವದಲ್ಲಿಯೇ ವಚನಸಾಹಿತ್ಯವೆಂಬ ರತ್ನದ ಖನಿಯತ್ತ ಅವರು ಆಕರ್ಷಿತರಾದರು. ೧೯೦೩ರಲ್ಲಿ ನಡೆದ ಒಂದು ಸ್ವಾರಸ್ಯಕರ ಘಟನೆ ಐತಿಹಾಸಿಕ ಮಹತ್ವದ್ದಾಗಿ ಪರಿಣಮಿಸಿತು. ಆಗ ಧಾರವಾಡದ ಒಬ್ಬ ಸದ್ಗೃಹಸ್ಥರ ಮನೆಯಲ್ಲಿ ಭೋಜನಕೂಟವನ್ನು ಏರ್ಪಡಿಸಲಾಗಿತ್ತು. ತರುಣ ಪದವೀಧರ ಹಳಕಟ್ಟಿಯವರನ್ನು ಆಮಂತ್ರಿಸಲಾಗಿತ್ತು. ಭೋಜನಪೂರ್ವದಲ್ಲಿ ಹಿರಿಯರು ಲೋಕಾಭಿರಾಮವಾದ ಹರಟೆಯಲ್ಲಿ ತೊಡಗಿದ್ದರು. ಮನೆಯ ಬೇರೊಂದು ಭಾಗದಲ್ಲಿ ಇದ್ದ ತಾಡವಾಲಿ ಗ್ರಂಥಗಳು ತರುಣ ಹಳಕಟ್ಟಿಯವರನ್ನು ಆಕರ್ಷಿಸಿದವು. ಅವುಗಳನ್ನು ಅವಲೋಕಿಸುತ್ತ ಅವರು ಅಲ್ಲಿಯೇ ಉಳಿದರು. ಎಲ್ಲರೂ ಭೋಜನಶಾಲೆಯತ್ತ ಸಾಗಿದರು. ಅಲ್ಲಿ ಊಟ ಆರಂಭಿಸುವ ಹೊತ್ತಿಗೆ ಹಳಕಟ್ಟಿ ಅವರ ಸುಳಿವೇ ಇರಲಿಲ್ಲ. "ಫಕೀರಪ್ಪ ಎಲ್ಲಿ ?" ಎಂಬ ಉದ್ಗಾರ ಹೊರಟಿತು. ಸುಗ್ರಾಸ ಭೋಜನವನ್ನೂ ಮರೆತು ವಚನ ಸಾಹಿತ್ಯದ ರಸಾಸ್ವಾದನೆಯಲ್ಲಿ ತೊಡಗಿದ್ದರು ಹಳಕಟ್ಟಿ. ಅಂದು ಆರಂಭವಾದ ಈ ಬಗೆಯ ಆಕರ್ಷಣೆ ಮುಂದೆ ಪ್ರಬಲವಾದ ಹವ್ಯಾಸ, ಪವಿತ್ರ ಕಾಯಕ, ಅನಿವಾರ್ಯ ತಪಸ್ಸು ಆಗಿ ಪರಿಣಮಿಸಿತು. ಅದು ಉಪಜೀವನದ ಮಾರ್ಗವನ್ನೂ ಅಲಕ್ಷಿಸುವ ದಿಸೆಯಲ್ಲಿ ಬೆಳೆಯಿತು. ಅರುವತ್ತಕ್ಕೆ ಮೇಲ್ಪಟ್ಟ ವರುಷಗಳವರೆಗೆ, ಅಂದರೆ ಕೊನೆಯುಸಿರು ಎಳೆಯುವವರೆಗೆ ಹಳಕಟ್ಟಿ ವಚನ ಸಾಹಿತ್ಯದ ಆರಾಧನೆಯಲ್ಲಿ ನಿರತರಾದರು. ಇಷ್ಟೊಂದು ದೀರ್ಘ ಅವಧಿಯ, ಒಂದೇ ಮನದ ಈ ಕಾರ್ಯವು ಹಳಕಟ್ಟಿ ಜೀವನದ ಮಹತ್ಸಾಧನೆಯಾಗಿದೆ. ಅದೊಂದು ಅಪೂರ್ವ ಉದಾಹರಣೆಯಾಗಿದೆ.

ಅವರು ವಿಜಾಪುರದಲ್ಲಿ ವಕೀಲಿಯನ್ನು ಆರಂಭಿಸಿದ್ದು ೧೯೦೪ ರಲ್ಲಿ. ಅದೇ ಕಾಲಕ್ಕೆ ಅವರು ತಾಡವಾಲಿ ಗ್ರಂಥಗಳ ಸಂಗ್ರಹದ ಕಾರ್ಯವನ್ನೂ ಆರಂಭಿಸಿದ್ದರು.

ಮೊದಲು ಅವರು ವಿವಿಧ ವೀರಶೈವ ಮಠಗಳಲ್ಲಿ ಧೂಳಿಯಿಂದ ಆವೃತವಾಗಿ ಇಲ್ಲವೆ ಲೌಕಿಕರ ಮನೆಯ ಗದ್ದಿಗೆಯ ಮೇಲೆ ಪೂಜೆ ಪಡೆಯುತ್ತಿದ್ದ ಗ್ರಂಥಗಳನ್ನು ಸಂಗ್ರಹಿಸತೊಡಗಿದರು. ಈಗಲೂ ಸುಲಭವಲ್ಲದ ಈ ಬಗೆಯ ಕಾರ್ಯದಲ್ಲಿ ಅವರು ಅಂದು ಹಲವು ತೊಡಕುಗಳನ್ನು ಎದುರಿಸಬೇಕಾಯಿತು. ಆ ಗ್ರಂಥಗಳನ್ನು ಅವಲೋಕಿಸಿ ಅವು ಅಮೂಲ್ಯವೆಂಬುದನ್ನು ಅರಿತುಕೊಂಡರು. ಒಬ್ಬೊಬ್ಬ ಶರಣನ ವಚನಗಳು ಬೇರೆ ಬೇರೆ ಕಟ್ಟುಗಳಲ್ಲಿ ಚೆದರಿ ನಿಂತಿದ್ದವು. ಮೊದಲು ಅವುಗಳ ಪ್ರತಿ ಮಾಡಿಸುವ ಕಾರ್ಯವನ್ನು ಹಳಕಟ್ಟಿಯವರು ಕೈಕೊಂಡರು. ಇಂತಹ ಕಾರ್ಯಕ್ಕಾಗಿ ಸರಕಾರ, ವಿಶ್ವವಿದ್ಯಾಲಯ, ಯು.ಜಿ.ಸಿ.ಗಳ ಸಹಾಯಧನದ ಅವಕಾಶ, ಇತರ ಸೌಲಭ್ಯಗಳು ಆಗ ಲಭ್ಯವಿರಲಿಲ್ಲ.

ವಚನಗಳ ಪ್ರತಿ ಮಾಡಿಸಿದ ನಂತರ ಒಬ್ಬೊಬ್ಬ ವಚನಕಾರನ ಇಲ್ಲವೆ ವಚನ ಕಾರ್ತಿಯ ವಚನಗಳು ಒಂದೆಡೆ ಬರುವಂತೆ ಅವುಗಳನ್ನು ಸಂಕಲಿಸುವ ಕಾರ್ಯ ಕೈಕೊಳ್ಳಲಾಯಿತು. ಇದಿಷ್ಟೇ ಒಂದು ಮಹತ್ವದ ಸಂಗತಿಯಾಗಿ ಪರಿಣಮಿಸಿತು. ಈ ಮೊದಲು ಸುಮಾರು ೫೦ ವಚನಕಾರರ ಹೆಸರುಗಳು ತಿಳಿದುಬಂದಿದ್ದವು. ಹಳಕಟ್ಟಿ ಯವರು ಕೈಕೊಂಡ ಕಾರ್ಯದಿಂದಾಗಿ ಸುಮಾರು ೨೫೦ ವಚನಕಾರ ವಚನಕಾರ್ತಿಯರ ಹೆಸರುಗಳು ತಿಳಿದು ಬರುವಂತಾಯಿತು.

ನಂತರ ತಾಡವಾಲಿ ಗ್ರಂಥಗಳಲ್ಲಿಯ ಅಮೂಲ್ಯ ಜ್ಞಾನ ಭಾಂಡಾರವನ್ನು ಬೆಳಕಿಗೆ ತರುವ ಯೋಜನೆಯನ್ನು ಹಳಕಟ್ಟಿಯವರು ರೂಪಿಸಿಕೊಂಡರು. ಈ ಕಾರ್ಯ ಸುಲಭಸಾಧ್ಯವಾಗಿರಲಿಲ್ಲ. ಶೀಘ್ರವಾಗಿ ನಡೆಯುವಂತಹದೂ ಆಗಿರಲಿಲ್ಲ. ಅವರು ಆಗ ಕೈಕೊಂಡುದು 'ಸಾಹಿತ್ಯ ಸೇವೆ' ಮಾತ್ರವಾಗಿರಲಿಲ್ಲ. ಅದೊಂದು ದೀರ್ಘ "ವಾಙ್ಮಯ ತಪಸ್ಸು" ಆಗಬೇಕಾಯಿತು. ಹಳಕಟ್ಟಿಯವರು ಆ ತಪಸ್ಸಿನಲ್ಲಿ ನಿರತ ರಾಗಿ ಕೊನೆಯುಸಿರು ಎಳೆಯುವವರೆಗೆ ಅದನ್ನು ಮುಂದುವರಿಸಿಕೊಂಡು ಹೋದರು. ಈ ಬಗೆಯ ತಪಸ್ಸು ಕೈಕೊಂಡ ಆಧುನಿಕರು ಅತಿ ವಿರಳ. ಅವರು ಈಡೇರಿಸಿದ ಕಾರ್ಯದ ಪ್ರಮಾಣದಲ್ಲಿ ಅವರಿಗೆ ಪ್ರಶಸ್ತಿ ಪ್ರತಿಷ್ಠೆಗಳು ಅವರ ಜೀವಮಾನದಲ್ಲಿ ದೊರೆಯಲಿಲ್ಲ. ಡಾ. ಹಳಕಟ್ಟಿಯವರ ಭಂಡವಲನ್ನು ಬಳಸಿಕೊಂಡವರು ಅವರಿ ಗಿಂತ ಹೆಚ್ಚಿನ ಸ್ಥಾನಮಾನ, ಪ್ರಯೋಜನಗಳನ್ನು ಪಡೆದುಕೊಂಡವರು ಇದ್ದಾರೆ. ಅಲ್ಲದೆ ಹೊಸ ಪರಿಸ್ಥಿತಿಯಲ್ಲಿ ಲಭ್ಯವಾದ ವಿಪುಲ ಅನುಕೂಲತೆಗಳನ್ನು ಬಳಸಿಕೊಂಡು ಆಕರ್ಷಕ ಬಾಹ್ಯರೂಪದ ಬೃಹತ್‌ಗಾತ್ರದ, ವಿಷಯ ಸಂಕಲನ ಗ್ರಂಥಗಳನ್ನು ಪ್ರಕಟಿ ಸಲು ಸಮರ್ಥರಾದವರೂ ಇದ್ದಾರೆ. ಹೀಗೆ ಮಾಡುವಾಗ ತಾವು ಹಳಕಟ್ಟಿಯವರನ್ನು ಹಿಂದೆ ಸರಿಸುವಂತಹ ಕಾರ್ಯ ಮಾಡಿದೆವೆಂಬ ಭ್ರಮೆಗೆ ಅವರೂ ಅವರ ಕೆಲವು ಅನು ಯಾಯಿಗಳೂ ಒಳಗಾಗಬಹುದು. ಈಗ ಹೊಸ ತಲೆಮಾರಿನ ವಿದ್ವಾಂಸರು ವಚನ ಸಾಹಿತ್ಯವನ್ನು ಕುರಿತು ಹೊಸ ದೃಷ್ಟಿಯ ವ್ಯಾಸಂಗ ವಿಶ್ಲೇಷಣೆ, ಸಂಶೋಧನೆಗಳಿಗೆ ತೊಡಗಿದ್ದಾರೆ. ಇದರಿಂದ ವಚನ ಸಾಹಿತ್ಯದ ಮೌಲಿಕತೆಯು ಇನ್ನಿಷ್ಟು ಸ್ಪಷ್ಟವಾಗ ತೊಡಗಿದೆ. ಇದರಿಂದಾಗಿ ವಚನ ಸಾಹಿತ್ಯದ ಖನಿಯನ್ನು ಬಯಲಿಗೆ, ಬೆಳಕಿಗೆ ತಂದು ವಚನಗಳ ವ್ಯಾಸಂಗವನ್ನು ಜನತೆಯಲ್ಲಿ ಪ್ರಚೋದಿಸಿದ ವಚನಪಿತಾಮಹರ ಬಗೆಗೆ ನಮ್ಮ ಕೃತಜ್ಞತಾ ಭಾವವು ಇನ್ನೂ ಹೆಚ್ಚಾಗಬೇಕು.

ವಚನ ಗ್ರಂಥಗಳ ಸಂಗ್ರಹ ಮತ್ತು ಸಂಶೋಧನೆಯ ಫಲವಾಗಿ ಹಳಕಟ್ಟಿ ಅವರು "ವಚನಶಾಸ್ತ್ರ"ವನ್ನು ಕಂಡುಕೊಂಡರು. ಕಾಲಕ್ರಮದಲ್ಲಿ ಅದನ್ನು ಪ್ರಕಟಿಸಿದರು. ತನ್ಮೂಲಕ ವಚನ ಸಾಹಿತ್ಯದ ಘನತೆಯನ್ನು ಜನತೆ ಅರಿಯುವಂತಾಯಿತು. ಅದರಿಂದ ಪ್ರಭಾವಿತರಾಗಿ ಕೆಲವು ಹಿರಿಯ ವಿದ್ವಾಂಸರು ವಚನ ಸಾಹಿತ್ಯ, ವೀರಶೈವ ಕಾವ್ಯಗಳ ವ್ಯಾಸಂಗ ಕೈಕೊಂಡು ಮಹತ್ವಪೂರ್ಣ ಕೃತಿಗಳನ್ನು ಸಿದ್ಧಗೊಳಿಸಿದರು. ಈ ಕೃತಿಗಳು

ಹೊಸ ತಲೆಮಾರಿನವರ ವ್ಯಾಸಂಗ ಸಂಶೋಧನೆಗಳಿಗೆ ಉಪಯುಕ್ತ ಸಾಧನಗಳಾಗಿ ಪರಿಣಮಿಸಿವೆ. ಇಂತಹ ಹಿರಿಯ ವಿದ್ವಾಂಸರಲ್ಲಿ ಎಂ. ಆರ್. ಶ್ರೀನಿವಾಸಮೂರ್ತಿ, ಡಾ. ರಂ. ರಾ. ದಿವಾಕರ. ಪ್ರೊ. ಬಸವನಾಳರ ಹೆಸರುಗಳನ್ನು ಉಲ್ಲೇಖಿಸಬಹುದು. ಹೀಗೆ ಹಳಕಟ್ಟಿಯವರು ಪರಮ ಗುರುವಿನ ಸ್ಥಾನಕ್ಕೆ ಅರ್ಹರಾಗಿದ್ದಾರೆ.

ಅವರು ವಹಿಸಿದ ಶ್ರಮದ, ತೋರಿದ ತಾಳ್ಮೆಯ ಕಲ್ಪನೆಯು ಹೊಸ ತಲೆಮಾರಿನವರಿಗೆ ಆಗದೆಯಿರುವ ಸಂಭವವೂ ಇದೆ. ಸಂಗ್ರಹ, ವಾಚನಗಳ ನಂತರ ಹಳಕಟ್ಟಿಯವರು ಬಹುದಿನಗಳವರೆಗೆ ಒಬ್ಬೊಬ್ಬ ವಚನಕಾರನ ವಚನಗಳನ್ನು ಒಂದೆಡೆ ಸೇರಿಸುವ ಕಾರ್ಯ ಮಾಡಬೇಕಾಯಿತು. ಈಗಿನ ವಿದ್ವಾಂಸರಿಗೆ ಲಭ್ಯವಾಗುವ ಸಹಾಯಧನ, ಸಿಬ್ಬಂದಿಗಳ ಅನುಕೂಲತೆಯಿಲ್ಲದೆ ಆ ಕಾರ್ಯವನ್ನು ಪೂರೈಸಬೇಕಾಯಿತು. ನಂತರ ವಚನಗಳನ್ನು ವಿಷಯಕ್ಕನುಗುಣವಾಗುವಂತೆ ವಿಂಗಡಿಸುವ ಕಾರ್ಯವನ್ನು ಅವರು ವಹಿಸಿಕೊಂಡರು. ಇದೆಲ್ಲವೂ ೧೯೨೦ ರ ಪೂರ್ವದಲ್ಲಿಯೇ ನಡೆದ ಕಾರ್ಯವಾಗಿದೆ.

೧೯೨೧ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಚಿಕ್ಕಮಗಳೂರಿನಲ್ಲಿ ಸಮಾವೇಶಗೊಂಡಿತ್ತು. ಆಗ ಹಳಕಟ್ಟಿಯವರು ವಚನ ಸಾಹಿತ್ಯದ ಬಗೆಗೆ ಉಪನ್ಯಾಸವನ್ನಿತ್ತರು. ತನ್ಮೂಲಕ ಸಾರ್ವಜನಿಕರ ಗಮನವನ್ನು ಆ ಸಾಹಿತ್ಯದತ್ತ ಎಳೆದರು. ೧೯೨೩ ರ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರು ವಚನ ಸಾಹಿತ್ಯವನ್ನು ಕುರಿತ ಹಳಕಟ್ಟಿಯವರ ಕಾರ್ಯವನ್ನು ಪ್ರಶಂಸಿಸಿ ಅಧಿಕೃತ ಮುದ್ರೆ ಹಾಕಿದರು. ಈಗಾಗಲೇ ವಚನ ಸಾಹಿತ್ಯದ ಒಂದು ಕೃತಿಯನ್ನು ಹಳಕಟ್ಟಿಯವರು ಪ್ರಕಟಿಸಿದ್ದರು.

೧೯೨೨ ರಲ್ಲಿ ಬಸವೇಶ್ವರರ ಕೆಲವು ವಚನಗಳನ್ನು ಆಂಗ್ಲ ಭಾಷೆಗೆ ಅನುವಾದಿಸಿ "ಇಂಡಿಯನ್ ಆ್ಯಂಟಿಕ್ವೆರಿ" ಪತ್ರಿಕೆಯಲ್ಲಿ ಪ್ರಕಟಿಸಿದರು. ಇದರಿಂದಾಗಿ ಯುರೋಪಿಯನ್ ವಿದ್ವಾಂಸರ ಗಮನವನ್ನು ವಚನ ಸಾಹಿತ್ಯದತ್ತ ಸೆಳೆಯುವ ಕಾರ್ಯವನ್ನು ಹಳಕಟ್ಟಿ ಅವರು ಮೊದಲಿಗರಾಗಿ ಸಾಧಿಸಿದರು.

೧೯೨೩ ರಲ್ಲಿ ಅವರು 'ಪಬ್ಲಿಕ್ ಪ್ರಾಸಿಕ್ಯೂಟರ್' ಸ್ಥಾನಕ್ಕೆ ನೇಮಕ ಹೊಂದಿದರು. ಅದು ಪ್ರತಿಷ್ಠೆಯ ಮತ್ತು ಲಾಭದಾಯಕ ಅಧಿಕಾರ ಸ್ಥಾನ. ಆದರೆ ಹಳಕಟ್ಟಿಯವರು ಈ ಸ್ಥಾನದಲ್ಲಿ ಮುಂದುವರಿಯಲು ಇಚ್ಛಿಸಲಿಲ್ಲ. ಇಷ್ಟೇ ಅಲ್ಲ, ಮುಂದೆ ವಕೀಲಿ ವೃತ್ತಿಯನ್ನೇ ತ್ಯಜಿಸಿದರು. ವಚನ ಸಾಹಿತ್ಯ ಪ್ರಕಟನೆಗಾಗಿ ತಮ್ಮ ಬಾಳನ್ನು ಮುಡುಪಾಗಿಡುವ ನಿರ್ಣಯವನ್ನು ಆಗ ಅವರು ಕೈಕೊಂಡರು. ಈ ನಿರ್ಣಯವು ಹಳಕಟ್ಟಿಯವರ ಜೀವನದ ಒಂದು ಉದಾತ್ತ ಕಾರ್ಯವಾಗಿದೆ. ಅದು ಅವರ ವಾಙ್ಮಯ ತಪಸ್ಸಿನ ಒಂದು ಸಂಕೇತವೂ ಆಗಿದೆ. ಅವರ ತಪಸ್ಸಿನ ಒಂದು ಫಲವೆಂದರೆ ಇಂದು ವಚನ ಸಾಹಿತ್ಯವನ್ನು ಕುರಿತ ವಿವಿಧ ಬಗೆಯ ವ್ಯಾಸಂಗ, ಸಂಶೋಧನೆ, ಅರ್ಥವಿವರಣೆ,

ಪ್ರಶಂಸೆಗಳು ಸಾಧ್ಯವಾದುದು. ತಪಸ್ಸು ಅವರದು. ವರದಾನ ಒದಗಿಬಂದದ್ದು ಅವರಿಗಲ್ಲ. ಬಹುಶಃ ಅವರು ಅದನ್ನು ಅಪೇಕ್ಷಿಸಲೂ ಇಲ್ಲ. ತನ್ನನ್ನು ಇಲ್ಲವಾಗಿಸಿಕೊಂಡು ನಿಷ್ಠೆಯಿಂದ ಕಾಯಕದಲ್ಲಿ ನಿರತವಾಗುವುದೇ ತಪಸ್ಸು.

ವಕೀಲಿ ವೃತ್ತಿಯಿಂದ ಬಿಡುಗಡೆ ಪಡೆದು ವಚನ ಸಾಹಿತ್ಯ ಪ್ರಕಟನೆಗೆ ತಮ್ಮನ್ನು ಸಮರ್ಪಿಸಿಕೊಂಡ ಹಳಕಟ್ಟಿಯವರು ಆ ದಿಸೆಯಲ್ಲಿ ಯೋಜನೆ ಕೈಕೊಂಡರು. ಏಕಮುಖವಾಗಿ ಕಾರ್ಯೋನ್ಮುಖರಾದರು. ವಚನ ಸಾಹಿತ್ಯವು ಕ್ರಮವಾಗಿ ಪ್ರಕಟವಾಗಬೇಕೆಂಬ ಅವರ ನಿರ್ಧಾರದ ಫಲವಾಗಿ "ಶಿವಾನುಭವ" ಪತ್ರಿಕೆಯನ್ನು ಆರಂಭಿಸಿದರು. ಇದು ನಡೆದುದು ೧೯೨೬ ರಲ್ಲಿ.

ಹಳಕಟ್ಟಿಯವರು ಆರಂಭಿಸಿದ ಪವಿತ್ರ ಕಾರ್ಯವನ್ನು ಕೆಲವರು ಮೆಚ್ಚಿಕೊಂಡರು. ಆದರೆ ಶಿವಾನುಭವದ ಚಂದಾದಾರರ ಸಂಖ್ಯೆ ಬೆಳೆಯಲಿಲ್ಲ. ಬೇಕಾದ ಪ್ರಮಾಣದಲ್ಲಿ ಹಣವು ಲಭ್ಯವಾಗಲಿಲ್ಲ. ಅವರು ಧರ್ಮಗ್ರಂಥ ಪ್ರಸಾರಕ ಮಂಡಳವನ್ನು ಸ್ಥಾಪಿಸಿದರು. ಆರಂಭದಲ್ಲಿ ಅದು ಕೆಲಮಟ್ಟಿಗೆ ಕಾರ್ಯ ಮಾಡಿತು. ಆದರೂ ಸಾರ್ವಜನಿಕರ ಬೆಂಬಲ ಸಾಕಷ್ಟು ಒದಗಿ ಬರಲಿಲ್ಲ. ಅಂತೆಯೇ ಹಳಕಟ್ಟಿಯವರು ಏಕಾಂಗವೀರನಾಗಿ 'ಶಿವಾನುಭವ' ಪತ್ರಿಕೆಯ ಮೂಲಕ ತಮ್ಮ ಕಾರ್ಯವನ್ನು ಮುಂದುವರಿಸಿದರು.

ಪತ್ರಿಕೆಯ ಆರ್ಥಿಕ ಸ್ಥಿತಿ ಚೆನ್ನಾಗಿರದಿದ್ದರೂ ಹಳಕಟ್ಟಿಯವರು ಜಿಗಟುತನದಿಂದ 'ಶಿವಾನುಭವ'ವನ್ನು ಬಹುಕಾಲ ಮುಂದುವರಿಸಿದರು. ವಚನ ಸಾಹಿತ್ಯ ಮತ್ತು ವೀರಶೈವ ಕೃತಿಗಳ ಪ್ರಕಟಣೆಯ ಸಂಬಂಧದಲ್ಲಿ ಈ ಪತ್ರಿಕೆಯ ಕಾರ್ಯವು ಅನುಪಮವೂ ಅಮೋಘವೂ ಆಗಿದೆ.

ಇಂತಹ ಕಾರ್ಯಕ್ಕೆ ಅನುಕೂಲವಾಗಲಿ ಎಂಬ ದೂರ ದೃಷ್ಟಿಯಿಂದ ಅವರು ೧೯೨೫ ರಲ್ಲಿ "ಹಿತಚಿಂತಕ" ಪ್ರಿಂಟಿಂಗ್ ಪ್ರೆಸ್ ಸ್ಥಾಪಿಸಿದರು. ಸ್ವಂತ ಅಚ್ಚುಕೂಟದಿಂದಾಗಿ ಪ್ರಕಟನೆಯ ಕಾರ್ಯವು ಕೆಲಮಟ್ಟಿಗೆ ಸುಗಮವಾಯಿತು. ೧೯೨೦ ರ ಪೂರ್ವದಲ್ಲಿಯೇ ಅವರು ಒಂದು ಸಾವಿರದಷ್ಟು ಕೈಬರಹದ ಗ್ರಂಥಗಳನ್ನು ಸಂಗ್ರಹಿಸಿದ್ದರು. ಮುಂದೆ ಅವುಗಳ ಒಂದು ಪ್ರದರ್ಶನವನ್ನು ಏರ್ಪಡಿಸಿದರು. ಸಂಗ್ರಹವಾದ ತಾಡವಾಲೆ ಗ್ರಂಥಗಳ ವ್ಯಾಸಂಗ ಮಾಡಿದ್ದರು. ಅಂತೆಯೇ ಸ್ವಂತ ಪ್ರೆಸ್ಸಿನಲ್ಲಿ ಅಚ್ಚುಮಾಡಿ 'ಶಿವಾನುಭವ' ಪತ್ರಿಕೆಯ ಮೂಲಕ ನೂರಾರು ಗ್ರಂಥಗಳನ್ನು ಬೆಳಕಿಗೆ ತರುವುದು ಸಾಧ್ಯವಾಯಿತು. ಇದರಿಂದ ಶರಣರ ಜೀವನ ಪಥ, ತತ್ತ್ವಗಳ ಪ್ರಸಾರದ ಕಾರ್ಯವೂ ನಡೆಯಿತು.

'ಶಿವಾನುಭವ' ಪತ್ರಿಕೆಯ ಮೊದಲಿನ ಮೂವತ್ತು ವರುಷಗಳ ಅವಧಿಯಲ್ಲಿ ಹಳಕಟ್ಟಿಯವರು ಬೆಳಕಿಗೆ ತಂದ ಗ್ರಂಥಗಳ ಸಂಖ್ಯೆ ಸುಮಾರು ೮೦. ಪುಟಗಳ ಸಂಖ್ಯೆ

ಸುಮಾರು ಎಂಟುಸಾವಿರ. ಅಂದಿನ ಕಠಿಣ ಪರಿಸ್ಥಿತಿಯಲ್ಲಿ, ವಚನ ಸಾಹಿತ್ಯದ ಬಗೆಗೆ ಅರಿವು, ಆಸ್ಥೆಗಳು ಇಲ್ಲದ ಕಾಲದಲ್ಲಿ ನೆರವೇರಿದ ಈ ಕಾರ್ಯವು ಬೃಹತ್ತಾದುದಲ್ಲದೆ ಮಹತ್ವಪೂರ್ಣವು ಅಹುದು. ಹಳಕಟ್ಟಿಯವರದು ಈ ದಿಸೆಯಲ್ಲಿ ಪುರೋಗಾಮಿಯಾದ ಪಥ. ದೀರ್ಘಪರಿಶ್ರಮದ ಕಾರ್ಯ. ಅವರು ವ್ಯಾಸಂಗ, ಸಂಶೋಧನೆ, ಪ್ರಕಟಣೆಗಳಿಗಾಗಿ ನಿಷ್ಠೆಯಿಂದ ನಿಷ್ಠುರವಾದ ಬಗೆಯಲ್ಲಿ ದುಡಿದರು. ಒಬ್ಬ ವ್ಯಕ್ತಿಯ ಕಳಕಳಿ, ನಿಷ್ಠೆಗಳು ಮಹಾ ಕಾರ್ಯವನ್ನು ಈಡೇರಿಸಬಲ್ಲವು.

ಹಳಕಟ್ಟಿಯವರು ಪ್ರಕಟಿಸಿದ ಗ್ರಂಥಗಳ ಸಂಖ್ಯೆ, ವೈವಿಧ್ಯ, ಮಹತಿಗಳನ್ನು ಗಮನಿಸಿದಾಗ ನಮಗೆ ಅಚ್ಚರಿಯೆನಿಸುತ್ತದೆ. ಅವರನ್ನು ಕುರಿತ ಪೂಜ್ಯ ಭಾವ ಹೆಚ್ಚುತ್ತಿದೆ. ಆರ್ಥಿಕ ತೊಂದರೆ, ಜನತೆಯ ಅಲಕ್ಷ್ಯಗಳನ್ನು ಎದುರಿಸಿ, ಡಾ. ಹಳಕಟ್ಟಿಯವರು 'ಶಿವಾನುಭವ' ಪತ್ರಿಕೆಯನ್ನು ೩೫ ವರ್ಷಗಳವರೆಗೆ ನಡೆಯಿಸಿದರು. ಕೈ ಸೋತಾಗ ಅದನ್ನು ನಿಲ್ಲಿಸಬೇಕಾಯಿತು.

ಅವರ ದೂರದರ್ಶಿತ್ವದ ಫಲವಾಗಿ ೧೯೧೦ ರಲ್ಲಿ ವಿಜಾಪುರ ಜಿಲ್ಲಾ ವಿದ್ಯಾಭಿವೃದ್ಧಿ ಸಂಸ್ಥೆಯು ಸ್ಥಾಪಿತವಾಯಿತು. ಇಂದು ಆ ಸಂಸ್ಥೆ ಹಲವಾರು ವಿದ್ಯಾಲಯಗಳನ್ನು ನಡೆಯಿಸಿ ವಿದ್ಯಾದಾನದ ಪವಿತ್ರ ಕಾರ್ಯದಲ್ಲಿ ಮುನ್ನಡೆಯುತ್ತಿದೆ. ಸಹಕಾರಿ ಮತ್ತು ಆರ್ಥಿಕ ರಂಗದಲ್ಲಿಯೂ ಹಳಕಟ್ಟಿಯವರು ಪದಾರ್ಪಣ ಮಾಡಿದರು. ೧೯೧೨ ರಲ್ಲಿ ಅವರು ಸ್ಥಾಪಿಸಿದ ಸಿದ್ಧೇಶ್ವರ ಬ್ಯಾಂಕ್ ಇಂದು ಭದ್ರವಾದ ಆರ್ಥಿಕ ವ್ಯವಹಾರದಲ್ಲಿ ತೊಡಗಿದೆ. ಸಹಕಾರಿ ಸಂಘಗಳನ್ನು ಸಂಘಟಿಸುವ ಕಾರ್ಯವನ್ನು ಅವರು ಅದೇ ಸುಮಾರಿಗೆ ಕೈಕೊಂಡರು. ೧೯೧೭ ರಲ್ಲಿ ಅವರು ವಿಜಾಪೂರ ಜಿಲ್ಲಾ ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿಯಾದುದು ಗಮನಾರ್ಹವಾದ ಸಂಗತಿಯಾಗಿದೆ. ೧೯೧೯ ರಲ್ಲಿ ವಿಜಾಪುರ ನಗರ ಸಭೆಯ ಉಪಾಧ್ಯಕ್ಷರಾದರು. ೧೯೨೦ ರಲ್ಲಿ ಮುಂಬಯಿ ವಿಧಾನಸಭೆಯ ಸದಸ್ಯರಾಗಿ ಕಾರ್ಯ ಮಾಡಿದರು.

೧೯೨೬ ರಲ್ಲಿ ಅವರು ಬಳ್ಳಾರಿಯಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಲನ ಅಧ್ಯಕ್ಷತೆ ವಹಿಸಿದರು. ೧೯೨೮ ರಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾದರು. ೧೯೨೯ ರಲ್ಲಿ ವಿಜಾಪುರ ನಗರಸಭೆಯ ಶಾಲಾ ಸಮಿತಿಯ ಕಾರ್ಯಾಧ್ಯಕ್ಷರಾಗಿ ಅಂದು ಮರಾಠಿ ಪ್ರಭಾವವಿದ್ದ ಆ ನಗರದಲ್ಲಿ ಕನ್ನಡ ಶಾಲೆಗಳನ್ನು ಹೆಚ್ಚಿಸುವ ಕನ್ನಡ ಅಭಿಮಾನವನ್ನ ಬೆಳೆಯಿಸುವ ಕಾರ್ಯ ಕೈಕೊಂಡರು. ೧೯೩೧ ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಸಿನೇಟ್ ಸದಸ್ಯರಾಗಿ ಉಚ್ಚ ಶಿಕ್ಷಣದಲ್ಲಿ ಮಹತ್ವದ ಪಾತ್ರ ಕೈಕೊಂಡರು. ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ವ್ಯಾಸಂಗಕ್ಕೆ ಮಹತ್ವದ ಸ್ಥಾನವೊದಗುವ ದಿಸೆಯಲ್ಲಿ ಕಾರ್ಯ ಮಾಡಿದರು. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯಗಳ ಸ್ಥಾಪನೆಯಲ್ಲಿಯೂ

ಅವರು ಮಹತ್ವದ ಪಾತ್ರವಹಿಸಿದರು. ಕೊಂಚ ತಡವಾಗಿಯಾದರೂ ಅವರ ಕಾರ್ಯದ ಹಿರಿಮೆಯನ್ನು ಜನತೆ ಅರಿತುಕೊಂಡು, ಆ ದಿಸೆಯಲ್ಲಿ ಅವರಿಗೆ ಮನ್ನಣೆ ಯನ್ನು ಸಲ್ಲಿಸಿತು. ೧೯೫೭ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಿ. ಲಿಟ್. ಪದವಿ ಸಲ್ಲಿಸಿತು. ಕನ್ನಡ ಸಾಹಿತ್ಯ ಪರಿಷತ್ತು ಈ ಹಿರಿಯ ಸಾಹಿತಿ ಯನ್ನು ಸತ್ಕರಿಸಿತು. ೧೯೬೦ ರಲ್ಲಿ ಧಾರವಾಡ ನಗರದಲ್ಲಿ ಅವರಿಗೆ ನಿಧಿಯನ್ನು ಸಲ್ಲಿಸಿ ಗೌರವಿಸಿದ ಕಾರ್ಯಕ್ರಮವು ಹಳಕಟ್ಟಿ ಜೀವನದಲ್ಲಿ ಕೊನೆಯ ಮಹತ್ವದ ಘಟ್ಟ ವೆನಿಸಿತು. ೨೫-೫-೧೯೬೪ ರಂದು ಅವರು ಪಾರ್ಥಿವ ದೇಹ ತೊರೆದು ಕೀರ್ತಿಶೇಷ ರಾದರು. ದೇಹ ತೊರೆದ ಅವರ ಚೇತನವು ಇಂದಿನ ಜನತೆಗೆ ಸ್ಫೂರ್ತಿಯನ್ನು ಒದಗಿಸುತ್ತಿದೆ.

೨. ಸಾಹಿತ್ಯ ಪ್ರಕಟಣೆ :

ಹಳಕಟ್ಟಿಯವರು ಪ್ರಕಟಿಸಿದ ಎಲ್ಲ ಲೇಖನ, ಗ್ರಂಥಗಳ ಉಪಲಬ್ಧಿಯಂತೆ ಅವು ಗಳ ವ್ಯವಸ್ಥಿತ ಪೂರ್ತಿಯಾದ ಉಲ್ಲೇಖ ಕೂಡ ದುರ್ಲಭ. ಈಚೆಗೆ ಬೆಂಗಳೂರು ವಿಶ್ವವಿದ್ಯಾಲಯದ ಶ್ರೀ ಎಸ್. ಶಿವಣ್ಣ ಅವರ ಪರಿಶ್ರಮದಿಂದಾಗಿ ಅಂತಹ ಒಂದು ಸೂಚಿ ಲಭ್ಯವಾಗಿದೆ. ಈ ಸೂಚಿಯು "ಬಸವ ಪಥ" ಪತ್ರಿಕೆಯ ೨ನೆಯ ಸಂಪುಟದ ೨ ಮತ್ತು ೩ನೆಯ ಸಂಚಿಕೆಗಳಲ್ಲಿ ಪ್ರಕಟವಾಗಿದೆ. ಆ ಸೂಚಿಯೂ ಕೂಡ ಪೂರ್ತಿ ಇಲ್ಲವೆ ನಿರ್ದಿಷ್ಟ ಆಗಲಿಲ್ಲವೆಂದು ಅಲ್ಲಿ ಹೇಳಲಾಗಿದೆ. ಆ ಸೂಚಿಯಲ್ಲಿಯ ವಿವರ ಗಳು ಹೀಗಿವೆ :

೧)	ಕೃತಿಗಳು (ಶಿವಾನುಭವ ಗ್ರಂಥಮಾಲೆ)	೮೬
೨)	,, (ಇತರ)	೫
	ಒಟ್ಟು ಕೃತಿಗಳು	೯೧
೩)	ಲೇಖನಗಳು(ಶಿವಾನುಭವ ಪತ್ರಿಕೆ)	೧೬೨
೪)	,, (ಇತರ)	೯
೫)	ಪ್ರಕಟಿತ ಭಾಷಣಗಳು	೫
	ಒಟ್ಟು......	೧೭೬

ಹಳಕಟ್ಟಿಯವರನ್ನು ಕುರಿತು ಬಂದ ಪುಸ್ತಕ. ಲೇಖನ. ಪ್ರಶಸ್ತಿಪರ ಉಲ್ಲೇಖ ಗಳ ಪಟ್ಟಿಯನ್ನೂ ಮೇಲ್ಕಂಡ ಸೂಚಿಯಲ್ಲಿ ಒದಗಿಸಲಾಗಿದೆ. ಹಳಕಟ್ಟಿ ಅವರ ಬಗೆಗೆ ಹೆಚ್ಚಿಗೆ ವ್ಯಾಸಂಗಕ್ಕೆಕೈಕೊಳ್ಳುವ ದಿಸೆಯಲ್ಲಿ ಶ್ರೀ ಶಿವಣ್ಣ ಅವರ ಸೂಚಿಯು ಉಪಯುಕ್ತವಾಗಿದೆ.

ಹಳಕಟ್ಟಿ ಅವರು ಪ್ರಕಟಿಸಿದ ಗ್ರಂಥಗಳ, ಲೇಖನಗಳ ವ್ಯಾಪ್ತಿ ಹೀಗಿದೆ: ಮೂಲ ವಚನಗ್ರಂಥಗಳು: ಟೀಕೆ–ಅರ್ಥವಿವರಣೆ; ಕಥಾಸಂದರ್ಭ; ಐತಿಹಾಸಿಕ ವಿಷಯ; ಶಾಸನಗಳು: ಗದ್ಯ ಪದ್ಯ ಕೃತಿಗಳು: ಸಂಸ್ಕೃತ ಗ್ರಂಥ; ವೀರಶೈವ ಸಿದ್ಧಾಂತ ಗ್ರಂಥಗಳು; ಶಿವಶರಣ–ಶರಣೆಯರ, ವೀರಶೈವ ಗುರುಪರಂಪರೆಯ, ಆಧುನಿಕ ಪುಣ್ಯಪುರುಷರ ಚರಿತ್ರೆಗಳು; ಪಠ್ಯ ಗ್ರಂಥಗಳು: ಸಂಗೀತಕ್ಕೆ ಅಳವಡಿಸಿದ ವಚನಗಳು; ವಿವಿಧ ವಿಷಯಕ್ಕನುಗುಣವಾಗುವಂತೆ ವಿಂಗಡಿಸಿದ ವಚನಗಳು: ವೀರಶೈವ ಧಾರ್ಮಿಕ, ನೈತಿಕ, ಸಾಮಾಜಿಕ ಆಚಾರಗಳನ್ನು ಕುರಿತ ಬರೆಹ; ಹರಿಹರನ ದೊಡ್ಡ ಸಂಖ್ಯೆಯ ರಗಳೆಗಳು. ಈ ಬಗೆಯ ಕೃತಿಗಳಲ್ಲಿ ವಚನ ಗ್ರಂಥಗಳ ಸಂಖ್ಯೆಯೇ ದೊಡ್ಡದಾಗಿದೆ. ಕೆಲಮಟ್ಟಿಗೆ ಅವುಗಳ ಹೆಸರುಗಳು ಓದುಗರಿಗೆ ಪರಿಚಿತವಾಗಿವೆ. ಅವುಗಳಲ್ಲಿ "ಬಸವೇಶ್ವರರ ವಚನಗಳು" ಎಂಬುದು ಹಲವು ಬಗೆಯಿಂದ ಅಗ್ರ ತಾಂಬೂಲಕ್ಕೆ ಅರ್ಹವಾಗಿದೆ. 'ಶಿವಾನುಭವ ಗ್ರಂಥಮಾಲೆ'ಯ ಪ್ರಥಮ ಪ್ರಕಟನೆಯದು. ಅಲ್ಲದೆ ಅದು 'ಶಿವಾನುಭವ' ಪತ್ರಿಕೆಯ ಆರಂಭದಿಂದಲೂ ಪ್ರಕಟವಾಗತೊಡಗಿತು. ಕೆಲವು ತಿಂಗಳುಗಳ ನಂತರ ಮಹಾದೇವಿಯಕ್ಕನ ವಚನಗಳು ಪ್ರಕಟವಾಗತೊಡಗಿದವು. ಈ ವಚನಗಳು ಪ್ರತ್ಯೇಕವಾಗಿ ಲಭ್ಯವಾಗುವುದಕ್ಕೆ ಹಳಕಟ್ಟಿಯವರ ಶ್ರಮವೇ ಕಾರಣವಾಯಿತು. ಈ ಎರಡು ಗ್ರಂಥಗಳ ಬಗೆಗೆ ಹಳಕಟ್ಟಿಯವರೇ ಹೀಗೆ ಬರೆದಿದ್ದಾರೆ: "ಆರಂಭದಲ್ಲಿ ಈ ಎರಡೂ ಗ್ರಂಥಗಳು ಯಾರ ಲಕ್ಷ್ಯವನ್ನು ಎಳೆಯಲಿಲ್ಲ. ಆದರೆ ಈ ಸ್ಥಿತಿಯು ಈಗ (೧೯೪೨) ಬಹಳ ಬದಲಾಗಿದೆ. ಈ ಎರಡೂ ಗ್ರಂಥಗಳು ಜನರಲ್ಲಿ ಒಂದು ಕ್ರಾಂತಿಯನ್ನುಂಟು ಮಾಡಿವೆಯೆಂದು ಹೇಳಬಹುದು. ಅವುಗಳಲ್ಲಿರುವ ಉಚ್ಚ ವಿಚಾರಗಳು ಕನ್ನಡ ನಾಡಿನಲ್ಲಿ ಪ್ರಸಾರ ಹೊಂದಹತ್ತಿರುತ್ತವೆ. ಆದ್ದರಿಂದ ಜನರಲ್ಲಿ ಆ ಗ್ರಂಥಗಳನ್ನು ಓದುವ ಅಭಿಲಾಷೆಯು ಹೆಚ್ಚುತ್ತಲಿದೆ. ಬಹು ಜನರು ಅವರ ತತ್ವಗಳಾವವೆಂಬುದನ್ನು ತಿಳಿಯಲು ಅಪೇಕ್ಷಿಸಹತ್ತಿದ್ದಾರೆ". –ಈ ಮಾತುಗಳು ೧೯೪೨ರಲ್ಲಿ ಪ್ರಕಟವಾದ 'ಹೊಸ ಪದ್ಧತಿ ಬಸವೇಶ್ವರ ವಚನಗಳು' ಎಂಬ ಕೃತಿಯಲ್ಲಿ ಬಂದಿವೆ.

ಹೀಗೆ ಬಸವಣ್ಣ ಅಕ್ಕಮಹಾದೇವಿಯರ ವ್ಯಕ್ತಿತ್ವ, ಸಂದೇಶಗಳು ಸ್ಫುಟವಾಗುವಂತೆ ಜನತೆಯಲ್ಲಿ ಪ್ರಚುರವಾಗುವಂತೆ ಮಾಡಿದ ಶ್ರೇಯಸ್ಸು ಹಳಕಟ್ಟಿಯವರದು. ಈಗ ಬಸವಣ್ಣ ಅಕ್ಕಮಹಾದೇವಿಯರ ಹೆಸರು, ಬೋಧಗಳು ಮನೆಮನೆಯ ಮಾತಾಗಿವೆ.

ಹಸ್ತಲಿಖಿತ ಗ್ರಂಥದ ಒಂದೇ ಪ್ರತಿಯ ಆಧಾರದ ಮೇಲೆ "ಬಸವೇಶ್ವರ ಷಟ್ಸ್ಥಲ ವಚನದ ಕಥಾಸಾರ" ಎಂಬ ಗ್ರಂಥವನ್ನು ೧೯೩೪ರಲ್ಲಿಯೇ ಹಳಕಟ್ಟಿಯವರು ಪ್ರಕಟಿಸಿದ್ದರು. ಬಸವಣ್ಣನ ವಚನಗಳಲ್ಲಿಯ ಕಥಾಸಂದರ್ಭಗಳನ್ನು ಅರಿತುಕೊಳ್ಳಲು ಈ ಗ್ರಂಥವು ಉಪಯುಕ್ತವಾಗಿದೆ.

ವೀರಶೈವ ಅರಸುಮನೆತನಗಳಿಗೆ ಸಂಬಂಧಿಸಿದಂತೆ ಅವರು 'ಬೀಳಗಿ ಅರಸರು'. 'ಹಾಗಲವಾಡಿ ಅರಸುಗಳ ವೃತ್ತಾಂತ'. 'ನವಲುಗುಂದ ದೇಸಾಯರ ಇತಿಹಾಸ'. 'ಕೆಳದಿ ಸಂಸ್ಥಾನದ ರಾಯರ ವಂಶಾವಳಿ' ಮುಂತಾದವುಗಳನ್ನು ಬರೆದರು. 'ಕೊಡಗಿನ ಸಂಸ್ಥಾನದ ರಾಜೇಂದ್ರನಾಮೆ' ಸ್ವಾದಿಯ ಸದಾಶಿವರಾಜನ "ನೀತಿ"ಯನ್ನು ಪ್ರಕಟಿಸಿದರು. ವೀರಶೈವ ಧರ್ಮಕ್ಕೆ ಸಂಬಂಧಿಸಿದ ಅರ್ಜುನವಾಡ. ಅಬ್ಬಲೂರು. ಅರಕೇರಿ ಮುಂತಾದ ಶಾಸನಗಳನ್ನು ಪ್ರಕಟಿಸಿದ ಶ್ರೇಯಸ್ಸು ಅವರದಾಗಿದೆ. ಡಾ. ಪಿ. ಬಿ. ದೇಸಾಯಿ ಅಂತಹರ ಸಂಶೋಧನ ಲೇಖನಗಳಿಗೂ ಅವರು ಎಡೆಕೊಟ್ಟರು.

ಹಳಕಟ್ಟಿಯವರ ಪ್ರಥಮ ಪ್ರಕಟನೆಗಳು ಮುಂದೆ ವೀರಶೈವ ಧರ್ಮ. ಸಾಹಿತ್ಯ. ಇತಿಹಾಸ, ಸಂಸ್ಕೃತಿಗಳನ್ನು ಕುರಿತ ವಿಶೇಷ ಅಧ್ಯಯನ. ಸಂಶೋಧನೆಗಳನ್ನು ಪ್ರಚೋದಿಸಿದವು. ಕರ್ನಾಟಕದ ಧಾರ್ಮಿಕ ಮತ್ತು ವಿದ್ಯಾಸಂಸ್ಥೆಗಳು. ವಿಶ್ವವಿದ್ಯಾಲಯಗಳು, ವ್ಯಕ್ತಿಗತವಾಗಿ ವಿದ್ವಾಂಸರು "ಹಳಕಟ್ಟಿ ಭಂಡವಲ"ದಿಂದ ಪ್ರಯೋಜನ ಪಡೆಯುವಂತಾಯಿತು. ಅವರ "ಭಂಡವಲ"ವನ್ನು ನಾವಿನ್ನೂ ಪೂರ್ತಿಯಾಗಿ ಬಳಸಿಕೊಂಡಿಲ್ಲ.

ವೀರಶೈವ ಧರ್ಮ, ತತ್ತ್ವಗಳಿಗೆ ಸಂಬಂಧಪಟ್ಟ ಹಳಕಟ್ಟಿ ಅವರ ಕೃತಿಗಳನ್ನು ನಾವೀಗ ಅವಲೋಕಿಸಬೇಕು.

ಮಗ್ಗೆಯ ಮಾಯಿದೇವನ ಸಂಸ್ಕೃತ 'ಶಿವಾನುಭವಸೂತ್ರಂ' ಎಂಬ ಗ್ರಂಥವನ್ನು ಬಹುಕಾಲ ಹಿಂದೆಯೇ ಅವರು ಪಂಡಿತ ನಾಗೇಶಶಾಸ್ತ್ರಿಗಳ ಕನ್ನಡ ಟೀಕೆಯೊಂದಿಗೆ ಪ್ರಕಟಿಸಿದರು. ಈ ಗ್ರಂಥದ ಪ್ರಕಟನೆಯಿಂದಾಗಿ ವೀರಶೈವ ದರ್ಶನದ ತಿರುಳು ಸಾಮಾನ್ಯರಿಗೆ ತಿಳಿದುಬರುವಂತಾಯಿತು.

ವೀರಶೈವ ಧಾರ್ಮಿಕ ತಾತ್ತ್ವಿಕ ಗ್ರಂಥಗಳಲ್ಲಿ ಶ್ರೇಷ್ಠವಾದುದು "ಶೂನ್ಯ ಸಂಪಾದನೆ". ಅದು ವಚನಗಳ ಸಂಕಲನವಾಗಿದ್ದರೂ ಸಂಕಲನಗೊಂಡ ಬಗೆಯಲ್ಲಿಯೇ ಸ್ವೋಪಜ್ಞತೆಯಿದೆ. ವಚನ ಸಾಹಿತ್ಯದ ಶಿರೋರತ್ನವಾಗುವ ರೀತಿಯಲ್ಲಿ ಸಂಕಲನಗೊಂಡಿದೆ. ಗೂಳೂರು ಸಿದ್ಧವೀರಣಾಚಾರ್ಯನ "ಶೂನ್ಯಸಂಪಾದನೆ"ಯನ್ನು ಹಳಕಟ್ಟಿಯವರು ೧೯೩೦ರಷ್ಟು ಹಿಂದೆಯೇ ಪ್ರಕಟಿಸಿದರು. ಸಂಪಾದಕರಾಗಿ ಹಳಕಟ್ಟಿಯವರು ಈ ಕೃತಿಯನ್ನು "ವಚನ ಶಾಸ್ತ್ರಾಭ್ಯಾಸಕರ್ಕೆಸುಗ ಅತ್ಯುಪಯುಕ್ತವಾಗಿರುವ ಮಹತ್ತರವಾದ ಗ್ರಂಥ" ಶೂನ್ಯ ಸಂಪಾದನೆ. ಎಂದು ಹೇಳಿದ್ದಾರೆ. ಚಿಕ್ಕ ಪ್ರಸ್ತಾವನೆಯಲ್ಲಿ ಈ ಕೃತಿಯ ಮಹತ್ತ್ವವನ್ನು ವಿವರಿಸುತ್ತ ಇದನ್ನು "ಪ್ಲೇಟೋನ ಸಂಭಾಷಣೆಗಳು" ಎಂಬ ಕೃತಿಗೆ ಹೋಲಿಸಿದ್ದಾರೆ. ಗೂಳೂರು ಸಿದ್ಧವೀರಣಾಚಾರ್ಯನನ್ನು "ಕರ್ನಾಟಕದ ಪ್ಲೇಟೋ" ಎಂದು ಕರೆಯಬಹುದು. ಎಂಬುದಾಗಿ ಹೇಳಿದ್ದಾರೆ. 'ಶೂನ್ಯಸಂಪಾದನೆ' ಜಗತ್ತಿನ ಜ್ಞಾನ ಭಾಂಡಾರಕ್ಕೆ ಕನ್ನಡದ ಕಾಣಿಕೆಯಾಗುವಂತಿದೆ. ಈ ಕೃತಿಯಲ್ಲಿಯ

ಮೌಲಿಕ ವಿಚಾರಧಾರೆಯಿಂದ ಅದು ಅನುಭವ ಗ್ರಂಥಗಳಲ್ಲಿ ಎತ್ತರದ ಸ್ಥಾನಕ್ಕೆ ಅರ್ಹವಾಗಿದೆ. ಇಂತಹ ಶ್ರೇಷ್ಠ ಕೃತಿಯನ್ನು ಬೆಳಕಿಗೆ ತಂದು ಹಳಕಟ್ಟಿಯವರು ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. 'ಶೂನ್ಯಸಂಪಾದನೆ'ಯ ಬೃಹದಾಕಾರದ ಕೃತಿಗಳು ಅವುಗಳನ್ನು ಕುರಿತ ವಿಪುಲ ವಿಮರ್ಶೆಗಳು ಈಚೆಗೆ ಬಂದಿರುವುದು ಸಂತೋಷದ ಸಂಗತಿ. ಈ ಅಂಶವು ಹಳಕಟ್ಟಿಯವರ ಘನವಾದ ಕಾರ್ಯಕ್ಕೆ ಸಾಕ್ಷಿಯೂ ಆಗುವಂತಿದೆ.

ಇದಿಷ್ಟು ಸಂಗ್ರಹ. ವ್ಯಾಸಂಗಗಳ ಮೂಲಕ ಜ್ಞಾನದ ಖನಿಯನ್ನು ಬೆಳಕಿಗೆ ತರುವ ಕಾರ್ಯವಾಯಿತು. ಆದರೆ ಅವರು ವಿಶೇಷ ಅಧ್ಯಯನದಿಂದಾಗಿ ಸ್ವತಃ ಸಂಕಲನ ಕಾರ್ಯವನ್ನು ವಹಿಸಿಕೊಂಡರು. ಆದರ ಫಲವಾಗಿ ವೀರಶೈವ ಸಿದ್ಧಾಂತಕ್ಕೆ ಭದ್ರವಾದ ತಳಹದಿಯನ್ನು ರೂಪಿಸಿ ತೋರ್ಪಡಿಸುವಂತೆ ಹಳಕಟ್ಟಿಯವರ "ವಚನ ಶಾಸ್ತ್ರಸಾರ"ವನ್ನು ಕನ್ನಡಿಗರಿಗೆ ಒದಗಿಸಿದರು. ಈ ಗ್ರಂಥದ ಪ್ರಕಟನೆಯ ಇತಿಹಾಸವು ಗಮನಾರ್ಹವಾಗಿದೆ. ಅದೊಂದು ಕರುಣ ಕಥೆಯೂ ಅಹುದು.

ಒಟ್ಟು ಸುಮಾರು ೧೬೦೦ ಪುಟಗಳ ಕೃತಿಯಿದು. ಮೂರು ಭಾಗಗಳಾಗಿ ನಾಲ್ಕು ಸಂಪುಟಗಳಾಗಿ ಇದು ಪ್ರಕಟವಾಗಿದೆ. ಆದರೂ ಹಳಕಟ್ಟಿಯವರು ಉದ್ದೇಶಿಸಿದ ವಿಷಯವೆಲ್ಲ ಈ ನಾಲ್ಕು ಸಂಚಿಕೆಗಳಲ್ಲಿ ಪೂರ್ತಿಯಾಗಿ ಪ್ರಕಟವಾಗಲಿಲ್ಲ. ಅವರಿಗಿದ್ದ ಹಣದ ಅಡಚಣೆಯೇ ಅದಕ್ಕೆ ಕಾರಣ. ಈಗಿನಂತೆ ಎಂತೆಂತಹ ಕೃತಿಗೂ ಸಹಾಯಧನ ಲಭ್ಯವಾಗುವ ಕಾಲ ಅದಾಗಿರಲಿಲ್ಲ.

ಈಗ ಬಂದಿರುವ ನಾಲ್ಕು ಸಂಪುಟಗಳು ಪ್ರಕಟವಾಗಲು ಹದಿನಾರು ವರುಷಗಳ ದೀರ್ಘ ಅವಧಿ ಹಿಡಿಯಿತು. ತತ್ಪೂರ್ವದಲ್ಲಿ ಹದಿನೆಂಟು ವರುಷಗಳ ವರೆಗೆ ಹಳಕಟ್ಟಿ ಅವರ ಶೋಧನೆ. ವ್ಯಾಸಂಗಗಳು ಸಾಗಿ ಬಂದಿದ್ದವು. ಈ ಸಂಗತಿಯು ಅಂದಿನ ಪರಿಸ್ಥಿತಿಯ ಒಂದು ದಾಖಲೆಯಾಗಿ ಉಳಿಯುವಂತಹದಾಗಿದೆ. ಆ ನಾಲ್ಕು ಸಂಚಿಕೆಗಳ ಸು. ೧೬೦೦ರಷ್ಟು ಪುಟಗಳನ್ನು ಏಕಕಾಲಕ್ಕೆ ಪ್ರಕಟಿಸಬಹುದಾದ ಸೌಲಭ್ಯಗಳು ಈಗ ಲಭ್ಯವಾಗಿವೆ. ಆಗ ಮಾತ್ರ ಅದೊಂದು ಮಹಾಸಾಹಸವಾಗಿ ಪರಿಣಮಿಸಿತು.

ನನ್ನ ಪರಿಶೀಲನೆಗೆ ಲಭ್ಯವಾದ ನಾಲ್ಕು ಸಂಪುಟಗಳನ್ನು ಕ್ರಮವಾಗಿ ೧, ೨, ೩ ಮತ್ತು ೪ ಎಂದಿಟ್ಟುಕೊಂಡು ಅವುಗಳ ಬಗೆಗೆ ಕೆಲವು ಅಂಶಗಳನ್ನು ಪ್ರಸ್ತಾಪಿಸುತ್ತೇನೆ.

1. **"ವಚನಶಾಸ್ತ್ರಸಾರ, ಭಾಗ-೧: ಪೂರ್ವಾರ್ಧ"**–ಇದು ಪ್ರಥಮವಾಗಿ ೧೯೨೩ರಲ್ಲಿ ಪ್ರಕಟವಾಯಿತು. ಅದರ ಪ್ರಸ್ತಾಪನೆಯಲ್ಲಿ ಬಂದ ಹಳಕಟ್ಟಿ ನುಡಿಗಳು ಹೀಗಿವೆ :

"೧೯೦೫ನೇ ಇಸ್ವಿಯಲ್ಲಿ (ನನ್ನ ದೃಷ್ಟಿಗೆ) ಗುಬ್ಬಿ ಮಲ್ಲಣಾರ್ಯ ಮಾಡಿರ ಗಣಭಾಷ್ಯ ರತ್ನಮಾಲೆಯು ಒಂದು ಕೈಬರಹದ ಗ್ರಂಥವು (...) ಬಿತ್ತು... ಅಂದಿನಿಂದ ನನಗೆ ಈ ವಚನಗಳ ವಿಷಯವಾಗಿ ಶೋಧ ಮಾಡುವ ಕುತೂಹಲವು ಹುಟ್ಟಿತು... ನಾನು ಹೋದ ಗ್ರಾಮಗಳಲ್ಲಿ ಅವುಗಳ ವಿಷಯವಾಗಿ ನಾನು ಶೋಧ ಮಾಡುತ್ತಿದ್ದು ನನಗೆ ದೊರೆತ ವಚನಗಳಲ್ಲಿ ನನಗೆ ಮಹತ್ವದವೆಂದು ಕಂಡ ವಚನಗಳನ್ನಷ್ಟೇ ನಾನು ಬರೆದಿಟ್ಟುಕೊಳ್ಳುತ್ತ ಬಂದೆನು. ಈ ನನ್ನ ಶೋಧದಲ್ಲಿ... ದೊಡ್ಡ ದೊಡ್ಡ ಗ್ರಂಥಗಳೂ ನನಗೆ ದೊರಕಿದವು... ೧೯೧೮ನೇ ಇಸ್ವಿಯಲ್ಲಿ ಈ ನನ್ನ ಸಂಗ್ರಹಕ್ಕೆ ಒಂದು ಮೂರ್ತ ಸ್ವರೂಪ ಕೊಡಲು ಪ್ರಯತ್ನಪಟ್ಟೆನು. ಆದರೆ ಮೊದಲಿಗೆ ಈ ಕಾರ್ಯವು ನನಗೆ ದುಸ್ತರವಾಗಿ ತೋರಿತು. ಯಾಕೆಂದರೆ ವಚನಗಳ ವಿಚಾರವು ಹೊಸ ತರದವಿರುತ್ತವೆ... ಈ ವಚನಗಳ ಮರ್ಮವನ್ನು ಈ ಕಾಲಕ್ಕೆ ತಿಳಿದವರೂ ಬಹಳ ಸ್ವಲ್ಪ ಇದ್ದರೂ ಅವುಗಳನ್ನು ವಿವರಿಸದೆ ಗುಪ್ತವಾಗಿಡುವುದುಂಟು.... ನಾನು ತುಲನಾತ್ಮಕ ರೀತಿಯಿಂದ ವಿಚಾರ (ಮಾಡಿ...) ಇವುಗಳ ತತ್ವಗಳನ್ನು ಕಂಡುಹಿಡಿದು ನನ್ನ ಸಂಗ್ರಹಕ್ಕೆ ಒಂದು ವ್ಯವಸ್ಥಿತ ಸ್ವರೂಪವನ್ನು ಕೊಟ್ಟಿದ್ದೇನೆ."– ಈ ನುಡಿಗಳಲ್ಲಿ ಅಂದು ಹಳಕಟ್ಟಿ ಅವರು ಎದುರಿಸಬೇಕಾದ ತೊಂದರೆಗಳ ಮತ್ತು ಅವರ ಸಾಹಸ. ನಿಷ್ಠೆಗಳ ಕತೆಯಿದೆ.

ಈ ಸಂಪುಟದಲ್ಲಿ ಲಿಂಗಾಯತ ಮತದ ಸಾಮಾನ್ಯ ತತ್ತ್ವಗಳನ್ನು ವಿವರಿಸಲಾಗಿದೆ. ಅವು ಷಟ್‌ಸ್ಥಲಗಳಿಗೆ ಅನುಸಾರವಾಗಿ ಬಂದಿವೆ. ಷಟ್‌ಸ್ಥಲ ತತ್ತ್ವಗಳನ್ನು ಸರಿಯಾಗಿ ಅರಿತುಕೊಳ್ಳುವ ದೃಷ್ಟಿಯಿಂದ ಆರಂಭದಲ್ಲಿ ಪರಮಾತ್ಮ. ಲಿಂಗ–ಇವುಗಳ ಕಲ್ಪನೆಯನ್ನು ಸ್ಪಷ್ಟಪಡಿಸುವ ವಚನಗಳನ್ನು ಕೊಡಲಾಗಿದೆ. ಇದು ಈ ಸಂಪುಟದ ಒಂದು ನಾಲ್ಕಾಂಶ ಭಾಗದಷ್ಟಾಗುತ್ತಿದೆ. ಮುಂದೆ ಭಕ್ತ. ಮಹೇಶ್ವರ– ಹೀಗೆ ಎರಡು ಸ್ಥಲಗಳನ್ನು ನಿರೂಪಿಸುವ ವಚನಗಳಿವೆ. ಅಲ್ಲದೆ 'ಪ್ರಾರ್ಥನೆಗಳು', 'ಜಾತಿಭೇದ' ಎಂಬ ಎರಡು ಶೀರ್ಷಿಕೆಗಳಲ್ಲಿ ವಚನಗಳನ್ನು ಸಂಕಲ್ಪಿಸಲಾಗಿದೆ. 'ಅಷ್ಟಾವರಣ'. 'ಗುರು. ಲಿಂಗ. ಜಂಗಮ'– ಈ ವಿಷಯಗಳನ್ನು ಕುರಿತ ಸಣ್ಣ ಸಂಖ್ಯೆಯ ವಚನಗಳೂ ಇಲ್ಲಿ ಬಂದಿವೆ.

ವೀರಶೈವ ಸಿದ್ಧಾಂತದ ಬಗೆಗೆ ಜನರಲ್ಲಿ ತಿಳಿವಳಿಕೆ ಸಾಕಷ್ಟು ಇಲ್ಲದ ಕಾಲದಲ್ಲಿ ರಚಿತವಾದ ಈ ಕೃತಿಯು ಆ ದಿಸೆಯಲ್ಲಿ ಉಪಯುಕ್ತವಾಗುವ ಬಗೆಯಲ್ಲಿ ರೂಪುಗೊಂಡಿದೆ. ಹೆಚ್ಚಿನ ವಿವರಗಳನ್ನು ಮುಂದಿನ ಸಂಪುಟಗಳಲ್ಲಿ ಒದಗಿಸಲಾಗಿದೆ.

II. ಎರಡನೆಯ ಸಂಪುಟ: "ವಚನಶಾಸ್ತ್ರಸಾರ-ಭಾಗ೨-ಉತ್ತರಾರ್ಧ"– ಇದರಲ್ಲಿ ಪ್ರಸಾದಿ. ಪ್ರಾಣಲಿಂಗಿ. ಶರಣ ಮತ್ತು ಐಕ್ಯ– ಹೀಗೆ ನಾಲ್ಕು ಸ್ಥಲಗಳಿಗೆ ಸಂಬಂಧಿಸುವ ವಚನಗಳನ್ನು ಸಂಕಲಿಸಲಾಗಿದೆ. ಆದುದರಿಂದ ಇದನ್ನು ಪ್ರಥಮ ಸಂಪುಟದ ಉತ್ತರಾರ್ಧವೆಂದು ಭಾವಿಸಬೇಕಾಗುತ್ತದೆ. ಆದರೆ ಈ ಗ್ರಂಥದ ಶೀರ್ಷಿ

ಕೆಯ ಪುಟದಲ್ಲಿ ಇದನ್ನು 'ಭಾಗ–೨' ಎಂದು ಕರೆಯಲಾಗಿದೆ. ಅದೇಕೆಂಬುದು ನನಗೆ ಸ್ಪಷ್ಟವಾಗಲಿಲ್ಲ. ಪ್ರಥಮ ಸಂಪುಟದ ಒಂದನೆಯ ಆವೃತ್ತಿಯ ಪ್ರತಿಯೂ ನನ್ನ ಪರಿಶೀಲನೆಗೆ ಲಭ್ಯವಾಗಲಿಲ್ಲ. ಅಲ್ಲದೆ ನಾನು ಈ ಮುಂದೆ ನಿರೂಪಿಸಲಿರು ಸಂಪುಟವನ್ನೂ "ಭಾಗ–೨ ವೀರಶೈವ ಸಿದ್ಧಾಂತ" ಎಂದು ಹೆಸರಿಸಲಾಗಿದೆ. ಹೀಗೆ ಎರಡು ಸಂಪುಟಗಳನ್ನೂ ಕರೆದಿರುವುದು ಗೊಂದಲಕ್ಕೆ ಕಾರಣವಾಗುವಂತಿದೆ. ನನಗೆ ಲಭ್ಯವಾಗಿರುವ ಈ ಸಂಪುಟದ ಪ್ರತಿ (೧೯೩೩) ಯ ಪ್ರಸ್ತಾವನೆಯಲ್ಲಿ "ಈ ಗ್ರಂಥವು 'ವಚನ ಸಾರ ಭಾಗ–೧' ಇದರ ೨ನೇ ವೃತ್ತಿಯಾಗಿದೆ" ಎಂದು ಹೇಳಲಾಗಿದೆ. ಪ್ರಥಮ ಸಂಪುಟವನ್ನು 'ಪೂರ್ವಾರ್ಧ' ಇದನ್ನು 'ಉತ್ತರಾರ್ಧ' ಎಂದು ಹೇಳಿರುವುದರಿಂದ ಈ ಸಂಪುಟವು ಪ್ರಥಮ ಸಂಪುಟದ 'ಉತ್ತರಾರ್ಧ' ಎಂದು ನಾನು ಭಾವಿಸುತ್ತೇನೆ. ಒಂದನೆಯ ಮತ್ತು ಎರಡನೆಯ ಭಾಗಗಳಲ್ಲಿ 'ಷಟ್‌ಸ್ಥಲ'ದ ವಿಷಯವು ಪೂರ್ತಿಗೊಳ್ಳುತ್ತಿದೆ.

III. ಮೂರನೆಯ ಸಂಪುಟ–ವಚನಶಾಸ್ತ್ರ ಸಾರ : ಭಾಗ–೨ ವೀರಶೈವ ಸಿದ್ಧಾಂತ– ಪ್ರಸ್ತಾವನೆಯಲ್ಲಿಯ ಕೆಲವು ಮಾತುಗಳು ಈ ಗ್ರಂಥದ ಸ್ವರೂಪವನ್ನು ಸ್ಪಷ್ಟಗೊಳಿಸುತ್ತಿವೆ :

"...ವೀರಶೈವ ಧರ್ಮದಲ್ಲಿ ಅತ್ಯಂತ ಮಹತ್ವವಾಗಿರುವ ಷಟ್‌ಸ್ಥಲ (ವೀರಶೈವ) ಸಿದ್ಧಾಂತವನ್ನು ನಿರೂಪಿಸುವುದೇ ಈ ಎರಡನೆಯ ಭಾಗದ ಮುಖ್ಯ ಉದ್ದೇಶವಾಗಿದೆ... ಈ ವರೆಗೆ ಪ್ರಕಟವಾದ ವಚನ ಗ್ರಂಥಗಳಿಂದ... ವೀರಶೈವ ಸಿದ್ಧಾಂತದ ಸಾದ್ಯಂತ ನಿರೂಪಣೆಯು ಇರುವುದಿಲ್ಲ. ಆದರೆ ಈಗಿನ ಗ್ರಂಥದಲ್ಲಿ ನಾವು ಈ ಉದ್ದೇಶವನ್ನೇ ಮುಖ್ಯವಾಗಿ ಇಟ್ಟುಕೊಂಡಿದ್ದೇವೆ. –ವೀರಶೈವ ಧರ್ಮದ ತಿರುಳನ್ನು ಅದರ ಎಲ್ಲ ಭಾಗ, ಉಪಭಾಗಗಳೊಡನೆ ಸಮಗ್ರವಾಗಿ ಮತ್ತು ತಾತ್ವಿಕ ರೀತಿಯಿಂದ ನಿರೂಪಿಸುವ ಯಾವ ಗ್ರಂಥವೂ ನಮಗೆ ಈ ವರೆಗೂ ಉಪಲಬ್ಧವಾಗಿಲ್ಲ. ಇದರಿಂದ ನಮ್ಮ ಪ್ರಯತ್ನವು ಬಿಕ್ಕಟ್ಟಿನದಾಗಿದೆ.... ನಮಗೆ ದೊರೆತ ಸಿದ್ಧಾಂತದ ವಿಷಯಗಳನ್ನು ಸಂಗ್ರಹಿಸಿ ಅವುಗಳನ್ನು ಶಕ್ಯವಾದ ಮಟ್ಟಿಗೆ ವ್ಯವಸ್ಥಿಗೊಳಿಸಿ ಈ ಗ್ರಂಥವನ್ನು ನಾವು ಪ್ರಕಟಿಸಿದ್ದೇವೆ."

ನಾಲ್ಕು ಸಂಪುಟಗಳಲ್ಲಿ ಇದು ಹೆಚ್ಚು ದೊಡ್ಡದಾದ ಸಂಕಲನ. ಆರುನೂರು ಪುಟಗಳನ್ನು ಮೀರಿದ ಗ್ರಂಥ. ಈ ಕೃತಿಯು ೧೯೩೮ರಲ್ಲಿ ಪ್ರಕಟವಾಯಿತು. ಈ ಗ್ರಂಥ ಮುದ್ರಣಕ್ಕೆ ಹಣದ ಸಹಾಯ ಮಾಡಿದವರ ಹೆಸರುಗಳ ಪಟ್ಟಿಯು ನಾಲ್ಕು ಪುಟಗಳಷ್ಟಾಗಿದೆ. ಆದರೆ ದೊರೆತ ಹಣದ ಮೊತ್ತ ೭೭೬ ರೂಪಾಯಿಗಳು ! ಇಷ್ಟು ಹಣವನ್ನು ಇಂದು ಮುದ್ರಣದ ಪ್ರತಿ ಬರೆಸಲು ವೆಚ್ಚ ಮಾಡಬೇಕಾಗುತ್ತಿದೆ. ಕೃತಿ ಘನವಾದುದು, ಬೃಹತ್ ಗಾತ್ರದ್ದು. ಇಂತಹ ಕೃತಿಯ ಸಿದ್ಧತೆ ಮುದ್ರಣಾದಿಗಳಿಗೆ ಇಂದು ಲಕ್ಷಾಂತರ ರೂಪಾಯಿ ವೆಚ್ಚವಾಡುವುದುಂಟು.

ಈ ಗ್ರಂಥದಲ್ಲಿ ಬಂದಿರುವ ವಿಷಯದ ಅನುಕ್ರಮಣಿಕೆಯು ಹದಿಮೂರು ಪುಟಗಳದ್ದಾಗಿದೆ. ಇದರಿಂದ ಇಲ್ಲಿಯ ವಿಷಯ ವ್ಯಾಪ್ತಿಯು ಸ್ಪಷ್ಟವಾಗುತ್ತಿದೆ. ಬಂದಿರುವ ವಿಷಯ, ಹೊಂದಿಸಿರುವ ಬಗೆಗಳನ್ನು ಕುರಿತು ಪ್ರಸ್ತಾವನೆಯಲ್ಲಿ ದೀರ್ಘವಾಗಿ ಪ್ರಸ್ತಾಪಿಸಲಾಗಿದೆ. ಹದಿನಾಲ್ಕು ಅನುಬಂಧಗಳಲ್ಲಿ ವೀರಶೈವ ಸಿದ್ಧಾಂತದ ಬಗೆಗೆ ಉಪಯುಕ್ತ ಮಾಹಿತಿಯಿದೆ.

ವೀರಶೈವ ಸಿದ್ಧಾಂತವನ್ನು ಸಾಕಲ್ಯವಾಗಿ, ವಿವರವಾಗಿ, ಒಂದೆಡೆ ನಿರೂಪಿಸಿರುವ ಗ್ರಂಥವು ಇದೊಂದೇ ಆಗಿದೆ. ದುರ್ದೈವದ ಸಂಗತಿಯೆಂದರೆ ಈ ಗ್ರಂಥದ ಪ್ರತಿಗಳು ಈಗ ಲಭ್ಯವಾಗುತ್ತಿಲ್ಲ.

ಇದರಲ್ಲಿಯೂ ಕೆಲವು ಪಾಠಗಳು ಇನ್ನಷ್ಟು ಶುದ್ಧವಾಗಬೇಕಾಗಿತ್ತು, ಹೊಂದಿಕೆ ಇನ್ನಷ್ಟು ವ್ಯವಸ್ಥಿತವಾಗಬೇಕಿತ್ತು, ನಿಜ. ಆದರೆ ಹಳಕಟ್ಟಿ ಅವರು ಈ ಗ್ರಂಥವನ್ನು ಪ್ರಕಟಿಸಿದ ಕಾಲ, ಅಂದಿನ ಪರಿಸ್ಥಿತಿ, ಇದರ ಸಿದ್ಧತೆಯಲ್ಲಿ ಅವರು ಎದುರಿಸಬೇಕಾದ ತೊಂದರೆಗಳು– ಇವನ್ನು ನಾವು ಗಮನಿಸಬೇಕು. ಆಗ ಹಳಕಟ್ಟಿ ಅವರಿಗಾಗಿ ನಮ್ಮ ಶಿರವು ಬಾಗುವಂತಾಗುತ್ತಿದೆ. ಅವರನ್ನು ಶಿವಶರಣ ಮಾಲಿಕೆಯಲ್ಲಿ ಸೇರಿಸಬೇಕಾತ್ತಿದೆ.

೪. ನಾಲ್ಕನೆಯ ಸಂಪುಟ: ವಚನಶಾಸ್ತ್ರ ಸಾರ: ಭಾಗ-೩: (ವೀರಶೈವಾಚಾರಗಳು–ಪೂರ್ವಾರ್ಧ) ಈ ಸಂಪುಟವು ಹಳಕಟ್ಟಿ ಅವರ ಉಳಿದ ಗ್ರಂಥಗಳಿಗಿಂತ ಹೆಚ್ಚು ಒಳ್ಳೆಯ ಕಾಗದ ಮೇಲೆ ಸುಂದರವಾಗಿ ಅಚ್ಚಾಗಿದೆ. ಇದು ಪ್ರಕಟವಾದುದು ೧೯೫೪ರಲ್ಲಿ. ಈ ಗ್ರಂಥದ ಪ್ರಕಟನೆಯಲ್ಲಿ ನನ್ನ ಸಂಬಂಧವಿರುವುದಾಗಿ ಕೆಲವು ಅಂಶಗಳನ್ನು ಪ್ರಸ್ತಾಪಿಸಬೇಕಾಗಿದೆ.

೧೯೩೮ರಲ್ಲಿ ಮುಂಬಯಿ ಸರಕಾರದ ಪರವಾಗಿ ಕನ್ನಡ ಗ್ರಂಥ ಪ್ರಕಟನೆಗೆಂದು ಸಹಾಯನಿಧಿಯ ಯೋಜನೆಯೊಂದನ್ನು ರೂಪಿಸಲಾಯಿತು. ಹಾಗೆ ರೂಪಿಸಿದ್ದು "ಕನ್ನಡ ಸಂಸ್ಕೃತಿ ಸಂಶೋಧನ ಸಮಿತಿ". ನಾನು ಆ ಸಮಿತಿಯ ಕಾರ್ಯದರ್ಶಿಯಾಗಿದ್ದೆ. ಆಗ ನಾನು ಈ ಸಂಪುಟದ ಹಸ್ತಪ್ರತಿಯನ್ನು ಪರಿಶೀಲಿಸಿದ್ದೆ. ಸಹಾಯನಿಧಿಯ ವಿತರಣೆಯಲ್ಲಿ ಹಳಕಟ್ಟಿ ಅವರಿಗೆ ಲಭ್ಯವಾದ ಮೊತ್ತದಲ್ಲಿ ಅವರ ಹಸ್ತಪ್ರತಿಯನ್ನು ಪೂರ್ತಿಯಾಗಿ ಮುದ್ರಿಸುವುದು ಸಾಧ್ಯವಾಗುವಂತಿರಲಿಲ್ಲ. ೨೦೦ ಪುಟಗಳು ಎಂದು ಮೊದಲು ನಿಗದಿಯಾಗಿತ್ತು. ಮುಂದೆ ಅದನ್ನು ಇನ್ನೂ ಸುಮಾರು ೪೦ ಪುಟಗಳವರೆಗೆ ಹಿಗ್ಗಿಸುವುದು ನನಗೆ ಸಾಧ್ಯವಾಯಿತು.

ಈ ಸಂಪುಟದಲ್ಲಿ ಬಂದಿರುವ ವಿಷಯ ಹೀಗಿದೆ: ೧) ಕ್ರಿಯೆ: ೨) ಆಚಾರ ಭೇದಗಳು ೩) ಅಷ್ಟಾವರಣಗಳಲ್ಲಿ ಗುರು, ಲಿಂಗ, ಜಂಗಮ– ಇವು ಮೂರು ಮಾತ್ರ ೪) ಶಿವಯೋಗ.

ಶಿವಯೋಗದ ವಿಷಯವು ಸಂಕ್ಷಿಪ್ತವಾಗಿಯಾದರೂ ಈ ಗ್ರಂಥದಲ್ಲಿ ಬರಬೇಕೆಂದು ಹಳಕಟ್ಟಿಯವರು ಅಪೇಕ್ಷಿಸಿದರು. ಆದುದರಿಂದ ಅಷ್ಟಾವರಣದ ಭಾಗ ಪೂರ್ತಿಯಾಗದಿದ್ದರೂ ಅದನ್ನು ಇದರಲ್ಲಿ ಸೇರಿಸಲಾಯಿತು.

ಅಷ್ಟಾವರಣದ ಇನ್ನುಳಿದ ಭಾಗವನ್ನು ಈ ಗ್ರಂಥದ ಉತ್ತರಾರ್ಧವೆಂದು ಪ್ರಕಟಿಸಬೇಕೆಂದು ಹಳಕಟ್ಟಿಯವರು ಯೋಜಿಸಿದ್ದರು. ಆದರೆ ಮುಂದೆ ಅದಕ್ಕೆ ಅನುಕೂಲವಾಗಲಿಲ್ಲವೆಂದು ತೋರುತ್ತಿದೆ.

ಈಗ ಬಂದಿರುವ ವಚನಶಾಸ್ತ್ರಸಾರದ ಮೂರು ಭಾಗಗಳಲ್ಲಿ ನಾಲ್ಕು ಸಂಪುಟಗಳಲ್ಲಿ ಸಾಧ್ಯವಾದಷ್ಟು ಪೂರ್ತಿಯಾಗಿ ವಿವರವಾಗಿ 'ವೀರಶೈವ ಸಿದ್ಧಾಂತ'ವು ನಿರೂಪಿತವಾಗಿದೆ. ಈ ನಾಲ್ಕು ಸಂಪುಟಗಳ ವ್ಯಾಸಂಗದಿಂದ ವೀರಶೈವ ಸಿದ್ಧಾಂತದ ಸ್ಪಷ್ಟವಾದ ಚಿತ್ರ ಮೂಡಿಬರುತ್ತಿದೆ. ಎರಡನೆಯ ಸಂಪುಟವು ಹಲವಾರು ವಿಷಯಗಳನ್ನು ಒಳಗೊಂಡಿದ್ದು ಅದನ್ನು ಸಾಂದರ್ಭಿಕ (Reference) ಗ್ರಂಥವಾಗಿ ಈಗಿನ ವಿದ್ವಾಂಸರು ಬಳಸುತ್ತಾರೆ. ಹೀಗೆ ಬಳಸಲಾಗುವ ಇನ್ನೊಂದು ಕೃತಿ "ಶಿವಾನುಭವ ಶಬ್ದಕೋಶ".

'ಶಿವಾನುಭವ ಶಬ್ದಕೋಶ'ವು 'ವಚನಶಾಸ್ತ್ರಸಾರ'ಕ್ಕೆ ಪರಿಪೋಷಕವೆನಿಸುವ ಗ್ರಂಥವಾಗಿದೆ. ಇದು ಸಂಕಲನವಲ್ಲ. ಸ್ವತಂತ್ರ ರಚನೆ. ಇದರಲ್ಲಿ ವೀರಶೈವ ಪರಿಭಾಷೆಯನ್ನು ವಿವರಿಸಲಾಗಿದೆ. ವೀರಶೈವ ಸಿದ್ಧಾಂತಕ್ಕೆ ಸಂಬಂಧಪಟ್ಟ ಎಲ್ಲ ಪಾರಿಭಾಷಿಕ ಪದಗಳ ಅರ್ಥವಿವರಣೆಯನ್ನು ಒದಗಿಸಲಾಗಿದೆ. 'ವಚನಶಾಸ್ತ್ರ ಸಾರ'ದ ವ್ಯಾಸಂಗವನ್ನು ಕೈಕೊಳ್ಳಲು ಸಾಧ್ಯವಿಲ್ಲದವರೂ ಕೂಡ ಈ ಗ್ರಂಥದಿಂದ ವೀರಶೈವ ಸಿದ್ಧಾಂತದ ಬಗೆಗೆ ಅರಿತುಕೊಳ್ಳಬಲ್ಲರು. ಈ ಕೃತಿಯಲ್ಲಿ ಅಡಕವಾಗಿರುವ ಮಾಹಿತಿಯು ವಿಪುಲವಾಗಿದೆ. ನಿರೂಪಣೆಯು ಸುಗಮವಾಗಿದೆ. ಇದು 'ವಚನಶಾಸ್ತ್ರ ಸಾರ'ದ ಸಾರವೂ ಆಗಿದೆ.

ಹಳಕಟ್ಟಿಯವರು ಸ್ವತಃ ರಚಿಸಿದ ಕೃತಿಮಾಲೆ "**ಶಿವಶರಣರ ಚರಿತ್ರೆಗಳು**". ಇದು ನಾಲ್ಕು ಸಂಪುಟಗಳಲ್ಲಿ ನಾಲ್ಕು ಭಾಗಗಳಾಗಿ ಬಂದಿದೆ. ಅವುಗಳ ವಿವರ ಹೀಗಿದೆ :

೧. ಭಾಗ– : ಒಂದು– ಈ ಕೃತಿಯು ನನ್ನ ಪರಿಶೀಲನೆಗೆ ಲಭ್ಯವಾಗಿಲ್ಲ. ಇದರಲ್ಲಿ "೫೧ ಜನ ಶಿವಶರಣ. ಶರಣೆಯರ ಚರಿತ್ರೆಗಳು ಬಂದಿವೆ" ಎಂದು ಎರಡನೆಯ ಭಾಗದ ಪ್ರಸ್ತಾವನೆಯಲ್ಲಿ ಹೇಳಲಾಗಿದೆ.

೨. ಭಾಗ : ಎರಡು– ಇದು ಶಿವಾನುಭವ ಗ್ರಂಥಮಾಲೆಯ ನಂ. ೭೫ ಎಂದು ಪ್ರಕಟವಾಗಿದೆ. ಪ್ರಕಟವಾದ ವರುಷದ ಉಲ್ಲೇಖ ಪುಸ್ತಕದಲ್ಲಿ (ನನಗೆ ಲಭ್ಯವಾದ ಪ್ರತಿಯಲ್ಲಿ) ಇಲ್ಲ.

ಈ ಪುಸ್ತಕದಲ್ಲಿ ೪೮ ಶಿವಶರಣರ, ೧೫ ಶರಣೆಯರ ಚರಿತ್ರೆಗಳು ಬಂದಿವೆ. ಒಟ್ಟು ಪುಟ ಸಂಖ್ಯೆ ೪೫೮. 'ಬೊಂತಾದೇವಿ'ಯಿಂದ ಆರಂಭವಾಗಿ 'ಭಾಸುದೇವ'ನ ವರೆಗಿನ ೬೩ ಚರಿತ್ರೆಗಳು ಇಲ್ಲಿವೆ. ಈ ಚರಿತ್ರೆಗಳಿಗಾಗಿ ಮಾಹಿತಿ ಸಂಗ್ರಹಿಸಲು ಹಳಕಟ್ಟಿ ಅವರು ಹಲವಾರು ಸಂಚಾರಗಳನ್ನು ಕೈಕೊಂಡರು. ಸಾಧ್ಯವಿದ್ದಷ್ಟು ಶರಣರ ಸ್ಥಳಗಳನ್ನು ಸಂದರ್ಶಿಸಿದರು.

ಇದರಲ್ಲಿ ಚರಿತ್ರೆಯೊಂದೇ ಅಲ್ಲ, ಆಯಾ ಶರಣರು ನಡೆದ ಹಾದಿ. ಅದು ಶಿವಾನುಭವ ಮಾರ್ಗಕ್ಕೆ ಅನುಗುಣವಾಗಿರುವ ಬಗೆ, ಶಿವಶರಣರ ಚಳವಳಿಯ ಇತಿಹಾಸ– ಇವುಗಳನ್ನು ವಿವೇಚಿಸುವ ಸುದೀರ್ಘ ಪ್ರಸ್ತಾವನೆ ಈ ಕೃತಿಯಲ್ಲಿ ಬಂದಿದೆ. ವೀರಶೈವ ಸಿದ್ಧಾಂತದ ಪ್ರತಿಪಾದನೆ. ಅದು ಆಯಾ ಶರಣರ ಬಾಳಿಗೆ ಅನ್ವಯವಾದ ನಿರೂಪಣೆಗಳು ಇಲ್ಲಿವೆ. ಹೀಗೆ ಈ ಪ್ರಸ್ತಾವನೆಯಲ್ಲಿ ಶಿವಾನುಭವ ಪಥವನ್ನು ವಿವೇಚಿಸಲಾಗಿದೆ, ನಿರ್ದೇಶಿಸಲಾಗಿದೆ. ಶಿವಶರಣರನ್ನು ಕುರಿತ ಕೆಲವೊಂದು ಪ್ರಶ್ನೆಗಳನ್ನು ಚರ್ಚಿಸಲಾಗಿದೆ. ಶಿವಶರಣರ ವಿಪುಲತೆ, ವೈವಿಧ್ಯಗಳನ್ನು ಪರಿಚಯಿಸಲಾಗಿದೆ. ಈ ಎಲ್ಲ ಸಂಗತಿಗಳಿಂದಾಗಿ ಈ ಗ್ರಂಥಕ್ಕೆ ಮಹತ್ವವಿದೆ.

೩. ಭಾಗ : ಮೂರು– ಈ ಗ್ರಂಥವು ೧೯೫೧ರಲ್ಲಿ ಪ್ರಕಟವಾಯಿತು. ಕರ್ನಾಟಕದ ಶರಣರಲ್ಲದೆ ಆಂಧ್ರ, ಗುಜರಾತ ಮುಂತಾದ ಪ್ರಾಂತಗಳ, ಅಫಘಾಣಿಸ್ತಾನ ಮುಂತಾದ ಪರದೇಶಗಳ ಶರಣರ, ಶಿವಭಕ್ತರ ಚರಿತ್ರೆಗಳು ಈ ಕೃತಿಯಲ್ಲಿ ಬಂದಿವೆ. ಆ ಚರಿತ್ರೆಗಳ ಸಂಖ್ಯೆ ೨೮. "ಜಂಗಮರು" ಎಂಬ ಶೀರ್ಷಿಕೆಯಲ್ಲಿ ಆ ಬಗೆಗೆ ವ್ಯಾಪಕ ದೃಷ್ಟಿಯಿಂದ ನಿರೂಪಿಸಲಾಗಿದೆ. ಹಲವು ದೃಷ್ಟಿಗಳಿಂದ ವಿಷಯವನ್ನು ಪ್ರತಿಪಾದಿಸುವ ಹಳಕಟ್ಟಿಯವರ ನಿರೂಪಣಾಕ್ರಮವು ಇಲ್ಲಿ ಕಂಡುಬರುತ್ತಿದೆ.

ಒಟ್ಟು ಮೂರು ಭಾಗಗಳಲ್ಲಿ ೧೪೩ ಶಿವಶರಣರ ಚರಿತ್ರೆಗಳು ಬಂದಿವೆ.

೪. ಶಿವಶರಣೆಯರ ಚರಿತ್ರೆಗಳು– ಮೂರನೆಯ ಭಾಗದ ಪ್ರಸ್ತಾವನೆಯಲ್ಲಿ ಶಿವಶರಣರ ನಾಲ್ಕನೆಯ ಭಾಗವನ್ನು ಪ್ರಕಟಿಸುವ ಉದ್ದೇಶವನ್ನು ಉಲ್ಲೇಖಿಸಲಾಗಿದೆ. ಆದರೆ ಪ್ರಸ್ತುತ ಕೃತಿಯನ್ನು ನಾಲ್ಕನೆಯ ಭಾಗವೆಂದು ಕರೆದಿಲ್ಲ. "ಶಿವಶರಣೆಯರ ಚರಿತ್ರೆಗಳು" ಎಂಬ ಶೀರ್ಷಿಕೆಯನ್ನು ಇದಕ್ಕೆ ಕೊಡಲಾಗಿದೆ.

ಇದು ೧೯೫೮ರಲ್ಲಿ ಪ್ರಕಟವಾಯಿತು. ಇದರಲ್ಲಿ ೪೫ ಶಿವಶರಣೆಯರ ಚರಿತ್ರೆಗಳಿವೆ. ಅವರು ವಿವಿಧ ಬಗೆಯವರು. ಅಂತಸ್ಥಿನವರು ಆಗಿದ್ದಾರೆ. ಶಿವಶರಣ ತತ್ವಗಳ ವಿರೋಧಕರ ಹಿಂಸೆಯನ್ನು ಎದುರಿಸಿ ಹೋರಾಟ ನಡೆಸಿದ ಮಹಿಳೆಯರೂ ಕೆಲವರಿದ್ದಾರೆ. **ಕಲ್ಯಾಣ ಕ್ರಾಂತಿಯ ನಂತರ ನಡೆದ ಹೋರಾಟದ ಬಗೆಗೆ ಹೆಚ್ಚಿನ ವ್ಯಾಸಂಗ ನಡೆಯಬೇಕಾಗಿದೆಯೆಂಬ ಸಲಹೆಯು "ಪ್ರಸ್ತಾವನೆ" ಯಲ್ಲಿದೆ.** ಶಿವಶರಣರ ಚಳುವಳಿಯ ಬಗೆಗೆ ಕೆಲವು ಅಂಶಗಳು ಅಸ್ಪಷ್ಟವಾಗಿ

ಉಳಿದುದನ್ನು ಕಂಡ ಅವರು ಅವುಗಳ ಬಗೆಗೆ ವಿಷಯ ಸಂಗ್ರಹಿಸಿ ನಿರೂಪಿಸಲು ಬಹಳ ಪರಿಶ್ರಮಪಟ್ಟರು. ಮತ್ತು ಇತರರು ಆ ದಿಸೆಯಲ್ಲಿ ಸಂಶೋಧನೆ ಕೈಕೊಳ್ಳಬೇಕೆಂದು ಬಿನ್ನವಿಸಿದರು. ಅವರ ಪರಿಶ್ರಮದ ಫಲವು ಅವರು ರಚಿಸಿದ ಶಿವಶರಣರ ಚರಿತ್ರೆಗಳಲ್ಲಿ ಕಂಡುಬರುತ್ತಿದೆ.

ವೀರಶೈವ ಗುರುಪರಂಪರೆಯ ಚರಿತ್ರೆಯನ್ನು ಕುರಿತ ಒಂದು ಗ್ರಂಥವನ್ನೂ ಅವರು ಬೆಳಕಿಗೆ ತಂದರು. ಅದು ನಿರಂಜನ ವಂಶರತ್ನಾಕರ. ಪ್ರಕಟನೆಯ ವರುಷ ೧೯೩೨. ಪುಟಗಳು ೬೭. ದೊರೆತ ಒಂದೇ ಅಪೂರ್ಣ ಪ್ರತಿಯ ಆಧಾರದ ಮೇಲೆ ಅದನ್ನು ಪ್ರಕಟಿಸಬೇಕಾಯಿತು. ಶೂನ್ಯಸಿಂಹಾಸನದ ಪ್ರಥಮ ಅಧಿಪತಿ ಪ್ರಭು ದೇವನ ಪರಂಪರೆಯ ಗುರುಗಳ ಚರಿತ್ರೆಯನ್ನು ಅದು ನಿರೂಪಿಸುತ್ತಿದೆ. ಅದರಲ್ಲಿ ಕೆಲವೊಂದು ಮಹತ್ವದ ಐತಿಹಾಸಿಕ ಸಾಮಗ್ರಿಯಿದೆ.

ಹೊಸಗನ್ನಡ ಚಳವಳಿಯ ಇತಿಹಾಸದಲ್ಲಿ 'ಆದಿ ಪುರುಷ'ನಾದ "ಕನ್ನಡದ ಹುಲಿ" ಡೆಪ್ಯೂಟಿ ಚೆನ್ನಬಸಪ್ಪನವರ ಜೀವನ ಚರಿತ್ರೆಯನ್ನು ಹಳಕಟ್ಟಿ ಅವರು ಬರೆದು ೧೯೩೦ರಲ್ಲಿ ಪ್ರಕಟಿಸಿದರು. ಆಧುನಿಕ ಕಾಲದ ಗಣ್ಯರ ಪುಣ್ಯ ಪುರುಷರ ಜೀವನ ಚರಿತ್ರೆಗಳ ಬಗೆಗೂ ಅವರು ಗಮನ ಹರಿಯಿಸಿದರು.

ಶಿವಾನುಭವ ಪತ್ರಿಕೆಯಲ್ಲಿ ವೀರಶೈವ ಧಾರ್ಮಿಕ, ತಾತ್ವಿಕ, ಸಾಮಾಜಿಕ. ಐತಿಹಾಸಿಕ. ಶರಣ ಸಂಸ್ಕೃತಿ ಸಂಬಂಧದ ಅನೇಕ ಲೇಖನಗಳು ಪ್ರಕಟವಾದವು, ಹಲವರು ಲೇಖನ ಬರೆಯುವಂತೆ ಸಂಶೋಧನೆ ಕೈಕೊಳ್ಳುವಂತೆ ಹಳಕಟ್ಟಿಯವರು ಪ್ರೇರಣೆ ಒದಗಿಸಿದರು. ಹೊಸ ಲೇಖಕರ ತಂಡವೊಂದನ್ನು ರೂಪುಗೊಳಿಸಿದರು. ಈ ದಿಸೆಯಲ್ಲಿ ನಾನೂ ಅವರಿಗೆ ಉಪಕೃತನಾಗಿದ್ದೇನೆ.

ಹಳಕಟ್ಟಿ ಅವರ ಇನ್ನೊಂದು ಘನವಾದ ಕಾರ್ಯವೆಂದರೆ ಹರಿಹರನ ರಗಳೆ ಗಳನ್ನು ಬಹುಕಾಲ ಹಿಂದೆಯೇ ವಿಪುಲವಾಗಿ ಪ್ರಕಟಿಸಿದ್ದು.

ಪ್ರಾಚೀನ ಕನ್ನಡದ ಮಹಾಕವಿಗಳಲ್ಲಿ ಒಬ್ಬನಾದ ಹರಿಹರನು "ಗಿರಿಜಾ ಕಲ್ಯಾಣ" ಕಾವ್ಯದ ಮೂಲಕ ಪಂಡಿತ ಕವಿಯೆಂದು ಕೆಲವರಿಗೆ ಪರಿಚಿತನಾಗಿದ್ದ. ಅವನ ಕಾವ್ಯ ಪ್ರತಿಭೆಯ ಇನ್ನೊಂದು ಮುಖ–ಉನ್ನತ ಮುಖವನ್ನು ಪ್ರಚುರಗೊಳಿ ಸುವ ಕಾರ್ಯ ಹಳಕಟ್ಟಿ ಅವರಿಂದ ನಡೆಯಿತು. ಆತನ ರಗಳೆಗಳನ್ನು ಬೆಳಕಿಗೆ ತರುವ ಕಾರ್ಯವನ್ನು ಹಳಕಟ್ಟಿಯವರು ಬಹುಕಾಲ ಹಿಂದೆಯೇ ಆರಂಭಿಸಿದರು. ೧೯೩೩ರಲ್ಲಿ ರಗಳೆಗಳ ಮೊದಲನೆಯ ಭಾಗವನ್ನು ಗ್ರಂಥರೂಪದಲ್ಲಿ ಪ್ರಕಟಿಸಿದರು. ಅಲ್ಲಿಂದ ಕ್ರಮಶಃ ಎಂಟು ಭಾಗಗಳನ್ನು (ನನಗೆ ತಿಳಿದಮಟ್ಟಿಗೆ) ಪ್ರಕಟಿಸುತ್ತ ಸಾಗಿದರು. ಇಂದು ಹರಿಹರನ ರಗಳೆಗಳ ಬಗೆಗೆ ಅಷ್ಟೇ: ಉತ್ಸಾಹ, ವ್ಯಾಸಂಗ, ಸಂಶೋಧನೆಗಳು ವಿಪುಲವಾಗುತ್ತಿವೆ. ಅವು ವಿವಿಧವಾಗಿ ಪ್ರಕಟಗೊಂಡು ವಿಮರ್ಶಿತವಾಗಿವೆ.

ಪಂಡಿತರು ಪಾಠಸಂಸ್ಕರಣ ಕಾರ್ಯ ಕೈಕೊಂಡರು. ಸಂಶೋಧಕರು ಹೆಚ್ಚಿನ ಅನ್ವೇಷಣೆಗೆ ತೊಡಗಿದರು. ಗಾಯಕರು ಉತ್ಸಾಹದಿಂದ ಹಾಡತೊಡಗಿದರು. ರಗಳೆಗಳನ್ನು ಕುರಿತ ಪಿಎಚ್.ಡಿ. ಪ್ರಬಂಧಗಳೂ ಬಂದಿವೆ. ಇನ್ನೂ ಹಲವು ಪ್ರಬಂಧಗಳಿಗಾಗಿ ಸಾಮಗ್ರಿ ಆ ರಗಳೆಗಳಲ್ಲಿದೆಯೆಂಬುದನ್ನು ವಿದ್ವಾಂಸರು ಕಂಡುಕೊಂಡಿದ್ದಾರೆ. ಹಳಕಟ್ಟಿಯವರು ರಗಳೆಗಳನ್ನು ಪ್ರಕಟಿಸುವ ಪೂರ್ವದ ಸ್ಥಿತಿಯನ್ನು ನೆನೆದಾಗ ಹಳಕಟ್ಟಿ ಕಾರ್ಯದ ಹಿರಿಮೆ ಸ್ಪಷ್ಟವಾಗುತ್ತಿದೆ.

ಜನಸೇವೆ :

ವಚನ ಸಾಹಿತ್ಯದ ಬಗೆಗೆ ಹಳಕಟ್ಟಿ ಅವರು ನಿಸ್ಸೀಮ ತಪಸ್ಸನ್ನೇ ಕೈಕೊಂಡರು. ಆದರೆ ಅವರ ಚೇತನವು ವಚನ ಸಾಹಿತ್ಯಕ್ಕಾಗಿ ಮಾತ್ರ ಸೀಮಿತವಾಗಿರಲಿಲ್ಲವೆಂಬುದನ್ನು ನಾವು ಗಮನಿಸಬೇಕು. ಅವರ ಜೀವನ ವಾಹಿನಿಯನ್ನು ನಿರೂಪಿಸಿದ ಈ ಮೊದಲಿನ ಭಾಗದಲ್ಲಿ ಅವರು ನಿರ್ವಹಿಸಿದ ಸಾರ್ವಜನಿಕ ಹೊಣೆಗಾರಿಕೆಗಳನ್ನು ಉಲ್ಲೇಖಿಸಿದೆ.

"ನವಕರ್ನಾಟಕ" ವಾರ ಪತ್ರಿಕೆಯನ್ನು ಹೊರಡಿಸಿದ ಹಳಕಟ್ಟಿ ಅವರು ನವ ಕರ್ನಾಟಕವನ್ನು ಕಟ್ಟುವ, ಅದರ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವ ದಿಸೆಯಲ್ಲಿ ಕಾರ್ಯನಿರತರಾಗಿದ್ದರು. ಅವರದು ಬಹುಮುಖ ಸೇವೆ. ಅವರ ಕಾರ್ಯರಂಗ ವ್ಯಾಪಕವಾದುದು. ಐವತ್ತು ವರುಷಗಳಿಗೆ ಮೇಲ್ಪಟ್ಟು ಅವರು ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಮಹತ್ವದ ಉಪಯುಕ್ತ ಪಾತ್ರವಹಿಸಿದ್ದರು.

ಅವರ ಸಾರ್ವಜನಿಕ ಚಟುವಟಿಕೆಗಳು ವಿಜಾಪುರ ನಗರದಿಂದ ಆರಂಭವಾದವು. ಶಿಕ್ಷಣ ಕ್ಷೇತ್ರದ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಮತ್ತು ಸಂಶೋಧನ– ಈ ಎಲ್ಲ ರಂಗಗಳಲ್ಲಿ ಅವರು ಸೇವೆ ಸಲ್ಲಿಸಿದರು. ಆರ್ಥಿಕ ಭದ್ರತೆಗಾಗಿ ಬ್ಯಾಂಕ್ ಸ್ಥಾಪಿಸಿದರು. ಸಹಕಾರೀ ಕ್ಷೇತ್ರದಲ್ಲಿ ದುಡಿದರು. ನೇಕಾರಿಕೆ, ವ್ಯಾಪಾರ, ಒಕ್ಕಲುತನ ವಲಯಗಳಲ್ಲಿ ಕಾರ್ಯ ಕೈಕೊಂಡರು. ಬರಗಾಲ ನಿವಾರಣಾ ಸಂಸ್ಥೆಯ ಉತ್ಸಾಹೀ ಕಾರ್ಯಕರ್ತರಾಗಿದ್ದರು. ರಾಜಕೀಯ ರಂಗದಲ್ಲಿಯೂ ಅವರು ಪಾಲ್ಗೊಂಡರು. ವೀರಶೈವ ಮಹಾಸಭೆಯ ಅಧ್ಯಕ್ಷರಾಗಿದ್ದ ಅವರು ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿ ಸ್ಥಾನವನ್ನು ವಹಿಸಿಕೊಂಡಿದ್ದರು. ವಿಜಾಪುರ ನಗರಸಭೆಯಿಂದ ಆರಂಭಿಸಿ ಮುಂಬಯಿ ರಾಜ್ಯದ ಶಾಸನ ಸಭೆಯವರೆಗೆ ಅವರ ಕಾರ್ಯರಂಗ ಹಬ್ಬಿ ನಿಂತಿತ್ತು. ಕನ್ನಡಿಗರಿಗೆ ಜೀವಾಳದ ಪ್ರಶ್ನೆಯಾಗಿದ್ದ ಕರ್ನಾಟಕ ಏಕೀಕರಣದ ದಿಸೆಯಲ್ಲಿ ಅವರು ಕಾರ್ಯೋನ್ಮುಖರಾಗಿದ್ದರು. ಸಾಹಿತ್ಯ, ಸಂಸ್ಕೃತಿ, ವ್ಯಾಸಂಗ ರಂಗಗಳಲ್ಲಿ ವಿಜಾಪುರದ ನಾಡಹಬ್ಬದಿಂದ ಆರಂಭಿಸಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಲನ, ಸಂಶೋಧನ ಸಂಸ್ಥೆ, ಮುಂಬಯಿ ಕರ್ನಾಟಕ ವಿಶ್ವವಿದ್ಯಾಲಯ ಇವುಗಳಲ್ಲಿ ಅವರ ಪಾತ್ರವು ಸ್ಪಷ್ಟ

ವಾಗಿತ್ತು. ಹೀಗೆ ಕರ್ನಾಟಕ ಜನಜೀವನದ ಬಹುಶಃ ಎಲ್ಲ ರಂಗಗಳಲ್ಲಿ ಮಹತ್ತ್ವಪೂರ್ಣ ಸೇವೆ ಸಲ್ಲಿಸಿದರು. "ಸಾರ್ವಜನಿಕ ಕಾರ್ಯಕರ್ತ" ಎಂಬ ಪದಕ್ಕೆ ಆಗ ಗೌರವವಿರುತ್ತಿದ್ದರೆ ಹಳಕಟ್ಟಿ ಅವರಂತಹ ಪ್ರಾಮಾಣಿಕ ನಿಷ್ಠಾವಂತರು ಅದಕ್ಕೆ ಕಾರಣರಾಗಿದ್ದರು.

ಒಬ್ಬ ವ್ಯಕ್ತಿಯು ಇಷ್ಟೊಂದು ಕಾರ್ಯ ಮಾಡಲು ಸಾಧ್ಯವೇ ? ಎಂಬ ಪ್ರಶ್ನೆಯೂ ಇದೆ. ಇದಕ್ಕೆ ಸರಿಯಾದ ಉತ್ತರವನ್ನೂ ನಾನು ಕಂಡುಕೊಂಡಿದ್ದೇನೆ. ನಿಷ್ಠೆ, ಕಷ್ಟ ಸಹಿಷ್ಣುತೆ, ಸಹನಶೀಲತೆ, ಸ್ವಾರ್ಥ ಸುಳಿಯದೆಯಿರುವ ಜನಸೇವೆಯ ಮನೋಭಾವ, ಪಾಪಭೀರುವಾಗಿರುವ ಪ್ರಾಮಾಣಿಕತೆ– ಈ ಗುಣಗಳ ಮೂಲಕ ಹಳಕಟ್ಟಿಯವರು ಅಂತಹ ಸಾಮರ್ಥ್ಯವನ್ನು ಪಡೆದುಕೊಂಡಿದ್ದರು. ಆ ಬಗೆಯ ಗುಣಗಳಿಂದ ಕೂಡಿದವರು ಅಷ್ಟೊಂದು ವ್ಯಾಪಕ ಕಾರ್ಯ ಸಾಧಿಸಬಲ್ಲರು. ಶರಣರಂತೆ ಬಾಳಿದ ಹಳಕಟ್ಟಿಯವರು ಈ ದಿಸೆಯಲ್ಲಿ ಶಿವ ಕೃಪೆಯನ್ನು ಪಡೆದಿದ್ದರು.

೪. ಮೂರ್ತಿ ಸ್ವರೂಪ :

ಶಿವಕೃಪೆ ಒದಗಿಬರುವ ಮುನ್ನ ಶಿವನು ತನ್ನ ಭಕ್ತನನ್ನು "ನುಗ್ಗು ಮಾಡುವ, ನುಸಿಯ ಮಾಡುವ, ಮುಗ್ಗು ಮಾಡುವ, ಮುಸಿಯ ಮಾಡುವ. ಕೂಡಲಸಂಗಮದೇವರ ನೆರೆ ನಂಬಿದನಾದರೆ ಕಡೆಗೆ ತನ್ನಂತೆ ಮಾಡುವ" ಎಂಬ ಉಕ್ತಿಯು ಹಳಕಟ್ಟಿ ಅವರ ವಿಷಯದಲ್ಲಿ ನಿಜವಾಗಿ ಪರಿಣಮಿಸಿತು.

೧೯೨೭–೨೯ರ ಅವಧಿಯಲ್ಲಿ ನಾನು ವಿಜಾಪುರ ಸರಕಾರಿ ಹಾಯಸ್ಕೂಲಿನ ವಿದ್ಯಾರ್ಥಿಯಾಗಿದ್ದೆ. ಆಗ ಡಾ॥ (ಅಂದು ರಾವಸಾಹೇಬ) ಹಳಕಟ್ಟಿಯವರು 'ನವಕರ್ನಾಟಕ' ವಾರಪತ್ರಿಕೆಯನ್ನು ಆರಂಭಿಸಿದರು. ಆ ಪತ್ರಿಕೆಯ ಘೋಷಣೆಯು ನನ್ನನ್ನು ಆಕರ್ಷಿಸಿತು. ಎಳೆತನದ ಉತ್ಸಾಹದಲ್ಲಿ ನಾನು ಆ ಪತ್ರಿಕೆಗೆ ಚಿಕ್ಕ ಲೇಖನ ಕಳಿಸಿದೆ. ಶಾಲಾ ವಿದ್ಯಾರ್ಥಿಯಾದ ನನ್ನ ಲೇಖನಕ್ಕೆ ಹಳಕಟ್ಟಿ ಅವರಿಂದ ಪ್ರೋತ್ಸಾಹನೆ ದೊರೆಯಿತು. ಹತ್ತಿರಕ್ಕೆ ಕರೆದು ನನಗೆ ಉತ್ತೇಜನ ಒದಗಿಸಿದರು. ವಿಜಾಪುರದಲ್ಲಿ ಆಗ ಆರಂಭವಾಗಿದ್ದ 'ನಾಡಹಬ್ಬ'ದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಎಳೆಯರಲ್ಲಿ ಉತ್ಸಾಹವನ್ನು ತುಂಬಿದರು. ಆಗ ನಾನು ಅವರೊಂದಿಗೆ ಪಡೆದ ಸಂಪರ್ಕದಿಂದ ಅವರು 'ಸದು ವಿನಯ ಸಂಪನ್ನ'ರೆಂಬುದನ್ನು ಕಂಡುಕೊಂಡೆ. ೧೯೩೩ರಲ್ಲಿ ಧಾರವಾಡದಲ್ಲಿ ಸೇರಿದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷತೆಯನ್ನು ಹಳಕಟ್ಟಿಯವರು ವಹಿಸಿದ್ದರು. ಆ ಕಾಲಕ್ಕೆ ನಾನೂ ತರುಣರ ಒಂದು ಗೋಷ್ಠಿಯ ಸಂಘಟನೆಯಲ್ಲಿ ಭಾಗಿಯಾಗಿದ್ದೆ. ಅದು ಹಳಕಟ್ಟಿಯವರ ಸಂತೋಷಕ್ಕೆ ಕಾರಣವಾಯಿತು. ಅವರ ಮೆಲುನಗೆಯು ಚೇತನದಾಯಕವೆನಿಸುತ್ತಿತ್ತು. ಆದರೆ ಅವರು ಗಟ್ಟಿಯಾಗಿ ನಗುವ ಸನ್ನಿವೇಶಗಳು ಅವರ ಬದುಕಿನಲ್ಲಿ ಇರಲಿಲ್ಲವೆಂದು ಅನಿಸುತ್ತಿತ್ತು. ಸಾತ್ವಿಕ

ವಾದರೂ ಗಂಭೀರ ಕಳೆಯಿಂದ ಅವರು ಕೂಡಿರುತ್ತಿದ್ದರು. ಸದಾ ಯಾವುದೋ ಪ್ರಚ್ಛನ್ನ ಭಾರದಿಂದ ಅವರು ಬಳಲುತ್ತಿದ್ದಂತೆ ತೋರುತ್ತಿತ್ತು.

ಸ್ನಾತಕೋತ್ತರ ವಿದ್ಯಾರ್ಥಿಯಾಗಿ ನಾನು 'ಶಿವಾನುಭವ' ಪತ್ರಿಕೆಗೆ ಕೆಲವು ಲೇಖನ ಬರೆದೆ. ಸಂಶೋಧನೆಯಲ್ಲಿ ನಾನು ಮುಂದುವರಿಯುವಂತೆ ಹಳಕಟ್ಟಿ ಯವರು ನನಗೆ ಉತ್ತೇಜನವನ್ನು ನೀಡಿದರು. ಕೊಲ್ಲಾಪುರದಲ್ಲಿ ಕೀ. ಶೇ. ಪ್ರೊ॥ ಕುಂದಣಗಾರ ಅವರ ನೇತೃತ್ವದಲ್ಲಿ ಪ್ರಕಟವಾದ "ಹರಿಹರದೇವ" ಎಂಬ ಕೃತಿಯ ಬಗೆಗೆ ಹಳಕಟ್ಟಿಯವರು ಹೆಚ್ಚಿನ ಆಸ್ಥೆ ವಹಿಸಿದರು.

ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕನಾದ ನಾನು ಮುಂಬಯಿ ಸರಕಾರದ ಕನ್ನಡ ಸಂಸ್ಕೃತಿ ಸಂಶೋಧನ ಸಲಹಾ ಸಮಿತಿಯ ಕಾರ್ಯದರ್ಶಿ ಪದವನ್ನು ವಹಿಸಿ ಕೊಳ್ಳಬೇಕಾಯಿತು. ಆಗ ನನಗೆ ಹಳಕಟ್ಟಿಯವರ ನಿಕಟ ಸಂಪರ್ಕ ಒದಗಿಬಂದಿತು. "ಕನ್ನಡ ಸಂಶೋಧನ ಸಂಸ್ಥೆ"ಯ ಚಟುವಟಿಕೆಗಳಲ್ಲಿ ಹಳಕಟ್ಟಿಯವರು ಉತ್ಸಾಹದಿಂದ ಭಾಗವಹಿಸಿದರು. ಆ ಸಂಸ್ಥೆಗೆ ಅವರ ರಚನಾತ್ಮಕ ಮಾರ್ಗದರ್ಶನ ಒದಗಿಬಂದಿತು.

ನಾವಿಬ್ಬರೂ ಮುಂಬಯಿ ವಿಶ್ವವಿದ್ಯಾಲಯದ ಪರೀಕ್ಷಕರಾಗಿ ಕಾರ್ಯ ಮಾಡ ಬೇಕಾದಾಗ ಹಳಕಟ್ಟಿಯವರನ್ನು ತೀರ ಹತ್ತಿರದಿಂದ ಕಾಣುವ ಅವಕಾಶ ನನಗೆ ಒದಗಿ ಬಂದಿತು. ದಿನವೊಂದಕ್ಕೆ ೮–೧೦ ತಾಸು ನಾವು ಕೂಡಿ ಕೆಲಸ ಮಾಡಬೇಕಾಗುತ್ತಿತ್ತು. ಪ್ರಶ್ನೆ ಪತ್ರಿಕೆಗಳು ನಿರ್ಧಾರವಾದ ನಂತರ ಅವುಗಳ ೩೦–೪೦ ಪ್ರತಿಗಳನ್ನು ಬರೆಯ ಬೇಕಾಗುತ್ತಿತ್ತು. ಇದು ನನಗೆ ಪರಿಶ್ರಮದ ಬೇಸರದ ಕೆಲಸವಾಗಿ ತೋರುತ್ತಿತ್ತು. ಆದರೆ ತರುಣನಾದ ನನಗಿಂತ ಹೆಚ್ಚು ತಾಳ್ಮೆಯಿಂದ ಹಳಕಟ್ಟಿಯವರು ಈ ಕಾರ್ಯ ವನ್ನು ಪೂರೈಸುತ್ತಿದ್ದರು. ಮಧ್ಯಂತರ ವಿರಾಮಕ್ಕೆಂದು ನಾನು ಹೊರಗೆ ಹೋಗು ತ್ತಿದ್ದೆ. ಆಗಲೂ ಅವರು ಪ್ರತಿಮಾಡುವ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಪ್ರತಿ ಮಾಡುವ ನನ್ನ ಪಾಲಿನ ಕರ್ತವ್ಯದ ಕೆಲಭಾಗವನ್ನು ತಾವು ವಹಿಸಿಕೊಳ್ಳುತ್ತಿದ್ದರು. ಇಡಿಯ ದಿವಸ ಅವರು ಊಟ ಮಾಡದೇ ಬರಿಯ ಚಹ ಸೇವಿಸಿ ಕೆಲಸ ಮಾಡು ತ್ತಿದ್ದರು. ಯಾವ ಚಟಗಳಿಗೂ ಅವರು ಒಳಗಾಗಿರಲಿಲ್ಲ. ರಾತ್ರಿ ಒಮ್ಮೆ ಮಾತ್ರ ಊಟಮಾಡುವ ಪದ್ಧತಿ ಅವರದಾಗಿತ್ತು. ಅವರ ನಿಷ್ಠುರ ಪರಿಶ್ರಮದ ಕಲ್ಪನೆಯು ಆಗ ನನಗೆ ಆಯಿತು.

ಮುಂದೆ ಧಾರವಾಡಕ್ಕೆ ಬಂದಾಗಲೆಲ್ಲ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ತಾಸೆರಡು ತಾಸು ಸರಸ ಸಲ್ಲಾಪದಲ್ಲಿ ನಾವು ಸೇರುತ್ತಿದ್ದೆವು. ನನ್ನ ಶ್ರೀಮತಿಯವರೂ ಭಾಗಿಯಾಗುತ್ತಿದ್ದರು. ಶ್ರೀಮತಿಯವರಿಗೆ ಶಿವಶರಣೆಯರ ವ್ಯಾಸಂಗದ ಬಗೆಗೆ ಹಳಕಟ್ಟಿಯವರು ಉತ್ತೇಜನ ಒದಗಿಸಿದರು. ಅವರ ಸರಳ ವಾತ್ಸಲ್ಯಪೂರ್ಣ ಸ್ವಭಾವಕ್ಕೆ ನಾವು ಮಾರುಹೋದೆವು. ಅವರ ಮಾತುಗಳಲ್ಲಿ ಹೊಸ ಯೋಜನೆಗಳ

ಪ್ರಸ್ತಾಪ, ಕರ್ನಾಟಕದ ಉನ್ನತಿಯು ಹಂಬಲ, ಶಿವಶರಣರನ್ನು ಕುರಿತ ಸಂಶೋಧನೆಯು ವಿಚಾರ ಇವು ಮುಖ್ಯವಾಗಿರುತ್ತಿದ್ದವು.

ಕಂದುಬಣ್ಣದ ಉದ್ದ ಕೋಟು ಬಿಳಿಯ ರುಮಾಲು, ಕನ್ನಡಕ, ಧೋತರ, ಪಾದಗಳಿಗೆ ಹಳೆಯ ಸಾಂಪ್ರದಾಯದ ಮೋಚೆ– ಇದು ಅವರ ವಾಡಿಕೆಯು ವೇಷ. ಶುಭ್ರ ಸಾತ್ವಿಕ ಕಳೆ ಮುಖದಲ್ಲಿ ಮಿಂಚುತ್ತಿತ್ತು.

ಹಲವಾರು ವರುಷಗಳ ವರೆಗೆ ಅವರು ಒಂದೇ ಕೋಟು ಧರಿಸುತ್ತಿದ್ದುದನ್ನು ಗಮನಿಸಿದ ನಮಗೆ ಅವರ ಸಾದಾ ಜೀವನವು ಸ್ಪಷ್ಟವಾಯಿತು. ಮುಂದೆ ಆ ಕೋಟಿಗೆ ತೇಪೆ ಹಚ್ಚಿದ್ದನ್ನು ಕಂಡಾಗ ಅವರ ಕಾರ್ಪಣ್ಯದ ಬಾಳಿಗಾಗಿ ವ್ಯಥೆಯೆನಿಸಿತು.

ಬದುಕಿನಲ್ಲಿ ಹಲವಾರು ಕಷ್ಟನಷ್ಟಗಳನ್ನು ಅವರು ಎದುರಿಸಬೇಕಾಗುತ್ತಿತ್ತು. ನಮ್ಮ ಜನ ಅವರಿಗೆ ಒದಗಿಸಬೇಕಾದ ಸಹಕಾರ, ನೆರವುಗಳನ್ನು ಒದಗಿಸಲಿಲ್ಲ. ಆದರೆ, ಬಾಳಿನ ಕಷ್ಟ ಕಾರ್ಪಣ್ಯಗಳನ್ನು ನುಂಗಿಕೊಂಡು ಕಾಯಕದಲ್ಲಿ ನಿರತರಾದ ಶರಣರು ಹಳಕಟ್ಟಿ ಅವರು.

ಹೀಗಿದ್ದರು ಹಳಕಟ್ಟಿ– ಅವರು ನಮ್ಮವರೆಂದು ಹೇಳಿಕೊಳ್ಳುವ ನಾವು ಹೇಗೆ ಇದ್ದೇವೆ? ಎಂಬ ಆತ್ಮಪರೀಕ್ಷೆಗೆ ನಮ್ಮನ್ನು ನಾವು ಒಳಗುಮಾಡಿಕೊಂಡು ಹಳಕಟ್ಟಿ ಆದರ್ಶದಿಂದ ಸ್ಫೂರ್ತಿ ಪಡೆಯಬೇಕು ಹೀಗೆಂದು ಹೇಳಿ ವಿರಮಿಸುತ್ತೇನೆ.

—ನಮಸ್ಕಾರ.

ಪ್ರಾಚೀನ ಲೇಖನ ಸಾಮಗ್ರಿ

● ಎಸ್. ಶಿವಣ್ಣ

ಭಾರತದಲ್ಲಿ ಲೇಖನ ಕಲೆಯನ್ನು ಕುರಿತ ದಾಖಲೆಗಳು ಗ್ರೀಕ್ ಮೂಲದವಾಗಿದ್ದು ಅವು 'ಕಡಮೆಯೆಂದರೆ ೫ನೆಯ ಶತಮಾನಕ್ಕಾಗಲೇ ನಮ್ಮಲ್ಲಿ ಬರವಣಿಗೆ ಬಳಕೆಯಲ್ಲಿತ್ತೆಂಬುದನ್ನು ತೋರಿಸುತ್ತವೆ'. ಹರಪ್ಪ– ಮೊಹೆಂಜೋದಾರೊವಿನಲ್ಲಿ ಕೊರೆದ ಬರಹವಿರುವ ಮುದ್ರೆಗಳು/ ಮಡಕೆಯ ಚೂರುಗಳು ಹೇರಳವಾಗಿ ಸಿಕ್ಕಿವೆ. ಮಣ್ಣಿನ ಬಳೆಗಳ ಮೇಲೆ ಅಕ್ಷರಗಳಿವೆ. ಅಲ್ಲದೆ ಮೊಹೆಂಜೊದಾರೊವಿನಲ್ಲಿ ಬೆಳ್ಳಿಯ ತುಂಡೊಂದು ಸಿಕ್ಕಿದ್ದು ಇದರ ಎರಡು ಬದಿಗಳಲ್ಲೂ ಪ್ರಾಚೀನ ಲಿಪಿ ಇದೆ.

ಬರವಣಿಗೆಯ ಬಳಕೆಯ ಬಗೆಗೆ ಬ್ರಾಹ್ಮಣ. ಬೌದ್ಧ ಮತ್ತು ಜೈನ ಸಾಹಿತ್ಯಗಳಲ್ಲಿ ಆಧಾರಗಳಿವೆ. ನೇರ್ ಖೊಸ್ (ಕ್ರಿ. ಪೂ. ೪ನೆಯ ಶತಮಾನಾಂತ್ಯ) ನ ಪ್ರಕಾರ 'ಹಿಂದುಗಳು ಚೆನ್ನಾಗಿ ಬಡಿದು ಮಾಡಿದ ಬಟ್ಟೆಯ ಮೇಲೆ ಅಕ್ಷರಗಳನ್ನು ಬರೆಯುತ್ತಿದ್ದರು'. ಕ್ಯು. ಕರ್ಟಿಯಸ್ ಹೇಳುವ 'ಮರದ ಒಳಗಿನ ಮೃದು ತೊಗಟೆಯ ಉಪಯೋಗ ಭೂರ್ಜ ಪತ್ರದ ಪ್ರಾಚೀನ ಬಳಕೆಯನ್ನು ಸೂಚಿಸುತ್ತದೆ. ಹೀಗೆ 'ಭಾರತದಲ್ಲಿ ಕ್ರಿ. ಪೂ. ೩೨೭–೨೬ರಲ್ಲಿಯೇ ಎರಡು ದೇಶೀಯ ವಸ್ತುಗಳನ್ನು ಬರೆಹಕ್ಕೆ ಬಳಸುವ ರೂಢಿ' ಇದ್ದದ್ದು ತಿಳಿದಂತಾಗಿದೆ.

ಕ್ರಿ. ಶ. ೪೫೦ರ ಕಾಲದ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯನ್ನುಳ್ಳ 'ಹಲ್ಮಿಡಿ ಶಾಸನ' ಉಪಲಬ್ಧ .ಶಾಸನಗಳಲ್ಲಿ ಪ್ರಪ್ರಾಚೀನತಮವಾದುದು. ಈ ಶಾಸನದ ಪೂರ್ವಕಾಲೀನ ಉಪಲಬ್ಧ ಶಾಸನಗಳೆಲ್ಲ ಪ್ರಾಕೃತಭಾಷೆ– ಬ್ರಾಹ್ಮಿ ಲಿಪಿಗಳಲ್ಲಿವೆ. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿನ 'ಇಸಿಲ' ಶಬ್ದ ಹಾಗು ಟಾಲೆಮಿ (ಕ್ರಿ. ಶ. ೧೫೦) ಹೆಸರಿಸಿದ ಕೆಲವು ಊರುಗಳ ಹೆಸರುಗಳನ್ನು ಆಧರಿಸಿ 'ಕನ್ನಡ ನುಡಿ ಕ್ರಿ. ಶ. ಆದಿಭಾಗದಿಂದಲೂ ಇದ್ದಿತೆಂದು ಹೇಳಬಹುದಾಗಿದೆ. ಕ್ರಿ. ಶ. ೨–೩ನೆಯ ಶತಮಾನಗಳಲ್ಲಿ ಅದಕ್ಕೆ ಲಿಪಿಯೊಂದು ಉಂಟಾಗಿ ಅದು ಗ್ರಂಥಸ್ಥವಾಗುವುದಕ್ಕೆ ಮೊದಲಿಟ್ಟಿರಬಹುದು' ಎಂದು ಡಾ॥ ಡಿ. ಎಲ್. ನರಸಿಂಹಾಚಾರ ಅವರು ಅಭಿಪ್ರಾಯಪಟ್ಟಿದ್ದಾರೆ.*

ಕನ್ನಡದಲ್ಲಿ ಬರೆ. ಬರೆಪ. ಬರಹ ಹಾಗು ಶಾಸನಗಳಲ್ಲಿ ಎಟ್ಟು ಎಂಬ ಪದಗಳ ಲೇಖನಾರ್ಥದಲ್ಲಿ ಉಪಯೋಗದಲ್ಲಿವೆ.

---

* ಕನ್ನಡ ಗ್ರಂಥಸಂಪಾದನೆ, ೧೯೬೪, ಪು. ೩೨.

ಭಾರತ/ಕರ್ನಾಟಕಗಳಲ್ಲಿ ಲೇಖನಕ್ಕಾಗಿ ಬಳಸಿದ ಸಾಮಗ್ರಿ ಲೋಹ ಹಾಗು ಲೋಹೇತರಗಳೆಂದು ಎರಡು ವಿಧವಾಗಿವೆ. ಇವುಗಳ ಪ್ರಾಚೀನತೆ. ಸ್ವರೂಪ ಇತ್ಯಾದಿಗಳ ಬಗೆಗೆ ಈ ಮುಂದೆ ವಿವೇಚಿಸಲಾಗಿದೆ.

ಕಬ್ಬಿಣ :– ಬೇಗನೆ ತುಕ್ಕು ಹಿಡಿದು ಕೆಟ್ಟು ಹೋಗುವ ಕಾರಣದಿಂದಾಗಿ ಈ ಲೋಹವನ್ನು ಸಾಧಾರಣವಾಗಿ ಶಾಸನ ಲಿಖಿತಗಳಿಗೆ ಬಳಸುತ್ತಿರಲಿಲ್ಲ. ದಿಲ್ಲಿ ಬಳಿ ಇರುವ ಮೆಹರಾಲಿಯಲ್ಲಿ ೬ ಟನ್ನುಗಳಷ್ಟು ತೂಕವಿರುವ ಒಂದು ಕಬ್ಬಿಣದ ಕಂಬವಿದೆ. ಇದರ ಮೇಲೆ ಇಮ್ಮಡಿ ಚಂದ್ರಗುಪ್ತನ ಶಾಸನವನ್ನು ಕೆತ್ತಲಾಗಿದ್ದು ಇದರ ಕಾಲ ಕ್ರಿ ಶ. ೪೧೫. ಅಕ್ಬರನ ಕಾಲ (ಕ್ರಿ. ಶ. ೧೫೫೧–೯೨) ದ ಫಾರಸೀ ಲೇಖನವುಳ್ಳ ಕಂಬವೊಂದು ಧಾರ್ ಎಂಬಲ್ಲಿದೆ. ಶತಮಾನಗಳು ಗತಿಸಿದ್ದರೂ. ಈ ಕಂಬಗಳಿಗೆ ತುಕ್ಕು ಹತ್ತಿಲ್ಲ.

ಚಿನ್ನ :– ಇದರ ತೆಳ್ಳನೆಯ ತಗಡನ್ನು ಬರೆವಣಿಗೆಗೆ ಬಳಸುತ್ತಿದ್ದರು. ಪಂಜಾಬಿನ ಸಿರ್‌ಸುಖ್‌ನಲ್ಲಿನ ಗಂಗು ಎಂಬಲ್ಲಿರುವ ಬೌದ್ಧಸ್ತೂಪವೊಂದರಲ್ಲಿ ಚಿನ್ನದ ತಗಡಿನ ಮೇಲೆ ಬರೆದ ಲಿಪಿ ದೊರೆತಿದೆ.

ಬೆಳ್ಳಿ :– ತೆಳ್ಳನೆಯ ಬೆಳ್ಳಿ ತಗಡುಗಳ ಮೇಲೆ ಯಂತ್ರಗಳನ್ನು ಬರೆಯುವ ರೂಢಿಯನ್ನು ಇಂದೂ ಕಾಣಬಹುದಾಗಿದೆ. ಮೊಹೆಂಜೋದಾರೊ ಉತ್ಖನನದಲ್ಲಿ ೧೯೨೬ರಲ್ಲಿ ದೊರೆತ ಬೆಳ್ಳಿ ಚೂರಿನ ಬರೆಹ ಅತಿ ಪ್ರಾಚೀನವಾದುದಾಗಿದೆ. ಆಂಧ್ರ ಪ್ರದೇಶದ ಕೃಷ್ಣ ಜಿಲ್ಲೆಯ ಭಟ್ಟಿಪ್ರೋಲು ಎಂಬಲ್ಲಿ ಬೆಳ್ಳಿಯ ಮೇಲೆ ಬರೆದ ಲಿಖಿತ ಸಿಕ್ಕಿದೆ. ರಾವಲ್ಪಿಂಡಿ ಜಿಲ್ಲೆಯ ಮಾಣಿಕೆಯಾಲದಲ್ಲಿ ಬೌದ್ಧಸ್ತೂಪವೊಂದರಲ್ಲಿ ಲಿಪಿಯ ಸಹಿತವಾದ ಬೆಳ್ಳಿಯ ಬಟ್ಟು ದೊರೆತಿದೆ.

ಮೂರನೆಯ ಮಂಗರಸ (ಕ್ರಿ. ಶ. ೧೫೦೯) ಜಯನೃಪ ಕಾವ್ಯ'ದಲ್ಲಿ 'ತೊಳಪ ಬೆಳ್ಳಿಯ ಪಲಗೆಗೆಗೆ ಕತ್ತುರಿಯ ಮಿಸುಪ ರಜಮಂ ಪರಿಕಲಿಸುತ್ತ' (೧೨–೫೨) ಎಂದು ಬೆಳ್ಳಿಯ ಹಲಗೆಯ ಬಳಕೆಯನ್ನು ಸೂಚಿಸಿದ್ದಾನೆ.

ಹಿತ್ತಾಳೆ :– ಕ್ರಿ. ಪೂ. ೬ನೆಯ ವರ್ಷದ ಶಾಸನವನ್ನುಳ್ಳ ಬುದ್ಧನ ಅವಶೇಷವನ್ನುಳ್ಳ ಪಾತ್ರೆಯೊಂದು ಅಫ್ಘಾನಿಸ್ಥಾನದ ವರ್ಧಕ್ ಎಂಬೆಡೆಯಲ್ಲಿನ ಸ್ತೂಪದಲ್ಲಿ ಲಭಿಸಿದೆ. ಅಲಹಾಬಾದಿನ ಬಳಿಯ ಕೋಶ ಎಂಬಲ್ಲಿ ಗುಪ್ತರ ಕಾಲದ ಮುದ್ರೆಯುಂಗುರ ದೊರೆತಿದ್ದು ಅದರ ಹಿತ್ತಾಳೆ ಮುದ್ರೆಯ ಮೇಲೆ ಲಿಪಿಯಿದೆ. ಗಯೆಯ ಬಳಿ ಲಭಿಸಿದ ಹಿತ್ತಾಳೆ ಬುದ್ಧ ವಿಗ್ರಹದ ಪೀಠದ ಸುತ್ತಲು ಬರವಣಿಗೆ ಇದೆ. ಚಂಬ ಎಂಬಲ್ಲಿ ಅನೇಕ ಹಿತ್ತಾಳೆ ವಿಗ್ರಹಗಳು ದೊರೆತಿದ್ದು ಬರೆಹವನ್ನೊಳಗೊಂಡಿವೆ. ಕರ್ನಾಟಕದಲ್ಲಿ ದೊರೆಯುವ ಅನೇಕ ಜೈನ ತೀರ್ಥಂಕರರ ಹಿತ್ತಾಳೆ ಪ್ರತಿಮೆಗಳ ಪೀಠಗಳು ಹಾಗೂ ಪ್ರಭಾವಳಿಗಳಲ್ಲಿ ಕನ್ನಡ ಭಾಷೆಯ ಹಾಗು ಕನ್ನಡ ಲಿಪಿಯ ಶಾಸನಗಳು ಬೆಳಕಿಗೆ ಬಂದಿವೆ.

ಕಂಚು :– ಇದು ಎರಕಕ್ಕೆ ಅನುಕೂಲವಾದ ಮಿಶ್ರಲೋಹವಾಗಿದ್ದು ಮುದ್ರೆಗಳನ್ನು ಮಾಡಲು ಬೇಕಾದ ಅಚ್ಚುಗಳನ್ನು ಇದರಲ್ಲಿ ಮಾಡುತ್ತಿದ್ದರು. ಇಂಥ ಒಂದು ಅಚ್ಚಿನಲ್ಲಿ ಬ್ರಾಹ್ಮೀ ಖರೋಷ್ಠೀ ಮತ್ತು ಗ್ರೀಕ್ ಲಿಪಿಗಳು ಸಿಕ್ಕಿವೆ. ಪೇಷಾವರ್‌ನಲ್ಲಿ ದೊರೆತ ಒಂದು ಕಂಚಿನ ತಲೆಯು ಸುತ್ತ ಲಿಪಿಯಿದೆ. ತಾಮ್ರ ಪೆಟ್ಟಿಗೆಗಳನ್ನು ಪೋಣಿಸುವ ಉಂಗುರದ ಇಕ್ಕಡೆಗಳನ್ನು ಜೋಡಿಸಿ ಬೆಸೆದಿರುವ ಹಲವಾರು ಕಂಚಿನ ರಾಜಲಾಂಛನ ಮುದ್ರೆಗಳು ದೊರೆತಿದ್ದು ಇವುಗಳ ಮೇಲೆ ಲಿಪಿಯೂ ಇರುವುದುಂಟು. ಹಲವಾರು ದೇವಾಲಯಗಳಲ್ಲಿ ಕಂಚಿನ ಗಂಟೆಗಳಿದ್ದು ಅವುಗಳ ಮೇಲೆ ಬರೆಹವಿದೆ.[೨]

ತಾಮ್ರ :– ಬುದ್ಧನ ಕಾಲದಿಂದಲೂ ದತ್ತವಾಗಿ ಬಂದ ಕೆಲವು ತಾಮ್ರ ಫಲಕಗಳ ಬಗೆಗೆ ಫಾಹಿಯಾನ್ (ಕಿ. ಶ. ೪೦೦) ಪ್ರಸ್ತಾಪಿಸಿದ್ದಾನೆ. ಸೋಘೌರ ಫಲಕದಿಂದ ಮೌರ್ಯರ ಕಾಲದಲ್ಲಿ ಸರ್ಕಾರೀ ನಿರ್ಣಯಗಳನ್ನು ತಾಮ್ರದ ಮೇಲೆ ಕೊರೆಯುತ್ತಿದ್ದ ಸಂಗತಿ ತಿಳಿಯುತ್ತದೆ. ಸೋಘೌರ ಫಲಕವನ್ನು ಎರಕಹೊಯ್ದು ತಯಾರಿಸಿದೆ. ಆದರೂ ಲಭ್ಯವಾಗಿರುವ ೯೯% ಶಾಸನಗಳೆಲ್ಲ 'ಸುತ್ತಿಗೆಯಿಂದ ಬಡಿದು ಮಾಡಿದಂತಹುಗಳೇ. ಈ ಶಾಸನಗಳ ಆಕಾರ ಮತ್ತು ಗಾತ್ರಗಳು ಸ್ವಲ್ಪಮಟ್ಟಿಗೆ ಅವು ರಚಿತವಾದ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ ಲೇಖನ ಸಾಧನಗಳ ಮೇಲೆ, ಸ್ವಲ್ಪ ಮಟ್ಟಿಗೆ ಬರೆಯಬೇಕಾದ ಶಾಸನದ ಉದ್ದ, ಲೇಖನ ಕೈ ಬರೆಹದ ರೀತಿ–ಇತ್ಯಾದಿಗಳ ಮೇಲೆ ನಿರ್ಣೀತವಾಗುತ್ತದೆ... ಅಕ್ಕಸಾಲಿಗರು ಸಾಮಾನ್ಯವಾಗಿ ತಮಗೆ ಕೊಟ್ಟ ಮೂಲವನ್ನು ತದ್ವತ್ತಾಗಿ ಅನುಕರಿಸಿ ಪ್ರತಿಮಾಡುತ್ತಿದ್ದರು. ಆದ್ದರಿಂದ ಶಾಸನಗಳು ತಾಳಪತ್ರದ ಮೇಲಿದ್ದರೆ ತಾಮ್ರಫಲಕಗಳೂ ಅವುಗಳಂತೆಯೇ ಅಗಲದಲ್ಲಿ ಕಿರಿದಾಗಿ ಮತ್ತು ಉದ್ದವಾಗಿ ಇರುತ್ತಿದ್ದವು. ಶಾಸನಗಳು ಭೂರ್ಜ ಪತ್ರದ ಮೇಲಿದ್ದರೆ ಫಲಕಗಳು ಹೆಚ್ಚು ಅಗಲವಾಗಿರುತ್ತಿದ್ದುವಲ್ಲದೆ ಬಹುವೇಳೆ ಚೌಕಾಕೃತಿಗೆ ಸಮೀಪವಾಗಿರುತ್ತಿದ್ದವು'. ಒಂದಕ್ಕಿಂತ ಹೆಚ್ಚು ಫಲಕಗಳಿದ್ದಾಗ ಫಲಕಗಳಲ್ಲಿನ ದುಂಡನೆಯ ರಂಧ್ರಗಳಲ್ಲಿ ಪೋಣಿಸಿದ ತಾಮ್ರದ ಉಂಗುರಗಳಿಂದ ಆ ಫಲಕಗಳನ್ನು ಒಟ್ಟಾಗಿ ಬಂಧಿಸುತ್ತಿದ್ದರು.

ಪಂಜಾಬಿನ ಭಾವಲ್ಪುರ ಪ್ರದೇಶದ ಶ್ರೀವಿಹಾರದಲ್ಲಿ ದೊರೆತ ತಾಮ್ರ ಪಟ್ಟಿಕೆ ಕ್ರಿ.ಪೂ. ೪೬ಕ್ಕೆ ಸೇರಿದ್ದು ಅತಿ ಪ್ರಾಚೀನವಾದುದಾಗಿದೆ. ಕ್ರಿ.ಶ. ೧೨೭೨ರ ಪೈಠಣದ ತಾಮ್ರ ಶಾಸನದಲ್ಲಿ ೩ ತಗಡುಗಳಿದ್ದು, ಮುದ್ರೆಯುಂಗುರ ಕೂಡಿ ಇವರ ತೂಕ ೭೦ ಪೌಂಡು ೧೪ ಔನ್ಸುಗಳು ಆಗುತ್ತವೆ.

ಕನ್ನಡನಾಡಿನಲ್ಲಿ ಪ್ರಾಚೀನ ಗಂಗರ ಮತ್ತು ಕದಂಬರ ಅನೇಕ ತಾಮ್ರ ಶಾಸನಗಳು ದೊರೆತಿವೆ. ರಾಷ್ಟ್ರಕೂಟ ಗೋಯಿಂದರ (ಓನೆಯ ಗೋವಿಂದ) ನ

ಕಿ. ಶ. ೮೦೪ರ ತಾಮ್ರ ಶಾಸನ 'ಕನ್ನಡವನ್ನು ಬಳಸಿ ಬರೆಯಲಾಗಿರುವ ಪ್ರಾಚೀನ ತಮ ತಾಮ್ರ ಶಾಸನಗಳ ಪೈಕಿ ಒಂದಾಗಿ'ದೆ.[೩]

ತಾಮ್ರ ಶಾಸನಗಳಲ್ಲಿನ ಸಿಂಹಪಾಲು ರಾಜ ಶಾಸನಗಳದೇ ಆದರೂ ಕೆಲವು ವೇಳೆ–ಅಪರೂಪವಾಗಿ ಸಾಹಿತ್ಯ ರಚನೆಗಳು ತಾಮ ಫಲಕಗಳ ಮೇಲೆ ಉತ್ಕೀರ್ಣ ವಾದದ್ದುಂಟು. ಆಂಧ್ರದ ಸುಪ್ರಸಿದ್ಧ ವಾಗ್ಗೇಯಕಾರರಾದ ತಾಳ್ಳಪಾಕಂ ಅಣ್ಣ ಮಾಚಾರ್ಯರ (ಕಿ. ಶ. ೧೪೦೮–೧೫೦೩) ಸಂಗೀತ ಕೃತಿಗಳು ತಾಮ್ರ ಫಲಕಗಳಲ್ಲಿ ಲಿಖಿತವಾಗಿದ್ದು, ಇವು ತಿರುಪತಿಯ ವೆಂಕಟೇಶ್ವರಸ್ವಾಮಿ ದೇವಾಲಯದ ಸಂಗ್ರಹ ದಲ್ಲಿವೆ. ದೇವಸ್ಥಾನದವರೆ ಈ ಕೀರ್ತನೆಗಳನ್ನು ಹಲವಾರು ಸಂಪುಟಗಳಲ್ಲಿ ಪ್ರಕಟಿ ಸುತ್ತ ಬಂದಿದ್ದು ಇನ್ನೂ ಈ ಕಾರ್ಯ ಕೊನೆಗೊಂಡಿಲ್ಲ.

ಚಿನ್ನ, ಬೆಳ್ಳಿ, ಕಂಚು, ಹಿತ್ತಾಳೆ, ತಾಮ್ರ–ಇವುಗಳಿಂದ ಮಾಡಿದ ಪೂಜಾ ಪಾತ್ರೆ ಗಳೂ ಗಂಟೆ ಜಾಗಟೆಗಳೂ ಹಲವು ದೇವಾಲಯಗಳಲ್ಲಿ ಇಂದಿಗೂ ಇದ್ದು ಇವುಗಳಲ್ಲಿ ದಾನಮಾಡಿದವರ ಹೆಸರನ್ನು ಒಳಗೊಂಡ ಉಲ್ಲೇಖಗಳಿರುತ್ತವೆ.[೪]

ಲೇಖನಕ್ಕಾಗಿ ಬಳಕೆಯಾಗುವ ಲೋಹೇತರ ವಸ್ತುಗಳಲ್ಲಿ ಮಣ್ಣು, ಸ್ಫಟಿಕ. ಚರ್ಮ. ಮರ. ಎಲೆ, ಕಡಿತ, ರೇಷ್ಮೆ ವಸ್ತ್ರ, ಶಿಲೆ, ಕಾಗದಗಳು ಸಮಾವೇಶವಾಗು ತ್ತಿದ್ದು ಈ ಮುಂದೆ ಇವುಗಳಲ್ಲಿ ಪ್ರತಿಯೊಂದನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗಿದೆ.

ಮಣ್ಣು :– ಅತಿಪ್ರಾಚೀನ ಕಾಲದಿಂದಲೂ ಒಣಗಿಸಿದ ಅಥವಾ ಸುಟ್ಟ ಮಣ್ಣಿನ ಚದರ ಬಿಲ್ಲೆಗಳನ್ನು ಬರೆಹಕ್ಕಾಗಿ ಬಳಸುತ್ತಿದ್ದರು. ಮಣ್ಣಿನಿಂದ ಮಾಡಿದ ಮಡಕೆ ಗಳ ಮೇಲೂ ಜಾಡಿಗಳ ಮೇಲೂ 'ಹಸಿಯದಾಗಿದ್ದಾಗ ದಬ್ಬಳದಿಂದ ಅಕ್ಷರಗಳನ್ನು ಬರೆದು ಅನಂತರ ಇವುಗಳನ್ನು ಒಣಗಿಸುತ್ತಲೋ ಸುಡುತ್ತಲೋ ಇದ್ದರು. ಮಣ್ಣಿನ ಬಿಲ್ಲೆಗಳು ಚತುರಶ್ರಕವಾಗಿದ್ದುವಲ್ಲದೆ ಗುಂಡಾಗಿಯೂ ಇದ್ದುವು'. ಇಂಥ ಒಂದು ಬಿಲ್ಲೆಯ ಮೇಲೆ ಬೌದ್ಧ ಧರ್ಮದ ಒಂದು ಶ್ಲೋಕವಿದೆ. ಸಾಂಚಿಯಲ್ಲಿ ದೊರೆತ ಒಂದು ಮಣ್ಣಿನ ಮುಚ್ಚಳದ ಮೇಲೆ ಮಸಿಯಲ್ಲಿ ಲಿಖಿಸಲಾಗಿದೆ. ವಲಭಿರಾಜ ಮನೆತನದ ಗುಹಸೇನನ ಆಳ್ವಿಕೆಯಲ್ಲಿ ಕ್ರಿ. ಶ. ೫೬೬–೬೭ರಲ್ಲಿ ಮಸಿಯಿಂದ ಲಿಖಿತ ವಾದ ಮಡಕೆಯ ಚೂರು ಲಭಿಸಿದೆ.

'ಕನ್ನಡ ಅಧ್ಯಯನ ಕೇಂದ್ರ' (ಬೆಂಗಳೂರು ವಿಶ್ವವಿದ್ಯಾಲಯ) ದಲ್ಲಿ ಕೆಂಪು ಬಣ್ಣದ ಮಡಕೆಯ ಕಂಠದ ಭಾಗವೊಂದು ಉಪಲಬ್ಧವಿದೆ. ಇದರಲ್ಲಿ ಕನ್ನಡ ಭಾಷೆ ಹಾಗೂ ಕನ್ನಡ ಲಿಪಿಯ ಬರೆಹದಲ್ಲಿನ ಕೆಲವು ಅಕ್ಷರಗಳಿವೆ. ಇಲ್ಲಿನ ಅಕ್ಷರಗಳಲ್ಲಿ 'ಪಿ' ಇರುವುದು ಗಮನಾರ್ಹವಾಗಿದೆ. ಕವಲೇದುರ್ಗದ (ತೀರ್ಥಹಳ್ಳಿ ತಾಲ್ಲೂಕ್). ಮಠದಲ್ಲಿರುವ ನೀರನ್ನು ಕಾಯಿಸುವ ಮಡಕೆಯ ಕಂಠದಲ್ಲಿ ಕೆಲವು ಅಕ್ಷರಗಳ ಬರೆಹ ಇದೆ.

ಮಣ್ಣಿನಂತೆ ಇಟ್ಟಿಗೆಗಳೂ ಲೇಖ್ಯ ಸಾಮಗ್ರಿಗಳಲ್ಲಿ ಒಂದಾಗಿತ್ತು. ಸಂಯುಕ್ತ ಪ್ರದೇಶದಲ್ಲಿ (United Provinces) ಲಿಪಿ ಸಹಿತವಾದ ಅನೇಕ ಇಟ್ಟಿಗೆಗಳು ದೊರೆತಿವೆ. ಇವುಗಳಲ್ಲಿ ಒಂದರ ಮೇಲೆ ಕುಮಾರಗುಪ್ತನ ಸಣ್ಣ ಶಾಸನ ಲಿಖಿತವಾಗಿದೆ.

ಸ್ಫಟಿಕ :– ಆಂಧ್ರ ಪ್ರದೇಶದ ಕೃಷ್ಣ ಜಿಲ್ಲೆಯ ಭಟ್ಟಿಪ್ರೋಲುವಿನಲ್ಲಿ ಸ್ಫಟಿಕದ ಮೇಲೆ ಬರೆಯಲಾದ ಲಿಪಿಯೊಂದು ದೊರೆತಿದೆ. ಸುಮಾರು ಅರ್ಧ ಅಂಗುಲ ಅಗಲವಾಗಿರುವ ಆರು ಮುಖಗಳನ್ನುಳ್ಳ ಈ ಸ್ಫಟಿಕದ ಮೇಲೆ ಲಿಪಿಯನ್ನು ಕೊರೆದಿದೆ.

ಚರ್ಮ :– ಸುಬಂಧು 'ವಾಸವದತ್ತಾ' ಗ್ರಂಥದಲ್ಲಿ ನಕ್ಷತ್ರಗಳನ್ನು ವರ್ಣಿಸುವಾಗ ಮಷೀ–ಅಜಿನಗಳನ್ನು ಹೆಸರಿಸಿದ್ದಾನೆ. ಇದರಿಂದ ಅಜಿನ ಅಥವಾ ಚರ್ಮ ಒಂದು ಲೇಖ್ಯ ವಸ್ತುವಾಗಿತ್ತೆನ್ನಿಸುತ್ತದೆ. 'ಪುಸ್ತ ಪುಸ್ತಕ ಪುಸ್ತಿಕಾ– ಈ ಶಬ್ದಗಳ ಮೂಲ ಸಂಸ್ಕೃತವಲ್ಲವೆಂದೂ ಅದಕ್ಕೆ ಚರ್ಮ. "ಚರ್ಮಕಾಗದ" (Parchment) ಎಂಬರ್ಥವೆಂದೂ ಪೋಸ್ತ್ ಎಂಬುದರ ಸಂಸ್ಕೃತೀಕರಣ ಪುಸ್ತ ಎಂದೂ ಡಾ. ಎಸ್. ಕೆ. ಚಟರ್ಜಿ ಹೇಳುತ್ತಾರೆ. ಚರ್ಮದ ಮೇಲೆ ಬರೆದಿರುವ ಯಾವ ಲೇಖವೂ ಇದುವರೆಗೆ ಭರತ ಖಂಡದಲ್ಲಿ ಸಿಕ್ಕಿಲ್ಲ. ಕ್ರಿ. ಶ. ೧೪ರಲ್ಲಿ ಕಾಲವಾದ ಅಗಸ್ಟಸ್ ಸೀಜರನಿಗೆ ಚರ್ಮ ಕಾಗದದ ಮೇಲೆ ಬರೆದು ಕಳಿಸಿದ್ದ ಭಾರತೀಯ ಸರ್ಕಾರೀ ದಾಖಲೆಯೊಂದನ್ನು ಸ್ಟ್ರಾಬೊ ಗಮನಿಸಿದ್ದಾನೆ. ಕಾಷ್‌ಗರ್‌ನಲ್ಲಿ ದೊರೆತ ಕೆಲವು ಚರ್ಮದ ತುಣುಕುಗಳ ಮೇಲೆ ಭಾರತೀಯ ಲಿಪಿ ಇದ್ದು ಇವು ಈಗ ಪೀಟರ್ಸ್‌ಬರ್ಗ್‌ನಲ್ಲಿ ಇವೆಯೆಂದು ಜಿ. ಬೀಲರ್ ಹೇಳಿದ್ದಾರೆ.

ಮರ :– ಮರದಿಂದ ಮಾಡಿದ ತೆಳುವಾದ ನುಣುಪಾದ ಹಲಗೆಗಳಿಗೆ ಕಪ್ಪು ಬಣ್ಣವನ್ನು ಬಳಿದು ಅದರ ಮೇಲೆ ಲೇಖವನ್ನು ಬರೆಯುತ್ತಿದ್ದರು. ವಿನಯ ಪಿಟಕ ಮತ್ತು ಜಾತಕಗಳಲ್ಲಿ ಮರದ ಹಲಗೆಗಳ ಪ್ರಸ್ತಾಪವಿದೆ. ಪಶ್ಚಿಮ ಕ್ಷತ್ರಪ ನಹಪಾನದ ಶಾಸನವೊಂದು ಪೌರಮಂದಿರದಲ್ಲಿ ಸಾಲದ ಒಪ್ಪಂದಗಳನ್ನು ನಮೂದಿಸುತ್ತಿದ್ದ ಫಲಕಗಳ ವಿಷಯವನ್ನು ತಿಳಿಸುತ್ತದೆ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ (೧–೧೫) ಎಂಬ ಕುಮಾರವ್ಯಾಸನ ಉಕ್ತಿ ಕರ್ನಾಟಕದಲ್ಲಿ ಗ್ರಂಥಗಳ ರಚನಾಕಾಲದಲ್ಲಿ ಹಲಗೆಯನ್ನು ಉಪಯೋಗಿಸಿಕೊಳ್ಳುತ್ತಿದ್ದ ಸಂಗತಿಯನ್ನು ನಿಷೇಧಾತ್ಮಕವಾಗಿ ಸೂಚಿಸುತ್ತದೆ. ಪಾಯಣವರ್ಣಿ (೧೬೫೯) 'ಜ್ಞಾನ ಚಂದ ಚರಿತೆ' (೨–೫೦) ಯ 'ಕಡಿತ ಹಲಗೆ ಬಳಪವೋಲೆ ಕಂಠವ/ಪಿಡಿದು ಹಸ್ತದಿ ವಿನೋದದಲಿ /ಸಹಗರದಿಂದ ಮಠಕ್ಕೆ ಪೋಪ ಕುವರರ/ವೃಂದ'ದ ಚಿತ್ರಣವೊಂದನ್ನು ಕೊಟ್ಟಿದ್ದಾನೆ.

ಮರದ ಹಲಗೆಗಳ ಮೇಲೆಯೇ ಬರೆದ ಯಾವ ಗ್ರಂಥವೂ ಸಿಕ್ಕಿಲ್ಲ: ಆದರೆ ಲಂಡನ್ನಿನ ಬ್ರಾಡಿಯನ್ ಪುಸ್ತಕ ಭಂಡಾರದಲ್ಲಿ ಇಂಥ ಒಂದು ಹಸ್ತಪ್ರತಿಯಿದೆ

ಯೆಂದೂ ಅದು ಅಸ್ಸಾಮು ಪ್ರದೇಶಕ್ಕೆ ಸೇರಿದ್ದೆಂದೂ ಡಾ. ವಿಂಟರ್‌ನಿಟ್ಸ್ ಅವರು ಹೇಳಿದ್ದಾರೆ. 'ಒಂದು ಕಾಲದಲ್ಲಿ ಬಿದಿರುದೆಬ್ಬೆಯ ತುಂಡುಗಳ ಮೇಲೆ ಪ್ರವಾಸಿ ವ್ಯಕ್ತಿಯ ಹೆಸರನ್ನು ಬರೆದು ಕೊಟ್ಟು ಅದನ್ನು ಅವನು ಉಂಡಿಗೆಯಾಗಿ ಬಳಸಬಹುದಾದ ವ್ಯವಸ್ಥೆ ಇದ್ದಿತಂತೆ'.

ಫಲಕಗಳಿಗೆ ಸಂಬಂಧಿಸಿದಂತೆ ಬಟ್ಟಿಗೆಪಲಗೆ (ಪಂಪನ ಆದಿಪುರಾಣ, ೪.೬೩ ವ) ಹಾಗು ಲೆಕ್ಕವಲಗೆ' (ಪೊನ್ನನ ಶಾಂತಿಪುರಾಣ, ೯.೧೪೩ ವ) ಗಳ ಉಲ್ಲೇಖ ಕನ್ನಡ ಕಾವ್ಯಗಳಲ್ಲಿ ಎಡೆಪಡೆದಿದೆ.

ಭೂರ್ಜಪತ್ರ :– ಉತ್ತರ ಭಾರತದ ಕೆಲವು ಪ್ರದೇಶಗಳಲ್ಲೂ ಹಿಮಾಲಯ ಪರ್ವತ ಶ್ರೇಣಿಯಲ್ಲೂ ಭೂರ್ಜ ವೃಕ್ಷಗಳು ವಿಪುಲವಾಗಿ ಬೆಳೆಯುತ್ತವೆ. ಇದರ ತೊಗಟೆಯನ್ನು ಬಲು ಹಿಂದಿನ ಕಾಲದಿಂದಲೂ ಬರೆವಣಿಗೆಗೆ ಉಪಯೋಗಿಸುತ್ತಿದ್ದರು. 'ಇವುಗಳನ್ನು ಹದಮಾಡಿ ಚತುರಶ್ರಕವಾಗಿ ಕತ್ತರಿಸಿ ಲೇಖನಿಯಿಂದ ಮಸಿಯಲ್ಲಿ ಇವುಗಳ ಮೇಲೆ ಬರೆಯುತ್ತಿದ್ದರು'. ಕರ್ಟಿಯಸ್ ಹೇಳಿದ ಲೇಖ್ಯ ವಸ್ತು ಇದೇ ಆಗಿದ್ದು, ಇಂಥ ಹಸ್ತಪ್ರತಿಗಳು ಕಾಶ್ಮೀರ ದೇಶದಲ್ಲಿ ಅಧಿಕವಾಗಿ ದೊರೆಯುತ್ತವೆ.

ಖೋಟಾನ್‌ನಲ್ಲಿ ದೊರೆತ ಖರೋಷ್ಠೀ ಲಿಪಿಯ 'ಧಮ್ಮಪದ' ಭೂರ್ಜಪತ್ರದ ಲೇಖನಗಳಲ್ಲಿ ಅತ್ಯಂತ ಪ್ರಾಚೀನವಾದುದು. ಕಾಳಿದಾಸನ 'ವಿಕ್ರಮೋರ್ವಶೀಯ' ನಾಟಕದಲ್ಲಿ ಭೂರ್ಜ ಪತ್ರಲಿಖಿತವೊಂದರ ಉಲ್ಲೇಖವಿದೆ. ಕ್ರಿ. ಶ. ೫ನೆಯ ಶತಮಾನದಲ್ಲಿನದಾಗಿರಬಹುದಾದ ಬವರ್ ಹಸ್ತಪ್ರತಿ (Bower Mss) ಭೂರ್ಜಪತ್ರಗಳಲ್ಲಿ ಲಿಖಿತವಾಗಿದ್ದು ೫೬ ಹಾಳೆಗಳಿವೆ. ವೈದ್ಯ ಮುಂತಾದ ವಿಷಯ ಇದರ ವಸ್ತು. ಶಾರದಾಲಿಪಿಯಲ್ಲಿ ಭೂರ್ಜಪತ್ರದ ಮೇಲೆ ಬರೆದಿರುವ 'ಮಹಾಭಾರತದ ಆದಿಪರ್ವದ ಪ್ರತಿ ತುಂಬ ಪ್ರಸಿದ್ಧಿಯಾಗಿದೆ. ದಕ್ಷಿಣ ಭಾರತದಲ್ಲಿ ಭೂರ್ಜವೃಕ್ಷಗಳಿಲ್ಲದಿರುವುದರಿಂದ ಅವುಗಳ ಪತ್ರಗಳ ಮೇಲೆ ಬರೆಯುವ ಅವಕಾಶವೇ ಉಂಟಾಗಲಿಲ್ಲ. ಪುಣೆಯ 'ಭಂಡಾರ್ಕರ್ ಸಂಶೋಧನ ಸಂಸ್ಥೆ'ಯ ಪುಸ್ತಕ ಭಂಡಾರದಲ್ಲಿ ಇರುವ ಕೆಲವು ಭೂರ್ಜ ಪತ್ರಗಳು ಉತ್ತರ ದೇಶಗಳಿಂದ ಸಂಗ್ರಹೀಪವಾದುವು.

ತಾಳಪತ್ರ :– ಅತಿಪ್ರಾಚೀನ ಕಾಲದಿಂದಲೂ ತಾಳೆಯ ಮರದ ಗರಿಗಳನ್ನು ಬರೆಯುವುದಕ್ಕಾಗಿ ಉಪಯೋಗಿಸುತ್ತಿದ್ದರು. ಈ ಮರ ದಕ್ಷಿಣ ಭಾರತದಲ್ಲಿ ಹೇರಳವಾಗಿ ಬೆಳೆಯುತ್ತದೆ. ಪಂಜಾಬಿನಲ್ಲೂ ಈ ಮರಗಳಿವೆ. ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಈ ಮರಗಳು ವಿಶೇಷವಾಗಿವೆ. ತಾಳ ಪ್ರತಿಗಳ ಬಗೆಗೆ ಹ್ಯೂಅನ್ ಚಾಂಗ್ (ಕ್ರಿ. ಶ. ೭ನೆಯ ಶತಮಾನ) ಉಲ್ಲೇಖಿಸಿದ್ದಾನೆ. ಹೊರಿಯೂಜಿ ಸಂಗ್ರಹದ ಹಸ್ತಪ್ರತಿ ೬ನೆಯ ಶತಮಾನದ್ದು. ಕಾಷ್‌ಗರ್‌ನಲ್ಲಿ ದೊರೆತ ಗಾಡ್‌ಫ್ರೇ ಸಂಗ್ರಹದ ಕೆಲವು ತುಂಡು ಲೇಖನಗಳನ್ನು ಲಿಪಿಯ ಆಧಾರದಿಂದ ನಾಲ್ಕನೆಯ ಶತಮಾನಕ್ಕೆ

ಸೇರಿದವೆಂದು ನಿರ್ಧರಿಸಲಾಗಿದೆ. ಕ್ರಿ. ಶ. ಒಂದನೆಯ ಶತಮಾನಕ್ಕಿಂತ ಈಚಿನದಲ್ಲದ ತಕ್ಷಶಿಲೆಯ ತಾಮ್ರದ ದಾನ ಶಾಸನವೊಂದನ್ನು ತಾಳಪತ್ರದ ಗಾತ್ರಕ್ಕೆ ಕತ್ತರಿಸಿದೆ.

ತಾಳ ಪತ್ರಗಳ ಅಗಲ ೧ ಅಂಗುಲದಿಂದ ೪ ಅಂಗುಲಗಳವರೆಗೆ ಇರುತ್ತದೆ. ಉದ್ದ ೩ ರಿಂದ ೪ ಅಡಿಗಳವರೆಗೆ ಇರುವುದು. 'ಕನ್ನಡ ಅಧ್ಯಯನ ಸಂಸ್ಥೆ'ಯಲ್ಲಿನ (ಮೈಸೂರು ವಿಶ್ವವಿದ್ಯಾನಿಲಯ) ಮುಮ್ಮಡಿ ಕೃಷ್ಣರಾಜರ 'ಭಾರತ' ಗ್ರಂಥದ ಓಲೆಯ ಪ್ರತಿ ೩೭$\frac{3}{4}$ ಅಂಗುಲ ಉದ್ದ ಹಾಗು ೨$\frac{3}{4}$ ಅಂಗುಲ ಅಗಲವಾಗಿದೆ. ಇದ ರಂತೆ ಮೂಡಬಿದರೆ ಸಿದ್ಧಾಂತ ಬಸದಿಯಲ್ಲಿರುವ ಕನ್ನಡ ಲಿಪಿಯ ಧವಳ. ಜಯ ಧವಳ, ಮಹಾಧವಳ–ಗಳ ಕಟ್ಟುಗಳ ಅಳತೆ ೩೪"–೩೫" × ೩"–೩$\frac{3}{4}$" ತಾಳೆಯ ಗರಿಗಳನ್ನು 'ಹಸಿದಾಗಿರುವಾಗ ಕುದಿನೀರಲ್ಲಿ ಬೇಯಿಸಿ ನೆರಳಲ್ಲಿ ಒಣಗಿಸಿ ನುಣುಪಾದ ಗಾರೆಯ ಕಲ್ಲಿನಿಂದ ಉಜ್ಜಿ ಮೃದುವಾಗಿ ಮಾಡುತ್ತಾರೆ: ಅದರ ಎರಡು ಪಕ್ಕಗಳೂ ಸಮತಲವಾಗುತ್ತವೆ: ಬರೆಯಕ್ಕೆ ಯೋಗ್ಯವಾಗುತ್ತದೆ.

ತಾಳೆಯಲ್ಲಿ ಶ್ರೀತಾಳೆ ಎಂಬ ಮತ್ತೊಂದು ಪ್ರಭೇದವಿದೆ. 'ತಾಳೆಯ ಗರಿ ದಪ್ಪ ಅಗಲ ಕಡಿಮೆ; ನರಸು ಹೆಚ್ಚಾಗಿಲ್ಲದಿರುವುದರಿಂದ ಕೊಂಚ ಬಗ್ಗಿಸಿದರೆ ಸಾಕು ಫಟಕ್ಕನೆ ಮುರಿದು ಬಿಡುತ್ತದೆ. ಇವಕ್ಕೆ ಹುಳಬೇಗನೆ ಬೀಳುತ್ತದೆ. ಶ್ರೀ ತಾಳೆ ಗರಿ ತೆಳುವಾಗಿಯೂ, ನುಣುಪಾಗಿಯೂ ಇರುತ್ತದೆ. ನರಸು ಹೆಚ್ಚು. ಬಳಕುತ್ತದೆ. ಕೊಂಚ ಬಗ್ಗಿಸಿದರೂ ಮುರಿಯುವುದಿಲ್ಲ. ಇದಕ್ಕೆ ಹುಳುಬೀಳುವ ಸಂಭವ ಕಡಮೆ'.

ಉತ್ತರ ಪೂರ್ವ ಪಶ್ಚಿಮ ಮಧ್ಯ ಭಾರತ ಪ್ರದೇಶಗಳಲ್ಲಿ ತಾಳಪತ್ರಗಳ ಮೇಲೆ ಮಸಿಯಿಂದ ಬರೆಯುತ್ತಿದ್ದರು. ದಕ್ಷಿಣ ಭಾರತದಲ್ಲಿ ಉಕ್ಕಿನ ಕಂಠದಿಂದ ತಾಳಪತ್ರ ಗಳ ಅಕ್ಷರಗಳನ್ನು ಕೆರೆಯುತ್ತಿದ್ದರು. ಬರೆದ ತಾಳಪತ್ರಗಳಿಗೆ ದೀಪದ ಕಾಡಿಗೆಯ ಮಸಿಯನ್ನೋ ಇದ್ದಿಲಪುಡಿಯ ಕೆಸರನ್ನೋ ಬಳಿದು ಅನಂತರ ಒರಸಿಬಿಡುತ್ತಿದ್ದರು. ಬರೆದ ಓಲೆಗಳನ್ನು ದಾರದಲ್ಲಿ ಪೋಣಿಸುವುದಕ್ಕಾಗಿ ಒಂದೋ ಎರಡೋ ರಂಧ್ರ ಗಳನ್ನು ಅವುಗಳ ಉದ್ದಕ್ಕೆ ತಕ್ಕಂತೆ ಮಾಡುತ್ತಿದ್ದರು. ಆ ರಂಧ್ರದಲ್ಲಿ ಕಬ್ಬಿಣದ ಕಡ್ಡಿಯನ್ನೋ. ಮರದ ಕಡ್ಡಿಯನ್ನೋ ತೂರಿಸುತ್ತಾರೆ. ಆ ಕಡ್ಡಿಗೆ 'ಕಂಬಿ' ಎಂದು ಕರೆಯುತ್ತಿದ್ದರೆಂದು ಭಾಸ್ಕರ (ಸು. ೧೪೩೦) ತನ್ನ 'ಜೀವಂಧರ ಚರಿತೆ' (೧–೧೩) ಯಲ್ಲಿ ತಿಳಿಸಿದ್ದಾನೆ. ಓಲೆಗಳಿಗೆ ರಕ್ಷಣೆಯಾಗಿ ಕಟ್ಟಿನ ಅಡಿ ಹಾಗು ಮೇಲು ಭಾಗ ಗಳಲ್ಲಿ ಮರದ ಪಟ್ಟಿಗೆಗಳಿರುತ್ತವೆ. ಕಟ್ಟನ್ನು ಬಿಗಿಯಲು ದಾರವನ್ನು ಉಪಯೋಗಿಸ ಲಾಗುತ್ತದೆ. ಕೆಂಪು ಹಾಗು ಹಳದಿ ಬಣ್ಣದ ರೇಷ್ಮೆ ಬಟ್ಟೆಗಳಲ್ಲಿ ಹಸ್ತ ಪ್ರತಿಗಳನ್ನು ಸುತ್ತಿಡುವ ಪದ್ಧತಿ ಕೆಲವು ಜೈನ ಹಸ್ತಪ್ರತಿ ಸಂಗ್ರಹ ಸ್ಥಳಗಳಲ್ಲಿ ಇಂದಿಗೂ ಇದೆ. (ಉದಾ– ಶ್ರವಣಬೆಳಗೊಳ).

ಕನ್ನಡ ನಾಡಿನಲ್ಲಿ ಸಾಹಿತ್ಯ ಕೃತಿಗಳ ಬರೆವಣಿಗೆಗೆ ತಾಳ ಪತ್ರವನ್ನಲ್ಲದೆ ಬೇರೆ ಯಾವುದನೂ ಉಪಯೋಗಿಸುತ್ತಿರಲಿಲ್ಲವೆಂದು ತೋರುತ್ತದೆ. ೬ನೆಯ ಶತಮಾನದ

ಬಾದಾಮಿ ಶಿಲ್ಪದ ಬ್ರಹ್ಮನ ವಿಗ್ರಹದ ಕೈಯಲ್ಲಿ ಓಲೆಗಳಿವೆ.[೫] ಇದುವರೆಗೂ ಪಂಪನ 'ಆದಿಪುರಾಣ'ದ ಶಕ ೧೩೦೧ (ಕ್ರಿ. ಶ. ೧೩೭೯) ರ ಓಲೆಪ್ರತಿ ಅತ್ಯಂತ ಪ್ರಾಚೀನ ಕಾಲನಿರ್ದೇಶವುಳ್ಳ ಪ್ರತಿಯಾಗಿದ್ದಿತು. ಈಚೆಗೆ ಶ್ರವಣಬೆಳಗೊಳದ ಶ್ರೀ ಜೈನ ಮಠದ ಸಂಗ್ರಹದಲ್ಲಿ ಶಕ ೧೧೫೫ (ಕ್ರಿ. ಶ. ೧೨೩೩) ರಲ್ಲಿ ಪ್ರತಿಯಾದ ಮಾಧವ ಚಂದ್ರ ತ್ರೈವಿದ್ಯನ 'ಕ್ಷಪಸಾರ'ದ ಕರ್ಣಾಟಕ ವ್ಯಾಖ್ಯಾನದ ಓಲೆ ಹಸ್ತಪ್ರತಿಗಳು ಉಪಲಬ್ಧವಿರುವ ಸಂಗತಿ ಬೆಳಕಿಗೆ ಬಂದಿದೆ.[೬] 'ಕನ್ನಡ ಅಧ್ಯಯನ ಸಂಸ್ಥೆ' (ಮೈ. ವಿ. ವಿ.) ಯಲ್ಲಿನ 'ನಾಮಲಿಂಗಾನುಶಾಸನ' (ಅಮರಸಿಂಹ ಕೃತ) ದ ಟೀಕೆ (ಟೀಕಾಕಾರ–ವಿಟ್ಠಲ) ಯ ಓಲೆ ಪ್ರತಿಯ ಅಂತ್ಯದಲ್ಲಿ ಅದನ್ನು ಶಾಲಿವಾಹನ ಶಕ ೧೦೫೧ನೆಯ ಸೌಮ್ಯ ಸಂವತ್ಸರದಲ್ಲಿ ಬರೆದು ಮುಗಿಸಿದಂತೆ ಹೇಳಿದೆ. ಈ ಕಾಲ ಕೃತಿ ನಕಲಿನ ಮಿತಿಯಾದರೆ ಇದೇ ಕನ್ನಡದಲ್ಲಿನ ಉಪಲಬ್ಧ ಕಾಲ ನಿರ್ದೇಶನವುಳ್ಳ ಅತ್ಯಂತ ಪ್ರಾಚೀನತಮ ಪ್ರತಿಯಾಗುತ್ತದೆ.[೭]

ಮುದ್ರಣಕಲೆ ಹೆಚ್ಚು–ಹೆಚ್ಚುತ್ತ ಬಂದಂತೆ ಓಲೆ ಪ್ರತಿಗಳಲ್ಲಿ ನಕಲು ಮಾಡುವ ಕಾರ್ಯ ಕುಂಟುತ್ತ ಸಾಗಲಾರಂಭಿಸಿತು. ಆದರೂ ಅದು ಒಮ್ಮೆಯೇ ನಿಲ್ಲಲಿಲ್ಲ. ೧೯ನೆಯ ಶತಮಾನದಲ್ಲೂ ಓಲೆ ಪ್ರತಿಗಳು ಜನ್ಮತಾಳಿವೆ. ಕ್ರಿ. ಶ. ೧೮೨೨ರಲ್ಲಿ ರಾಮಾಚಾರ್ಯ ನಾಗವರ್ಮನ 'ಕರ್ಣಾಟಕ ಕಾದಂಬರಿ'ಯನ್ನು ಓಲೆಯಲ್ಲಿ ನಕಲೆತ್ತಿದ್ದಾನೆ.[೮] ಕನ್ನಡ ಅಧ್ಯಯನ ಕೇಂದ್ರ (ಬೆಂ. ವಿ. ವಿ.) ದ ಸಂಗ್ರಹದಲ್ಲಿ ಕ್ರಿ. ಶ. ೧೮೮೭ ಹಾಗು ೧೯೫೨ರಲ್ಲಿ ನಕಲಾಗಿರುವ 'ನಾಡಿಗ್ರಂಥ ರೋಗ ನಿಧಾನ' ಮತ್ತು 'ನಾಡಿ ವಿಧಾನ ಕಂದಪದ್ಯಗಳ ಓಲೆ ಕೃತಿಗಳಿವೆ. ಕ್ರಿ. ಶ. ೧೯೩೪ರಲ್ಲಿ 'ಭಾಗವತ'ದ ಪ್ರತಿಯನ್ನು ಓಲೆಯಲ್ಲಿ ಬರೆಯಲಾಗಿದೆ.[೯] ಇಪ್ಪತ್ತನೆಯ ಶತಮಾನದ ಮೂರನೆಯ ದಶಕದಲ್ಲಿ ಓಲೆ ಪ್ರತಿಯೊಂದು ರೂಪುಗೊಂಡಿರುವ ಸಂಗತಿ ಗಮನಾರ್ಹವಾಗಿದೆ. ಕ್ರಿ. ಶ. ೧೯೨೭ರಲ್ಲಿ ನಂದಪ್ಪನ ಯಕ್ಷಗಾನ ಕೃತಿ 'ಪ್ರಭುಚರಿತೆ' ಓಲೆಯಲ್ಲಿ ನಕಲು ಮಾಡಲ್ಪಟ್ಟಿದ್ದು[೧೦] (ಇದು ಈ ಮೊದಲೆ ಮುದ್ರಣವನ್ನು ಹೊಂದಿದೆ.) ಬೆಂಗಳೂರು 'ಬಸವ ಭವನ'ದ ಸಂಗ್ರಹದಲ್ಲಿದೆ.

'ಜೈಮಿನಿ ಭಾರತ'ದ (ಲಕ್ಷ್ಮೀಶ ಕೃತ) ಅಚ್ಚಾದ ಪುಸ್ತಕವೊಂದು ಪುನಃ ಓಲೆಯ ಮೇಲೆ–ಮುದ್ರಣದ ಛಾಪುಖಾನೆ ಹಾಗು ಸ್ಥಳ ಸಹಿತ–ನಕಲಾಗಿರುವ ವಿಷಯವನ್ನು ಡಾ॥ ಡಿ. ಎಲ್. ನರಸಿಂಹಾಚಾರ್ ಅವರು 'ಕನ್ನಡ ಗ್ರಂಥ ಸಂಪಾದನೆ' (೧೯೬೪. ಪು. ೩೯) ಯಲ್ಲಿ ಉಲ್ಲೇಖಿಸಿದ್ದಾರೆ. ಇದರಂತೆ ವಿರಕ್ತ ತೋಂಟದಾರ್ಯನ 'ಕರ್ನಾಟ ಶಬ್ದಮಂಜರಿ'ಯ ಕ್ರಿ. ಶ. ೧೮೭೦ (ಸಂ. ಮುನೇಗೌಡ) ರ ಅಚ್ಚಿನಪ್ರತಿ ಪುನಃ ಕಾಗದದ ಹೊತ್ತಿಗೆಯೊಂದರಲ್ಲಿ ಮರುಲಿಖಿತವನ್ನು ಹೊಂದಿದ್ದು, 'ಕನ್ನಡ ಅಧ್ಯಯನ ಕೇಂದ್ರ'ದ (ಬೆಂಗಳೂರು) ಸಂಗ್ರಹದಲ್ಲಿದೆ.

ಬಟ್ಟೆ :– ಹತ್ತಿ ಬಟ್ಟೆ, ರೇಷ್ಮೆ ಬಟ್ಟೆ, ಮತ್ತು ಕಡತಗಳು ಇಲ್ಲಿ ಸಮಾವೇಶ ಗೊಳ್ಳುತ್ತವೆ.

ಹತ್ತಿಬಟ್ಟೆ :– ನೇರ್ ಚೋಸ್. ಸ್ಮೃತಿಗಳು ಹಾಗು ಶಾತವಾಹನರ ಕಾಲದ ಹಲವು ಶಾಸನಗಳು ಹತ್ತಿಬಟ್ಟೆಯನ್ನು ಪ್ರಸ್ತಾಪಿಸಿವೆ. ಇದನ್ನು ಪಟ, ಪಟಿಕಾ, ಕಾರ್ಪಾಸಿಕಪಟವೆಂದು ಕರೆಯುತ್ತಿದ್ದರು. ಸರ್ಕಾರೀ ಮತ್ತು ಖಾಸಗಿ ಲೇಖನಗಳನ್ನು ಬರೆಯಲು ಬಳಸುತ್ತಿದ್ದರು.

ಕಡಿತ (ಕಡತ) :– 'ಸುಮಾರು ಒಂದು ಅಡಿ ಅಗಲವೂ ಹಲವು ಅಡಿಗಳಷ್ಟು ಉದ್ದವೂ ಆಗಿರುವ ಮತ್ತು ಸ್ವಲ್ಪಮಟ್ಟಿಗೆ ಮಂದವಾಗಿರುವ ಹತ್ತಿಯ ಬಟ್ಟೆಗೆ ಹುಣಸೆ ಬೀಜದ ಚರಿಯನ್ನು ಸಮತಲವಾಗಿ ಮೆತ್ತಿ ನಯವಾದ ಗಾರೆ ಕಲ್ಲಿನಿಂದ ಉಜ್ಜಿ ಹದವಾಗಿಸಿ ಒಣಗಿಸಿ ಅದಕ್ಕೆ ಇದ್ದಲ ಪುಡಿಯನ್ನೋ ದೀಪದ ಕಾಡಿಗೆಯನ್ನೋ ಬಳಿದು ಕಡಿತಗಳನ್ನು ಸಿದ್ಧಪಡಿಸುತ್ತಿದ್ದರು. ಇವುಗಳ ಮೇಲೆ ಬಳಿಯ ಬಳಪದಲ್ಲಿ ಬರೆಯುತ್ತಿದ್ದರು ? ಇದನ್ನು 'ಮೇಣಗಪ್ಪಡ' ಎಂದೂ ಕರೆಯುವುದುಂಟು.[11] ಇದನ್ನು ಬೀಸಣಿಗೆಯನ್ನು ಮಡಿಸುವಂತೆ ಎಡಕ್ಕೊಮ್ಮೆ ಬಲಕ್ಕೊಮ್ಮೆ ಮಡಿಸಿ ಪುಸ್ತಕದಂತೆ ಇಡುತ್ತಿದ್ದರು. ಭದ್ರತೆಗಾಗಿ ಇವಕ್ಕೆ ಮರದ ತೆಳ್ಳನೆಯ ರಕ್ಷಾಫಲಕ ಗಳಿರುತ್ತಿದ್ದವು.

ರಾಜ್ಯದ ಆಡಳಿತಗಾರರು ಆಯವ್ಯಯದ ಲೆಕ್ಕಗಳನ್ನು ಬರೆಯಲು, ರಾಜ ನಿರೂಪಗಳ ನಕಲನ್ನು ಮಾಡಲು ಕಡತಗಳನ್ನು ಬಳಸುತ್ತಿದ್ದರು. ಮಠ–ಮಾನ್ಯ ಗಳಲ್ಲಿನ ದೈನಂದಿನ ವ್ಯವಹಾರದ ವಿವರಗಳು ಕಡತಗಳಲ್ಲಿ ಲಿಖಿತಗೊಂಡಿವೆ. ಶೃಂಗೇರಿ ಮಠದ ಹಾಗು ಕವಲೇದುರ್ಗದ ಮಠಗಳಲ್ಲಿ ಲಭ್ಯವಾಗಿರುವ ಕಡತಗಳ ರಾಶಿ ಮೇಲಿನ ಮಾತಿಗೆ ಸಾಕ್ಷಿ.

ಕಡತಗಳ ಉಪಯೋಗ ಕನ್ನಡ ನಾಡಿನಲ್ಲಿ ಓಲೆಯಂತೆ ಬಹು ಹಿಂದಿನ ಕಾಲ ದಿಂದಲೂ ರೂಢಿಯಲ್ಲಿತ್ತು. ಶುಭತುಂಗದೇವನನ್ನು (ರಾಷ್ಟ್ರಕೂಟ ಕೃಷ್ಣ–II. ೯೦೨–೯೧೧) ಹೊಗಳುವ 'ಸೂಕ್ತಿಸುಧಾರ್ಣವ'ದ ಅಜ್ಞಾತ ವೃತ್ತವೊಂದರಲ್ಲಿ[12] ಪೊನ್ನನ (೯೪೫) ಶಾಂತಿಪುರಾಣ'ದಲ್ಲಿ[13]. ಪದ್ಮಣಾಂಕನ (೧೩೮೫) 'ಪದ್ಮರಾಜ ಪುರಾಣ'ದಲ್ಲಿ[14] ಕನಕದಾಸರ (೧೫೫೦) 'ಮೋಹನ ತರಂಗಿಣಿ'ಯಲ್ಲಿ[15] ಪಾಯಣ ವರ್ಣಿಯ (೧೬೫೯) 'ಜ್ಞಾನಚಂದ್ರ ಚರಿತೆ'ಯಲ್ಲಿ[16] 'ಕಡತ'ದ ಉಲ್ಲೇಖಗಳಿವೆ. ಕ್ರಿ. ಶ. ೧೦೬೩ರ ನಾಗಾವಿಯ ಶಾಸನದಲ್ಲಿ ಮಧುಸೂದನ. ಕಾಳಿಮರಸರು 'ಕಡಿತ ವೆರ್ಗಡೆ'ಗಳಾಗಿದ್ದರೆಂದು ನಮೂದಿತವಾಗಿದೆ.

ಲೆಕ್ಕಗಳನ್ನಿಡುವ ಕಛೇರಿಗೆ 'ಕಡಿತದ ಚಾವಡಿ' ಎಂಬ ಹೆಸರು ರೂಢಿಯಲ್ಲಿದ್ದಿತು. ಬಖೈರು–ಕೈಫಿಯತ್ತುಗಳ ಕೆಲವು ಕಡಿತಗಳು ಮದ್ರಾಸ್ ಪ್ರಾಚ್ಯ ಪುಸ್ತಕ ಭಂಡಾರ

ವಲ್ಲಿವೆ. ಕೆಲವು ಕಡತಗಳಲ್ಲಿ 'ವಚನಗಳನ್ನೂ ಕಾವ್ಯಗಳನ್ನೂ ಮಂಗಳಾರತಿಗಳನ್ನೂ ಬರೆದು ಇಟ್ಟಿದ್ದಾರೆ'. ವಿರಕ್ತಮಠ ಹಾಗೂ ಓದಿಸುವ ಮಠಗಳ ಕಡತಗಳಲ್ಲಿ ಮಠದ ತಾಡವಾಲೆ ಗ್ರಂಥಗಳ ಯಾದಿಯಿರುವುದು'[೧೭] 'ಕೆಳದಿ ಬನದಗದ್ದೆ ಮಠದ ಕಡತ ವೊಂದರಲ್ಲಿ ಮಠದ ರಾಜಗುರು ಪರಂಪರೆಯ ಪಟ್ಟಿ ಲಭಿಸಿದೆ.[೧೮] ಲಿಂಗಣ್ಣನ 'ಕೆಳದಿನೃಪವಿಜಯ'ದ ಪ್ರತಿಯೊಂದು ಕಡತದಲ್ಲಿ ಲಿಖಿತವಾಗಿದೆ.[೧೯] ಹಳೆಯ ಕಾಲದ ನಾಡಿಗರ ಮನೆಗಳಲ್ಲಿ, ಸುಂಕದ ಅಧಿಕಾರಿಗಳ ಮನೆಗಳಲ್ಲಿ, ಅರಮನೆಗಳಲ್ಲಿ, ಮಠಗಳಲ್ಲಿ ಕಡಿತಗಳ ದೊಡ್ಡ ಪೆಟಾರಿಗಳೇ ಇವೆ.

ರೇಷ್ಮೆ ಬಟ್ಟೆ :– ಭೂಲರ್. ಸ್ಟೈನ್‌ರು ಹಲವಾರು ರೇಷ್ಮೆ ಬಟ್ಟೆಯಲ್ಲಿ ಬರೆದ ತುಂಡುಗಳನ್ನು ಕಂಡು ಹಿಡಿದಿದ್ದಾರೆ. ಕನ್ನಡದಲ್ಲಿ ರೇಷ್ಮೆ ಬಟ್ಟೆಗಳ ಮೇಲೆ ಲಭಿಸುವ ರೂಢಿ ಇಲ್ಲ. ಆದರೆ ಓಲೆ ಕಟ್ಟುಗಳನ್ನು ಹುಳುಗಳಿಂದ ರಕ್ಷಿಸುವ ಸಲುವಾಗಿ ಕೆಂಪು ಅಥವಾ ಹಳದಿ ಬಣ್ಣದ ರೇಷ್ಮೆ ಬಟ್ಟೆಗಳಿಂದ ಸುತ್ತಿಡುವ ಪದ್ಧತಿ ಜೈನ ಮಠ–ಮಾನ್ಯಗಳಲ್ಲಿ ಇಂದಿಗೂ ಜೀವಂತವಿದೆ. ಶಾಸ್ತ್ರ ದಾನದ ಅಂಗವಾಗಿ ರೇಷ್ಮೆ ಬಟ್ಟೆಯನ್ನು ದಾನಮಾಡುವ ರೂಢಿ ಇದೆ.

ಶಿಲೆ :– ಕಲ್ಲಿನ ಮೇಲೆ ಕೆತ್ತುವ ಬರಹಗಳು ಇತರ ಎಲ್ಲ ಲಿಖಿತಗಳಿಗಿಂತ ದೀರ್ಘ ಕಾಲ ಬಾಳತಕ್ಕವು. ಅವನ್ನು ಸುಲಭವಾಗಿ ಸ್ಥಳಾಂತರಿಸಲಾಗುವುದಿಲ್ಲ. ಶಿಲಾ ಶಾಸನಗಳಲ್ಲಿ ಹಲವು ಬಗೆಗಳಿವೆ. ಬೆಟ್ಟದ ಬಂಡೆಗಳ ಮೇಲೆ. ಕಾಡುಗುಂಡುಗಳ ಮೇಲೆ ಲಿಪಿಯನ್ನು ಕಡೆದಿದೆ. ಉದಾಹರಣೆಗೆ ಅಶೋಕನ ಶಾಸನಗಳು. ಹೊಯ್ಸಳರ ಕಾಲದ ಕರಿಯ ಬಳಪದ ಕಲ್ಲಿನ ಚಪ್ಪಡಿಗಳನ್ನು ನಯವಾಗಿ ಉಜ್ಜಿ ಮಿರುಗುವಂತೆ ಮಾಡಿ ಅದರ ಮೇಲೆ ಲಿಪಿಲೇಖನವನ್ನು ಮಾಡಿರುತ್ತದೆ. ಕಗ್ಗಲ್ಲಿನ ಚತುರ್ಮುಖದ ಕಂಬವೊಂದು ತುಮಕೂರು ಜಿಲ್ಲೆಯ ಶೀರ್ಯದ ತಾಲ್ಲೂಕಿನ ಬರಗೂರಿನ ದೇವಾಲಯದಲ್ಲಿದ್ದು ಅದರಲ್ಲಿ ಲಿಪಿಯನ್ನು ಕಡೆದಿದೆ.[೨೦] ಗಂಗರಾಜರ ಅನೇಕ ಶಿಲಾಲಿಪಿಗಳು ಕಗ್ಗಲ್ಲಿನಲ್ಲಿವೆ. ಉತ್ತರ ಕರ್ನಾಟಕದಲ್ಲಿ ಮಾಸಲು ಕೆಂಪುಬಣ್ಣದ ಜಂಬಿಟ್ಟಿಗೆಯ ಕಲ್ಲು ಹೇರಳವಾಗಿದ್ದು ಅದನ್ನೇ ಶಾಸನ ಸಾಮಗ್ರಿಗೆ ಉಪಯೋಗಿಸಿಕೊಂಡಿದ್ದಾರೆ. ಅಲ್ಲದೆ ಬೂದುಬಣ್ಣದ ಶಿಲೆಯು ಲೇಖ್ಯ ವಸ್ತುವಾಗಿದೆ.

ಹಲವಾರು ಸಾಹಿತ್ಯ ಕೃತಿಗಳ ಭಾಗ ಶಿಲಾಫಲಕಗಳಲ್ಲಿ ಉತ್ಕೀರ್ಣಗೊಂಡಿವೆ.[೨೧] ಮಾಂಧಾತಾ ಎಂಬಲ್ಲಿನ ಅಮರೇಶ್ವರ ದೇವಸ್ಥಾನದ ಮುಂದಿರುವ ಕಲ್ಲುಗಳ ಮೇಲೆ ಹಲಾಯುಧನ 'ಹಲಾಯುಧಸ್ತೋತ್ರ'ವನ್ನು ಕೆತ್ತಿದೆ. ಇದರಂತೆ ಸಂಗೀತ ಶಾಸ್ತ್ರದ ಸ್ವರಪ್ರಸ್ತಾರವನ್ನು 'ಕಡಿಮಿಯಾಮಲೈ' ಬೆಟ್ಟದ ಬಂಡೆಯೊಂದರ ಮೇಲೆ ಕೆತ್ತಿದೆ. ಕನ್ನಡದ ಬೊಪ್ಪಣನ 'ಗೊಮ್ಮಟಸ್ತುತಿ' ಶ್ರವಣ ಬೆಳಗೊಳದ ಶಾಸನದಲ್ಲಿ ಟಂಕೋತ್ಕೀರ್ಣವಾಗಿದೆ.

ಪ್ರಾಚೀನ ಭಾರತದ ರಾಜಮನೆತನಗಳ ಆ–ಆ ಕಾಲದ ಸಾಮಾಜಿಕ. ಆರ್ಥಿಕ ಶೈಕ್ಷಣಿಕ. ಸಾಂಸ್ಕೃತಿಕ ಮೊದಲಾದ ವಿವಿಧ ವಿಷಯಗಳ ಅಭ್ಯಾಸಕ್ಕೆ ಶಾಸನಗಳು ಅಮೂಲ್ಯ ಆಕರಗಳಾಗಿದ್ದು 'ತವನಿಧಿ'ಗಳಾಗಿವೆ. ಅಶೋಕನ ಕಾಲದಿಂದ ಹಿಡಿದು ಇಂದಿನವರೆಗೂ ಶಿಲಾಲಿಪಿಗಳ ಕಾಲವ್ಯಾಪ್ತಿಯಿದೆ.

ಕಾಗದ:– ಭರತಖಂಡಕ್ಕೆ ಮಹಮ್ಮದೀಯರಿಂದ ಲಭಿಸಿದ ಕೊಡುಗೆ ಕಾಗದ. ಇದರ ಹಿಂದೂಸ್ತಾನೀ ರೂಪ ಕಾಗಜ್ ಎಂದು. ಗುಜರಾತಿನಲ್ಲಿ ದೊರೆತ ಕಾಗದದ ಹಸ್ತಪ್ರತಿಯೊಂದರ ಕಾಲ ಕ್ರಿ. ಶ. ೧೨೨೦–೨೪. ಭಾಗವತದ ಪ್ರತಿಯೊಂದು ಕ್ರಿ. ಶ. ೧೩೧೦ರಲ್ಲಿ ಲಿಖಿತವಾಗಿದೆ. ಕಾಗದದ ಉಲ್ಲೇಖ ಕನ್ನಡ ನಾಡಿನಲ್ಲಿ ಮೊದಲ ಬಾರಿಗೆ ಮಂಗರಾಜ–೨ರ ಅಭಿನವಾಭಿಧಾನ'ದಲ್ಲಿ (ಪುಟ ೧೦೫–೧೫) ಕ್ರಿ. ಶ. ೧೩೯೮ರಲ್ಲಿ ದೊರೆಯುತ್ತದೆ. 'ಕನ್ನಡ ನಾಡಿನಲ್ಲಿ ಕಾಗದವನ್ನು ಬರವಣಿಗೆಗೆ ಉಪಯೋಗಿಸುವ ರೂಢಿ ಸು. ಕ್ರಿ. ಶ. ೧೩೯೮ರ ಸುಮಾರಿನಲ್ಲಿ ಆರಂಭವಾಗಿರಬಹುದು.' ನಂಜುಂಡನ (೧೫೨೫) 'ರಾಮನಾಥ ಚರಿತೆ' (xvii–೭೨) ಮತ್ತು ಗೋವಿಂದ ವೈದ್ಯನ (೧೬೪೮) 'ಕಂಠೀರವ ನರಸರಾಜ ವಿಜಯ' (೧೩–೭೦. ೭೧) ಗಳಲ್ಲಿ 'ಕಾಗಜ'ದ ಉಲ್ಲೇಖಗಳಿವೆ.

ಸಾಮಾನ್ಯವಾಗಿ ಕಾಗದದ ಪ್ರತಿಗಳ ಪತ್ರಗಳು ಬಿಡಿ ಬಿಡಿಯಾಗಿರುತ್ತಿದ್ದುವು. ಹಾಳೆಗಳನ್ನು ಮೊಗಚುವುದೂ ಓಲೆಗರಿಗಳನ್ನು ಮೊಗಚುವಂತೆಯೇ–ಇವುಗಳ ಸುರಕ್ಷತೆಗಾಗಿ, ಮೇಲೊಂದು ಕೆಳಗೊಂದು ಮರದ ಪಟ್ಟಿಗಳನ್ನು ಜೋಡಿಸಿ ಕಟ್ಟಿ ಆ ಕಟ್ಟನ್ನು ಬಣ್ಣಬಣ್ಣದ ದಪ್ಪನೆಯ ಅರಿವೆಯಲ್ಲಿ ಸುತ್ತಿ ಇಡುತ್ತಿದ್ದರು.

ಶ್ರೀ ಎಚ್. ದೇವೀರಪ್ಪನವರು ಕರ್ನಾಟಕದಲ್ಲಿನ ಕಾಗದದ ಪ್ರತಿಗಳನ್ನು ಕೋರಿ ಕಾಗದದ. ಬಿಳಿಯ ಕಾಗದದ ಮತ್ತು ನೀಲಿ ಕಾಗದದ ಪ್ರತಿಗಳೆಂದು ಮೂರು ಗುಂಪುಗಳಾಗಿ ವಿಂಗಡಿಸಿದ್ದಾರೆ.[೨೨]

ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿದ ಕಾಗದದ ಹಸ್ತಪ್ರತಿಗಳು ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಸಿಗುತ್ತಿಲ್ಲ. ಉತ್ತರ ಕರ್ನಾಟಕದಲ್ಲಿ ಇವು ಹೇರಳವಾಗಿ. ಲಭ್ಯವಾಗಿದ್ದು ಅಲ್ಲಿ ಇವನ್ನು 'ಕೋರಿ ಕಾಗದದ' ಪ್ರತಿಗಳೆಂದು ಕರೆಯುತ್ತಾರೆ.

ಸಾಲಿ ಮಠಗಳಲ್ಲಿ ಕಾಗದವನ್ನೂ ಕಟ್ಟುಗಳನ್ನೂ ಮಾಡುವುದನ್ನು ಹೇಳಿಕೊಡುತ್ತಿದ್ದರೆಂದೂ ಅವನ್ನು ಮಾಡುತ್ತಿದ್ದ ಉಪಕರಣಗಳು ಈಗಲೂ 'ಸಾಲಿಮಠ'ಗಳ ಮೂಲೆಗಳಲ್ಲಿ ಯಾರಿಗೂ ಬೇಡವಾಗಿ ಬಿದ್ದಿರುವವೆಂದೂ ಡಾ. ಬಿ. ಎಸ್. ಗದ್ದಗಿಮಠ ಅವರು ತಿಳಿಸಿದ್ದಾರೆ.

ಶಕೆ ೧೩೫೨ರ ಭೀಮಕವಿಯ[೨೩] 'ಬಸವ ಪುರಾಣ' ಮತ್ತು ಶಕವರ್ಷ ೧೬೧೨ರಲ್ಲಿ ಲಿಖಿತವಾಗಿರುವ ಶ್ರೀ ಗಿರೀಂದ್ರನ 'ಏಕೋತ್ತರ ಶತಸ್ಥಲಿ ಟೀಕು'ಗಳು[೨೪] ಉಪಲಬ್ಧ ಪ್ರಾಚೀನ ಕಾಲ ನಿರ್ದೇಶವನ್ನುಳ್ಳ ಕಾಗದದ ಹಸ್ತಪ್ರತಿಗಳಾಗಿವೆ.

ಮಸಿ :

ಪ್ರಾಚೀನ ಕಾಲದಿಂದಲೂ ಮಸಿ ಬರವಣಿಗೆಗೆ ಬಳಕೆಯಲ್ಲಿದ್ದಿತು. ಮೊಹೆಂಜೊದಾರೊವಿನಲ್ಲಿ ಮಸಿ ಬಾವಿಯು ಮಾದರಿಯಿರಬಹುದೆಂದು ಭಾವಿಸಲಾಗಿರುವ ಜಾಡಿಯೊಂದು ಸಿಕ್ಕಿದೆ. ನೇಬೊರ್ಸ್ ಮತ್ತು ಕ್ಯು. ಕರ್ಟಿಯಸ್‌ರ ಹೇಳಿಕೆಗಳು ಕ್ರಿ.ಪೂ.೪ನೆಯ ಶತಮಾನಕ್ಕಾಗಲೇಭಾರತದಲ್ಲಿ ಮಸಿಯ ಉಪಯೋಗದ ಸಂಭಾವ್ಯತೆಯನ್ನು ಹೆಚ್ಚಿಸುತ್ತವೆ. ಉಪಲಬ್ಧವಾದ ಅತಿ ಪ್ರಾಚೀನವಾದ ಮಸಿ ಬರಹವೆಂದರೆ ಕ್ರಿ.ಪೂ. ೨ನೆಯ ಶತಮಾನಕ್ಕೆಸೇರಿದ ಅಂಧೇರ್‌ನಲ್ಲಿನ ಒಂದು ಕುಡಿಕೆಯ ಮುಚ್ಚಳದ ಮೇಲಿನ ಲಿಪಿ. ಕ್ರಿ. ಶ. ೧ನೆಯ ಶತಮಾನದಷ್ಟು ಪ್ರಾಚೀನವಾದ ಖರೋಷ್ಠಿ (ಲಿಪಿಯಲ್ಲಿ ಮಸಿಯಿಂದಬರೆದ ಧರ್ಮ ಪದದ ಪ್ರತಿ ಖೋಟಾನಿನಲ್ಲಿ ಲಭಿಸಿದೆ.

ತಾಳೆಯ ಪತ್ರಗಳ ಮೇಲೆ ಮಸಿಯಿಂದ ಬರೆಯುವ ಪದ್ಧತಿ ಉತ್ತರ ಭಾರತದಲ್ಲಿ ವಿಶೇಷವಾಗಿದೆ. ದಕ್ಷಿಣ ಭಾರತದಲ್ಲಿ ಮಸಿಯಿಂದ ಬರೆಯುವ ರೀತಿ ಇಲ್ಲದಿದ್ದರು. ಕನ್ನಡಿಗರಿಗೆ ಲೇಖನ ದ್ರವ್ಯವನ್ನಾಗಿ ಮಸಿಯನ್ನು ಉಪಯೋಗಿಸುವ ವಿಷಯ ತಿಳಿಯದಿರಲಿಲ್ಲ. ಹತ್ತನೆಯ ಶತಮಾನದ 'ವಡ್ಡಾರಾಧನೆ'.'ಶಾಂತಿಪುರಾಣ' ಹಾಗು 'ಗದಾಯುದ್ಧ'ಗಳಲ್ಲಿ ಮಸಿಯನ್ನು ಲೇಖನ ಸಾಮಗ್ರಿಯಾಗಿ ಬಳಸಿದ ಉಲ್ಲೇಖಗಳಿವೆ[೨೫].

ಮಸಿಯನ್ನು ಮಾಡುವ ವಿಧಾನಗಳು ಹಲವಾರು. ರಾಗಿಮಸಿ, ಅರಗಿನ ಮಸಿ, ಅಳಲೆಕಾಯಿ ಮಸಿ ಪ್ರಭೇದಗಳಿವೆ. ಇವಲ್ಲದೆ ಬಗೆಬಗೆಯ ಬಣ್ಣದ ಮಸಿಗಳೂ ಪ್ರಚಲಿತವಾಗಿದ್ದುವು.[೨೬]

ಲೇಖನಿ :

ಲೇಖನಿ ಬರೆಯುವ ಸಾಧನ. ಲೆಕ್ಕಣಿಕೆಯನ್ನು ಮಸಿಯಲ್ಲಿ ಬರೆಯಲು ಬಳಸುತ್ತಿದ್ದರು. ಇದನ್ನು ಲಾಳದಕಡ್ಡಿ, ಮುಳ್ಳು ಹಂದಿಯ ಮುಳ್ಳು, ಬಿದಿರಿನ ಸೀಳು, ನವಿಲು ಕಾಂಡ ಇವುಗಳಿಂದ ಮಾಡಲಾಗುತ್ತಿತ್ತು. ಇವುಗಳ ತುದಿಯನ್ನು ಚೂಪಾಗಿ ಹೆರೆದು ಮಸಿಯಲ್ಲಿ ಅದ್ದಿಕೊಂಡು ಭೂರ್ಜ ಪತ್ರಗಳಲ್ಲಿ ಬರೆಯುತ್ತಿದ್ದರು.

ಕನ್ನಡ ನಾಡಿನಲ್ಲಿ ತಾಳಪತ್ರದ ಮೇಲಿನ ಬರವಣಿಗೆಗೆ ಉಕ್ಕಿನ ಕಂಠವನ್ನು ಉಪಯೋಗಿಸುತ್ತಿದ್ದರು.

ಲೆಕ್ಕಣಿಕೆ. ಕಂಠಗಳಲ್ಲದೆ ಕುಂಚಿಕೆಗಳು ಉಪಯೋಗದಲ್ಲಿದ್ದು ಇವನ್ನು ಚಿತ್ರಲೇಖನಕ್ಕೆ ಬಳಸಿಕೊಳ್ಳುತ್ತಿದ್ದರು. ಕೇಶಿರಾಜನ 'ಶಬ್ದಮಣಿದರ್ಪಣ'ದಲ್ಲಿನ[೨೭] 'ಚಿತ್ರಿಪೊಡೆ ತೂಳಿಕೆಯಂತರಿಸುಪೆಂ' ಎಂಬ ಉಲ್ಲೇಖ ಕುಂಚಿಕೆಯನ್ನೆ ಸೂಚಿಸುವುದೆಂಬುದರಲ್ಲಿ ಸಂದೇಹವಿಲ್ಲ.

ಗ್ರಂಥ ಋಣ*

ಡಾ. ಎಸ್. ಎಂ. ಕತ್ರೆ (ಅನು) ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ; "ಭಾರತೀಯ ಗ್ರಂಥ ಸಂಪಾದನ ಪರಿಚಯ", ಮೈಸೂರು, ೧೯೬೮.

ಡಾ. ಎಂ. ಎಂ. ಕಲಬುರ್ಗಿ : "ಕನ್ನಡ ಗ್ರಂಥ ಸಂಪಾದನ ಶಾಸ್ತ್ರ". ಧಾರವಾಡ. ೧೯೭೨.

ಶ್ರೀ ಎಚ್. ದೇವೀರಪ್ಪ : "ಕನ್ನಡ ಹಸ್ತಪ್ರತಿಗಳ ಇತಿಹಾಸ" ಬೆಂಗಳೂರು, ೧೯೭೭.

ಡಾ. ಡಿ. ಎಲ್. ನರಸಿಂಹಾಚಾರ್ : "ಕನ್ನಡ ಗ್ರಂಥ ಸಂಪಾದನೆ" ಮೈಸೂರು. ೧೯೬೪.

ಶ್ರೀ ಸೀತಾರಾಮ ಜಾಗೀರದಾರ : "ಗ್ರಂಥ ಸಂಪಾದನಾ ಶಾಸ್ತ್ರ ಪರಿಚಯ", ರಂಗಂಪೇಟೆ (ಸುರಪುರ) ೧೯೭೮.

* ಇಲ್ಲಿ 'ಗ್ರಂಥ ಸಂಪಾದನೆ'ಗೆ ಸಂಬಂಧಿಸಿದ ಕೃತಿಗಳನ್ನು ಮಾತ್ರ ಕೊಟ್ಟಿದೆ. ಉಳಿದ ಕೃತಿಗಳ ಪತ್ರಿಕೆಗಳ ವಿವರವನ್ನು ಅಡಿ ಟಿಪ್ಪಣಿಗಳಲ್ಲಿ ಕೊಟ್ಟಿದೆ.

ಅಡಿ ಟಿಪ್ಪಣಿಗಳು

೧ Dr. A. N. Upadhye : 'Some Inscriptions on Jaina Images', The Jaina Antiguary, Vol. V No. III, pp. 97-99.

೨ "ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು", (ಸಂ) ಲಕ್ಷ್ಮಣ ತೆಲಗಾವಿ, ಡಾ. ಎಂ. ವಿ. ಶ್ರೀನಿವಾಸ, ಚಿತ್ರದುರ್ಗ. ೧೯೭೬, ಪು. ೯೬–೧೦೨.

೩ ಕೊ. ವ್ಯಾ. ರಮೇಶ : "ಕರ್ಣಾಟಕ ಶಾಸನ ಸಮೀಕ್ಷೆ", ಬೆಂಗಳೂರು, ೧೯೭೧, ಪು. ೪೦.

೪ '೨' ರಂತೆ

೫ ಡಾ. ಎಂ. ಚಿದಾನಂದಮೂರ್ತಿ : "ಕನ್ನಡ ಶಾಸನಗಳ ಸಾಂಸ್ಕೃತಿ ಅಧ್ಯಯನ", ಮೈಸೂರು, ೧೯೬೬, ಪು. ೧೩ (ಅಡಿಟಿಪ್ಪಣಿ).

೬ "ಶ್ರವಣಬೆಳಗೊಳ ಶ್ರೀ ಜೈನಮಠದ ತಾಡಪತ್ರೀಯ ಗ್ರಂಥಸೂಚಿ" (ಸಂ)ದೇವಕುಮಾರಶಾಸ್ತ್ರಿ, ಶ್ರವಣಬೆಳಗೊಳ, ೧೯೮೦, ಪು. ೧.

೭ ಕೆ. ೨೮೨; "ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತ ಪತ್ರಿಗಳ ವರ್ಣನಾತ್ಮಕ ಸೂಚೀ", ದ್ವಿತೀಯ ಸಂ.ಪುಟ, [ಸಂ] ಬಿ. ಎಸ್. ಸಣ್ಣಯ್ಯ. ಮೈಸೂರು, ೧೯೬೨. ಪು. ೨೬೫–೬೬.

೮ ಡಾ. ಡಿ. ಎಲ್. ನರಸಿಂಹಾಚಾರ್ : 'ಕನ್ನಡ ಗ್ರಂಥ ಸಂಪಾದನೆ" ಮೈಸೂರ. ೧೯೬೪, ಪು. ೪೯

೯ ಈ ಪ್ರತಿ 'ಕನ್ನಡ ಸಂಶೋಧನ ಸಂಸ್ಥೆ' ಧಾರವಾಡದಲ್ಲಿದೆ.

೧೦ ಎಸ್. ಶಿವಣ್ಣ : '೨೦ನೆಯ ಶತಮಾನದ ಒಂದು ಅಪೂರ್ವ ಓಲೆ ಹಸ್ತಪ್ರತಿ', ಸಾಧನೆ. ೯–೨, ೧೯೮೦, ಪು. ೧೪೫–೪೬.

೧೧ ಎಚ್. ದೇವೀರಪ್ಪ : "ಕನ್ನಡ ಹಸ್ತಪ್ರತಿಗಳ ಇತಿಹಾಸ". ಬೆಂಗಳೂರು, ೧೯೭೭. ಪು. ೧೯.

೧೨ ೫–೭

೧೩ ೯–೧೪೭

೧೪ ೫–೫೦

೧೫ ೧–೨೧

೧೬ ೨–೫೦

೧೭ ಡಾ. ಬಿ. ಎಸ್ ಗದ್ದಗೀಮಠ : 'ಕಾಯಕ ಶಿಕ್ಷಣ', ಶರಣ ಸಾಹಿತ್ಯ, ೧೮–೯. ೧೯೫೫ ಪು. ೪೦೨.

೧೮ ಡಾ. ಸಾ. ಶಿ. ಮರುಳಯ್ಯ : "ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ", ಬೆಂಗಳೂರು, ೧೯೮೦, ಪು. ೧೨೭-೨೮.

೧೯ ಮದ್ರಾಸ, 'ಪ್ರಾಚ್ಯ ಪುಸ್ತಕ ಭಂಡಾರ'ದ ಸಂಗ್ರಹ.

೨೦ ಇತ್ತೀಚೆಗೆ ಪಂಪನ 'ವಿಕ್ರಮಾರ್ಜುನ ವಿಜಯ'ದ ಪದ್ಯಗಳನ್ನೊಳಗೊಂಡ ಸ್ತಂಭಶಾಸನವೊಂದು ಲಭಿಸಿದೆ. ಕರ್ನಾಟಕ ಭಾರತಿ,೭-೩, ೧೯೭೫, ಪು.೧೧೭-೨೫ ಮತ್ತು ೮-೨, ೧೯೭೫, ೧೩೧-೪೦.

೨೧ ಹೆಚ್ಚಿನ ವಿವರಗಳಿಗೆ ಇದನ್ನು ನೋಡಿ-

i) ಡಾ. ಡಿ. ಎಲ್. ನರಸಿಂಹಾಚಾರ್ : "ಕನ್ನಡ ಗ್ರಂಥ ಸಂಪಾದನೆ", ಮೈಸೂರು, ೧೯೬೪, ಪು. ೪೧-೨

ii) ಡಾ. ಎಂ. ಎಂ. ಕಲಬುರ್ಗಿ : "ಕನ್ನಡ ಗ್ರಂಥ ಸಂಪಾದನ ಶಾಸ್ತ್ರ, ಧಾರವಾಡ, ೧೯೭೨, ಪು. ೩೭ [ಅ.ಟಿ.]

೨೨ ೧೧ ರಂತೆ ಪು. ೨೧.

೨೩ ಪ್ರಸ್ತಾವನೆ, ಭೀಮ ಕವಿ ಕೃತ 'ಬಸವ ಪುರಾಣ' (ಸಂ) ಡಾ. ಆರ್. ಸಿ. ಹಿರೇಮಠ, ಧಾರವಾಡ, ೧೯೫೮, ಪು. ೬.

೨೪ 'ಕನ್ನಡ ಅಧ್ಯಯನ ಸಂಸ್ಥೆ' (ಮೈಸೂರು)

೨೫ ವಡ್ಡಾರಾಧನೆ, ಪು. ೭೫, ಶಾಂತಿಪುರಾಣ, ೭-೧೨೫ ಗದಾಯುದ್ಧ-೬-೨

೨೬ ೨೧ (ii) ರಂತೆ ಪು. ೪೧-೪; ೧೧ರಂತೆ ಪು. ೨೩-೪; ಹೇಮಕೂಟ, ೧-೧೦, ಪು. ೨೦-೧

೨೭ "ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ" (ಸಂ) ಡಿ. ಎಲ್. ನರಸಿಂಹಾಚಾರ್, ಮೈಸೂರು, ೧೯೫೯, ಪು. ೨೧೧.

ಲೇಖನಾಭಿವೃದ್ಧಿ

● ಎಚ್. ದೇವಿರಪ್ಪ

ಲೇಖನಾಭಿವೃದ್ಧಿ ಎಂಬ ಪದವನ್ನು ಕನ್ನಡ ಬರಹಗಳ ಬೆಳವಣಿಗೆ ಎಂಬರ್ಥದಲ್ಲಿ ಬಳಸಿದೆ ಎಂದು ನಾನು ತಿಳಿದಿದ್ದೇನೆ. ಕವಿಗಳೋ ಪಂಡಿತರೋ ಓಲೆಯ ಗರಿಗಳ ಮೇಲೆ ಇಲ್ಲವೆ ಕಾಗದದ ಮೇಲೆ ಬರೆದ ಅಥವಾ ಹೇಳಿ ಬರೆಯಿಸಿದ ಕಾವ್ಯ ನಾಟಕಾದಿಗಳ ಮೂಲ ಕೈಬರಹ ಅಥವಾ ಅವುಗಳ ಪ್ರತ್ಯಂತರಗಳನ್ನು ಕೈಬರಹಗಳು ಎಂದು ಕರೆಯಲಾಗುತ್ತಿದೆ.

ಅಂತಹ ಕೈಬರಹಗಳು ಅಂದರೆ ಲೇಖನಗಳು ಕಾಲಕಾಲಕ್ಕೆ ಹೇಗೆ ಹೆಚ್ಚುತ್ತ ಬಂದುವು; ವೈವಿಧ್ಯಮಯವಾಗುತ್ತ ಬಂದುವು– ಎಂಬುದನ್ನು ವಿವರಿಸಲು ತಮ್ಮ ಮುಂದೆ ನಿಂತಿದ್ದೇನೆ.

ಒಂದೇ ಮೂಲ ಮಾತೃಕೆಯಿಂದ ಹಲವಾರು ನಕಲುಗಳೂ ನಕಲುಗಳ ನಕಲುಗಳೂ ಅವುಗಳ ಪ್ರತಿಗಳೂ ಹುಟ್ಟಿಕೊಂಡಿವೆ; ಕಾವ್ಯವೇ ಅಲ್ಲದೆ ಶಾಸ್ತ್ರಗಳೂ ವಿಜ್ಞಾನ ಗ್ರಂಥಗಳೂ ಹುಟ್ಟಿ ಬೆಳೆದು ಅವೂ ತಮ್ಮ ಸಂತಾನವನ್ನು ಬೆಳೆಸಿಕೊಂಡಿವೆ. ಇವುಗಳ ಒಟ್ಟು ಸಂಖ್ಯೆ ಕನ್ನಡದ ಮಟ್ಟಿಗೆ ಹೇಳುವುದಾದರೆ ಒಂದು ಲಕ್ಷಕ್ಕೂ ಮೀರಿರಬಹುದು. ಈಗಲೂ ಪಟ್ಟಣಗಳಲ್ಲಿ ಮಾತ್ರವಲ್ಲ, ಹಳ್ಳಿಗಳಲ್ಲಿ ಮಾತ್ರವಲ್ಲ, ಕನ್ನಡ ಸಂಸ್ಕೃತಿಯ ಕಂಪು ಎಲ್ಲೆಲ್ಲಿ ಪಸರಿಸಿತ್ತೋ ಅಲ್ಲೆಲ್ಲ ಹರಡಿಕೊಂಡಿವೆ. ಇದಾದುದುಹೇಗೆ ?

ಮನುಷ್ಯನಲ್ಲಿ ಸಹಜವಾಗಿಯೇ ಇರುವ ಮಾನಸಿಕ ಬೌದ್ಧಿಕ ಮತ್ತು ಆಧ್ಯಾತ್ಮಿಕ ಹಸಿವೆಯೋ ಇದಕ್ಕೆ ಮೂಲ ಕಾರಣವೆನ್ನಬಹುದು. ಹಿಂದಿನ ಕಾಲದಲ್ಲಿ ಈಗಿರುವಷ್ಟು ಮನೋರಂಜನಾ ಸಾಧನಗಳು ಇರಲಿಲ್ಲ. ಜನಸಾಮಾನ್ಯರಿಗೆ ಬಯಲಾಟ, ಯಕ್ಷಗಾನ, ಕೋಲಾಟ ದೊಂಬರಾಟ, ಗೊಂದಲದವರ ಕಥೆ, ಕಂಚಿಗೊಲ್ಲರ ಮೋಡಿ ಆಟ,ಸುಗ್ಗಿಯ ಕುಣಿತ, ಭೂತನೃತ್ಯ, ಕೋಲ–ಮುಂತಾದುವುಗಳಿಂದ ಆಳವೂ ವ್ಯಾಪಕವೂ ಆದ ಅರಿವಾಗಲಿ ಆನಂದವಾಗಲಿ ಸಿಕ್ಕುವಂತಿರಲಿಲ್ಲ. ಹಬ್ಬಹರಿದಿನಗಳಲ್ಲಿ ಮದುವೆ ಮುಂಜಿ, ರಥೋತ್ಸವ, ಜಾತ್ರೆಗಳ ಸಂದರ್ಭಗಳಲ್ಲಿ ನಡೆಯುತ್ತಿದ್ದ ವಿನೋದಗಳೂ ಅವರ ಅಂತರಂಗದ ಹಸಿವನ್ನು ಹಿಂಗಿಸುವ ಶಕ್ತ ಪ್ರಭಾವಗಳನ್ನುಳ್ಳುವಾಗಿರಲಿಲ್ಲ. ಮೇಲಾಗಿ ಈಗ ಇರುವಂತೆ ಆಗ ಕಥೆ ಕಾದಂಬರಿಗಳು ನಾಟಕ ಸಿನಿಮಾ, ಕ್ಯಾಬರೆ, ಸರ್ಕಸ್, ಟೆಲಿವಿಷನ್, ಕ್ರೀಡಾಪಂದ್ಯಗಳು ಇರಲಿಲ್ಲ. ಪ್ರಜಾಸಂಖ್ಯೆ ಇಂದಿಗಿಂತ ಕಡಮೆ ಇದ್ದುದರಿಂದ ನಾಡಿನಲ್ಲಿ ಸುಖಶಾಂತಿಗಳು ನೆಲಸಿದ್ದು ಜನರು ಬಹು ನೆಮ್ಮದಿ

ಯಿಂದಿದ್ದರು. ಅವರಿಗೆ ಯಥೇಚ್ಛವಾಗಿ ಬಿಡುವೂ ದೊರೆಯುತ್ತಿದ್ದಿತು: ಧರ್ಮ ನೀತಿ, ಸದಾಚಾರ, ಸಭ್ಯತೆಗಳು ಬೇಕಾದ ವಸ್ತುಗಳಾಗಿದ್ದುವು. ಎಲ್ಲಕ್ಕೂ ಮಿಗಿಲಾಗಿ ಸ್ವತಂತ್ರವಾಗಿ ಯೋಚನೆ ಮಾಡುವ ಶಕ್ತಿ ಇದ್ದಿತು. ರಾಜಕೀಯ ಗೊಂದಲ ಗಳಿರಲಿಲ್ಲ.

ಅಂದಿನ ಕಾವ್ಯಗಳು ಇಂದಿನವುಗಳಂತೆ ಜನತೆಯ ಈ ಎಲ್ಲ ಬಯಕೆಗಳನ್ನೂ ಈಡೇರಿಸುವುವೇ ಆಗಿದ್ದುವು. ಇದನ್ನು ಕಂಡೇ ಕವಿರಾಜಮಾರ್ಗಕಾರನು

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತ ಪ್ರಕಾರಮಿದು ಸುಖಮಿದು ದುಃ
ಖೋ ಪಾತ್ರಮಿದೆಂದ ಱಿಪುಗು
ಮಾ ಪರಮ ಕವಿ ಪ್ರಧಾನರಾ ಕಾವ್ಯಂಗಳ್

—ಎಂದು ವರ್ಣಿಸಿದ್ದಾನೆ. ಈ ವಾದಕ್ಕೆ ಸಂವಾದಿಯಾಗಿ ನಮ್ಮ ಪ್ರಾಚೀನ ಕವಿಗಳು ಏನೆಂದಿದ್ದಾರೆ, ನೋಡಿ, ರಾಘವಾಂಕನು 'ಸಿದ್ಧರಾಮ ಚಾರಿತ್ರ'ವನ್ನು ಮುಗಿಸುತ್ತ, ಹೀಗೆ ಹೇಳಿಕೊಂಡಿದ್ದಾನೆ: ತಾನು,

ಕ್ಷಿತಿಯೊಳೆಲ್ಲಾ ಜನಂ ಕೇಳ್ದು ಸಿದ್ಧೇಂದ್ರನು
ನ್ನತ ಮಹಿಮೆಯೆಂಬ ಸುಧೆಯಂ ಸವಿದು ಬದುಕಲೆಂ
ದತಿ ಕೃತಾರ್ಥತೆಯಿಂದೆ ನಿರಪೇಕ್ಷೆಯಿಂದೆ ಶ್ರೀ ಗುರುವ ಪೊಗಳ್ದಾತನು

ಇಲ್ಲಿ ನಮಗೆ ಬೇಕಾದುದು 'ಕಿತಿಯೊಳೆಲ್ಲಾಜನಂ ಕೇಳ್ದು ಬದುಕಲಿ' ಎಂಬ ಮಾತು. ಸುಧೆಯನ್ನು ಸವಿದವರು ಸಾಯುವುದಿಲ್ಲ. ಬದುಕಿಯೇ ಇರುತ್ತಾರೆ ನಿಜ. ಆದರೆ ಈ ಸಂದರ್ಭದಲ್ಲಿ. 'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು; ಹುಟ್ಟು ಸಾವು ಗಳ ನೇಣಿನಿಂದ ಹೊರಗಾಗುವರು' ಎಂಬುದು ಕವಿಯ ಇಂಗಿತ. ಈ ಮಾತು 'ಸಿದ್ಧರಾಮ ಚಾರಿತ್ರ'ಕ್ಕೆ ಮಾತ್ರವಲ್ಲ, ಎಲ್ಲಾ ಸತ್ಕಾವ್ಯಗಳಿಗೂ ಒಪ್ಪುತ್ತದೆ. ಈತನೂ ಈತನಂತೆ ಇತರ ಕವಿಗಳೂ ತಮ್ಮ ಕೃತಿರತ್ನಗಳನ್ನು ಓದಿ ಮೆಚ್ಚಿ ರೋಮಾಂಚನ ಗೊಂಡು ಲಾಲನೆ ಮಾಡುವ ರಸಿಕ ಸಜ್ಜನರಿರಬೇಕೆಂದು ಬಯಸುವರು. ಈ ತೆರ ನಾದ ಬಯಕೆ. ಭವ್ಯರಿಗಾಗಿ ಭಕ್ತರಿಗಾಗಿ ಜನತೆಗಾಗಿ ಕಾವ್ಯರಚನೆ ಮಾಡುತ್ತೇವೆನ್ನುವ ಕವಿಗಳಲ್ಲಿ ವಿಶೇಷವಾಗಿದೆ. ಇವರಲ್ಲಿ ಕೆಲವರು ಸಾಹಿತ್ಯ ಪ್ರಚಾರ ಕಾರ್ಯ ಹೇಗೆ ಹೇಗೆ ನಡೆಯುತ್ತದೆ. ನಡೆಯಬೇಕು ಎಂಬುದನ್ನು ಬಹು ಜಾಣ್ಮೆಯಿಂದ ಪ್ರತಿಪಾದಿಸಿ ದ್ದಾರೆ.

ಕ್ರಿ. ಶ. ೧೨೨೨ರಲ್ಲಿ ಪಾರ್ಶ್ವ ಪಂಡಿತ ಎಂಬ ಜೈನ ಕವಿಯು ಪಾರ್ಶ್ವನಾಥ ಜಿನನ ಪುರಾಣವನ್ನು ಚಂಪೂ ಶೈಲಿಯಲ್ಲಿ ಬರೆದಿದ್ದಾನೆ. ಆತ. ಕೃತಿಯ ಅಂತ್ಯದಲ್ಲಿ,

ಇದು ಸದ್ಧರ್ಮ ಸುಕಾವ್ಯಧರ್ಮ ವಿಭವಕ್ಕಾವಾರ್ಮಂ ದಲೆಂದೋರ್ಮೆಯುಂ
ಮುದದಿಂದಂ ಬರೆವಳ್ಕಜಿಂ ಬರೆಯಿಪತ್ಯಾನಂದದಿಂ ಪೇಟ್ವಿಸಂ
ಮುದದೀದೊಂ (ದೋ)ದಿ ನಿರಂತರಂ ನೆನೆವಿನಂ ಸಂತೋಷದಿಂ ಭಾಷಿಪ
ಗ್ಗದ ಕಾವ್ಯಪ್ರಿಯಭವ್ಯಕೋಟಿಗೆ ಜಯಂ ಭದ್ರಂ ಶುಭಂ ಮಂಗಳಂ

(ಈ ಕಾವ್ಯವು ಸದ್ಧರ್ಮ ಮತ್ತು ಸತ್ಕಾವ್ಯಧರ್ಮ ಎರಡಕ್ಕೂ ಆಧಾರವಾದುದೆಂದು ಒಂದುಸಲವಾದರೂ ಮುದದಿಂದ ಇದನ್ನು ಯಾರು ಪ್ರತಿಮಾಡುವರೋ. ಯಾರು ಅಕ್ಕರೆಯಿಂದ ಬರೆಯಿಸುವರೋ. ಅತಿಶಯವಾದ ಆನಂದದಿಂದ ವಾಚನ ಮಾಡುವರೋ. ಸಂತೋಷದಿಂದ ವ್ಯಾಸಂಗ ಮಾಡುವರೊ. ನಿರಂತರವೂ ಇದರಲ್ಲಿರುವ ತತ್ವವನ್ನು ನೆನೆಯುವರೋ, ಹಿಗ್ಗಿನಿಂದ ಪರಿಭಾಷಿಸುವರೋ ಅಂತಹ. ಹಿರಿಮೆಯುಳ್ಳ ಕಾವ್ಯಪ್ರಿಯರಿಗೆ ಭವ್ಯರ ಬಳಗಕ್ಕೆ 'ಜಯಂ, ಭದ್ರಂ. ಶುಭಂ. ಮಂಗಳಂ).

'ಶಿವತತ್ವ ಚಿಂತಾಮಣಿ'ಯ ಲಕ್ಕಣ್ಣದಂಡೇಶನೂ ಇದೇ ಅಭಿಪ್ರಾಯಕ್ಕೆ ಮಾರ್ದನಿಗೊಡುತ್ತಾನೆ.

ಹರುಷದಿಂ ಶಿವತತ್ವಚಿಂತಾಮಣಿಯೆನಿಪ್ಪ
ವರಕೃತಿಯ ನೊರೆದಂಗೆ ಬರೆದಂಗೆ ವಾಚಿಪಂ
ಗುರುತರಾನಂದದಿಂದಿದಜಿ ತಾತ್ಪರ್ಯಮಂ ವಿಸ್ತರಿಸಿ ಪೇಳ್ದವಂಗೆ
ಪರಮ ಸದ್ಭಕ್ತಿಯಿಂದಾದರಿಸಿ ಕೇಳ್ದಂಗೆ
ಎರಡಿಲ್ಲದಿದಂ ತಾತ್ಪರ್ಯಮಂ ತಿಳಿದಗಿಹ
ಪರಸುಖಂಗಳು ಸಿದ್ಧಿಸುವುವೆಂದ ದೇಶಿಕನ ಚರಣಾಂಬುಜಕ್ಕೆ ಶರಣು.

—ಈ ಎರಡು ಪದ್ಯಗಳಿಂದ ಕೈಬರಹಗಳು ಹೇಗೆ ಹೆಚ್ಚಿದುವೆಂಬುದರ ಸುಳಿವು ಸಿಕ್ಕುತ್ತದೆ.

ಮೂಲ ಮಾತೃಕೆಯಿಂದ ಪ್ರತಿಮಾಡಿಸುವವರು. ಪ್ರತಿಮಾಡುವವರು. ಕಾವ್ಯವನ್ನು ಹೇಳುವವರು. ಕೇಳುವವರು. ತಾತ್ಪರ್ಯವನ್ನು ವಿಸ್ತರಿಸಿ ಹೇಳುವವರು. ತಾತ್ಪರ್ಯವನ್ನು ತಿಳಿದವರು. ಅಧ್ಯಯನ ಮಾಡುವವರು. ನಿರಂತರವೂ ಕಾವ್ಯದ ಬಗೆಗೆ ಆಲೋಚನೆ ಮಾಡುವವರು. ಎದೆಯಂಗಳಲ್ಲಿ ಸೃಷ್ಟಿಸಿಕೊಳ್ಳುವವರು ಅರ್ಥಭಾವರಾಗರಸಭರಿತವಾಗಿ ಹಾಡುವವರು– ಇವರೆಲ್ಲರಿಂದಲೂ ಲೇಖನಾಭಿವೃದ್ಧಿ. ಇವರ ಜೊತೆಗೆ ನಾವೀಗ ಗ್ರಂಥಭಂಡಾರಿಯನ್ನೂ ಸೇರಿಸಬಹುದು.

ಇವರನ್ನು ನಮ್ಮ ಅನುಕೂಲಕ್ಕಾಗಿ. ೧. ಮೋಕ್ಷಾಪೇಕ್ಷಿಗಳು ಮತ್ತು ಅಭಿಮಾನಿಗಳು. ೨. ಪ್ರತಿಕಾರರು. ೩. ಗಮಕಿಗಳು. ೪. ಪುರಾಣಕಾರರು. ೫. ಪ್ರವಚನಕಾರರು. ೬. ಕೇಳಿಕೆಯವರು. ೭. ಉಪಾಧ್ಯರು ಮತ್ತು ವಿದ್ಯಾರ್ಥಿಗಳು. ೮. ಗ್ರಂಥಭಂಡಾರಗಳು ಎಂದು ಎಂಟು ಗುಂಪುಗಳನ್ನಾಗಿ ವಿಂಗಡಿಸಬಹುದು.

೧. ಮೋಕ್ಷಾಪೇಕ್ಷಿಗಳು ಮತ್ತು ಅಭಿಮಾನಿಗಳು

ವಿಶೇಷವಾಗಿ ಜೈನರಲ್ಲಿ. ಗ್ರಂಥದಾನಮಾಡುವುದು ಆಹಾರದಾನ ಅಭಯದಾನ ಭೈಷಜ್ಯ ದಾನಗಳಂತೆ ಒಂದು ಪುಣ್ಯಕಾರ್ಯವೆಂದು ಪರಿಗಣಿಸಲ್ಪಟ್ಟಿದೆ. ಇತರರಲ್ಲಿಯೂ ಈ ಬಗೆಯ ದಾನ ರೂಢಿಯಲ್ಲಿದೆ. ಇಲ್ಲಿ ಒಂದೆರಡು ಉದಾಹರಣೆಗಳು ಆವಶ್ಯಕ. 'ಶ್ರೀಮಲ್ಲಲಿತ ಕೀರ್ತಿಮಲಧಾರಿದೇವರ ಪ್ರಿಯಗುಡ್ಡ ಆಹಾರ ಅಭಯ ಭೈಷಜ್ಯ ಶಾಸ್ತ್ರದಾನದತ್ತಾವಧಾನನುಂ ......ಜಿನಮುನಿಪದಾಂಭೋಜಾತ ಭೃಂಗನುಮಪ್ಪ ಭಂಡಾರಿದೇವರು ಶೆಟ್ಟಿ ತನಗೆ ಕೇವಲ ಜ್ಞಾನ ಪರಿಪ್ರಾಪ್ತಿ ನಿಮಿತ್ತವಾಗಿ ಕಾರಕಳದ ಶಾಂತಿನಾಥಸ್ವಾಮಿಗಳ ಬಸ್ತಿಗೆ ಬರೆಸಿಕೊಟ್ಟ ಧರ್ಮನಾಥ ಪುರಾಣಕ್ಕೆ ಮಂಗಳಂ ಮಹಾ" ಬಾಹುಬಲಿ ಕವಿಯ ಧರ್ಮನಾಥ ಪುರಾಣದ ಒಂದು ಹಸ್ತಪ್ರತಿಯಲ್ಲಿ ಹೀಗಿದೆ. ಚಂದಾನಾಂಬಿಕೆಯ ಕಥೆಯ ಅಂತ್ಯದಲ್ಲಿ– 'ಅಗಳಿ ಪಾಯಣ್ಣಗಳು ಬರೆದ ಚಂದನೆ ಕಥೆ ...ಶ್ರೀ ಹೇವಿಳಂಬಿ ಸಂವತ್ಸರ ಭಾದ್ರಪದ ಶುದ್ಧ ೧೩ಲೂ ದೊಡಶಾಮಿಗೆ ಶಾಸ್ತ್ರದಾನವಾಗಿ ಬರೆದು ಕೊಟ್ಟರು (ಮೈ. ಹ. ಸೂ–೧–೪೬೨).

'ದುಂದುಭಿ ಸಂವತ್ಸರದ ಪುಷ್ಯ ಶುದ್ಧವು ಗುರುವಾರದ ದಿವಸ ವಡೇರ ಪಾಳ್ಯದ ಸಿದ್ಧನಂಜಯ್ಯನವರ ಕುಮಾರ ಶಿವಲಿಂಗಯ್ಯ ನಿಜಗುಣ ಸ್ವಾಮಿಯವರ ಪಾದಕ್ಕೆ ಒಪಿಸ್ತ. ಪರಮರಹಸ್ಯ' (ಮೈಹಸೂ ೨–೮೫೩).

'ಸರ್ವಾಚಾರ ಸಂಪನ್ನ ಏಕಲಿಂಗನಿಷ್ಠಾಪರ. ವೀರಶೈವ ಸಂಪನ್ನ, ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತರಾದ ವಿರಕ್ತ ಸಿದ್ಧಲಿಂಗದೇವರಿಗೆ ಹದಿನಾಡ ಎಳವಂದೂರು ಅರಸು ಚೆನ್ನೊಡೆಯರು ಈ ಶೂನ್ಯಸಂಪಾದನೆಯ ವಚನ ಸಂಗ್ರಹವನು ಬರಿಸಿ ಶಿವಾರ್ಪಿತವಾಗಿ ನಮಸ್ಕರಿಸಿದರು' (ಕಶಾಗ್ರಂ. ಪು.೧೦).

—ಹೀಗೆ. ಸಾವಿರಾರು ಜನ ಮೋಕ್ಷಾಪೇಕ್ಷಿಗಳೂ ಸಾಹಿತ್ಯಾಭಿಮಾನಿಗಳೂ ಹಸ್ತಪ್ರತಿಗಳನ್ನು ಬರೆದು. ಅಥವಾ ಬರೆಸಿ ಹಂಚುವುದರ ಮೂಲಕ ಸಾಹಿತ್ಯ ಧರ್ಮಗಳನ್ನು ಪ್ರಸಾರ ಮಾಡಿದರು. ಇದೇ ಉದ್ದೇಶವಿಟ್ಟುಕೊಂಡು ಹಸ್ತ ಪ್ರತಿಗಳನ್ನು ಹೆಚ್ಚಿಸಿದವರಲ್ಲಿ ಅಗ್ರಗಣ್ಯ ಗುಜರಾತಿನ ದೊರೆಯಾಗಿದ್ದ ಜಯಸಿಂಹ ಸದ್ಧರಾಜ. ಈತನ ಸಂಸ್ಕೃತಿ ಸಂವರ್ಧನಾಕಾರ್ಯವನ್ನು ಕುರಿತು ಬೇರೆಡೆಯಲ್ಲಿ ಹೇಳಿದೆ.[೧] ಆತನಿಗಿಂತ ಮೊದಲೇ ಕರ್ನಾಟಕದಲ್ಲಿ ಅಂತಹ ಒಂದು ವಿದ್ಯಾಪ್ರಸಾರ ಕಾರ್ಯ ದಾನ ಚಿಂತಾಮಣಿ ಅತ್ತಿಮಬ್ಬೆಯಿಂದ ನಡೆಯಿತು. ಆಕೆಯು ಕವಿಚಕ್ರವರ್ತಿ ರನ್ನನಿಂದ 'ಅಜಿತ ತೀರ್ಥಂಕರ ಪುರಾಣ ತಿಲಕ'ವನ್ನು ಬರೆಯಿಸಿದ್ದು ಒಂದು: ತನ್ನ ತಂದೆಯು ಪೊನ್ನ ಕವಿಯಿಂದ ಬರೆಯಿಸಿದ್ದ 'ಶಾಂತಪುರಾಣ'ದ ಸಾವಿರ ಪ್ರತಿಗಳನ್ನು ಬರೆಸಿ ಅವನ್ನು ಸತ್ಪಾತ್ರರಿಗೆ ದಾನಮಾಡಿದ್ದು ಇನ್ನೊಂದು– ಇವೆರಡು ಕನ್ನಡ ಸಾಹಿತ್ಯದ

---

* ಎಂ. ಎಂ. ಕಲಬುರ್ಗಿ, ಕಶಾಗ್ರಂ, ಪು ೧೦

ಇತಿಹಾಸದಲ್ಲಿ ಅವಿಸ್ಮರಣೀಯ ಸಂಗತಿಗಳು. 'ಶಾಂತಿಪುರಾಣ'ದ ಪ್ರತಿಗಳನ್ನು ಹೆಚ್ಚಿಸಿರುವುದನ್ನು ನೆನೆದು, ಕವಿಯೊಬ್ಬನು, 'ಸಹಸ್ರ ಪುಸ್ತಕ ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆವೇ ಟ್ದಿ ಪೆಂಪು ಅಸದಳಂ, ಅದ್ವಿತೀಯಂ, ಅಸಮಂ, ಸಲೆಭಾವಿಸಲ್ ಎಯ್ದೆ ಬಣ್ಣಿಸಲ್' ಎಂದು ಉದ್ಗಾರವೆತ್ತಿದ್ದಾನೆ.

ಮಲ್ಲಣಾರ್ಯನು ತನ್ನ ವೀರಶೈವಾಮೃತ ಮಹಾಪುರಾಣದಲ್ಲಿ ವಚನಸಾಹಿತ್ಯ ಸಂಗ್ರಹ ಸಂರಕ್ಷಣೆಗಳ ಬಗೆಗೆ ಕೆಲವೊಂದು ಸುಳಿವುಗಳನ್ನು ನೀಡುತ್ತಾನೆ. ಶರಣನು ಈತನ ಕಾವ್ಯ ರಚನಾಕಾರ್ಯವನ್ನು ಪ್ರಶಂಸೆಮಾಡುತ್ತ, 'ಪೂರ್ವದಲ್ಲಿ ಲಕ್ಕಣ್ಣ ದಣ್ಣಾಯಕರು, ಭಂಡಾರಿ ಜಕ್ಕಪ್ಪ ಕಲ್ಲೆಹದ ಕೇತಿಸೆಟ್ಟಿ ಇವರುಗಳು ಲಕ್ಷ ಸಂಖೆಯ ವಿತ್ತಮಂ ವೆಚ್ಚಿಸುತ್ತಾ ಮಾಡಿದರೆಂಬುದು ಹೆಚ್ಚಲ್ಲ; ನಿಸ್ಪೃಹನಾಗಿ ಈ ಕಾವ್ಯಮಂ ಮಾಡಿ ಸಕಲ ಮಾಹೇಶ್ವರರ ಕೃಪೆಗೆ ಪಾತ್ರವಾದ ಮಲ್ಲಣಾರ್ಯನ ಭಾಗ್ಯಕ್ಕೆ ಎಣೆಯುಂಟೆ' ಎಂದರೆನ್ನುತ್ತಾನೆ.

ಭಂಡಾರಿ ಜಕ್ಕಪ್ಪ, ಕಲ್ಲೆಹದ ಕೇತಿಸೆಟ್ಟಿ ಲಕ್ಕಣ್ಣದಂಡೇಶ– ಇವರು, ಲಕ್ಷ ಸಂಖ್ಯೆಯ ವಿತ್ತಮಂ ವೆಚ್ಚಿಸುತ್ತ ಮಾಡಿದುದು ಏನು? ಇದರಲ್ಲಿ ಇಬ್ಬರ ಕಾಲವಂತೂ ಖಚಿತವಾಗಿ ಗೊತ್ತಾಗಿದೆ. ಭಂಡಾರಿ ಜಕ್ಕಪ್ಪನು ಏಕೋತ್ತರ ಶತಸ್ಥಲ ಪ್ರಭುದೇವರ ಟೀಕಿನ ವಚನಗಳು–ಎಂಬ ಗ್ರಂಥಗಳನ್ನು ರಚಿಸಿದ ಮಹಾಲಿಂಗದೇವನ ಶಿಷ್ಯ. ಈತನು ಕ್ರಿ. ಶ. ೧೩೫೦ರ ಸುಮಾರಿನಲ್ಲಿದ್ದವನು. ಕಲ್ಲೆಹದ ಕೇತಿಸೆಟ್ಟಿಯ ಹೆಸರು ಲಕ್ಕಣ್ಣದಂಡೇಶನ ನೂತನಗಣಂಗಳ ಪಟ್ಟಿಯಲ್ಲಿ ಸೇರಿರುವುದರಿಂದ ಆತನೂ ೧೪೦೦ರ ಸುಮಾರಿನಲ್ಲಿಯೇ ಇದ್ದವನು, ಆತ ಕವಿಯಂತೂ ಅಲ್ಲ. ಈ ಮೂವರಲ್ಲಿ ಲಕ್ಕಣ್ಣನೊಬ್ಬನೇ ಕವಿ. ಈ ಮೂವರೂ ಕನ್ನಡನಾಡಿನಲ್ಲೆಲ್ಲಾ ಚದುರಿ ಚಲ್ಲಿ ಹೋಗಿದ್ದ ವಚನಗಳನ್ನು ಸಂಗ್ರಹಿಸುವವರಿಗೂ ಪ್ರತಿಮಾಡುವವರಿಗೂ ಸಂಕಲನಕಾರರಿಗೂ ವರ್ಗೀಕರಿಸುವವರಿಗೂ ಸಂವಾದರೂಪದಲ್ಲಿ ಜೋಡಿಸುವವರಿಗೂ ಅಪಾರ ಹಣವನ್ನು ವೆಚ್ಚಮಾಡಿದ ಸಂಗತಿಯು ನಾಡಿನಲ್ಲೆಲ್ಲ ಹರಡಿ ಗುಬ್ಬಿಯ ಮಲ್ಲಣಾರ್ಯನ ಬಾಯಿಂದ ಆ ರೂಪದಲ್ಲಿ ಬಂದಿರಬೇಕೆಂದು ಊಹಿಸಬಹುದು. ಭಂಡಾರಿ ಜಕ್ಕಪ್ಪನು ಮಹಾಲಿಂಗದೇವನ ಶಿಷ್ಯನೆಂಬುದಂತೂ ನಮಗೆ ತಿಳಿದೇ ಇದೆ. ತೋಂಟದ ಸಿದ್ಧಲಿಂಗರೂ ಅವರ ಬಳಗದವರೂ ಇದೇ ಮಂಗಳಕರ ಮಣಿಹವನ್ನು ಮುಂದುವರಿಸಿದರೆಂದು ಊಹಿಸಬಹುದು.

ಅಲ್ಲಿಂದ ಈಚೆಗೆ, ಈಗ್ಗೆ ಸುಮಾರು ಇನ್ನೂರೈವತ್ತು ವರ್ಷಗಳ ಹಿಂದೆ ಮಲೆನಾಡಿನ ಬಿದನೂರಿನಲ್ಲಿ ಕಲ್ಯಾಣಪಟ್ಟಣದ ಗಣಪರ್ವವನ್ನೇ ಹೋಲುವ ಒಂದು ಸಮಾರಂಭ ನಡೆಯಿತು, ಆಗ ದೊರೆಯಾಗಿದ್ದವರು ಎರಡನೆಯ ಬಸವಪ್ಪನಾಯಕ. ಆತನು 'ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ಮೂರ್ತಿಗಳ್ಗೆ... ಸಂತುಷ್ಟಿವಡಿಸಿವರ್ಗೆ ನಾನಾವಿಧ ವಿಚಿತ್ರತರ ವಸ್ತ್ರ ಕಂಬಳಿ ಕಂಥೆ... ಆಗಮ ಶಿವಶಾಸ್ತ್ರಲಿಖಿತ

ಪುಸ್ತಕ… ಕೊಡಿಸಿ ಪೇಟೆಯಲ್ಲಿ ಆರಾಧನಾಪೂರ್ವಕಂ ಮಹೋತ್ಸವ ಮೆರವಣಿಗೆಗಳಂ ಮಾಡಿಸಿ ಶಾಶ್ವತ ಧರ್ಮಕೀರ್ತಿಗಳಂ ಸಂಪಾದಿಸಿ ರಾಜ್ಯಂಗೆಯ್ಯುತಿರ್ದಂ' ಎಂದಿದ್ದಾನೆ ಲಿಂಗಣ್ಣ ಕವಿ, ಕೆಳದಿ ನೃಪವಿಜಯದಲ್ಲಿ 'ಆಗಮ ಶಾಸ್ತ್ರಲಿಖಿತ ಪುಸ್ತಕ'ಗಳನ್ನು ಕೊಟ್ಟುದು ವೀರಶೈವರಲ್ಲಿಯೂ ಗ್ರಂಥದಾನ ಪದ್ಧತಿ ಇದ್ದಿತೆಂಬುದಕ್ಕೆ ಸಾಕ್ಷಿ. ದಾನವಿತ್ತ ಪುಸ್ತಕಗಳಲ್ಲಿ ಶರಣಲೀಲಾಮೃತವೂ ಒಂದು ಎಂಬುದು ಆ ಕೃತಿಯ ಹಸ್ತಪ್ರತಿಯೊಂದರಿಂದ ಗೊತ್ತಾಗುತ್ತದೆ'.

೨. ಪ್ರತಿಕಾರರು

ಮೂಲ ಪ್ರತಿಯನ್ನು ಎಂದರೆ ಕವಿಯೇ ಬರೆದ ಅಥವಾ ಹೇಳಿ ಬರೆಯಿಸಿದ ಪ್ರತಿಯಿಂದ 'ಮಕ್ಕೀ ಕಾ ಮಕ್ಕಿ'ಯಾಗಿ ನಕಲು ಮಾಡುವವರಿವರು. ಇವರಿಗೆ ಲಿಪಿಕಾರರೆಂದೂ ಕರೆಯುವುದುಂಟು. ಅಸಿ ಕೃಷಿ ವಾಣಿಜ್ಯಗಳಂತೆ ಮಸಿ, ಎಂದರೆ ಲೇಖನ ಮಾಡುವಿಕೆಯೂ ಒಂದು ಕಾಯಕ. ಈ ವರ್ಗಕ್ಕೆ ಸೇರಿದವರು, ನಿಯುಕ್ತ ಪ್ರತಿಕಾರರು. ಹವ್ಯಾಸಿ ಲಿಪಿಕಾರರು– ಎಲ್ಲರು ಸೇರಿಯೆ ನಮ್ಮ ಸಂಸ್ಕೃತಿಯ ಕಣಜವನ್ನು ಕಾಪಾಡಿಕೊಂಡು ಬಂದಿದ್ದಾರೆ.

ಮೂಲಕೃತಿಯನ್ನು ರಚಿಸುವಾಗ ಕೃತಿಕಾರನೂ ಪ್ರತಿಕಾರನೂ ಪ್ರತಿಕಾರನೇ. ಆದರೆ ಬೇರೆಯವರ ಕೃತಿಯನ್ನು ಪ್ರತಿಮಾಡಿದ ಕವಿಗಳೂ ಉಂಟು.

'ಶ್ರೀ ವಿಜಯಾಭ್ಯುದಯ ಸಾಲಿವಾಹನ ಶಕವರುಷ ೧೫೩೮ನೆಯ ನಳ ಸಂವತ್ಸರದ ಮಾಘ ಬಹುಳ ೧೪ಯು ಸೋಮವಾರದಲ್ಲೂ ಗೂಳೂರ ಸಿದ್ದವೀರಣ್ಣೊಡೆಯ ದೇವರಿಗೆ ನಂದಿಯಪ್ರರದ ಪರ್ವತದೇವರ ಶಿಷ್ಯರು ತೋಟದ ದೇವರು ಲೇಖನ ಮಾಡಿದ ಪ್ರಭು ದೇವರ ಶೂನ್ಯ ಸಂಪಾದನೆ' ಎಂದಿದೆ ಒಂದು ತಾಳೆಯೋಲೆಯ ಪ್ರತಿಯ ಅಂತ್ಯದಲ್ಲಿ, ಪ್ರತಿಕಾರನು ಸಿದ್ಧೇಶ್ವರ ಪುರಾಣವೇ ಮೊದಲಾದ ಕೃತಿಗಳನ್ನು ರಚಿಸಿದ ವಿರಕ್ತ ತೋಂಟದಾರ್ಯ.[೧]

ಈ ವರೆಗೆ ಬೇರೆ ಬೇರೆ ಸಂಸ್ಥೆಗಳಿಂದ ಪ್ರಕಟವಾಗಿರುವ ಕನ್ನಡ ಕೈಬರಹಗಳ 'ವರ್ಣನಾತ್ಮಕ ಸೂಚಿ'ಗಳನ್ನು ಪರಿಶೀಲಿಸಿದರೆ ಹಸ್ತಪ್ರತಿಗಳನ್ನು ಹೆಚ್ಚಿಸುವಲ್ಲಿ ಕಸಬುಗಾರರಾದ ಲಿಪಿಕಾರರು, ಉಪಾಧ್ಯರು ಸೇನಬೋವರು ಪ್ರಧಾನ ಪಾತ್ರ ವಹಿಸಿರುವರೆಂಬುದೂ ಅವರ ಜೊತೆಗೆ ಅನೇಕ ಸಂತರು ಸ್ವಾಮಿಗಳು ಮಠಾಧೀಶರು ಅರಸರು ವರ್ತಕರು. ವೈದ್ಯರು. ಜೋಯಿಸರು. ಒಕ್ಕಲಿಗರು. ವೇಶ್ಯೆಯರು. ಹೇಳಿಕೆಯವರು. ಗಮಕಿಗಳು. ವಾದಿ ವಾಗ್ಮಿಗಳು. ಪುರಾಣಕಾರರು. ಕೀರ್ತನಕಾರರು. ಕವಿಗಳೂ ಕೂಡ ಹಸ್ತಪ್ರತಿಗಳನ್ನು ಮಾಡಿದ್ದಾರೆ ಇಲ್ಲವೆ ಮಾಡಿಸಿದ್ದಾರೆ ಎಂಬ ಅಂಶವೂ ಹೊರಪಡುತ್ತದೆ.

---

೧ ಬೆಂಗಳೂರು ಕನ್ನಡ ಅಧ್ಯಯನ ಕೇಂದ್ರದಲ್ಲಿರುವ ಶ್ರೀ ಎಸ್. ಶಿವಣ್ಣ ಅವರು ತಿಳಿಸಿದ್ದು

೩. ಗಮಕಿಗಳು :

ರಾಜರ ಆಸ್ಥಾನದಲ್ಲಿ ಕವಿ ಗಮಕಿ ಇಬ್ಬರಿಗೂ ಸ್ಥಾನವಿರುತ್ತಿದ್ದಿತು. ಹಂಪೆಯ ಹರಿಹರ ದೇವನು ಗಿರಿಜಕಲ್ಯಾಣದಲ್ಲಿ ಪರ್ವತರಾಜನ ಆಸ್ಥಾನವನ್ನು ವರ್ಣಿಸುತ್ತ, 'ಮತ್ತಮಾರಭಟಿಯೊಳ್ ದೆಖ್ಖಾಳಂ ಮಿಕ್ಕು, ಸಾತ್ವತಿಯೊಳ್ ಪಜ್ಜಳಂಬೆತ್ತು ಭಾರತಿಯೊಳ್ ಕಾಂತಿ ಕಯ್ಗಣ್ಮೆ ಆ ಸ್ಥಾನಮಂ ಕಾತುಕ ರಸದೊಳ್ ಕರುವಿಟ್ಟಂತಿರಿಸುವ ಸಾಮರ್ಥಮನೊಳ್ಕೊಂಡು ಕುಳ್ಳಿರ್ಪ ಗಮಕಿಗಳು ಎಂದು ಇವರನ್ನು ವರ್ಣಿಸಿದ್ದಾನೆ.

ಗೋವಿಂದ ವೈದ್ಯನು ಕಂಠೀರವನರಸ ರಾಜೇಂದ್ರನ ಆ ಸ್ಥಾನವನ್ನು ಹಂಪೆಯ ರಾಘವಾಂಕ ಪಂಡಿತನು ಮಹಾಕವಿಯಾಗಿದ್ದನಲ್ಲದೆ ಒಳ್ಳೆಯ ಗಮಕಿಯೂ ಆಗಿದ್ದ. ಹರಿಶ್ಚಂದ್ರ ಕಾವ್ಯಾರಂಭದಲ್ಲಿಯೇ 'ಕೇಳ್ದಿನ್ನ ಕಾವ್ಯಾರ್ಥಮಂ ಕಿವಿಯ ಸೆರಗುಗಳಲಿ ತಳೆದ ಕವಿಗಳ ಗಮಕಿಗಳ ವಾದಿಗಳ ವಾಗ್ಮಿಗಳ ರಸಾವೇಶಿಗಳ ತಲೆದೂಗಿಸುವೆ' ಎಂದು ಭರವಸೆ ಕೊಟ್ಟಿದ್ದಾನೆ. ಚಿಕ್ಕನಂಜೇಶನ' ರಾಘವಾಂಕ ಚಾರಿತ್ರ'ದಲ್ಲಿ ಈ ಅಂಶ ಇನ್ನಷ್ಟು ಪ್ರಕಟವಾಗಿಯೇ ಕಾಣಿಸಿಕೊಳ್ಳುತ್ತದೆ.

ಭರತ ಪುರಾಣ ನಾಟಕ ನೀತಿ ಶಾಸ್ತ್ರ ಬಂ
ಧುರವಹ ತರ್ಕಶಬ್ದಗಳ
ನೆರೆದು ನಿರ್ಣೈಸಿ ತೋರಿಸುವ ವಿದ್ವಾಂಸರ
ಪರಿವಿಡಿ ಮೇರೆದುದೇನೆಂಬೆ ೮–೩೫
ಭಾರತ ರಾಮಾಯಣ ಪುಣ್ಯ ಕಥೆಯ ವಿ
ಸ್ತಾರವ ಗಾನರಸದಲಿ
ಸಾರತರದೆ ನಲಿದೋದಿ ಮೆರೆವಚೆಲ್ವ
ಭಾರತಿಗಳು ರಾಜಿಸಿದರು ೮–೩೬

—ಹೀಗೆಂದಿರುವನು. ಗಮಕಿಗಳಿಗೆ ಭಾರತಿಗಳು ಎಂದೂ ಕರೆಯುತ್ತಿದುದು ಇದರಿಂದ ವ್ಯಕ್ತವಾಗುತ್ತದೆ. ಈ ಕೃತಿಯ ಒಂದು ಹಸ್ತಪ್ರತಿಯ ಅಂತ್ಯದಲ್ಲಿ. 'ರಂಗನಾಥ ಸ್ವಾಮಿಯ ಕೃಪೆಯಿಂದ ಶ್ರೀನಿವಾಸ ಪಂಡಿತರ ಮಗ ಗೋವಿಂದ ವೈದ್ಯನು ಕಂಠೀರವ ನರಸರಾಜ ವಿಜಯಮಂ ವಿರಚಿಸಿ ಆ ಚಂದ್ರಾರ್ಕವಾಗಿ ಭೂಮಿಯೊಳಿರಲಿ ಎಂದು ಭಾರತಿನಂಜನ ಮುಖದಿಂದ ವಾಚಿಸಿ ವಿಸ್ತಾರಪಡಿಸಿದುದು– ಈ ಮಾತುಗಳಿವೆ.

ಕವಿಯು ತನ್ನ ಕೃತಿಯನ್ನು ಅದರ ಕಥಾನಾಯಕನ ಎದುರಿಗೇ ಭಾರತಿನಂಜ ಎಂಬ ಗಮಕಿಯಿಂದ ಓದಿಸಿದ ಸ್ವಾರಸ್ಯಕರ ಸಂಗತಿ ಇಲ್ಲಿದೆ. ಇಂತಹುದೇ ಇನ್ನೊಂದು ಸಂಗತಿ. 'ಸೇವಂತಿಕಾ ಪರಿಣಯ' ಎಂಬ ಸಂಸ್ಕೃತ ನಾಟಕ. ಅದರ ನಾಯಕ ಕೆಳದಿಯ ಬಸವಭೂಪಾಲ. ನಾಟಕಕಾರ ಅವನ ಆಸ್ಥಾನದಲ್ಲಿದ್ದ ಚೊಕ್ಕನಾಥ. ಕಥಾನಾಯಕನ ಸಮ್ಮುಖದಲ್ಲಿಯೇ ಈ ನಾಟಕವನ್ನು ಪ್ರದರ್ಶಿಸಲಾಯಿತು. ನಮ್ಮ

ದೊರೆಗಳು ವೀರರೂ ಉದಾರಿಗಳೂ ವಿವೇಕಿಗಳೂ ಆಗಿದ್ದಂತೆ ರಸಿಕರೂ ಆಗಿದ್ದ ರೆಂಬುದಕ್ಕೆ ಇನ್ನೇನು ಪ್ರಮಾಣ ಬೇಕು ?

ಆದುದರಿಂದ ಹಂಪೆಯ ರಾಘವಾಂಕ ಪಂಡಿತ, ಅಲ್ಲಯ್ಯ 'ಓದುವಗಿರಿಯ' ಭಾರತಿ ನಂಜ ಭಾರತಿ ಅಯ್ಯಣ್ಣ– ಇವರು ನಮಗೆ ಗೊತ್ತಿರುವ ಗಮಕಿಗಳು ಎನ್ನ ಬಹುದು. ಸಾಹಿತ್ಯ ಪ್ರಚಾರ ಕಾರ್ಯದಲ್ಲಿ ಇವರದು ಮಹತ್ವದ ಪಾತ್ರ ಎಂಬುದ ರಲ್ಲಿ ಸಂದೇಹವಿಲ್ಲ.

೪. ಪುರಾಣಕಾರರು :

ಪುರಾಣವನ್ನು 'ಇಡಿಸುವ' ಪದ್ಧತಿ ಬಹುಹಿಂದಿನಿಂದಲೂ ಬಂದುದು, ಬಾಣ ಕವಿಯ ಕಾದಂಬರಿಯಲ್ಲಿಯೇ ಪುರಾಣಪಠಣದ ಪ್ರಸಂಗವಿದೆ. ಈಗಲೂ ಅನೇಕ ಹಳ್ಳಿ ಗಳಲ್ಲಿ ಪುರಾಣ ಹೇಳಿಸುವುದು ರೂಢಿಯಲ್ಲಿದೆ. ಅದುವೆ ಶ್ರಾವಣ ಮಾಸದಲ್ಲಿ, ತೊರವೆ ರಾಮಾಯಣ, ಗದುಗಿನ ಭಾರತ, ಪ್ರಭುಲಿಂಗಲೀಲೆ, ಜೈಮಿನೀ ಭಾರತ, ಬಸವ ಪುರಾಣ, ಶರಣಲೀಲಾಮೃತ ಮುಂತಾದ ಕಾವ್ಯಗಳನ್ನು ಓದಿಸುವುದು, ಓದಿಸಿ ವ್ಯಾಖ್ಯಾನ ಮಾಡಿಸುವುದು ಉಂಟು. ಜೈನರ ಮಠಗಳಲ್ಲಿಯೂ ಮಂದಿರಗಳಲ್ಲಿಯೂ ಪುರಾಣ ಪ್ರವಚನದ ಪರಿಪಾಠವಿದೆ. ಕೆಲವು ಹಳ್ಳಿಗಳಲ್ಲಿ ಮಳೆ ಬರಲೆಂದು 'ರೇವಣ ಸಾಂಗತ್ಯ' ಓದಿಸುವುದು, ಅಮಂಗಲ ಪರಿಹಾರವಾಗಲೆಂದು ಶನಿಮಹಾತ್ಮೆ ಓದಿಸುವುದು ವಾಡಿಕೆ, ರಾಘವಾಂಕನೇ ಹೇಳುತ್ತಾನೆ, 'ಕಾವ್ಯಮಂ ಪೇಳ್ದ ದೆಸೆಯಿಂ ಧರೆಯೊಳು ಸುವೃಷ್ಟಿ ಸುಫಲಂ ಕ್ಷೇಮ ಧಾನ್ಯಮಂ (ಶ್ರೀ ವಿರೂಪಾಕ್ಷನು) ಕರುಣಿಸುಗೆ ಎಂದು.

ಪುಲಿಗೆರೆಯ ಮಾಯಿದೇವ ಪುರಾಣ ಭಟ್ಟ, ಉದಯಗಿರಿಯ ಬಸವ ಪೌರಾಣದ ರಾಮಯ್ಯ, ಬಸವ ಪೌರಾಣದ (ಗುಬ್ಬಿಯ) ಮಲ್ಲಣಾರ್ಯ, ಪುಲಿಗೆರೆಯ ಮಾಯಿ ದೇವ ಭಟ್ಟ ಮುಂತಾದವರು ಪುರಾಣ ಪ್ರವಚನದಲ್ಲಿ ಪ್ರವೀಣರಾಗಿದ್ದು ಅದನ್ನೇ ತಮ್ಮ ಕಾಯಕವನ್ನಾಗಿ ಮಾಡಿಕೊಂಡಿದ್ದವರು. ಇವರೂ ಸಹ ಸಾಹಿತ್ಯ ಪ್ರಚಾರ ಕಾರ್ಯದಲ್ಲಿ ಗಮಕಿಗಳಷ್ಟೇ ಮುಖ್ಯರು.

೫. ಪ್ರವಚನಕಾರರು :

ಪುರಾಣ ಪ್ರವಚನಕಾರರಿಗೂ ಪ್ರವಚನಕಾರರಿಗೂ ವ್ಯತ್ಯಾಸವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ವೇಳೆ ಪುರಾಣ ಹೇಳುವವರೇ ಆಯಾ ಪದ್ಯಗಳ ತಾತ್ಪರ್ಯವನ್ನು ಹೇಳುವುದುಂಟು, ಈಗಲೂ. ಪ್ರವಚನ ಮಾಡುವವರಾದರೋ ನಿಜವಾದ ಕಳಾವಿದರಾಗಿರಬೇಕು, ತತ್ವಾರ್ಥಸಂಪನ್ನರಾಗಿರಬೇಕು. ಪದ್ಯದ ತಾತ್ಪರ್ಯ ವನ್ನು ವಿಸ್ತರಿಸಿ ನಿದರ್ಶನಗಳನ್ನೂ ಕೊಟ್ಟು ಪುಷ್ಟೀಕರಿಸಬಲ್ಲವರಾಗಿರಬೇಕು. ಕವಿ, ಗಮಕಿಗಳಿಂದ ಭಿನ್ನರಾದ ವಾಗ್ಮಿಗಳು ಅವರು. ಇಂಥವರನ್ನು 'ಸೂಕ್ತಿ ಸುಧಾರ್ಣವ. ದಲ್ಲಿ 'ಮಾತಿನ ಬಲ್ಮೆಯಿಂ ಸಭೆಗೆ ರಂಜಿಪ ವಾಗ್ಮಿಗಳ್' ಎಂದು ಕರೆದಿದೆ: ಹರಿಹರನು

'ಮಧುರ ರಸಮೊಸರ್ವ ಪೊಸನುಡಿಗಳಂ ಕೇಳ್ವ, ಸಭೆಗೆ ಕರ್ಣರಸಾಯನಮಪ್ಪಿವ ಮಾಧುರ್ಯಗುಣಂ ಮೆಯ್ಯಿಕ್ಕಿರ್ದ ವಾಗ್ಮಿಗಳ್' ಎನ್ನುತ್ತಾನೆ. ಆದರೂ ವಚನಗಳಿಗೆ ಟೀಕು ಬರೆದಿರುವವರನ್ನೂ 'ಗಟ್ಟಿಪದ'ಗಳಿಗೂ ಬೆಡಗಿನ ವಚನಗಳಿಗೂ ಅರ್ಥ ಬರೆದಿರುವವರನ್ನೂ ಇದೇ ಶಿರೋನಾಮೆಯಡಿ ಸೇರಿಸಿದೆ. ವಚನಗಾಯಕರ ಬೊಮ್ಮಣ್ಣ, ವಿಮಲಾದೇವಿ, ಪ್ರಭುದೇವರ ವಚನಗಳಿಗೆ ಟೀಕು ಬರೆದಿರುವ ಮಹಾಲಿಂಗದೇವ, ಬೆಡಗಿನ ವಚನಗಳಿಗೂ ಇತರ ವಚನಗಳಿಗೂ ವ್ಯಾಖ್ಯಾನ ಮಾಡಿರುವ ಟೀಕಾಕಾರರು, ಏಕೋತ್ತರ ಶತಸ್ಥಲ (ಸಟೀಕು) ಬರೆದಿರುವ. ಜಕ್ಕಣಾರ್ಯ. ಶ್ರೀಗಿರೀಂದ್ರ, ಮಗ್ಗೆಯ ಮಾಯಿದೇವರ ಶತಕತ್ರಯಕ್ಕೆ ಟೀಕು ಬರೆದಿರುವ ವಿರಕ್ತ ತೋಂಟದಾರ್ಯ—ಇವರೆಲ್ಲರನ್ನೂ ಈ ಗುಂಪಿಗೆ ಸೇರಿಸಬಹುದು.

ಬೆಡಗಿನ ವಚನಗಳಿಗೂ ಇತರ ಪದ್ಯಕಾವ್ಯಗಳಿಗೂ ಟೀಕು ಬರೆಯುವವರಿಲ್ಲದಿದ್ದರೆ ಈಗ ಉಳಿದಷ್ಟು ಸಾಹಿತ್ಯವೂ ಉಳಿಯುತ್ತಿರಲಿಲ್ಲ.

೬. ಕೇಳಿಕೆಯವರು :

ಕೇಳಿಕೆಯ ಮಹಾದೇವಿ ಎಂಬ ಹೆಸರನ್ನು ಗಮನಿಸಿ 'ಕೇಳಿಕೆಯವರು' ಎಂಬುದೊಂದು ವರ್ಗವಿರಬೇಕೆಂದು ತಿಳಿದು ಈ ಶಿರೋನಾಮೆಯನ್ನು ಬಳಸಲಾಗಿದೆ. ಕೇಳಿಕೆ ಎಂಬುದು ಒಂದಲ್ಲ, ಎರಡೋ ಮೂರೋ ಕಲೆಗಳ ಸಂಗಮ ಎಂದೆನ್ನಿಸುತ್ತದೆ. ಜನ್ನನ 'ಯಶೋಧರ ಚರಿತೆ'ಯಲ್ಲಿ 'ಕೇಳಿಕೆಯಾದೊಡನೆ ನೋಡುತ್ತಿರ್ದನ್' ಎಂಬ ವಾಕ್ಯವಿದೆ. ಇದೊಂದೇ ಪ್ರಯೋಗವನ್ನು ಎದುರಿಗಿಟ್ಟುಕೊಂಡು ಅರ್ಥೈಸಹೋದರೆ. ಕಣ್ಣಿನಿಂದ ನೋಡಿ ರಸಾನುಭವ ಪಡೆಯುವ ಕಲೆ ಎಂದು ತಿಳಿಯಬೇಕಾಗುತ್ತದೆ. ಪದ್ಮರಾಜಪುರಾಣ (೯–೩೭) ದಲ್ಲಿ 'ತಾಳಲಯ ಸಂಗೀತವಾದ್ಯ ಯತಿಗಳ ಗತಿಗೆ ಪಾಳಿದಪ್ಪದೆ ನರ್ತನಂಗೆಯ್ದು ಕೇಳಿಸುವ ಕೇಳಿಕೆ' ಎಂಬ ಪ್ರಯೋಗವಿದೆ. ಯಾವುದಾದರೊಂದು ಕಥೆಯನ್ನೋ ಪ್ರಸಂಗವನ್ನೋ ಗೀತವನ್ನೊ ವಚನವನ್ನೊ ಸಂಗೀತ ಶಾಸ್ತ್ರಾನುಸಾರವಾಗಿ ಹಾಡುತ್ತ ನರ್ತಿಸುವುದು ಎಂದಾಯಿತು ತಾನೆ ಇದರ ಅರ್ಥ ನಾಟ್ಯ ಸಂಗೀತ ಸಾಹಿತ್ಯ ನಾಟ್ಯಗಳ ತ್ರಿವೇಣಿ ಸಂಗಮವೇ ಕೇಳಿಕೆ ಎಂದು ಈಗ ದೃಢಪಟ್ಟಂತಾಯಿತು.

ಹರಿಹರದೇವರ 'ಬಸವರಾಜ ದೇವರ ರಗಳೆ'ಯಲ್ಲಿ ಕೇಳಿಕೆ ಎಂಬ ಮಾತು ಎರಡು ಕಡೆ ಬಂದಿದೆ.

ಮೊದಲ ಸಲ—

ನೆರೆದು ಬಹುವಿಧವಾದ್ಯವಡಸಿ ನೆಱೆ ಮೊಳಗಿದವು
ಧಿಮಿ ಧಿಮಿಕು ದುಮುಕು ತತ್ತೊಂಗೆಂಬ ಮದ್ದಳೆಯ
ನಡುವೆ ಕೇಳಿಸುವ ಕೇಳಿಕೆಯವರ ಸಂಗಡದ

—೧೧ನೇ ಸ್ಥಲ

ಎರಡನೆ ಸಲ—

'ಅತ್ತಲು ಕಳಿಂಗದೇಶದ ಮಹದೇವಿಸೆಟ್ಟಿಯರೊಂದುದಿನಂ...... ಸುಖಿವಿರ್ಪ ಸಮಯದೊಳು ಓರ್ವ ಮಾಹೇಶ್ವರಂ ಪುರಾತನ ವಿರಚಿತ ಗದ್ಯಪದ್ಯಂಗಳಂ ಕೇಳಿ ಸುತ್ತಂ ಬಸವರಾಜನ ಗೀತದೊಳು– ಬೇಡಿ ಬೇಡಿದ ಶರಣಂಗೆ ನೀಡದಿರ್ದಡೆ ತಲೆ ದಂಡ ಕೂಡಲಸಂಗ ಅಪಥಾರು– ಎಂಬ ಗೀತಮಂ ಪಾಡೆ'

—೧೨ನೆಯ ಸ್ಥಲ

ಇವಲ್ಲದೆ ಚಿಕ್ಕನಂಜೇಶನ 'ರಾಘವಾಂಕ ಚಾರಿತ್ರ'ದಲ್ಲಿ ಜಂಗಮನೊಬ್ಬನು ಬೇಲೂರಿಗೆ ಹೋಗಿ ಹೊಯ್ಸಳ ರಾಯನಲ್ಲಿ ಮಂತ್ರಿಯಾಗಿದ್ದ ಕೆರೆಯ ಪದ್ಮರಸಮಂತ್ರಿಗೆ ಸಿದ್ಧರಾಮ ಚಾರಿತ್ರವನ್ನು 'ಕೇಳಿಸಿ'ದನು ಎಂದಿದೆ.

ಈ ಮೂರೂ ಪ್ರಯೋಗಗಳನ್ನೂ ಓಂದೆ ಹೇಳಿದ ಎರಡು ಪ್ರಯೋಗಗಳನ್ನೂ ಪರಿಶೀಲಿಸಿದರೆ ನಾಟ್ಯಸಹಿತವಾಗಿ ಇಲ್ಲವೆ, ನಾಟ್ಯವಿಲ್ಲದೆಯೆ ಶರಣಕಥಾ ಪ್ರಸಂಗಗಳನ್ನೋ ವಚನಗಳನ್ನೋ ಪುರಾತನ ವಿರಚಿತ ಗದ್ಯಪದ್ಯಗಳನ್ನೋ ಸಂಗೀತ ವಾದ್ಯತಾಳಲಯ ಸಮನ್ವಿತವಾಗಿ ಹಾಡುತ್ತಿದ್ದ ಕಲೆಗಾರರಿಗೆ ಕೇಳಿಕೆಯವರು ಎಂದು ಕರೆಯುತ್ತಿದ್ದ ರೆಂಬುದು ವ್ಯಕ್ತವಾಗುತ್ತದೆ. ಕೇಳಿಕೆಯ ಕಲೆಯಲ್ಲಿ ಬಲ್ಲಿದರಾದ ಮಾಹೇಶ್ವರರು ಕರ್ನಾಟಕದಲ್ಲಿಯೂ ನೆರೆಯ ನಾಡುಗಳಾದ ಆಂಧ್ರ ಕಳಿಂಗ ದೇಶಗಳಲ್ಲಿಯೂ ಸಂಚಾರ ಮಾಡುತ್ತ ಕೇಳಿಕೆಯ ಕಲೆಯ ಮೂಲಕ ಗ್ರಂಥ ಪ್ರಸಾರ ಮತ್ತು ಗ್ರಂಥ ಮಾರಾಟ ಕಾರ್ಯಗಳನ್ನು ಮಾಡುತ್ತಿದ್ದಿರಬೇಕೆಂದು ತೋರುತ್ತದೆ. ಇದರ ಪರಿಣಾಮವಾಗಿ ಹೆಚ್ಚು ಹೆಚ್ಚು ಹಸ್ತ ಪ್ರತಿಗಳು ಹುಟ್ಟಿಕೊಂಡಿರಬೇಕು.

೭. ಉಪಾಧ್ಯರು ಮತ್ತು ಕಲಿಯುವವರು :

ಪ್ರಾಚೀನ ಕರ್ನಾಟಕದಲ್ಲಿ ಅನೇಕ ವಿದ್ಯಾಕೇಂದ್ರಗಳಿದ್ದುವು. ಇವುಗಳಲ್ಲಿ ಮುಖ್ಯವಾದುವು ಬಳ್ಳಿಗಾವೆಯ ಕೋಡಿಮಠ ನಾಗಾವಿಯ ಘಟಿಕಾಸ್ಥಾನ. ಹಲವು ಸ್ಥಳಗಳಲ್ಲಿ ಬ್ರಹ್ಮಪುರಿಗಳೂ ಅಗ್ರಹಾರಗಳೂ ಇದ್ದುವು. ಆದರೆ ಅವುಗಳಲ್ಲೊಂದರಲ್ಲೂ ಕನ್ನಡ ಅಧ್ಯಯನಕ್ಕೆ ಅವಕಾಶವಿರಲಿಲ್ಲ. ಈ ಎಲ್ಲಾ ವಿದ್ಯಾಕೇಂದ್ರಗಳಲ್ಲಿಯೂ ಸಂಸ್ಕೃತ ಭಾಷೆಯೇ ಶಿಕ್ಷಣ ಮಾಧ್ಯಮ. ತಾಳಗುಂದ ಅಗ್ರಹಾರವೊಂದರಲ್ಲಿ ಕನ್ನಡ ಭಾಷಾ ಸಾಹಿತ್ಯಗಳ ವ್ಯಾಸಂಗಕ್ಕೆ ಅವಕಾಶವಿದ್ದಿತೆಂದು ಗೊತ್ತಾಗುತ್ತದೆ. ಒಬ್ಬ 'ಕನ್ನಡುಪಾಧ್ಯ'ನಿಗೆ ದತ್ತಿಯಿತ್ತಿರುವುದರ ಉಲ್ಲೇಖ ಅಲ್ಲಿಯ ಒಂದು ಶಾಸನದಲ್ಲಿ ಬರುತ್ತದೆ. ಅವನ ಸಂಬಳ ತಿಂಗಳಿಗೆ (?) ಒಂದು ಗದ್ಯಾಣ, ಅಷ್ಟೆ. ತುಮಕೂರು ಜಿಲ್ಲೆಯ ಸೆಟ್ಟಿಕೆರೆ ಎಂಬ ಗ್ರಾಮದಲ್ಲಿ ಪುರಾಣ ಪ್ರವಚನ ಮಾಡುತ್ತಿದ್ದ ಭಟ್ಟರೇ ಬಿಡುವಿನ ವೇಳೆಯಲ್ಲಿ ಮಕ್ಕಳಿಗೆ ಓದು ಬರಹ ಕಲಿಸುತ್ತಿದ್ದರೆಂದು ಅರಸೀಕೆರೆಯ ಸಮೀಪದ ನರಸಿಂಹಪುರ ಎಂಬ ಅಗ್ರಹಾರದಲ್ಲಿ 'ಕರ್ನಾಟಕ ಬಾಲಶಿಕ್ಷೆ'ಗೆ ಮಾಡಿದ್ದ ಏರ್ಪಾಡು ಉಲ್ಲೇಖನೀಯವಾದುದು. ಅದನ್ನು ಸ್ಥಾಪಿಸಿದವನು ಎರೆಯಪ್ಪ ಹೆಗ್ಗಡೆ ಎಂಬ

ವನು (೧೧೭೪). ಬೋಳೆಯ ಸೋವಿಯಣ್ಣ ಆ ಶಾಲೆಯ ಉಪಾಧ್ಯಾಯ ಸಂಬಳ ತಿಂಗಳಿಗೆ (?) ಎರಡು ಗದ್ಯಾಣ. ಹುಡುಗರ ಸಂಖ್ಯೆ ೨೦. ಅವರಿಗಾಗಿ ಅಡಿಗೆ ಮಾಡಲು ಒಬ್ಬ ಹೆಣ್ಣು ಮಗಳನ್ನು ನೇಮಿಸಲಾಗಿತ್ತು. ಆಕೆಯ ಸಂಬಳ ತಿಂಗಳಿಗೆ ಮೂರು ಗದ್ಯಾಣ. ಎಲೆಯ ಪುರಬಳ್ಳಿ (ಹುಬ್ಬಳ್ಳಿ) ಯ ಮುಖ್ಯಸ್ಥರೂ ನವಿಲೂರಿನ ಕುರುಬ ಶ್ರೇಣಿಗರೂ ಸೇರಿ ಉಣಕಲ್ಲಿನ ದೇವಸ್ಥಾನದ ಆವರಣದಲ್ಲಿ ಒಂದು ಕನ್ನಡ ಶಾಲೆಯನ್ನು ಕಟ್ಟಿಸಿದ್ದರು. ಅದರ ಉದ್ದ ೨೬ ಹಸ್ತ. ಅಗಲ ೨೧ ಹಸ್ತ. ಬಿಜಾಪುರ ಜಿಲ್ಲೆಯ ಮೇತುಂಗಿ ಎಂಬಲ್ಲಿ ಹೊಯ್ಸಳ ಮಂತ್ರಿ ಪೆರುಮಾಳ್ ಎಂಬುವನಿಂದ ೧೨೯೦ರಲ್ಲಿ ಒಂದು ಮಹಾಪಾಠಶಾಲೆ ಸ್ಥಾಪಿತವಾಗಿದ್ದಿತು. ಅಲ್ಲಿ ಸಂಸ್ಕೃತ ಕನ್ನಡ ಮತ್ತು ಮರಾಠಿಗಳ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗಿದ್ದಿತು.[1]

ಹೀಗೆ ಕರ್ನಾಟಕದ ಮುಖ್ಯ ಪಟ್ಟಣಗಳಲ್ಲಿ. ದೊಡ್ಡ ದೊಡ್ಡ ಗ್ರಾಮಗಳಲ್ಲಿ. ಸಾಂಸ್ಕೃತಿಕ ಕೇಂದ್ರಗಳಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೂ ಜನತಾ ವಿದ್ಯಾಲಯಗಳಿದ್ದುವು. ಕನ್ನಡದಲ್ಲಿ ಗ್ರಂಥರಚನೆ ಮಾಡಿರುವ ಮತ್ತು ಹಸ್ತಪ್ರತಿಗಳನ್ನು ಹೆಚ್ಚಿಸಿರುವ ಕವಿಗಳೂ ವಿದ್ವಾಂಸರೂ ಶಾಸ್ತ್ರಜ್ಞರೂ ಹಸ್ತಪ್ರತಿ ಲೇಖಕರೂ ಇಂತಹ ಮಠಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಉಪಕೃತರಾಗಿರುವರು.

ಎಂಟುನೂರು ವರ್ಷಗಳ ಹಿಂದೆ, ೧೨ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಸರ್ವೋದಯ ಚಳವಳಿಯು ಕನ್ನಡ ಭಾಷಾ ಸಾಹಿತ್ಯಗಳ ಸರ್ವಾಂಗೀನ ಉನ್ನತಿಗೆ ಅಭೂತಪೂರ್ವವಾದ ಪ್ರಚೋದನೆಯನ್ನೂ ಪ್ರೋತ್ಸಾಹವನ್ನೂ ಕೊಟ್ಟಿತು. ನೂರಾರು ಜನ ಶರಣ ಶರಣೆಯರು. ಅಚ್ಚಗನ್ನಡದಲ್ಲಿ ವಚನಗಳನ್ನು ಬರೆದರು, ಹಾಡುಗಳನ್ನು ಕಟ್ಟಿದರು; ಕನ್ನಡದಲ್ಲಿ ಪ್ರವಚನ ಮಾಡಲು ಆರಂಭಿಸಿದರು. ಕನ್ನಡಕ್ಕೆ ನವಚೇತನ ಮೂಡಿತು. ನಾಡಿನ ಮೂಲೆ ಮೂಲೆಯಲ್ಲಿಯೂ ಹೆಣ್ಣು, ಗಂಡುಗಳಲ್ಲಿ ನವಜಾಗೃತಿ ಉಂಟಾಯಿತು. ಅಲ್ಲಿಂದ ಈಚೆಗೆ ಹುಟ್ಟಿದ ವೀರಶೈವ ಮಠಗಳು ವಚನಗಳನ್ನೂ ಹಾಡುಗಳನ್ನೂ, ಕಾವ್ಯಗಳನ್ನೂ ಹೆಚ್ಚು ಪ್ರಚಾರಕ್ಕೆ ತಂದುವು. ಶರಣ ಸಾಹಿತ್ಯ ಸರ್ವತೋಮುಖವಾಗಿ ಬೆಳೆಯತೊಡಗಿತು. ಇತರ ಮತೀಯರು ಕೂಡ ವೀರಶೈವರ ಸಾಹಿತ್ಯ ರಚನಾ ಮಾರ್ಗವನ್ನು ನೋಡಿಕೊಂಡು ಕನ್ನಡ ಸಾಹಿತ್ಯವನ್ನು ಬೆಳೆಸಿದರು. ಕನ್ನಡ ಹಸ್ತಪ್ರತಿಗಳನ್ನು ಹೆಚ್ಚಿಸಿದರು. ಇದೆಲ್ಲದರ ಪರಿಣಾಮವಾಗಿ ಕನ್ನಡ ಶಾಲೆಗಳನ್ನೂ ಇನ್ನೂ ಹೆಚ್ಚು ಸಂಖೆಯಲ್ಲಿ ಹುಟ್ಟಿ ಬೆಳೆದುವು.

ಕೂಲಿಮಠ. ಸಾಲಿಮಠ. ಓದಿಸುವ ಮಠ. ಶಬ್ದಮಣಿದರ್ಪಣ ಮಠ. ಟೀಕಿನ ಮಠ ಟಿಪ್ಪಣಿ ಮಠ. ಸಂಪಾದನೆಯ ಮಠಗಳನ್ನು ಈಗಲೂ ಹುಬ್ಬಳ್ಳಿ. ಜಮಖಂಡಿ. ಅಬ್ಬಿಗೇರಿ ಮುಂತಾದ ಕಡೆಗಳಲ್ಲಿ ನೋಡಬಹುದು ಎನ್ನುತ್ತಾರೆ ಡಾ॥ ಗದ್ದಗೀಮಠ ಅವರು. ಇವುಗಳಲ್ಲಿ ಅಕ್ಷರ ವಿದ್ಯೆಯನ್ನಲ್ಲದೆ ಬೇರೆ ಬೇರೆ ಕಸಬುಗಳನ್ನೂ ಹೇಳಿ

1 Karnataka Through the ages, P. 345, 346

ಕೊಡುತ್ತಿದ್ದರು. ಎಲ್ಲಾ ಜಾತಿಯ ಎಲ್ಲಾ ಪಂಥದ ವಿದ್ಯಾರ್ಥಿಗಳಿಗೂ ಇಲ್ಲಿ ಅವಕಾಶವಿದ್ದಿತು.

'ಶಿವತತ್ತ್ವ ಚಿಂತಾಮಣಿ'ಯಲ್ಲಿ ಹೆಸರಿಸಿರುವ ನೂತನ ಪುರಾತನರಲ್ಲಿ ಮಾಪಿನ ಹಳ್ಳಿಯ ಚೌಕಪ್ಪ, ತೆರಕಣಬೆ ರಾಮಯ್ಯ, ವಿಲ್ಲೂರು ವೀರಣಯ್ಯ ಜನ್ನಾಗರದ ಹಿರಿಯಣ್ಣ ಇವರದು ಓದಿಸುವ ಕಾಯಕ. 'ಯಾದವ ಕಟಕಾಚಾರ್ಯನಾಗಿದ್ದ ಕವಿ ಸುಮನೋ ಬಾಣ, ಜನ್ನ ಕವಿಯ ಪತ್ನಿಯ ಗುರುವಾಗಿದ್ದ ಬಾಲಚಂದ್ರ ಕವಿ ಕಂದರ್ಪ, 'ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮ, ರಾಘವಾಂಕನಿಗೆ ಸಕಲ ಸದ್ವಿದ್ಯೆಗಳನ್ನೂ ಅನಂತ ವಾತ್ಸಲ್ಯದಿಂದ ಧಾರೆಯೆರೆದ ಹಂಪೆಯ ಹರಿಹರ ದೇವ, ಜಕ್ಕಣಾಚಾರ್ಯನಿಗೆ ಷಟ್‌ಸ್ಥಲ ಸಿದ್ಧಾಂತವನ್ನು ಬೋಧಿಸಿದ ಮಹಾಲಿಂಗ ದೇವ–ಹೀಗೆಯೇ ಪಟ್ಟಿಯನ್ನು ಬೆಳೆಸಿಕೊಂಡು ಹೋಗಬಹುದು. ಇವರೆಲ್ಲ ಉಪಾಧ್ಯಾಯರು; ಕಾವ್ಯರಚನೆ ಮಾಡಿದ್ದಾರೆ. ಇಲ್ಲವೆ ಕಾವ್ಯಗಳ ನಕಲುಗಳನ್ನೆತ್ತಿ ಹಸ್ತಪ್ರತಿಗಳ ಸಂಖ್ಯೆಯನ್ನು ಬೆಳೆಸಿದ್ದಾರೆ. ಇವರಿಗೆ ಐಗಳು, ಓದಿಸುವವರು, ಬರೆಸುವವರು, ಸಾಲಿಯವರು ಎಂಬ ಹೆಸರುಗಳೂ ಉಂಟು.

ಉಪಾಧ್ಯಾಯರು ಮುದ್ರಣ ಸೌಕರ್ಯವಿಲ್ಲದ ಆ ಕಾಲದಲ್ಲಿ ತಾವು ಹೇಳಿಕೊಡಬೇಕಾದ ಕಾವ್ಯವನ್ನೋ ಶಾಸ್ತ್ರವನ್ನೋ ತಾವೇ ಪ್ರತಿಮಾಡಿಕೊಳ್ಳಬೇಕಾಗಿದ್ದಿತು, ಇಲ್ಲವೆ, ಪ್ರತಿಕಾರರಿಂದ ಮಾಡಿಸಿಟ್ಟುಕೊಳ್ಳಬೇಕಾಗಿತ್ತು. ವಿದ್ಯಾರ್ಥಿಗಳಾದರೂ ತಾವು ವ್ಯಾಸಂಗಮಾಡುವ ಕೃತಿಯನ್ನು ತಾವೇ ಕೈಯಿಂದ ಬರೆದುಕೊಳ್ಳಬೇಕಾಗಿದ್ದಿತು.

ಬೆಂಗಳೂರು 'ಜ್ಞಾನಭಾರತಿ'ಯ ಕನ್ನಡ ಅಧ್ಯಯನ ಕೇಂದ್ರದಲ್ಲಿರುವ ಒಂದು ಹಸ್ತಪ್ರತಿಯ (ಕೆ. ೨೧೭/೫) ಅಂತ್ಯದಲ್ಲಿ 'ಯಾದವ ಕಟಕಾಚಾರ್ಯ ಸುಕವಿ ಸುಮನೋಬಾಣ ಜಾಮಾತೃ ಪರಮಚಿದಾನಂದ ಮಲ್ಲಿಕಾರ್ಜುನ ಮಹಾಕವೀಶ್ವರ ಸಂಯೋಜಿತಮಪ್ಪ ಸೂಕ್ತಿ ಸುಧಾರ್ಣವದೊಳ್ ಪಾಠಪ್ರವಚನೋಚಿತ ಸಂಕೋಚ ಮಾತ್ರ ಲೇಖನೀ ಕೃತಮಪ್ಪ ಪದ್ಯಸಾರದೊಳ್...... ಅದಿಕಾಂ'– ಈ ಪದಗಳಿವೆ. 'ಪಾಠ ಪ್ರವಚನೋಚಿತ' ಎಂಬ ಮಾತು ಇಲ್ಲಿ ಗಮನಾರ್ಹವಾದುದು. ಇದು ಉಪಾಧ್ಯಾಯರೊಬ್ಬರು ಬರೆದುಕೊಂಡ ಹಸ್ತಪ್ರತಿಯ ಮಾದರಿ ಎನ್ನಬಹುದು.

ವಿದ್ಯಾರ್ಥಿಗಳ ಕೈಬರವಣಿಗೆಗಳು ಹೇಗಿರುತ್ತವೆ ಎಂಬುದಕ್ಕೆ 'ಶಬ್ದಮಣಿ ದರ್ಪಣ'ದ ಕೆಲವು ಹಸ್ತಪ್ರತಿಗಳನ್ನು ತೋರಿಸಬಹುದು. ಅವುಗಳ ಮುಖ್ಯ ಲಕ್ಷಣಗಳು : ರಕ್ಷಣೆಗಾಗಿ ಹಾಕಿರುವ ಮರದ ಪಟ್ಟಿಕೆಗಳು ಸಾಧಾರಣವಾಗಿ ಲಕ್ಷಣವಾಗಿರುವುದಿಲ್ಲ; ಗರಿಗಳ ಎರಡು ಮುಖಗಳಲ್ಲಿಯೂ ಬರವಣಿಗೆಯಿರುವುದಿಲ್ಲ; ಅಕ್ಷರಗಳ ಗಾತ್ರ ಒಂದೇ ಸಮನಾಗಿರುವುದಿಲ್ಲ; ಪ್ರತಿಯ ಅಂತ್ಯದಲ್ಲಿ ಅದನ್ನು ಮಾಡಿದವರು ಯಾರು ? ಯಾವಾಗ ಮಾಡಿದ್ದು ಎಂಬುದರ ಸೂಚನೆ ಇರುವುದಿಲ್ಲ. ದೊ. ಲ.

ನರಸಿಂಹಾಚಾರ್ಯರು ಇದೇ ಕೃತಿಯ ಕೆಲವು 'ವಿದ್ಯಾರ್ಥಿ' "ವಿದ್ಯಾರ್ಥಿಪ್ರತಿ"ಗಳನ್ನು ಗುರುತಿಸಿದ್ದಾರೆ.[೧] ಇದೇ ವರ್ಗಕ್ಕೆ ಸೇರಿದ ಮತ್ತೆ ಕೆಲವು: 'ಬಾಲಶಿಕ್ಷೆ'.[೨] 'ಗಣಿತ ಮುಗ್ಗಿ ಲೆಕ್ಕ'[೩] 'ಗಣಿತವಿಲಾಸ'[೪] ಇತ್ಯಾದಿ. ಹೇಗೇ ಆಗಲಿ, ಅಂದಿನ ವಿದ್ಯಾರ್ಥಿಗಳು ಕೂಡ ಕನ್ನಡ ಕೈಬರವಣಿಗೆಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ.

೮. ಗ್ರಂಥ ಭಂಡಾರಗಳು

ಪ್ರಾಚೀನ ಭಾರತದಲ್ಲಿ ಈಗಿರುವಂತೆ ಸಾರ್ವಜನಿಕ ಗ್ರಂಥಭಂಡಾರಗಳಿರಲಿಲ್ಲ. ಇವು ಈಗ ಮಾಡುತ್ತಿರುವ ಮಣಿಹವನ್ನು ಅಂದು ಮಠ ಮಂದಿರ ಬಸತಿ. ಮಹಾಮನೆ ಅರಮನೆಗಳು ಮಾಡುತ್ತಿದ್ದುವು. ಅಂತಹ ಕಡೆಗಳಲ್ಲಿ ಅನ್ನದಾಸೋಹವಲ್ಲದೆ ಜ್ಞಾನದಾಸೋಹವೂ ಅನುದಿನವೂ ನಡೆಯುತ್ತಿದ್ದಿತು, ಪುರಾಣಪಠನ. ಕೀರ್ತನೆ. ಕೇಳಿಕೆ ಮುಂತಾದುವು ನಡೆಯುತ್ತಿದ್ದುವು, ಈ ಸಂಸ್ಥೆಗಳಲ್ಲಲ್ಲದೆ ಸಾಹಿತ್ಯಾಭಿಮಾನಿಗಳಾದ ಅಧಿಕಾರಿಗಳ ಮನೆಗಳಲ್ಲಿಯೂ ಶ್ರೀಮಂತರ ಮನೆಗಳಲ್ಲಿಯೂ ಸಾಹಿತ್ಯ ಸಂಸ್ಕೃತಿ ಸಂವರ್ಧನಾ ಕಾರ್ಯಕ್ಕಾಗಿಯೇ ಲೇಖಕ ವಾಚಕ ವಾದಿ ವಾಗ್ಮಿಗಳ ಬಳಗವೇ ಇರುತ್ತಿದ್ದಿತು. ಮತ್ತು ಇಂತಹ ಕಡೆಗಳಲ್ಲಿ ಪುಸ್ತಕ ಭಂಡಾರಗಳಿಗಾಗಿ ಪ್ರತ್ಯೇಕ ಮಹಲುಗಳೇ ಇರುತ್ತಿದ್ದುವು. ಇವುಗಳಿಗೆ ಸರಸ್ವತೀ ಭಂಡಾರವೆಂತಲೋ ಶ್ರುತಭಂಡಾರವೆಂತಲೋ ವಚನ ಭಂಡಾರವೆಂತಲೋ ಕರೆಯುತ್ತಿದ್ದರು.

ಕನ್ನಡ ಸರಸ್ವತೀ ಭಂಡಾರವನ್ನು ಕುರಿತು ವಿವೇಚಿಸುವ ಮುನ್ನ ಏಕೈಕ ಗ್ರಂಥ ಬಸ್ತಿಯನ್ನು ಕಟ್ಟಿಸಿದ ಸಂಗತಿಯನ್ನು ಇಲ್ಲಿ ಹೇಳುವುದು ಉಚಿತವೆನ್ನಿಸುತ್ತದೆ.

ಸಿಕ್‌ಮತೀಯರು ತಮ್ಮ ಗುರು 'ಗ್ರಂಥಸಾಹಿಬ್'ಗಾಗಿ ಅಮೃತಸರದಲ್ಲಿ ಒಂದು ಭವ್ಯಮಂದಿರವನ್ನು ಕಟ್ಟಿಸಿರುವರಷ್ಟೆ. ಆ ಗ್ರಂಥ ಹುಟ್ಟುವುದಕ್ಕೆ ನೂರಾರು ವರ್ಷಗಳ ಹಿಂದೆಯೇ ಕನ್ನಡನಾಡಿನಲ್ಲಿ ಒಂದು ಭವ್ಯವಾದ ಬಸತಿ ನಿರ್ಮಾಣವಾಯಿತು. ಮೂಡುಬಿದಿರೆಯಲ್ಲಿ. ಧವಲ. ಜಯಧವಲ. ಮಹಾಧವಲ ಎಂಬುವು ಜೈನ ಸಿದ್ಧಾಂತವನ್ನೊಳಕೊಂಡ ಗ್ರಂಥಗಳು. ಆ ಪರಮ ಪೂಜ್ಯ ಕೃತಿಗಳು ಓಲೆಗರಿಗಳ ಮೇಲೆ ಬಹುಶಃ ಅರಗಿನ ಮಸಿಯನ್ನು ಬಳಸಿ ಲೇಖನಿಯಲ್ಲಿ (ಕಂಠದಲ್ಲಲ್ಲ) ಬರೆದುವಾಗಿವೆ. ಭಾಷೆ ಬಹುಪಾಲು ಅರ್ಧಮಾಗಧಿ: ಲಿಪಿ ಕನ್ನಡ. ಈ ಹಸ್ತಪ್ರತಿಗಳಲ್ಲಿ ಕ್ರಮವಾಗಿ ೭೭೭. ೫೦೮. ೨೧೯ ಓಲೆಗಳಿವೆ. ಒಂದೊಂದು ಗರಿಯೂ ಸುಮಾರು ೩೫ ಅಂಗುಲ ಉದ್ದ. ಮೂರಂಗಲು ಅಗಲ. ಇದರ ರಚನಾಕಾಲ ಸುಮಾರು ೧೧ನೇ ಶತಮಾನ ಚಾವುಂಡರಾಯನ ಗುರು ನೇಮಿಚಂದ್ರ ಸಿದ್ಧಾಂತಿಗಳು 'ಇಂತು ಮಹಾಧವಲ ಸಿದ್ಧಾಂತಮಂ ರಚಿಸಿರ್ದ ಪುಸ್ತಕಂಗಳಂ ರಕ್ಷಿಸಲು ಸಿದ್ಧಾಂತ ಬಸ್ತಿಯಂ ಮಾಡಿಸಿ ಅಲ್ಲಿ

---

೧ ಶಬ್ದಮಣಿದರ್ಪಣ ಪ್ರಸ್ತಾವನೆ. ಪು. ೧೨. ೧೩. ೨. ಮೈಹಸೂ. ಸಂ. ೬.
೩. ಅದೇ, ಸಂ. ೫

ಸ್ಥಾಪಿಸಿ ಪೂಜಿಸುತ್ತಂ' ಎಂಬ ದೇವಚಂದ್ರನ ಹೇಳಿಕೆಯಿಂದ ೧೦ನೆಯ ಶತಮಾನದಲ್ಲಿ ಈ ಗ್ರಂಥಗಳು ಶ್ರವಣಬೆಳ್ಗೊಳದಿಂದ[೧] ಮೂಡಬಿದರೆಗೆ ಸಾಗಿಸಲ್ಪಟ್ಟುವೆಂದು ಊಹಿಸಬಹುದಾಗಿದೆ- ಎನ್ನುತ್ತಾರೆ ಡಾ. ಎಂ.ಎಂ. ಕಲಬುರ್ಗಿ ಪ್ರೊ॥ ಕೆ. ಜಿ. ಕುಂದಣಗಾರರು 'ಸೇನಗಣದ ಪೀಳಿಗೆಗೆ ಸೇರಿದ ವೀರಸೇನಾಚಾರ್ಯರು ಷಟ್ಖಂಡಾಗಮಕ್ಕೆ ತಮ್ಮ 'ಧವಲಾ' ವ್ಯಾಖ್ಯಾನವನ್ನು ಕರ್ನಾಡದಲ್ಲಿ ಮುಗಿಸಿದಂತೆಯೂ ಆ ತರುವಾಯ ಆ ಪೂಜ್ಯ ಗ್ರಂಥವನ್ನು ಶ್ರುತಪಂಚಮಿಯದಿನ ಪೂಜಿಸಿ ಕೊಲ್ಲಾಪುರದಲ್ಲಿ ಒಂದು ಬಸ್ತಿಯನ್ನು ಕಟ್ಟಿಸಿ ಅಲ್ಲಿ ಅದನ್ನು ಇರಿಸಿದಂತೆಯೂ ಆ ಬಸ್ತಿಗೆ ಸಿದ್ಧಾಂತ ಬಸ್ತಿ ಎಂದು ಈಗಲೂ ಹೆಸರಿದ್ದಂತೆಯೂ ಪರಂಪರಾಗತವಾದ ದಂತಕಥೆಯೊಂದಿದೆ. ಆ ಬಸ್ತಿಯು ಮಂಗಳವಾರ ಪೇಟೆಯಲ್ಲಿದೆ. ಅದರ ಮುಖಮಂಟಪದ ಮೇಲ್ಕಟ್ಟಿನಲ್ಲಿ ಬಹು ಅಂದವಾದ. ಕೆತ್ತನೆಯ ಕೆಲಸಮಾಡಿದ ಕಮಲವು ಕೆಳಮೋರೆಯಾಗಿ ನಿಂತಿದೆ. ಅದರ ಸುತ್ತಲೂ ಎಪ್ಪತ್ತೆರಡು ತೀರ್ಥಂಕರರ ಬಿಂಬಗಳು ಪ್ರತಿಮಾಯೋಗದಲ್ಲಿವೆ. ಮಂಟಪದ ಮಧ್ಯದಲ್ಲಿ ಬಸವನ ಮೂರ್ತಿ ಇದೆ... ಗರ್ಭಗೃಹದಲ್ಲಿ ಧವಲಗ್ರಂಥಕ್ಕೆ ಪ್ರತಿಯಾಗಿ ಸೋಮೇಶರ ಲಿಂಗವಿದೆ. ಮಹಮ್ಮದೀಯರ ದೌಡಿನ ಅಂಜಿಕೆಯಿಂದ ಧವಲಗ್ರಂಥವನ್ನು ಮೂಡಬಿದಿರೆಗೆ ಸಾಗಿಸಿದಂತೆ ತಿಳಿದುಬಂದಿದೆ' ಎನ್ನುತ್ತಾರೆ.[೨]

ಯಾರ ಹೇಳಿಕೆಯನ್ನು ನಂಬಿದರೂ, ಧವಲಗ್ರಂಥವನ್ನಿರಿಸುವುದಕ್ಕಾಗಿಯೇ ಎರಡು ಕಡೆ ಬಸ್ತಿಯನ್ನು ಕಟ್ಟಿಸಿದರೆಂಬ ಅಭಿಪ್ರಾಯಕ್ಕೆ ಭಂಗವಿಲ್ಲ; ಭವ್ಯಮಹನೀಯರ ಗ್ರಂಥಸಂರಕ್ಷಣಾ ರೀತಿಯೂ ಭವ್ಯ. ಅಂತಹ ಒಂದು ಜಗತ್‌ಪೂಜ್ಯಗ್ರಂಥ ಮೂಡಬಿದರೆಯಲ್ಲಿರುವುದು ನಮ್ಮೆಲ್ಲರಿಗೂ ಅಭಿಮಾನಾಸ್ಪದ ಸಂಗತಿ.

ಆದರೆ ಕನ್ನಡ ಮಹಾಕವಿಯೊಬ್ಬನು ತನ್ನ ಪರಮಪೂಜ್ಯ ಕೃತಿಯೊಂದಕ್ಕೆ ಬಸತಿಯನ್ನು ನಿರ್ಮಿಸಿ ಅಲ್ಲಿ ಅದನ್ನು ಪ್ರತಿಷ್ಠಿಸಿರುವುದು ಕನ್ನಡಿಗರೆಲ್ಲರಿಗೂ ಮತ್ತೂ ಹೆಮ್ಮೆಯ ಸಂಗತಿ. ಜನ್ನ ಮಹಾಕವಿಯು ತನ್ನ ಅನಂತನಾಥ ಪುರಾಣಕ್ಕೆ ವಸತಿ ನಿರ್ಮಾಣ ಮಾಡಿದ ಸಂಗತಿಯನ್ನು ತಾನೆ ,

> ಪೊಸ ಚೈತ್ಯಂ ಗಂಡರಾದಿತ್ಯನ ಪೊಟಲೊಳನಂತಂಗೆ ಚೆಲ್ವಪ್ಪಿ ನಂ ಮಾ
> ಡಿಸಿ ನಾಂದೀ ಪದ್ಯಮಂ ಪರ್ಬಿಸಿ ಚರಿತಪುರಾಣಕ್ಕದಂ ವರ್ಷದೊಳ್ದೋ
> ರ ಸಮುದ್ರಂ ಮೆಚ್ಚೆ ತಾಂ ಮಾಡಿಸಿದ ಸೊಬಗ ಶಾಂತೀಶ್ವರಾ
> ವಾಸದೊಳ್ ಸ್ಥಾ
> ಪಿಸಿದಂ ಜನ್ನಂಗೆ ಸಲ್ಗುಂ ಕೃತಿವಸತಿಯ ನಿರ್ಮಾಣ ಪುಣ್ಯಪ್ರಭಾವಂ
> ೧೪-೮೨

ಎಂದೆನ್ನುತ್ತಾನೆ. ಆದರೆ ಅನಂತಪುರಾಣದ ಬಸದಿ ಎಲ್ಲಿದೆ ?

---

೧ ಕಶಾಗಂ; ಪು. ೧೫ ೨ ಕುಂದಣ ಪು. ೫೭, ೫೮.

ದೋರಸಮುದ್ರದೊಳ್ ವಿಜಯ ಪಾರ್ಶ್ವ ಜಿನೇಶ್ವರ ದಿವ್ಯಮಂದಿರ
ದ್ವಾರದ ಮುಂತೆ ಮಾಡಿಸಿದ ಶಾಂತಿ ಜಿನಾಲಯದೊಳ್ಳ ಮೇರುಮಂ
ದಾರದ ಕೊಂಬನರ್ತಿಯಿನಲುಂಬಿದ ಪೋಲ್ ಕವಿಭಾಳ ಲೋಚನಂ
ಧಾರಿಣಿಗಿಂತು ಮಾಡಿದನನಂತ ಪುರಾಣದ ಸುಪ್ರತಿಷ್ಠೆಯಂ.

ಪ್ರತಿಷ್ಠೆ ಮಾಡಿಸಿದ ಮುಹೂರ್ತವಿದು : 'ಶಕಸಂವತ್ಸರವೊಂದು ಸಾಸಿರದ ಮೂಜ್ಜೈವತ್ತೆರಪ್ಪಿಲ್ಲಿನಂ ವಿಕೃತಾಬ್ದಂ ಬರೆ ಚೈತ್ರ ಶುದ್ಧ ದಶಮಿ'ಯಂದು– ಎಂದರೆ ಕ್ರಿಸ್ತಶಕ ೧೨೩೦ರಲ್ಲಿ. ಅನಂತನಾಥನಿಗೆ ಗಂಡರಾದಿತ್ಯನ ಪಟ್ಟಣದಲ್ಲಿ (ಕೊಲ್ಲಾಪುರ) ಚೈತ್ಯವನ್ನು ನಿರ್ಮಿಸಿ ಅನಂತನಾಥನ ಪೌರಾಣಿಕ್ಕೆ ದ್ವಾರಸಮುದ್ರದಲ್ಲಿ ಒಂದು ಭಂಡಾರವನ್ನೆ ಮಾಡಿಸಿದ ಜನ್ನ ಕವಿಯು ನಿಜವಾಗಿಯೂ ಪುಣ್ಯವಂತ.

ಈ ಅಂಶವನ್ನು ಕವಿಚರಿತಕಾರರು ಸೂಚಿಸಿದ್ದಾರೆ. ಆದರೆ ಅದು ಯಾರ ಲಕ್ಷ್ಯವನ್ನೂ ಸೆಳೆಯಲಿಲ್ಲ. ಈಗಲಾದರೂ ಈ ಬಗೆಗೆ ಹೆಚ್ಚು ಪ್ರಚಾರ ಅಗತ್ಯ.

ಕನ್ನಡ ಗ್ರಂಥ ಭಂಡಾರಗಳು ಎಲ್ಲೆಲ್ಲಿದ್ದುವು ಹೇಗಿದ್ದುವು ಏನೇನು ಮಾಡುತ್ತಿದ್ದುವೆಂಬುದಕ್ಕೆ ಶಾಸನಾಧಾರಗಳಿಲ್ಲ. ಆದರೆ. ಜೈನರ ಶ್ರುತಭಂಡಾರಗಳು ಅಸ್ತಿತ್ವದಲ್ಲಿದ್ದುವೆಂಬುದಕ್ಕೆ ಈಗಲೂ ಗ್ರಂಥಸಂಗ್ರಹ ಗ್ರಂಥ ಸಂರಕ್ಷಣೆ ಮಾಡುತ್ತಲೂ ಗ್ರಂಥಪ್ರಚಾರ ಕಾರ್ಯಕ್ಕೆ ನೆರವೀಯುತ್ತಲೂ ಇರುವ ಭಂಡಾರಗಳೇ ಸಾಕ್ಷಿ. ಶ್ರವಣಬೆಳಗೊಳ. ಮೂಡುಬಿದರೆ. ಹೊಂಬುಚ. ವರಾಂಗ, ಕೊಲ್ಲಾಪುರಗಳಲ್ಲಿರುವ ಹಸ್ತಪ್ರತಿಭಂಡಾರಗಳು ನಿನ್ನೆ ಮೊನ್ನೆಯವಲ್ಲ ನೂರಾರು ವರ್ಷಗಳ ಹಿಂದಿನಿಂದಲೂ ಇದ್ದಂತಹುವು.

ಕವಿರಾಜಮಾರ್ಗ. ಛಂದೋಂಬುಧಿ. ಕಾವ್ಯಾವಲೋಕನ 'ಶಬ್ದಮಣಿದರ್ಪಣ' ಶಬ್ದಾನುಶಾಸನ. ಕನ್ನಡಕುವಲಯಾನಂದಗಳಂತಹ ಶಾಸ್ತ್ರ ಗ್ರಂಥಗಳನ್ನೂ ಸೂಕ್ತಿಸುಧಾರ್ಣವ. ಕಾವ್ಯಸಾರಗಳಂತಹ ಸಂಕಲನ ಗ್ರಂಥಗಳನ್ನೂ ಕರ್ಣಾಟಕ ಶಬ್ದಮಂಜರಿ ಮಂಗಾಭಿಧಾನ ಮುಂತಾದ ನಿಘಂಟುಗಳನ್ನೂ ಲೋಕೋಪಕಾರ. ಕಕ್ಕೋಕ. ಜಾತಕ ತಿಲಕ. ಕಲ್ಯಾಣಕಾರ ಕಂದಿ ಲೌಕಿಕಶಾಸ್ತ್ರಗಳನ್ನೂ ರಚಿಸುವುದು ಹಲವಾರು. ಕೆಲವು ಸಂದರ್ಭಗಳಲ್ಲಿ ನೂರಾರು ಆಕರಗ್ರಂಥಗಳಿಲ್ಲದಿದ್ದರೆ ಸಾಧ್ಯವಾಗುತ್ತಿದ್ದಿತೆ? ಈ ಗ್ರಂಥಕರ್ತರು ತಮ್ಮ ಸ್ವಂತದ. ಇಲ್ಲವೆ. ಮಠ ಮಂದಿರಗಳ. ಅರಮನೆಗಳ ಗ್ರಂಥ ಭಂಡಾರಗಳ ನೆರವನ್ನು ಪಡೆದಿರಲೇಬೇಕು.

ಕಲ್ಯಾಣನಗರದಲ್ಲಿ ಬಹುಶಃ ಬಸವಣ್ಣನವರ ಅರಮನೆಯಲ್ಲಿ ವಚನ ಭಂಡಾರ ವಿದ್ದಿತೆಂದು ಪಾಲ್ಕುರಿಕೆ ಸೋಮನಾಥನ ಹೇಳಿಕೆ. ಕಲ್ಯಾಣದ ವಚನಭಂಡಾರಿ ಶಾಂತರಸರು ಈ ಭಂಡಾರವನ್ನು ಆರಂಭಿಸಿ ಬೆಳೆಸಿರಬೇಕೆಂದು ತೋರುತ್ತದೆ. ಹರಿಹರದೇವನ 'ಬಸವರಾಜ ದೇವರ ರಗಳೆ'ಯಲ್ಲಿ,

ಬಸವನ ಗೀತವಂಬುಧಿ ಪರೀತ ಧರಾತಳದಲ್ಲಿ ಸಂದುದೆಂ
ದುಸಿರ್ವುದಿದಾವುದೊಂದರಿದು ಪನ್ನಗಲೋಕದ ದಾರವಟ್ಟದೊಳ್
ದೆಸೆಗಳ ಭಿತ್ತಿಯೊಳ್ ದಿಗಿಭದಂಗದೊಳಿಂದ್ರನ ಜಿಹ್ವೆಯೊಳ್ ಶಿವಾ
ವಸಥದ ಬಾಗಿಲಲ್ಲಿ ಬರೆದಿದಿಪ್ಪದದೆಂದೆನಲೊಪ್ಪ ದಿಪ್ಪುದೇ

—೧೧ನೆ ಸ್ಥಲ

ಬಸವಣ್ಣನವರ ವಚನಗಳು ಅವರ ಜೀವಿತ ಕಾಲದಲ್ಲಿಯೇ, ಕರ್ನಾಟಕದಲ್ಲಿ ಮಾತ್ರ ಅಲ್ಲ. ಭರತಖಂಡದ ನಾನಾ ದೇಶಗಳಲ್ಲಿಯೂ ಪ್ರಚುರಗೊಂಡಿದ್ದುವು ಎಂಬುದು ಈ ಪದ್ಯದ ತಿರುಳು. ಅದೇ ಕೃತಿಯಲ್ಲಿ ಬರುವ ಕಳಿಂಗ ದೇಶದ ಮಹದೇವಿಸೆಟ್ಟಿಯ ವೃತ್ತಾಂತವನ್ನೂ ಕಿನ್ನರಿ ಬೊಮ್ಮಿತಂದೆಯ ಕಥನವನ್ನೂ ನಾವಿಲ್ಲಿ ಸ್ಮರಿಸಿಕೊಳ್ಳಬಹುದು.

ಕಲ್ಯಾಣದ ವಚನಭಂಡಾರಿ ಶಾಂತರಸರ ಕೈಕೆಳಗೆ ಹಲವು ಜನ ಲಿಪಿಕಾರರಿದ್ದು, ಅನುಭಾವಗೋಷ್ಠಿಯಲ್ಲಿ ಶರಣರು ಆಡುತ್ತಿದ್ದ ಅಥವಾ ಹಾಡುತ್ತಿದ್ದ ವಚನಗಳನ್ನು ಬರೆದುಕೊಳ್ಳುತ್ತಿದ್ದಿರಬೇಕು. ಒಂದೇ ಮೂಲಮಾತೃಕೆಯಿಂದ ಹಲವು ಪ್ರತಿಗಳನ್ನು ಮಾಡಿಸಿ ಅವನ್ನು ದೇಶದ ಸಮಸ್ತ ಭಾಗಗಳಿಗೂ ಕಳಿಸಿಕೊಡುತ್ತಿದ್ದಿರಬೇಕು. ಕೇಳಿಕೆಯ ಕಲೆಯಲ್ಲಿ ನಿಪುಣರಾದ ಮಾಹೇಶ್ವರರು ವಚನ ಸಾಹಿತ್ಯವನ್ನು ಪ್ರಚಾರ ಮಾಡುತ್ತ. ಬಹುಶಃ ಅವುಗಳ ಹಸ್ತಪ್ರತಿಗಳನ್ನು ಮಾರಾಟಮಾಡುತ್ತ ಸಂಚಾರ ಮಾಡುತ್ತಿದ್ದಿರಬೇಕು. ಬಸವಣ್ಣನವರ ಮತ್ತು ಅವರ ಬಳಗದವರ ಹಸ್ತಪ್ರತಿಗಳ ಬಾಹುಳ್ಯವೂ ವ್ಯಾಪಕತೆಯೂ ಈ ಊಹೆಯನ್ನು ಬಲಪಡಿಸುತ್ತವೆ.

ಈಗ. ಶ್ರುತಭಂಡಾರಗಳಾಗಲಿ ಸರಸ್ವತೀ ಭಂಡಾರಗಳಾಗಲಿ ವಚನಭಂಡಾರವಾಗಲಿ ಹೇಗೆ ಅಭಿವೃದ್ಧಿಗೊಂಡುವು ಎಂಬ ಪ್ರಶ್ನೆ ಭಂಡಾರದಲ್ಲಿಲ್ಲದ ಕೃತಿಗಳ ಹಸ್ತಪ್ರತಿಗಳನ್ನು ಮಾಡಿಸಿತರಿಸುವುದು, ಸ್ಥಳೀಯ ಗ್ರಂಥಕರ್ತರ ಕೃತಿಗಳನ್ನು ಬೇರೆ ಭಂಡಾರಗಳಿಗೆ. ಸತ್ಪಾತ್ರರಿಗೆ ದಾನಮಾಡುವುದು. ಹಳೆಯವಾಗಿದ್ದು. ಉಪಯೋಗಿಸಲು ಬಾರದ ಪ್ರತಿಗಳಿಂದ ಹೊಸ ಪ್ರತಿಗಳನ್ನು ಮಾಡುವುದು. ಇವೆಲ್ಲ ಅಂದಿನ ಗ್ರಂಥಭಂಡಾರಗಳು ನಿರ್ವಹಿಸುತ್ತಿದ್ದ ಕಾರ್ಯಭಾರಗಳು. ಸಹಸ್ರಾರು ಹಸ್ತಪ್ರತಿಗಳ ಆದಿ ಅಂತ್ಯಗಳನ್ನು ವಿಚಿಕಿತ್ಸಕ ದೃಷ್ಟಿಯಿಂದ ಅಧ್ಯಯನ ಮಾಡಿದರೆ ಈ ಸತ್ಯಾಂಶ ಮನವರಿಕೆಯಾಗುತ್ತದೆ.

ಮುಗಿವು :

ಕನ್ನಡನಾಡಿನ ಗ್ರಂಥ ಭಂಡಾರ ಸುಜ್ಞಾನ ಭಂಡಾಗಾರ. ಅದರ ಐಶ್ವರ್ಯ ಅನಂತ ಅಪಾರ ಅಪ್ರಮೇಯ. ಈಗ ಉಪಲಬ್ಧವಿರುವ ಮತ್ತು ಇನ್ನೂ ಕತ್ತಲಲ್ಲಿಯೇ ಕೊಳೆಯುತ್ತಿರುವ ಕನ್ನಡ ಗ್ರಂಥರಾಶಿ ಕನ್ನಡಿಗರೆಲ್ಲರೂ ಅಕ್ಕರೆ ಆದರ ಅಭಿಮಾನ

ಗಳಿಂದ ಬೆಳೆಸಿದುದು ಎಂದೆಂದಿಗೂ ಅಳಿಯಗೊಡಬಾರದ ಅತ್ಯಮೂಲ್ಯ ಸಾಂಸ್ಕೃತಿಕ ಸಂಪತ್ತು. ಈ ಸುಜ್ಞಾನ ಪರಂಜ್ಯೋತಿಯು ದಿನದಿನಕ್ಕೂ ಹೆಚ್ಚುತ್ತ ನಮಗೆ ನಮ್ಮ ನಾಡಿಗೆ, ನಮ್ಮ ರಾಷ್ಟ್ರಕ್ಕೆ, ವಿಶ್ವಕ್ಕೆ ಬೆಳಕು ನೀಡುತ್ತಿರಲಿ.

ಗ್ರಂಥಋಣ

೧. ಕನ್ನಡ ಹಸ್ತಪ್ರತಿಗಳ ವರ್ಣನಾ ಸೂಚಿ (ಮೈಹಸೂ) ಸಂ. ೧–೫.
೨. ಕನ್ನಡ ಗ್ರಂಥ ಸಂಪಾದನೆ; ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಗ್ರಂಥಸಂಪಾದನ ಶಾಸ್ತ್ರ; ಎಂ. ಎಂ. ಕಲಬುರ್ಗಿ.
೪. ಕನ್ನಡ ಹಸ್ತಪ್ರತಿಗಳ ಇತಿಹಾಸ; ಎಚ್. ದೇವೀರಪ್ಪ
೫. ಕರ್ಣಾಟಕ ಕವಿಚರಿತೆ, ಸಂ. ೧, ೨, ೩.
೬. ಶಿವತತ್ತ್ವ ಚಿಂತಾಮಣಿ (ಸಂ. ಎಸ್. ಬಸಪ್ಪ); ಲಕ್ಕಣ್ಣ ದಂಡೇಶ ಇತ್ಯಾದಿ.

ಹಸ್ತಪ್ರತಿ ಲಿಪಿಕಾರರು

● **ಬಿ. ಆರ್. ಹಿರೇಮಠ**

ಹಸ್ತಪ್ರತಿಗಳಲ್ಲಿ 'ಲಿಪಿಕಾರ' ಎಂಬ ಪದಪ್ರಯೋಗವಿಲ್ಲ. ಆದರೆ ಹಸ್ತಪ್ರತಿಗಳ ನಕಲುಕಾರ್ಯ ಮಾಡಿದವರು ಅವುಗಳ ಆದಿ-ಅಂತ್ಯದಲ್ಲಿ ಲೇಖನ, ಬರಹ, ಲಿಖಿತ, ಹಸ್ತಾಕ್ಷರ, ಕಂಸಡಿಸು, ದಸ್ತೂರ ಎಂಬ ಪದಗಳನ್ನು ಬಳಸಿದ್ದಾರೆ. ಇವು ಅವರ ಲೇಖನ ವ್ಯವಸಾಯವನ್ನು ವಿವರಿಸುತ್ತೇವೆ.…"ವೀರನಾರಾಯಣನ ಕವಿ, ಲಿಪಿಕಾರ ಕುಮಾರವ್ಯಾಸ"ಯೆಂಬ ಉಕ್ತಿಯಲ್ಲಿ ಮಾತ್ರ ಲೇಖನ ವ್ಯವಸಾಯ ಮಾಡುವವನನ್ನು 'ಲಿಪಿಕಾರ'ನೆಂದು ಕರೆಯಲಾಗಿದೆ. ಆದುದರಿಂದ ಹಸ್ತಪ್ರತಿಗಳನ್ನು ನಕಲು, ಪ್ರತಿ ನಕಲು, ಬರಿನಕಲುಗೊಳಿಸುವ ಲೇಖನಕಾರ್ಯ ಕೈಕೊಂಡವರನ್ನು 'ಲಿಪಿಕಾರರೆ'ಂದು ಕರೆಯಬಹುದು. ಇದರ ಪರ್ಯಾಯ ಪದ, ಪ್ರತಿಕಾರ.

'ಇನ್ನೂರ ಹದಿನಾರು ಸಕೀಲದ ಟಿಪ್ಪಣಾರ್ಥ'[೧] ಹಸ್ತಪ್ರತಿಯ ಅಂತ್ಯದಲ್ಲಿ "ಅಕ್ಕಮಹಾದೇವಿಯೆಂಬ ಶಿವಶರಣೆಗೆ ಚನ್ನಮಲ್ಲಪ್ರಭು ಇನ್ನೂರ ಹದಿನಾರು ಸಕೀಲದ ಟಿಪ್ಪಣದರ್ಥವ ಬೋಧಿಸುವ ಸಮಯದಲ್ಲಿ ವಾಲೆ ಶಾಂತಯ್ಯನು ಲಿಖಿತ ಮಾಡಿದ ಟಿಪ್ಪಣದರ್ಥ" ಎಂಬ ಹೇಳಿಕೆಯಿಂದ ಈಗಿನ ಮಟ್ಟಿಗೆ ವಾಲೆ ಶಾಂತಯ್ಯನೇ ಹಸ್ತ ಪ್ರತಿಯ ಪ್ರಥಮ ಲಿಪಿಕಾರನೆಂದು ಹೇಳಬೇಕಾಗುತ್ತದೆ. ಹಸ್ತಪ್ರತಿಗಳಲ್ಲಿ ಕಾಣ ಸಿಗುವ ಹಲವು ವರ್ಗ, ವರ್ಣ, ವಯೋಮಾನ, ವಿಭಿನ್ನ ಪ್ರವೃತ್ತಿಯ ಲಿಪಿಕಾರರನ್ನು

೧) ನಿಯುಕ್ತ ಲಿಪಿಕಾರರು (Appointed writers)

೨) ವೃತ್ತಿ ಲಿಪಿಕಾರರು (Professional writers)

೩) ಹವ್ಯಾಸಿ ಲಿಪಿಕಾರರು (Amateur writers)

ಎಂದು ವರ್ಗೀಕರಿಸಿ,[೨] ಅಭ್ಯಸಿಸಬಹುದು.

೧. ನಿಯುಕ್ತ ಲಿಪಿಕಾರರು :

ರಾಯಸ್ತ, ಸೇನಬೋವ (=ಕರಣಿಕ), ಲೇಖರಿ ಮುಂತಾದ ವಿಶೇಷಣ ಹೊಂದಿದ ವ್ಯಕ್ತಿಗಳು ಹಸ್ತಪ್ರತಿಗಳನ್ನು ಪ್ರತಿಗೊಳಿಸಿದ್ದಾರೆ. ಇವರು ಚಕ್ರವರ್ತಿ ಅಥವಾ ಮಂಡಲೇಶ್ವರರು ನಿಯಮಿಸಿಕೊಂಡ ಲಿಪಿಕಾರರು. ಇಂಥ ಲಿಪಿಕಾರರು ರಾಜ್ಯಾಡಳಿತದ ಲೆಕ್ಕಪತ್ರದೊಂದಿಗೆ ಗ್ರಂಥಲೇಖನ ಕಾರ್ಯವನ್ನೂ ಮಾಡುತ್ತಿದ್ದರ

---

೧ ಧಾವಭಾಂ, ಕಾಪ್ರ : ೧೯೯೧ ೨, ೧೩೮೩ ೧, ೨೦೦೭.

೨ ಕಗ್ರಂಸಂಶಾ, ಪುಟ : ೪೩.

ಬಹುದು ಇಲ್ಲವೆ ಕೇವಲ ಗ್ರಂಥಲೇಖನ ಕಾರ್ಯವನ್ನೇ ಕೈಕೊಂಡಿರಬಹುದು. ಈ ನಿಯುಕ್ತ ಲಿಪಿಕಾರರು ಅರಸುವರ್ಗದವರಿಗೂ ಸಾಮಾನ್ಯ ವರ್ಗದವರಿಗೂ ಗ್ರಂಥಗಳನ್ನು ಪ್ರತಿಗೊಳಿಸಿಕೊಡುತ್ತಿದ್ದರು. ಇದಕ್ಕಾಗಿ ಇವರು ಈ ಎರಡೂ ವರ್ಗದವರಿಂದಲೂ ಸಂಭಾವನೆ ಪಡೆಯುತ್ತಿದ್ದಿರಬೇಕೆನಿಸುತ್ತದೆ.

"ಶೀಗುರು ಘನಲಿಂಗ ಚಕ್ರವರ್ತಿಗಳಾದ ಕಲ್ಲಪ್ಪದೇವರ ಮೊಮ್ಮಗ ರುದ್ರಪ್ಪನವರಿಗೆ ಪಟ್ಟಿ ರಾಯಸ್ತ ವೆಂಕಣ್ಣನ ಮಗ ರಂಗಪ್ಪನು ಪುತ್ರ ಪೌತ್ರಾಭಿ ವೃದ್ಧಿಯಾಗಲೆಂದು ಬರೆದುಕೊಟ್ಟ ಚೆನ್ನಬಸವ ಪುರಾಣದ ಪುಸ್ತಕ"[೩]

"ಸುಬೇದಾರ ವೀರಣ್ಣನವರು ರಾಯಸ್ತ ವೆಂಕಟರಮಣಯ್ಯನ ಕೈಲಿ ಬರಸಿದ ಅಂಬಿಕಾ ವಿಜಯಕೆ ನಿತ್ಯ ಜಯಮಂಗಳ"[೪]

ಶ್ರೀಯುತ ಮೈಸೂರ ಚಿಕ್ಕಯ
ರಾಯನ ರಾಯಸದ ಲಕ್ಷ್ಮೀಪತಿ ಹರ್ಷದಿನಾ
ತ್ರೇಯ ಸುಗೋತ್ರನೆನಿಪ ತ
ದ್ರಾಯಗೆ ಬರೆದಿತ್ತನಜಿತನಾಥನ ಕೃತಿಯಂ"[೫]

"ರಾಯಬೇಲೂರ ಸ್ಥಳದ ಶಾನಭೋಗಿ ನರಸಯ್ಯ ಬರದ ಜೋರಕಥೆ ಪುಸ್ತಕ[೬]

"ನಾಗನೂರ ಕರಣಿಕ ಬಸವಲಿಂಗಯ್ಯನ ಪುತ್ರ ಶಿವಲಿಂಗಯ್ಯನ ಬರವು. ಬರಸಿದವ ದಳವಾಯಿ ಶಿವಪ್ಪ"[೭]

"...ಅರಮನೆ ಲೇಖರೀ ಕಾನಕಾನಹಳ್ಳಿ ದಾಸಪ್ಪನ ಬರಹಾ ಬರಹಾ"[೮] ಎಂಬಿವು ನಿಯುಕ್ತ ಲಿಪಿಕಾರರನ್ನು ಸೂಚಿಸುವ ಉದಾಹರಣೆಗಳಾಗಿರುತ್ತವೆ.

೨. ವೃತ್ತಿ ಲಿಪಿಕಾರರು:

ಜೀವನ ನಿರ್ವಹಣೆಗಾಗಿ ಗ್ರಂಥಗಳನ್ನು ಪ್ರತಿಗೊಳಿಸುವುದನ್ನೇ ಒಂದು ವೃತ್ತಿಯನ್ನಾಗಿರಿಸಿಕೊಂಡವರು ವೃತ್ತಿಲಿಪಿಕಾರರು. ವಿವಿಧ ಗ್ರಂಥಗಳನ್ನು ಲಿಪಿಗೊಳಿಸಿ ಕೊಟ್ಟುದುದಕ್ಕಾಗಿ ಇವರು ಜನರಿಂದ ಕಾಣಿಕೆ ಅಥವಾ ಉಡುಗೊರೆಯನ್ನು ಪ್ರತಿಫಲವಾಗಿ ಪಡೆಯುತ್ತಿದ್ದರು.

"ಈ ಶರಣಲೀಲಾಮೃತ ಬರದಾತಾ ಓಟೂರಲ್ಲಿ ಬರಸಿದ. ಹಲುವಾಗಲ ದೊಡ್ಡಪ್ಪನು ಬರದುಕೊಟ್ಟದ್ದು. ಉಪ್ಪಳಿಯಲ್ಲಿ ಇರುವ ಒಡೆಯಪ್ಪ ಗೌಡರಿಗೆ

೩ ಧಾವಭಾಂ, ತಾಪ್ರ : ೧೦೧೬.
೪ ಮೈಹಸೊ, ೧೯೯.
೫ ಕಗ್ರಂಸಂ, ಪುಟ : ೪೭.
೬ ಧಾವಭಾಂ, ತಾಪ್ರ : ೧೯೬೬/೧.
೭ ಅದೇ. ತಾಪ್ರ : ೧೩೧೬/೧ ಪ್ರಭುಲಿಂಗಲೀಲೆ.
೮ ಮೈಹಸೂ. ೧.೧೨೨ ಅದಿತ್ಯಪುರಾಣ.

ಬರಕೊಟ್ಟು ಇರುತ್ತವೆ. ಇದಕ್ಕೆ ಬರದಕ್ಕೆ ಕೊಟ್ಟುದು ಅವರು (ರಾಶಿ) ಉಡುಗರ ಕೊಟ್ಟು ಇರುತ್ತಾರೆ".[೯] "ಈ ರಾಮಾಯಣದ ಪುಸ್ತಕ ಕಿದುಮಿಸ ಕೋಟೆ ಗೋಪಾಲ ಯ್ಯನ ತಮ್ಮ ನೀಲಯ್ಯಗೆ ಬರೆದು ಕಾಣಿಕೆ ತೆಗೆದುಕೊಂಡು ಕೊಟ್ಟೆನು (ಲಿಪಿಕಾರನ ಹೆಸರು ಮಂಜೇಶ್ವರದ ಲಿಂಗಣ್ಣ)[೧೦] ಎಂಬ ಉಲ್ಲೇಖಗಳು ವೃತ್ತಿಲಿಪಿಕಾರರಾದ ಹಲುವಾಗಿಲ ದೊಡ್ಡಪ್ಪ ಹಾಗೂ ಮಂಜೇಶ್ವರದ ಲಿಂಗಣ್ಣರಿಗೆ ಸಂದ ಉಡುಗೊರೆ ಅಥವಾ ಕಾಣಿಕೆಗಳನ್ನು ತಿಳಿಸುತ್ತವೆ.

ಶಾಸ್ತ್ರದಾನಕ್ಕಾಗಿ ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಕೆಳದಿ ಬಸವಭೂಪಾಲ 'ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕ'ಗಳ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಪ್ರತಿಗಳನ್ನು ಇಂಥ ಲಿಪಿಕಾರರಿಂದ ಮಾಡಿಸಿದುದರಲ್ಲಿ ಯಾವ ಸಂದೇಹವಿಲ್ಲ.

ಹಸ್ತಪ್ರತಿಗಳಲ್ಲಿ ಲಿಪಿಕಾರರ ಹೆಸರಿನ ಹಿಂದೆ ಕಂಡುಬರುವ 'ಬರಹದ', 'ಲೇಖ್ಯದ' 'ಬರೆವ' ವಿಶೇಷಣಗಳು ವೃತ್ತಿಲಿಪಿಕಾರರನ್ನು ನಿರ್ದೇಶಿಸುತ್ತವೆ. ಉದಾಹರಣೆ:

"ಚೆನ್ನವತಿ(ಪುರದ) ಬಸಪ್ಪಯ್ಯನವರಿಗೆ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯನ್ನು ಬರೆದುಕೊಟ್ಟ ಗುಮ್ಮಹಾಳಪುರದ ಬರಹದ ಬಸವಣ್ಣೊಡೆಯ"[೧೧]

"ಬಿದರೆಯ ಅಂತಣ್ಣಗಳಾದ ಜೀಯನವರುಗಳಿಗೆ ಪೊನ್ನನ ಶಾಂತಿಪುರಾಣವನ್ನು ಬರೆದುಕೊಟ್ಟ ಬೆಳತಂಗಡಿಯ ಬರಹದ ನೆಟ್ಟಿಶಾಂತ[೧೨]

"ಬರಹದ ಗುರುನಂಜದೇವರು ಸೇರಿಸಿದ" ಶತಕತ್ರಯ[೧೩]
"ಶಿವತತ್ವಗಳ ಲೇಖ್ಯಮಂ ಮಾಳ್ಪ ಲೇಖ್ಯದ ಕರಿಯಸಿದ್ಧ ಬಸವೇಶ..."[೧೪]
"ಹುನಗುಂದದ ಬರೆವ ಚೆನ್ನವೀರದೇವರು"[೧೫]

ಓದಿಸುವುದರೊಂದಿಗೆ ಲೇಖನವನ್ನೂ ವೃತ್ತಿಯನ್ನಾಗಿ ಮಾಡಿಕೊಂಡವರಿದ್ದಾರೆ. ಹೀಗೆ ಇವರು ಓದಿಸುವ, ಲಿಪಿಗೊಳಿಸುವ ಎರಡೂ ವೃತ್ತಿಗಳನ್ನು ಜೊತೆ ಜೊತೆಯಾಗಿ ಮುಂದುವರಿಸಿಕೊಂಡು ಬಂದರು. ಓದಿಸುವ ಸಮಯದಲ್ಲಿ ಉಪಾಧ್ಯಾಯರಾಗಿದ್ದ ಇವರು ನಕಲುಗೊಳಿಸುವ ಸಮಯದಲ್ಲಿ ವೃತ್ತಿಲಿಪಿಕಾರರಾಗಿ ವಿದ್ಯಾರ್ಥಿಗಳ ಅಧ್ಯಯನ

---

೯ ಧಾವಭಾಂ, ಕಾಪ್ರು : ೨೧೫೯.
೧೦ ಕಗ್ರಂಸಂಶಾ, ಪುಟ : ೪೪ ತೊರವರಾಮಾಯಣ.
೧೧ ಅದೇ ಪುಟ : ೪೪.
೧೨ ಅದೇ.
೧೩ ಕಹಪ್ರು೧, ಪುಟ : ೬೯.
೧೪ ಕಕಚ ೨. ಪುಟ : ೩೩೯.
೧೫ ಧಾವಭಾಂ, ಕಾಪ್ರು, ; ೧೮೩ ಅಖಂಡೇಶ್ವರ ವಚನಗಳು.

ಕ್ಕಾಗಿ ತಮ್ಮ ಅಧ್ಯಾಪನಕ್ಕಾಗಿ, ಇತರ ವ್ಯಕ್ತಿಗಳ ಜ್ಞಾನಾರ್ಜನೆಗಾಗಿ ಹಲವು ಸಂಖ್ಯೆಯ ಗ್ರಂಥಗಳನ್ನು ಲಿಪಿಗೊಳಿಸಿರುವರು.

"ಓದಿಸುವ ಸವಾದಯ್ಯನವರಲ್ಲಿ ವಸ್ತ್ರದ ಚನವೀರಪ್ಪನವರು ದಾರಿಣಗೆ ತಕ್ಕೊಂಡು ಇದಾರು"[೧೬]

"ಬಡ್ಡಣೆಯ ಸ್ಥಳದ ಸಾಲಿ ನಾಗಪ್ಪನ ಸ್ವಹಸ್ತದ ಬರಹವು... ರಾ। ಬೆನ್ನೂರ ಹಿರೇಮಠದ ಚರಂತ್ಯಪ್ಪನವರಿಗೆ ಪಾರಲಿಕ್ಕೆ ಕೊಟ್ಟಿತು"[೧೭]

"ಹುನಗುಂದದ ಬರೆವ ಚೆನವೀರದೇವರ ಗರ್ಭೋದ್ಭವ ಅಯ್ಯಣದೇವರ ಗರ್ಭೋದ್ಭವ ಓದಿಸುವ ಚಾಲಕ ಚೆನವೀರದೇವರು ತಂಮ ಸುಹಸ್ತದಿಂದಲೂ ಪುಸ್ತಕವ ಬರದರು"[೧೮] ಈ ಮಾತುಗಳಿಂದ ಓದಿಸುವವರು ಹಣ ತೆಗೆದುಕೊಂಡು ಗ್ರಂಥಗಳನ್ನು ಪ್ರತಿಮಾಡಿಕೊಡುತ್ತಿದ್ದರೆಂದೂ ಓದಿಸುವ ವೃತ್ತಿಯೊಂದಿಗೆ ಲೇಖನ ವೃತ್ತಿಯನ್ನೂ ವಂಶಪಾರಂಪರ್ಯವಾಗಿ ಮುಂದುವರಿಸಿಕೊಂಡು ಬರುತ್ತಿದ್ದರೆಂದೂ ಗೊತ್ತಾಗುವುದು. ಇದಲ್ಲದೆ ಓದಿಸೊ ಲಿಂಗಪ್ಪ– ಷಟ್‌ಸ್ಥಲಜ್ಞಾನ ಸಾರಾಮೃತ,[೧೯] ಮನೋವಿಜಯ. ಅವಧೂತ ಗೀತೆ. ವೃಷಭಗೀತೆ, ಸ್ವರೂಪಾಮೃತ ಕಲ್ಯಾಣೇಶ್ವರ. ಸದ್ಗುರು ರಹಸ್ಯ, ಯೋಗಾಂಗ ವಿಭೂಷಣ:[೨೦] ಸಗರದ ಓದಿಸೊ ಚನ್ನಯ್ಯ–ಪ್ರಭು ದೇವರ ಷಟ್‌ಸ್ಥಲವಚನಗಳ ಟೀಕೆ.[೨೧] ಓದಿಸುವ ಮತದೈವೀರಯ್ಯ– ಗಣದಾಸಿ ವೀರಣ್ಣನ ವಚನಗಳು.[೨೨] ರಾಮಗೆರೆಮಠದ ಓದಿಸುವ ಸಂಗಣಾರಾಧ್ಯ ರಟ್ಟಶಾಸ್ತ್ರ.[೨೩] ಮಾಯಿಕೊಂಡದ ಓದಿಸೊಲಿಂಗಪ್ಪ ಶೂನ್ಯಸಂಪಾದನೆ (ಗೂಳೂರ).[೨೪] ಸೊಂಡೂರ ಶಿರಿವಾರಮಠದ ಓದಿಸೊ ಸಿದ್ಧಯ್ಯನವರ ಮಗ ಶರಣಯ್ಯ– ಗಣದಾಸಿ ವೀರಣ್ಣನ ವಚನಗಳು.[೨೫] ಗದುಗಿನ ವೋದಿಸುವ ವರುತದೇವರು ಭುವನಕೋಶ.[೨೬] ಓದಿಸುವ ಗೋವಿಂದ–ಗುರುಬೋಧಾಮೃತ.[೨೭] ಓದಿಸುವಶಾಂತದೇವರ ಪುತ್ರ ಸಿದ್ಧಲಿಂಗಯ್ಯ

---

೧೬ ಧಾವಭಾಂ. ಕಾಪ್ರ : ೨೭ ೨ ದೀಪದ ಕಲಿಪುರ ಕಾವ್ಯ.
೧೭ ಅದೇ, ತಾಪ್ರ : ೭೦೫ ರಾಭವಾಂಕನ ಕಾವ್ಯ.
೧೮ ಅದೇ, ತಾಪ್ರ : ೧೮೩ ಅಖಂಡೇಶ್ವರ ವಚನಗಳು.
೧೯ ಅದೇ, ತಾಪ್ರ : ೧೧೦೨.
೨೦ ಅದು, ತಾಪ್ರ : ೨೩೭೯.
೨೧ ಅದೇ. ತಾಪ್ರ : ೫೨೫.
೨೨ ಅದೇ, ತಾಪ್ರ : ೧೩೪೯/೩.
೨೩ ಅದೇ, ತಾಪ್ರ : ೩೧೧೫.
೨೪ ಅದೇ, ತಾಪ್ರ : ೯೩೫.
೨೫ ಅದೇ, ತಾಪ್ರ : ೨೦೨೫/೧.
೨೬ ಅದೇ, ತಾಪ್ರ : ೩೧೦/೨.
೨೭ ಅದೇ, ತಾಪ್ರ : ೧೦೨೦/೧.

–ಅನುಭವ ಷಡುಸ್ಥಲ.[೨೮] ಓದಿಸುವ ಲಿಂಗಯ್ಯ–ಗಿರಿಜೆಸಂವಾದ[೨೯] ಗ್ರಂಥ ಪ್ರತಿ ಮಾಡಿದುದನ್ನು ಇಲ್ಲಿ ನೆನೆಯಬೇಕು. ಇಂಥ ಇನ್ನೂ ನೂರಾರು ಉಲ್ಲೇಖ ಹಸ್ತ ಪ್ರತಿಗಳಲ್ಲಿ ಲಭಿಸುತ್ತವೆ.

ಒಂದಕ್ಕಿಂತ ಹೆಚ್ಚು ಗ್ರಂಥಗಳನ್ನು ಪ್ರತಿಮಾಡಿಕೊಟ್ಟವರೂ ವೃತ್ತಿ ಲಿಪಿಕಾರ ರಾಗಿದ್ದಾರೆ. ಉದಾಹರಣೆ: ಬಳಗಾನೂರ ಹಿರೇಮಠದ ಸೂಗಯ್ಯ– ಅನುಭವ ಸಾರ (ಶಕ ೧೮೮೨, ವಿಕೃತಿನಾಮ ಸಂವತ್ಸರ, ಮಾಘ, ಕೃಷ್ಣಪಕ್ಷ ಬುಧವಾರ), ಜ್ಞಾನ ಚಿಂತಾರತ್ನ ಟೀಕೆ (ಶಕ ೧೮೮೨, ವಿಕೃತಿ, ಮಾಘ, ಶುಕ್ಲಪಕ್ಷ ೩ ಬುಧವಾರ;[೩೦] ಮಾದಿ ಹಾಳ ರಾಮಯ್ಯ–ಸಾರಂಗಧರ ಕಥೆ, ಗುಂಡಬ್ರಹ್ಮಯ್ಯನ ಸಾಂಗತ್ಯ,[೩೧] ಹಿರೇಹಂಗ ರಗಿಯ ಶ್ರೀ ಗುರುಸ್ವಾಮಿ ಮೇಲ್ಮಠ–ಸಿದ್ಧಾಂತಸಾರಾಮೃತವಚನ (ಶಕ ೧೮೫೫ ಮಾರ್ಗಶಿರ, ಪದ್ಯ, ರೋಜ ಸೋಮವಾರ, ಆರಿದ್ರಾ, ಅಮೃತಯೋಗ), ಮಡಿವಾಳ ಯ್ಯನ ಸ್ತೋತ್ರ (ಶಕ ೧೮೫೫, ಶ್ರೀಮುಖ, ಕಾರ್ತಿಕ ಬಹುಳ, ರೋಜ ಸೋಮ ವಾರ)[೩೨]: ದಿಗ್ಗಾವಿಪುರದ ಅಂಬಾಜಯ್ಯ–ಭೈರವೇಶ್ವರಕಾವ್ಯ, ಭಾವಚಿಂತಾರತ್ನ, ಮನೋವಿಜಯ. ಶಿವನ ಭಿಕ್ಷಾಟನ ಲೀಲೆ, ಗುರುಭಕ್ತಾಂಡಾರಿ ಚರಿತ್ರೆ, ಬಸವಪುರಾಣ, ನೀಲಮ್ಮನಸ್ತೋತ್ರ. ತ್ರಿಭುವನ ತಿಲಕ, ವಾತುಳಾಗಮ;[೩೩] ಅಮ್ಮಿನಬಾವಿಯ ಯಳ ವತ್ತಿಮಠದ ಸಾಲಿಚೆನ್ನಯ್ಯ–ಸಿಂಗಿರಾಜಪುರಾಣ (ಶಕ ೧೭೫೦ ಕಾಳಯುಕ್ತಿ ಫಾಲ್ಗುಣ, ಬಹುಳ ೫. ಸೌಮ್ಯವಾಸರ). ರಾಜಶೇಖರ ವಿಳಾಸ (ಶಕ ೧೭೬೩ ಪ್ಲವ, ವೈಶಾಖ, ಶು. ೧೩ ಬುಧವಾರ), ವಿವೇಕ ಚಿಂತಾಮಣಿ (ಶಕ ೧೭೭೩, ವಿರೋಧಿಕೃತ, ಕಾರ್ತಿಕ ಕೃಷ್ಣ ದಶಮಿ ಭೌಮವಾಸರ) ರಾಘವೇಶ್ವರ ಕಾವ್ಯ (ಶಕ ೧೭೭೭ ರಾಕ್ಷಸ, ಅಶ್ವಿಜ ಶು. ೬ ಮಂಗಳವಾರ), ಪಾರಮಾರ್ಥ ಪ್ರಕಾಶಿಕೆ (ಶಕ ೧೭೮೦ ಕಾಳಯುಕ್ತ ಅಶ್ವಿಜ ಶು. ಚತುರ್ಥಿ ಬುಧವಾರ);[೩೪] ಚನ್ನಬಸವಸ್ವಾಮಿ–ನಂದೀಶ್ವರ ಭೃಂಗಿ ವೀರವೃಷಭ

---

೨೮ ಧಾವಭಾಂ, ಕಾಪ್ರು : ೪೭೫ ೧.

೨೯ ಅದೇ, ತಾಪ್ರು : ೧೯೮೦.

೩೦ ಅದೇ, ತಾಪ್ರು : ೨೬೭೨ ೩, ೪.

೩೧ ಅದೇ, ತಾಪ್ರು : ೧೯೮೩ ೨, ೪.

೩೨ ಅದೇ, ತಾಪ್ರು : ೨೧೭, ೨೧೮.

೩೩ ಅದೇ, ತಾಪ್ರು : ೨೪೧ ವಾತುಲತಂತ್ರ ಟೀಕೆ.

೩೪ ಧಾವಭಾಂ. ಕಾಪ್ರು : ೧೦೭೩, ೧೦೪೭, ೧೦೩೯. ೧೦೫೦, ೧೦೪೦ ಇದಲ್ಲದೆ ಈತನು ಚೆನ್ನಬಸವ ಪುರಾಣ (ಕಾಪ್ರು ೧೦೪೨). ಕೈವಲ್ಯಪದ್ಧತಿ ಟೀಕೆ (ಕಾಪ್ರು ೧೦೪೩). ಪಂಚಸ್ತೋತ್ರದ ಟೀಕೆ (ಕಾಪ್ರು ೧೦೪೪). ದೇಹಹಾರಿದ ಫಲ (ಕಾಪ್ರು ೧೦೩೫), ನಾನಾರ್ಥ ರತ್ನಾಕರ (ಕಾಪ್ರು ೧೦೩೪). ನಕ್ಷತ್ರ ಚೂಡಾಮಣಿ (ಕಾಪ್ರು ೧೦೪೯). ರಾಘವೇಶ್ವರನ ನಾಂದ್ಯಪದ್ಯಗಳ (ಕಾಪ್ರು ೧೦೫೨). ದಶವಿಧ ಪಾದೋದಕದ ಲಕ್ಷಣದ ವಚನ (ಕಾಪ್ರು ೧೦೫೩); ವೇತಾಳ ಪಂಚತಂತ್ರ (ಕಾಪ್ರು ೧೦೫೭), ನೀಲಲೋಚನೆಯ ನಾಂದಿಯ ಟೀಕೆ (ಕಾಪ್ರು ೧೦೬೧) ಗಳನ್ನೂ ಲಿಪಿಗೊಳಿಸಿರುವ ಸಾಧ್ಯತೆಯಿದೆ.

ಸ್ಕಂದ ಟೀಕೆ (ವಿಭವ. ಜೇಷ್ಠ ಶು.೭ ಮಂಗಳವಾರ). ಗುರುರಗಳ ಟೀಕೆ (ವಿಕ್ರಮ. ಪುಷ್ಯ ಶು. ೨೧ ಬುಧವಾರ). ಶಿವಾನಂದಲಹರಿ ಟೀಕೆ (ಶಕ ೧೭೩೪ ವಿಷು. ಪುಷ್ಯ ಬ. ೧೦ ಬುಧವಾರ). ಶಿವಾಧಿಕ್ಯ ಟೀಕೆ (ವಿಕ್ರಮ. ಮಾಘ ಬ. ೧೦). ಶ್ರೀರುದ್ರ ವ್ಯಾಖ್ಯಾನ (ಶಕ ೧೭೩೪ ವಿಷು. ಫಾಲ್ಗುಣ ಶು. ೧೦)[೩೫], ಉತ್ತಂಗಿ ಕೆಂಪಯ್ಯ-ಶಾಸ್ತ್ರ ವೈದ್ಯಪುಸ್ತಕ, ಪಂಚಸ್ತೋತ್ರ. ಶಬರ ಶಂಕರವಿಳಾಸ. ಗಿರಿಜಾಕಲ್ಯಾಣ. ಹಮ್ಮೀರ ಕಾವ್ಯ **ಆಗಳನ್ನು ಪ್ರತಿಮಾಡಿದುದರಿಂದ ಇವರು ವೃತ್ತಿಲಿಪಿಕಾರರು. ಇದಲ್ಲದೆ ಗುಂಡೇನಹಳ್ಳಿ ವಾಸಸ್ಥರಾದ ಶಿಗ್ಗಾವಿ ಶಿವಲಿಂಗಪ್ಪನವರ ಅಜ್ಞಾನುಸಾರ ತಯಾರಿಸಿದ ಫಕೀರಪ್ಪ ಮಲ್ಲಪ್ಪ ಕರಡಿಕರಳ್ಳಿ,[೩೬] ಹೊಂಗಲ ವಿರಕ್ತಮಠದ ಚೆನ್ನಸ್ವಾಮಿಯವರ ಅಪ್ಪಣೆಯಿಂದ ಬರೆದ ಚೆನ್ನಪ್ಪರು[೩೭] ವೃತ್ತಿ ಲಿಪಿಕಾರರಿರಬೇಕೆನಿಸುತ್ತದೆ.

೩. ಹವ್ಯಾಸಿ ಲಿಪಿಕಾರರು :

ಇವರು ಲೀಲಾವಿನೋದ, ಸ್ವಾನುಭವ. ಪಾರಾಯಣ (ಪಠನ). ಪ್ರವಚನ. ಅಧ್ಯಯನ ಮೊದಲಾದ ಉದ್ದೇಶಗಳಿಂದ ತಮಗಾಗಿ ಗ್ರಂಥಗಳನ್ನು ಬರೆದುಕೊಂಡಿದ್ದಾರೆ. ಲೀಲಾವಿನೋದ, ಪುಣ್ಯಪ್ರಾಪ್ತಿ, ಅಧ್ಯಯನಗಳಿಗಾಗಿ (ಸ್ವಾಮಿ) ಗುರು. ಭಕ್ತ (ಶಿಷ್ಯ), ದೇಸಾಯಿ, ನಾಯಕ. ಗೌಡ. ಅಭ್ಯಾಸಿ (ಸ್ತ್ರೀ. ಪುರುಷ) ಮೊದಲಾದ ವಿವಿಧ ರೀತಿಯ ವ್ಯಕ್ತಿಗಳಿಗೆ ಭಕ್ತಿ, ಪ್ರೀತಿ. ಪ್ರೇಮ, ಸಂತೋಷದಿಂದ ಬರೆದು ಕೊಟ್ಟಿದ್ದಾರೆ. ಹೀಗೆ ಸ್ವಪ್ರಯೋಜನ, ಪರಪ್ರಯೋಜನಗಳಿಗಾಗಿ ಹವ್ಯಾಸಿ ಲಿಪಿಕಾರರು ಪ್ರತಿಮಾಡಿದ ಗ್ರಂಥಗಳ ಸಂಖ್ಯೆ ವಿಪುಲವೂ ವೈವಿಧ್ಯಮಯವೂ ಆಗಿದೆ. "ಬನ್ನೂರ ಸ್ಥಲದಲ್ಲಿ ಹೊಸಮಠದ ಶ್ರೀ ಶಿವಲಿಂಗ ದೇವರು ತಮ್ಮ ಲೀಲಾವಿನೋದಕ್ಕಾಗಿ ಬರೆದ ಶೂನ್ಯಸಂಪಾದನೆ"[೩೮]

"ಶಿವರದ ಚೆನ್ನಂಜೇದೇವರ ಶಿಷ್ಯರು ಬಸವಲಿಂಗದೇವರು ತಮಗೆ ಸ್ವಾನುಭಾವಾರ್ಥ ವಿರಚಿತ ಲಿಖಿತಂ"[೩೯]

"ಹೊಂಗಲದ ಪುರಾಣಿಕಮಠದ ದುರದುಂಡೆಪ್ಪನು ಪಠಿಸಿ ಕೃತಾರ್ಥವಾಗುವುದಕ್ಕೋಸ್ಕರ ಬರಿದುಕೊಂಡಿರ್ಪನು"[೪೦]

---

೩೫ ಧಾವಭಾಂ, ತಾಪ್ರ : ೨೪೮೮/೧, ೩, ೪, ೫, ೬.

೩೫ಅ ಅದೇ, ತಾಪ್ರ ೨೬೫೨/೩ ಹಮ್ಮೀರ ಕಾವ್ಯ.

೩೬ ಧಾವಭಾಂ. ಕಾಪ್ರ : ೨೬೧ ಚಿದೈಶ್ವರ್ಯ ಜಿದಾಭರಣ.

೩೭ ಅದೇ, ಕಾಪ್ರ : ೧೩೦೫/೩ ಪ್ರಾಧರಾಯನ ಕಾವ್ಯ.

೩೮ ಅದೇ. ಕಾಪ್ರ : ೧೩೦.

೩೯ ಅದೇ. ತಾಪ್ರ : ೪೫೬/೧ ಪ್ರಭುದೇವರ ಟೀಕಿನ ವಚನಗಳು.

೪೦ ಅದೇ. ಕಾಪ್ರ : ೯೧೫ ವೃಷಭೇಂದ್ರ ವಿಜಯ.

"ಕಲ್ಲಿಮಠ ಮಹಾಂತ ಕರಿಬಸಪ್ಪನ ಕುಮಾರ ಚೆನ್ನವೀರಪ್ಪ ಪುರಾಣಿಕಪೀತನು ಮನೋಭಿಲಾಷದಿಂದ ವಾಚಿಸುವುದಕ್ಕೆ ಲೇಖನ ಗೈದಿರುತ್ತಾರೆ.[೪೧]

"ಗದಗು ಶ್ಯಾಪುರಪ್ಯಾಟಿಯಲ್ಲಿ ಇರುವಂಟ ಹಿರೇಹಡಗಲಿ ಹುಚ್ಚಪ್ಪನ ಬರಹ. ನನ್ನ ಮನೋಪ್ರೀತಿಯಿಂದ ಓದು ಅಪೇಕ್ಷೆಯಿಂದ ಬರಕೊಂಡು ಇದ್ದೇನೆ."[೪೨]

"ಚಲೂರ ಪ್ಯಾಟಿ ಸಾಲಿಮಠದ ಚನ್ನಬಸವಯ್ಯನು ತನ್ನ ಮನಿಯೊಳಗ ಓದಿ ಹಾಡುವದರ ಪ್ರೀತಿಯಿಂದ ಬರಕೊಂಡು ಇದ್ದಾನೆ"[೪೩]

"ಬೆಳವಟ್ಟಿಗಿ ಹಿರೇಮಠದ ಬೋಳಯ್ಯನ ಗರ್ಭಕ್ಷೀರಾರ್ಣವದೊಳಗೆ ಶ್ರೀ ಮುರಿಗಿಸ್ವಾಮಿ ಪಾದಸೇವೆಗೆ ಕಿಂಕರನಾದ ಅಡಿವಯ್ಯನು ತಮ್ಮ ಮನೋಮುದದಿಂ ಭಕ್ತ ಮಾಹೇಶ್ವರರಿಗೆ ಓದಿ ಹೇಳಿ ಪರಿಣಮಿಸಬೇಕೆಂದು ತಮ್ಮ ಸ್ವಹಸ್ತದಿಂದ ಬರದ ಸುಪ್ರತಿ"[೪೪]

ಇಲ್ಲಿ ಶಿವಲಿಂಗದೇವರು, ಬಸವಲಿಂಗದೇವರು, ದುರದುಂಡೆಪ್ಪ, ಚೆನ್ನವೀರಪ್ಪ, ಹುಚ್ಚಪ್ಪ. ಚನ್ನಬಸಯ್ಯ, ಅಡಿವಯ್ಯವರು ಕ್ರಮವಾಗಿ ಲೀಲಾವಿನೋದ, ಸ್ವಾನುಭವ, ಪಠನ. ವಾಚನ, ಅಧ್ಯಯನ, ಹಾಡುವಿಕೆಗಾಗಿ ಕೃತಿಗಳನ್ನು ನಕಲುಗೊಳಿಸಿಕೊಂಡಿದ್ದಾರೆ. ಜೊತೆಗೆ

"ಕೊಕ್ಕಟನೂರ ಪರಗಣೆಯೊಳಗಣ ಪಟ್ಟಣಶೆಟ್ಟಿ ಪೆದ್ದವೀರಪ್ಪನವರ ಪುತ್ರ ವೀರಭದ್ರಪ್ಪನ ತನುಜ ಸಂಗಪ್ಪನು ತಮ್ಮ ಪ್ರೀತಿಯಿಂದ ಓದಲಿಕ್ಕೆ ಬರಸಿದನು. ಕಲಬುರ್ಗಿ ಪರಗಣೆಯ ವೀರಭದ್ರದೇವರ ಸೇವಕ ಹೆಬ್ಬಾಳದ ಮಠಪತಿ ಪಾವಡಯ್ಯನ ಪುತ್ರ ನಾಗಯ್ಯನು ತನ್ನ ಸ್ವಹಸ್ತದಿಂದ ಲೇಖನವ ಮಾಡಿದ"[೪೫], "ಬಸವ ತೀರ್ಥ ಸಿಂಹಾಸನ ಶಿವಾನುಭಾವ ಚರಮೂರ್ತಿಗಳು ಚೆನ್ನಬಸವಸ್ವಾಮಿಗಳು ತಮ್ಮ ಲೀಲಾವಿನೋದದಿಂದ ಬರಸಿದರು. ಬರದವರು ಯಾರೆಂದರೆ ಸಿರೂರಮಠದ ವಿಶ್ವನಾಥ ದೊಡ್ಡಯ್ಯ. ಸ್ವಾಮಿಗಳ ಲೀಲಾವಿನೋದಕ್ಕೆ ಬರದನು".[೪೬] ಷಡುಸ್ಥಲದ ಚನವೀರಸ್ವಾಮಿಗಳು ಮರಿಗಳು ಬಸವಲಿಂಗದೇವರಿಗೆ ಕಂಚಗಾರ ಹೊನ್ನಪ್ಪನ ಮಗ ನರಸನ್ನಕುಮಾರ ಅಯ್ಯಪ್ಪನವರು ಬರೆದುಕೊಟ್ಟದು".[೪೭] "ಮೂಗನಾಯಕನ ಕೋಟೆ ಗುರುಸ್ಥಲದ ಮಠದ ಗಂಗಪ್ಪದೇವರ ಕುಮಾರ ಚೆನ್ನವೀರದೇವರು ಸದರ್‍ರೀ

---

೪೧ ಅದೇ, ಕಾಪ್ರ : ೭೨೩/೧ ಕ್ರಿಯಾಸಮಸದ ವಚನ.

೪೨ ಅದೇ, ಕಾಪ್ರ : ೩೫೪/೩ ವಚನದ ನುಡಿಗಣ ಟೀಕೆ.

೪೩ ಅದೇ, ಕಾಪ್ರ : ೨೮೮೭ ಬಸವಪುರಾಣ.

೪೪ ಅದೇ, ಕಾಪ್ರ : ೩೭೯ ರಾಘವೇಶ್ವರನ ಕಾವ್ಯ.

೪೫ ಧಾವಭಾಂ ಕಾಪ್ರ : ೭೪೪ ದೀಪದ ಕಲಿಯರ ಕಾವ್ಯ.

೪೬ ಅದೇ, ಕಾಪ್ರ : ೫೩೫/೨ ಶೂನ್ಯಸಂಪಾದನೆ (ಮಹಾದೇವಯ್ಯ).

೪೭ ಅದೇ, ತಾಪ್ರ : ೩೬೩ ಪ್ರಭುಲಿಂಗಲೀಲೆ.

ಇದೇ ಊರಲ್ಲಿ ಇರುವ ಮದ್ದಿನ ಮಲ್ಲಪ್ಪನ ಕುಮಾರ ಗಂಗಣ್ಣಂಗೆ ಧನಕನಕ ವಸ್ತು ವಾಹನ ಛತ್ರಚಾಮರ ಅಂದೋಳಿಕ ಪುತ್ರ ಪಾತ್ರ ಅಷ್ಟಭಾಗ್ಯ ಅಷ್ಟಭೋಗ ಮೊದಲಾಗಿ ಚಂದ್ರಾರ್ಕ ಪರಿಯಂತರ ಅಭಿವೃದ್ಧಿಯಾಗಿ ಚಿರಂಜೀವಿಯಾಗಿ. ಸತ್ಯಸದಾಚಾರ ಸಂಪನ್ನರಾಗಿ ಗುರುಲಿಂಗ ಜಂಗಮಕ್ಕೆ ಸಭಾ ದಾಸೋಹಿಯಾಗಿ ಸುಖದಿಂದ ಇರಲಿ ಎಂಬುದಾಗಿ ಸಂತೋಷದಿಂದ ತ್ರಿಕಾಲಲಿಂಗ ವೇಳೆಯಲ್ಲಿ ಹರಸಿ ಬರಸಿಕೊಟ್ಟ ಶರಣ ಲೀಲಾಮೃತ"[೪೮]

ಈ ಉದಾಹರಣೆಗಳು ನಾಗಯ್ಯ, ವಿಶ್ವನಾಥ ದೊಡ್ಡಯ್ಯ. ಅಯ್ಯಪ್ಪ ಚೆನ್ನವೀರದೇವರು ಅಧ್ಯಯನ, ಲೀಲಾವಿನೋದ. ಪುಣ್ಯಾಭಿಲಾಷಿಗಳಾದ ಸಂಗಪ್ಪ ಚೆನ್ನಬಸವಸ್ವಾಮಿ, ಬಸವಲಿಂಗದೇವ. ಗಂಗಣ್ಣರಿಗೆ ಪ್ರತಿಮಾಡಿ ಕೊಟ್ಟುದನ್ನು ತಿಳಿಸುತ್ತವೆ. ಇದಲ್ಲದೆ ತಂದೆಗೆ ಮಗನಿಗೆ, ಮಗ ತಂದೆ ಮಗಳಿಗೆ ಬರೆದುಕೊಟ್ಟ: ಅರಸು. ಸ್ನೇಹಿತರಿಗೆ ನಕಲುಗೊಳಿಸಿಕೊಟ್ಟ ಹೇರಳ ಉದಾಹರಣೆಗಳೂ ದೊರೆಯುತ್ತವೆ.

ಪುರುಷರಂತೆ ಸ್ತ್ರೀಯರೂ ಪರಪ್ರಯೋಜನಾರ್ಥವಾಗಿ ಗ್ರಂಥಗಳನ್ನು ಲಿಪಿಗೊಳಿಸಿರುವುದು ಕಂಡುಬರುತ್ತದೆ. ಈ ಕೆಳಗಿನ ಉದಾಹರಣೆಗಳಿಂದ ಇದು ಮನದಟ್ಟಾಗುತ್ತದೆ.

"ರಾಮನ ಸಾಂಗತ್ಯವ ಬರೆದವಳು ಓದಿಸುವ ಗುರುಬಸಪ್ಪದೇವರ ಮಗಳು ಸಿಂಗಮ್ಮ......"[೪೯]

"ಸಿಗ್ಗಾವಿಯ ಚನ್ನಗವುಡರ ಸೊಸೆ ಭೈರಾಜಿ ತಂಮ ಶ್ರೀಗುರುವಿನ ಕೃಪೆಯಿಂದ ಲಿಂಗಲೀಲಾವಿಲಾಸದ ಪುಸ್ತಕವನ್ನು ಪ್ರತಿಮಾಡಿ ಮಹಾಗಣಂಗಳು ಕೇಳಿ ಓದಿ ನಂಮ ಕೃತಾರ್ಥಮಾಡಿ(ಡಿ)ರಿ ಎಂದು ಮಹಾಗಣಂಗಳಿಗೆ ಪ್ರತಿಮಾಡುತ್ತಿರ್ದೆನು"[೫೦]

"ಸ್ವಸ್ತಿ ಶ್ರೀಸೇನಗಣಾಗ್ರಗಣ್ಯರು ಕರವೀರಕ್ಷೇತ್ರ ಕೊಲ್ಲಾಪುರದ ಶ್ರೀಜಿನಸೇನ ಭಟ್ಟಾರಕಸ್ವಾಮಿ ಕರಕೃತ ಸಂಜಾತ ಗುಣಭದ್ರಸ್ವಾಮಿಗಳ ಶಿಷ್ಯರು ಶಾಂತಿಮತಿ ಕಂತಿಯರು ಅಷ್ಟಿಗೆಪುರದ ಸ್ರೀ ಅಜಿತನಾಥ ದಿವ್ಯ ಚೈತ್ಯಾಲ್ಯಯದಲ್ಲಿ ಪ್ರತಿ ನೋಡಿ ಬರೆದೆವು"[೫೧]

"ವಿಕ್ರಮ ಸಂವತ್ಸರದ ಶ್ರಾವಣ ಶುದ್ಧ ಸಪ್ತಮಿ ಸ್ಥಿರವಾರದಲ್ಲು ಭೂಕೈಲಾಸ ಉಳುವೆ ಮಹಾಮನೆ ಸೂತ್ರಾನುವರ್ತಿಗಳಾದ ಬಾಳಪ್ಪಸ್ವಾಮಿಗಳ ಕರಸಂಜಾತಳಾದ ಪುಟ್ಟನಂಜಮ್ಮ"[೫೨]

---

೪೮ ಅದೇ, ತಾಪ್ರ : ೬೯ ಶರಣ ಲೀಲಾಮೃತ.

೪೯ ಕಗ್ರಂಶಂಶಾ, ಪುಟ : ೪೫.

೫೦ ಅದೇ.

೫೧ ಧಾವಭಾಂ, ಕಾಪ್ರ : ನಿಂಭಸಾಮಂತಚರಿತೆ.

೫೨ ಕಪಪ್ರ ೯. ಪುಟ : ೫೯ ಪ್ರಾಥದೇವರಾಯನ ಕಾವ್ಯ.

ಇವುಗಳೊಂದಿಗೆ ಅಪೂರ್ವವೆನಿಸುವ

"ಶ್ರೀ ಗುರುಲಿಂಗ ಜಂಗಮದ ಭೃತ್ಯರ ಭೃತ್ಯನಾದ ಚೆನ್ನವೀರದೇವರು ಸಣ್ಣ ಬರಹದ ಗುರುನಂಜಯ್ಯನವರಿಗೆ ಲೇಖನವ ಬರೆದುಕೊಟ್ಟ"[೫೩]

"ಶ್ರೀಮತು ಸಜ್ಜನಶುದ್ಧ ಶಿವಾಚಾರ ಸಂಪಂನರುಮಪ್ಪ ವ್ಯಥೆಯುನ್ನುಂಡ ಮಹಾಮಹತ್ತಿನೊಳಗಾದ ಸಂಪಾದನೆಯ ಚೆನ್ನವೀರದೇವರ ಶ್ರೀಪಾದಪದ್ಮಂಗಳಿಗೆ ಶರಣು ಶರಣಾರ್ಥಿ. ಅವರ ಶಿಷ್ಯ ಮರಿಮಲ್ಲೇಶನು ಬರೆದ ಪ್ರಭುದೇವರ ಟೀಕು ಸಮಾಪ್ತ"[೫೪]

ಈ ಅಂಶಗಳನ್ನು ಗಮನಿಸುವುದು ಅವಶ್ಯವೆನಿಸುತ್ತದೆ. ಇಲ್ಲಿ ಸಣ್ಣಬರಹದ ಗುರುನಂಜಯ್ಯನಿಗೆ ಚೆನ್ನವೀರದೇವರು ಬಸವರಾಜ ವಿಜಯ ಕೃತಿ ಪ್ರತಿಮಾಡಿ ಕೊಟ್ಟುದೂ ಸಂಪಾದನೆಯ ಚೆನ್ನವೀರದೇವರ ಶಿಷ್ಯ ಮರಿಮಲ್ಲೇಶ ಪ್ರಭುದೇವರ ಟೀಕಿನ ವಚನಗಳನ್ನು ಲಿಪಿಗೊಳಿಸಿರುವುದೂ ಗಮನಾರ್ಹ.

ಶಾಸ್ತ್ರದಾನ ಹಾಗೂ ಗುರುಭಕ್ತಿಗಳಿಂದಲೂ ಕೆಲವು ಹವ್ಯಾಸಿಲಿಪಿಕಾರರು ಗುರುಗಳಿಗೆ ಗ್ರಂಥಗಳನ್ನು ಪ್ರತಿಮಾಡಿಕೊಟ್ಟಿದ್ದಾರೆ. ಇದಕ್ಕಾಗಿ "ಅಗಳಿಪಾಯಣ್ಣಗಳು ಬರೆದ ಚಂದನಕಥೆ. ಪ್ರತಿ ಇದ್ದ ಹಾಗೆ ಬರೆದನು… ಶ್ರೀ ಹೇವಳಂಬಿ ಸಂವತ್ಸರ ಭಾದ್ರಪದ ಶು. ೧೦ರಲ್ಲೂ ದೊಡಸಾಮಿಗೆ ಶಾಸ್ತ್ರದಾನವಾಗಿ ಬರೆದು ಕೊಟ್ಟದ್ದು,"[೫೫] ಹೊನ್ನಾಳಿ ಸಿಂಹಾಸನಕ್ಕೆ ಕಾರಣಕರ್ತರಾದ ಚೆನ್ನಬಸವರಾಜದೇವರಿಗೆ ಗದುಗಿನ ಮಠದ ರುದ್ರನು ತನ್ನ ಭಕ್ತಿಯಲಿ ಬರೆದು ನಮಸ್ಕಾರವ ಮಾಡಿದ ಪ್ರಭುದೇವರ ಟೀಕಿನ ಪುಸ್ತಕ".[೫೬] "ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿಸ್ವರೂಪ ಷಟ್‌ಸ್ಥಲಬ್ರಹ್ಮಿಗಳಾದ ಗುರುಶಾಂತಸ್ವಾಮಿಯವರ ಪಾದಕ್ಕೆ ಇಕ್ಕೇರಿ ಹಿರೇಮಠದ ಷಟ್‌ಸ್ಥಲ ಗುರುಪಾದಸ್ವಾಮಿಯವರ ಶಿಷ್ಯನಾದ ಬಯಲೂರ ಈರಪ್ಪನ ಭದ್ರಪ್ಪನ ಮಗ ಚೆನ್ನವೀರಯ್ಯನು ಬರಕೊಟ್ಟ ಷಟ್‌ಸ್ಥಲತಿಲಕ"[೫೭] ಮೊದಲಾದ ಉದಾಹರಣೆಗಳನ್ನು ನೋಡಬಹುದು. ಇದಲ್ಲದೆ ಆರ್. ನರಸಿಂಹಾಚಾರ್ಯರು[೫೮] ವೆಂಕಟಶರ್ಮ ಲಿಪಿಕಾರನ ಬಗೆಗೆ "ರುದ್ರಭಟ್ಟನ (ಸು. ೧೧೮೦) ಜಗನ್ನಾಥ ವಿಜಯದ ಒಂದು ಪ್ರತಿಯ ಅಂತ್ಯದಲ್ಲಿ ಆ ಪ್ರತಿಯನ್ನು ಈತನು ದುಂದುಭಿವರ್ಷದಲ್ಲಿ ಬರೆದುದಾಗಿ ಹೇಳುವುದಲ್ಲದೆ ತನ್ನ ವಿಷಯವಾಗಿಯೂ ಆ ಗ್ರಂಥದ ವಿಷಯವಾಗಿಯೂ

---

೫೩ ಧಾವಭಾಂ, ತಾಪ್ರ : ೬೨೩.

೫೪ ಅದೇ. ತಾಪ್ರ : ೩೩೬.

೫೫ ಕಹಪ್ರ ೩. ಪುಟ : ೫೮.

೫೬ ಧಾವಭಾಂ. ತಾಪ್ರ : ೧೯೬೪.

೫೭ ಅದೇ, ತಾಪ್ರ : ೧೮೯೭/೪.

೫೮ ಕಕಚ ೨, ಪುಟ : ೩೧೯.

ಹಲವು ಪದ್ಯಗಳನ್ನು ಬರೆದಿದ್ದಾನೆ. ಈ ಪದ್ಯಗಳನ್ನು ನೋಡಿದರೆ ಇವನು ಕವಿಯಾಗಿದ್ದನೆಂದು ಹೇಳಬಹುದಾಗಿದೆ ಎಂಬ ಹೇಳುವ ಉಕ್ತಿ ಗಮನಾರ್ಹವೂ ಆದುದಾಗಿದೆ. ಒಂದುವೇಳೆ ಈ ವೆಂಕಟಶರ್ಮನು ಕವಿಯಾಗಿದ್ದಲ್ಲಿ[೫೯] ಕವಿಯೇ ಲಿಪಿಕಾರನಾಗಿ ಕಾರ್ಯನಿರ್ವಹಿಸಿದ ಪ್ರಥಮ ವ್ಯಕ್ತಿಯೆಂಬ ಮರ್ಯಾದೆ ಪಡೆಯುತ್ತಾನೆ.

ಒಟ್ಟಿನಲ್ಲಿ ಹಸ್ತಪ್ರತಿಗಳ ಪರಿಶೀಲನೆಯಿಂದ ಸ್ವಪ್ರಯೋಜನ, ಪರ ಪ್ರಯೋಜನಗಳಿಗಾಗಿ ಗ್ರಂಥಗಳನ್ನು ಪ್ರತಿಮಾಡಿದ ಹವ್ಯಾಸಿ ಲಿಪಿಕಾರರಲ್ಲಿ ಗುರು (ಸ್ವಾಮಿ), ಶಿಷ್ಯ, ತಂದೆ, ಮಗ, ಉಪಾಧ್ಯಾಯ, ಕಂಚುಗಾರ, ಅರಸು, ಗೌಡ, ಸ್ತ್ರೀಯರು ಪ್ರಮುಖರಾಗಿರುವುದು ವ್ಯಕ್ತವಾಗುತ್ತದೆ.

ಸಾಮಾನ್ಯವಾಗಿ ಹಸ್ತಪ್ರತಿ ನಕಲುಕಾರ್ಯ ಮಾಡುವವ ಒಬ್ಬನೇ ಲಿಪಿಕಾರ. ಆದರೆ ಒಂದೇ ಹಸ್ತಪ್ರತಿಯನ್ನು ಇಬ್ಬರು ಲಿಪಿಕಾರರು ಪ್ರತಿಮಾಡಿದುದನ್ನೂ ಕಾಣುತ್ತೇವೆ. ವಿರಳವೂ ವೈಶಿಷ್ಟ್ಯಪೂರ್ಣವೂ ಎನಿಸಿದ ಇಂಥ ಉದಾಹರಣೆಗಳು ಹೀಗಿವೆ :

"ಸಾಲಿವಾಹನಶಕ ೧೭೯೭ ಯುವನಾಮ ಸಂ. ೨ ಕಾರ್ತಿಕ ಶು. ೧ ರೋಜ ಮಂದವಾಸರ ಸ್ವಾತಿ ನಕ್ಷತ್ರದಲ್ಲಿ ಸಂಪೂರ್ಣ ಬರದು ಮುಗದು. ಇದನು ತಮಗೆ ನೋಡುದರ ದಸಿಂದ ಕಸಬಾಬುಗಳ ಹಳ್ಳಿ ಹೊಸಮಠದ ವೀರಯ್ಯನವರು ಮದಲಿಂದ ಬರದು ಇರುತ್ತಾರೆ. ಅದರ ತರುವಾಯದಲ್ಲಿ ಅವರ ಅನುಜ ಗುಳ್ಳಯನವರು ಅರ್ಧ ಬರದು ಈ ಪ್ರತಿ ಮುಗಿಸಿರುತ್ತಾರೆ"[೬೦]

"ಚೆನ್ನವೀರಾಚಾರ್ಯನು ಶಿವಲಿಂಗದೇವರಿಗೆ ಬೋಧಿಸಿದ ವಿಶೇಷಾನುಭವ ಷಟ್‌ಸ್ಥಲ ಸಂಪೂರ್ಣ ಮಂಗಳ ಮಹಾಶ್ರೀಶ್ರೀಶ್ರೀ. ಶಾಂತಲಿಂಗದೇಶಿಕೇಂದ್ರನು ಮೊದಲಿಟ್ಟಂತ ಶಾಸ್ತ್ರವನ್ನು ಟೀಕಿನ ಗುರುಪಾದದೇವರು ಸಮಾಪ್ತವೆಂದು ಮುಗಿಸಿದರು"[೬೧]

"ಇದನ್ನು ಬರವವರು ಯಾರ‍್ಯಾರೆಂದರೆ ಪ್ರಥಮದಲ್ಲಿ ಶ್ಯಾಪೂರಪೇಟೆಯಲ್ಲಿ ಹಿರೇಹಡಗಲಿ ಮುಕ್ಕಪ್ಪ ಹಾಗೂ ಅಖೈರದಲ್ಲಿ ಬರದೋರು ಹಿರೇಮಠದ ಸ. ದಸ್ತೂರಖುದ್ದ"[೬೨]

"ಬರದವರು ಶಿವಬಸಯ್ಯ. ಮಾಟದೇವರು ಇವರು ಹಸ್ತಾಕ್ಷರ"[೬೩]. ಇಲ್ಲಿ ಮೊದಲನೆಯ ಲಿಪಿಕಾರ ಲೇಖನವನ್ನು ಅರ್ಧಕ್ಕೆ ನಿಲ್ಲಿಸಿದ ಸ್ಪಷ್ಟವಾದ ಕಾರಣಗಳು

---

೫೯ ಮುದ್ದಣನ ಸ್ವಹಸ್ತಾ ಕ್ಷರದ ರಾಮಾಶ್ವಮೇಧದ ಹಸ್ತಪ್ರತಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿದೆ.

೬೦ ಧಾವಭಾಂ. ಕಾಪ್ರ : ೧೬೭೪/೨ ಸ್ಕಂದ ಪುರಾಣ (ಕನ್ನಡಾನುವಾದ).

೬೧ ಅದೇ ಕಾಪ್ರ : ೬೦೬.

೬೨ ಅದೇ ಕಾಪ್ರ : ೧೨೨೧ ಷಟಸ್ಥಲಜ್ಞಾನಸಾರಾಮೃತ.

೬೩ ಅದೇ, ಕಾಪ್ರ : ೬೪೭/೧ ಪಂಚತಂತ್ರ.

ತಿಳಿದುಬರುವದಿಲ್ಲ. ಬಹುಶಃ ಆತನು ಮರಣ ಹೊಂದಿರಬಹುದು ಇಲ್ಲವೆ ದೈಹಿಕವಾಗಿ ಬರೆಯಲು ಅಸಮರ್ಥನಾಗಿರಬಹುದು.

ನಮಗೆ ಲಭಿಸುವ ಹಸ್ತಪ್ರತಿಗಳಲ್ಲಿ ನಕಲುಪ್ರತಿ (ಎಷ್ಟನೆಯದಾದರೂ ಆಗಿರ ಬಹುದು) ಗಳೇ ಅತ್ಯಂತ ಅಧಿಕಸಂಖ್ಯೆಯಲ್ಲಿರುತ್ತವೆ. ಗ್ರಂಥಸಂಪಾದನಾ ಕಾರ್ಯ ವಿಧಾನದ ಪ್ರಮುಖ ಹಂತಗಳಲ್ಲಿ ಹಸ್ತಪ್ರತಿಗಳ ವಂಶಾವಳಿ ನಿರ್ಣಯವು ಒಂದು. ಇಂಥ ನಕಲುಪ್ರತಿಗಳಲ್ಲಿರುವ ಸಂಯೋಜಕ, ವಿಚ್ಛೇದಕ, ವಿಶಿಷ್ಟಸ್ಖಾಲಿತ್ಯಗಳ ಬಲ ದಿಂದ ಈ ವಂಶಾವಳಿ ನಿರ್ಣಯಿಸುತ್ತಾರೆ. ಆದರೆ ನಕಲುಪ್ರತಿಯ ಲಿಪಿಕಾರನೇ ಅದರ ಮೂಲ ಪ್ರತಿ (ಕವಿಯ ಸ್ವಹಸ್ತಾಕ್ಷರ ಪ್ರತಿ ಅಲ್ಲ) ಯನ್ನು ಹೇಳಿದ್ದರೆ ವಂಶಾ ವಳಿ ನಿರ್ಣಯ ಕಾರ್ಯ ಇನ್ನೂ ಸುಗಮವಾಗುತ್ತದೆ. ಕಾರಣ ನಕಲುಪ್ರತಿಯ ಮೂಲಪ್ರತಿ (ಕವಿಯ ಸ್ವಹಸ್ತಾಕ್ಷರ ಪ್ರತಿಯಲ್ಲ) ಯನ್ನು ಹೇಳಿರುವ ಉದಾಹರಣೆ ಗಳನ್ನು ಈಗ ಪರಿಶೀಲಿಸಬಹುದು.

"ಈ ಪುಸ್ತಕವು ಜಿಗಜಿನ್ನಿ ಸಿದ್ಧಲಿಂಗಪನವರ ಪ್ರತಿನೋಡಿ ಬರದದ್ದು. ಶಾಲಿ ವಾಹನಶಕ ೧೭೬೧ ವಿಕಾರಿನಾಮಸಂವತ್ಸರದಲ್ಲಿ ಅಶ್ವಿನಿ(ಜ) ಶುದ್ಧ ಅಷ್ಟಮಿ ಮಂಗಳ ವಾರ ಹತ್ತನೇ ತಾಸಿನಲ್ಲಿ ನಾಗನೂರ ಹಿರೇಮಠದ ಉದಾಸೀನದೇವರ ಗುರುಬಸಪ್ಪನ ಹೆಸರಿಟ್ಟು ವಿವೇಕಚಿಂತಾಮಣಿ ಪರಿಸಮಾಪ್ತಿ"[೬೪]

"ಮಹಲಿಂಗಪುರದಲ್ಲಿ ಇರುವ ತೊಂಡಿಕಟ್ಟಿಯ ರಾಮನಗೌಡನ ವಂಶೋದ್ಭವ ನಾದ ತರಳ ಶಿವಬಸವನು ಬರದಿಹನು. ಶ್ರೀಗುರು ಶಾಂತೇಶ್ವರನ ದಯದಿಂದ ದುರ್ಮುಖನಾಮ ಸಂವತ್ಸರದ ವೈಶಾಖ ಮಾಸ ಶುಕ್ಲಪಕ್ಷ ಮಂಗಳವಾರ ಶುಭ ಮುಹೂರ್ತದಲ್ಲಿ ಮುಗಿಯಿತು. ಪ್ರತಿಯ ನೋಡಿ ಬರದವರಾರೆಂದರೆ ಬಸಪ್ಪ ಗಲಗಲಿ ಅವಧೂತಾಶ್ರಮ ಇವರ ಪುಸ್ತಕ"[೬೫]

"ಶಿವಾನುಭಾವಿಗಳಾದ ಹೊಸಕೋಟೆಯ ಮಹಾಂತಸ್ವಾಮಿಯವರ ವಂಶೋ ದ್ಭವರಾದ ಮರಿಸಿದ್ಧಲಿಂಗಯ್ಯನವರು ಬರೆಸಿದ ಸ್ಥಲದ ವ್ಯಾಖ್ಯಾನದ ಯಥಾ ಪ್ರತಿಯು"[೬೬]

"ಈ ಪುಸ್ತಕ ಹಿಪ್ಪರಗಿ ಕಾಡೇಶ್ವರಮಠದ ಅದೃಶ್ಯಪ್ಪನವರ ಪುತ್ರಸಿದ್ಧವೀರಪ್ಪ ನವರಲ್ಲಿದ್ದ ತಾಡವಲ್ಲಿ ತಂದು ಬರದದ್ದು ...[೬೭]

ಈ ಉಲ್ಲೇಖಗಳಿಂದ ವಿವೇಕ ಚಿಂತಾಮಣಿ, ಶೂನ್ಯಸಂಪಾದನೆ, ಏಕೋತ್ತರ ಶತಸ್ಥಲ, ಸೃಷ್ಟಿಯ ವಚನಟೀಕೆಗಳ ಮೂಲಪ್ರತಿಗಳ ವಿಷಯ ವ್ಯಕ್ತವಾಗುತ್ತದೆ. ಹೀಗೆ ಮೂಲಪ್ರತಿ (ಕವಿಪ್ರತಿಯಲ್ಲ) ಗಳ ಮಾಹಿತಿ ದೊರೆಯುವುದು ಅತ್ಯಂತ ವಿರಳ.

---

೬೪ ಧಾವಭಾಂ, ಕಾಪ್ರ : ೧೦೯೬/೨.
೬೫ ಅದೇ ಕಾಪ್ರ : ೨೦೫/೧೧ ಶೂನ್ಯಸಂಪಾದನೆ.
೬೬ ಅದೇ, ತಾಪ್ರ : ೧೯೪೬ ಏಕೋತ್ತರಶತಸ್ಥಲ.
೬೭ ಅದೇ, ಕಾಪ್ರ : ೨೦೫/೭ ಸೃಷ್ಟಿವಚನ ಟೀಕೆ.

ಅರಸು. ಮಾಂಡಲಿಕ ಮೊದಲಾದ ರಾಜವರ್ಗದವರು ಯಾವ ಧರ್ಮೀಯರಿರುತ್ತಿದ್ದರೋ ಹೆಚ್ಚಾಗಿ ಅದೇ ಧರ್ಮದ ಗ್ರಂಥಗಳನ್ನು ನಿಯುಕ್ತ ಲಿಪಿಕಾರರು: ತಮ್ಮ ತಮ್ಮ ಧರ್ಮದ ಗ್ರಂಥಗಳನ್ನು ವೃತ್ತಿ ಮತ್ತು ಹವ್ಯಾಸಿ ಲಿಪಿಕಾರರು ಅಧಿಕ ಸಂಖ್ಯೆಯಲ್ಲಿ ಪ್ರತಿ ಮಾಡಿರುವುದು ಕಂಡುಬರುತ್ತದೆ. ಆದರೆ ಅಲಂಕಾರ. ಛಂದಸ್ಸು ವ್ಯಾಕರಣ, ನಿಘಂಟು. ವೈದ್ಯ, **ಜ್ಯೋತಿಷ್ಯ** ಮೊದಲಾದ ಗ್ರಂಥಗಳನ್ನು ಸರ್ವ ಧರ್ಮೀಯರೂ ನಕಲುಗೊಳಿಸಿದ್ದಾರೆ.

ಕನ್ನಡವನ್ನೇ ಮಾತೃಭಾಷೆಯಾಗಿಸಿಕೊಂಡಿದ್ದ ಜೈನ. ವೀರಶೈವ ಲಿಪಿಕಾರರು ಸಿಂಹಪಾಲು ಗ್ರಂಥಗಳನ್ನು ಪ್ರತಿಮಾಡಿದ್ದಾರೆ. ಸಂಸ್ಕೃತ ಧರ್ಮಭಾಷೆ. ಕನ್ನಡ ಸಂಪರ್ಕ ಭಾಷೆಯನ್ನಾಗಿಸಿಕೊಂಡಿದ್ದ ಬ್ರಾಹ್ಮಣ ಲಿಪಿಕಾರರು ಅತ್ಯಲ್ಪ ಸಂಖ್ಯೆಯ ಕನ್ನಡ ಕೃತಿಗಳನ್ನು ನಕಲುಗೊಳಿಸಿದ್ದಾರೆ. ಹೀಗೆ ಕನ್ನಡ ಮಾತೃಭಾಷೆಯನ್ನು ಬದುಕಿದ ಜೈನ, ವೀರಶೈವ ಲಿಪಿಕಾರರ ಸಂಖ್ಯೆಯೂ ಅವರು ಪ್ರತಿಮಾಡಿದ ಹಸ್ತಪ್ರತಿಗಳ ಮೊತ್ತವೂ ಅಧಿಕವಾಗಿದೆ.

*　　*　　*　　*

ಲಿಪಿಕಾರರ ಚರಿತ್ರೆಗೆ ಸಂಬಂಧಿಸಿದಂತೆ (ಅವರು ವಾಸಿಸುತ್ತಿದ್ದ) ಗ್ರಾಮ, ಗುರು, ಶಿಷ್ಯ, ತಂದೆ ಸಹೋದರ, ಮಗ, ಮಗಳು, ಸ್ನೇಹಿತ ಹಾಗೂ ಲೇಖನ ಮಿತಿ ಪ್ರತಿ ಸಂಪೂರ್ಣಗೊಂಡ) ಮೊದಲಾದ ಮಹತ್ವದ ಸಂಗತಿಗಳು ಹಸ್ತಪ್ರತಿಗಳ ಆದಿ. ಅಂತ್ಯ ಭಾಗದ ಪ್ರಶಸ್ತಿಗಳಿಂದ ಗೊತ್ತಾಗುತ್ತದೆ.

"ಮಹಾಮಲ್ಲಸಕೆರೆ ಚೆನ್ನಬಸವೇಶ್ವರ ಸ್ವಾಮಿಗಳವರಿಗೆ ತತ್ ಶಿಷ್ಯನಾದ ಅಳವುಂಡಿಲಿರುವ ಕುಡುತಿನಿಮಠದ ಹಂಪಯ್ಯನು"[೧೮]

"ಕೆಂಭಾವಿ ಹಿರಿಮಠದ ಪಟ್ಟದ ಘನಲಿಂಗ ಚಕ್ರವರ್ತಿಗಳಾದಂಥ ಕಂತ್ಯಪ್ಪ ದೇವರು ಬರದ ದಸ್ತೂರವು"[೧೯]

"......ಸೊಲ್ಲಾಪುರದ ಕೊಟ್ರಪ್ಪನ ಹಸ್ತಾಕ್ಷರದಿಂದ ಬರನದ್ದು"[೨೦]

ಕರಡಿಮಠದ ನಿಡುಮಾಮಿಡಿ ಕರಿಬಸಪ್ಪರಾಜದೇವರ ಶಿಷ್ಯ ಲಿಂಗಬಸವ ರಾಜದೇವರ ಕರಕಮಲೋದ್ಭವ ಲಿಂಗೈಯ್ಯದೇವರು. ಅವರ ದೃಷ್ಟ್ಯೋದ್ಭವ ಮುನಿಲಿಂಗದೇವರು. ಅವರ ವುದರೋದ್ಭವ ರಾಮಯ್ಯ ದೇವರು ಈ ಪ್ರತಿ ತಮಗೆ ಬೇಕೆಂದು ಗುರುವಿನ ಕೃಪೆಯಿಂದ ಗುರುಧ್ಯಾನದಿಂದ ಗುರುಚಿತ್ತದಿಂದ ಗುರುವನೆ ಆರಾಧಿಸುತ್ತ ತನ್ನ ಸುಹಸ್ತದಿಂದ ಈ ಪ್ರತಿಯನೆ ಬರದರು"[೨೧]

---

೧೮ ಅದೇ, ಕಾಪ್ರ : ೨೬೦೯ ಎಲ್ಲಾ ಪುರಾತನರ ವಚನ.
೧೯ ಅದೇ, ಕಾಪ್ರ : ೬೫೪/೧ ಪಡಕರಸ್ವಾಮಿವಚನ.
೨೦ ಅದೇ, ಕಾಪ್ರ : ೧೦೮೮ ಚೆನ್ನಬಸವಪುರಾಣ.
೨೧ ಅದೇ, ಕಾಪ್ರ : ೧೭೨೦ ರೇವಣಸಿದ್ಧೇಶ್ವರ ಕಾವ್ಯ.

"ಶ್ರೀಮದ್ವೀರಲಿಂಗ ಚಕ್ರವರ್ತಿಗಳಾದ ರಾಜಾಧಿರಾಜ ಪೂಜಿತ ರಾಜಮಾನ್ಯ ಶ್ರೀ... ಹುನಗುಂಡಿ ಹಿರೇಮಠದ ಪ್ರಭುದೇವರ ಪುತ್ರ ಪಂಚಾಕ್ಷರಿಯಪ್ಪನವರ ಗರ್ಭಸುಜಾತಕ ಚಲೂರಪ್ಪಾಟಿ ಸಾಲಿಮಠದ ಚೆನ್ನಬಸವಯ್ಯನು"[೬೨]

"ಸಪ್ತದ್ವೀಪದ ಮಧ್ಯದ ಜಂಬೂದ್ವೀಪದಲ್ಲಿರುವ ಜಂಬುಲಿಂಗನ ಜಂಬು ಖಂಡಿಸ್ಥಲದಲ್ಲಿ ಬರದ ಪುಸ್ತಕದ ಪ್ರತಿ ಪ್ರತಾರ ಇಳಿವಿಕೊಂಡರು । ನಿರ್ವಾಣಿಯ ಪ್ರಭು ವಿನ ಸಂತತಿಯ ಪುತ್ರರಾದ ಬಾಗಡಕೋಟೆಸ್ಥಲದ ಟೀಕಿನಮಠದ ಪ್ರಭುವಿಸ್ವಾಮಿಗಳ ಸಂತತಿ ಅಚಲೇರಿ ವಿರಕ್ತಮಠದ ಬಸವಲಿಂಗಪ್ಪನವರ ಕರಕಮಲದಲಿ ವುದ್ಭವಿಸಿದಂತ ಸಿದ್ಧರಾಮನು ತನ್ನ ಮನ ಹರುಷದಿಂದ ಬರದ ಪುಸ್ತಕ"[೬೩]

"... ಕಸಬಾಬಗಳಹಳ್ಳಿ ಹೊಸಮಠದ ವೀರಯ್ಯನು... ಅವರ ಅನುಜ ಗುಳ್ಳೆಯ್ಯನವರು ......"[೬೪]

"ರಾಮನ ಸಾಂಗತ್ಯವ ಬರದವಳು ಓದಿಸುವ ಗುರುಬಸಪ್ಪದೇವರ ಮಗಳು ಸಿಂಗಮ್ಮ"[೬೫]

"ಶ್ರೀಮನ್ನೃಪಶಾಲಿವಾಹನ ಶಕ ೧೭೮೫ ರುದಿರೋದ್ಗಾರಿನಾಮ ಸಂವತ್ಸರದ ಆಶ್ವಿನ (ಜ) ಮಾಸದ ಬಹುಳ ಪ್ರತಿಪದ ಮಂಗಳವಾರ ಉದಯ ತಾಸು ೪ ಸಮಾಪ್ತಿ ಯಾಯಿತ್ತು... ಶಿವಲಿಂಗದೇವರು ತಮ್ಮ ಸ್ವಹಸ್ತದಿಂದ ಲೇಖನವ ಮಾಡಿದ್ದಿದು"[೬೬]

ಹೀಗೆ ದೊರೆಯುತ್ತಿರುವ ಲಿಪಿಕಾರರ ಚರಿತ್ರೆಯ ವಿವರಗಳು ಅಭ್ಯಾಸ ಯೋಗ್ಯ ವಾಗಿವೆ. ಜೊತೆಗೆ ಲಿಪಿಕಾರ ಅಥವಾ ಆತನ ಗುರುವಿನ ಗೋತ್ರ. ಸೂತ್ರ, ಶಾಖೆಗಳ ಬಗೆಗೂ ಮಾಹಿತಿ ಸಿಗುತ್ತದೆ. ಇದಲ್ಲದೆ ಪ್ರತಿ ಬರೆಸಿದ ವ್ಯಕ್ತಿಗಳ ಗ್ರಾಮ, ಮನೆ ತನದ ವಂಶಾವಳಿ. ಅವರ ವ್ಯಕ್ತಿತ್ವ–ಅಭಿರುಚಿ–ಆಸಕ್ತಿ. ಹೊಂದಿದ್ದ ಸಾಮಾಜಿಕ–ರಾಜ ಕೀಯ–ಧಾರ್ಮಿಕ ಸ್ಥಾನಮಾನ. ಬದುಕಿದ್ದ ಅವಧಿ. ಪ್ರಾದೇಶಿಕ ವಿವರ ಮುಂತಾದ ಅಪೂರ್ವ ಅಂಶಗಳನ್ನು ಅರಿಯಲು ಸಾಧ್ಯವಾಗುವುದು. ಈ ದಿಶೆಯಲ್ಲಿ ವ್ಯವಸ್ಥಿತ ವಾದ ಅಧ್ಯಯನ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಹಸ್ತಪ್ರತಿಗಳನ್ನು ಬರಸಿದ ಮಠಾಧಿಪತಿ. ನಾಯಕ. ದೇಸಾಯಿ. ಒಡೆಯರ ಗ್ರಾಮ, ಕಾಲ. ಪ್ರದೇಶಗಳನ್ನು ಹೇಳುವ ಕೆಲವು ಉದಾಹರಣೆಗಳು ಹೀಗಿರುತ್ತವೆ:

"...ಶ್ರೀಮನ್ನೃಪ ಶಾಲಿವಾಹನ ಶಕಾಬ್ದಪರಿಮಿತಿ ೧೩೫೩ ಮನ್ಮಥನಾಮ ಸಂವತ್ಸರೇ ಫಾಲ್ಗುಣ ಮಾಸೇ ವುತ್ತರಾಯಣೇ ಶಶಿರುಕಾ (ಶಿಶಿರಋತು) ಶುಕ್ಲಪಕ್ಷ

---

೬೨ ಅದೇ, ಕಾಪು : ೨೮೮೭ ಬಸವಪುರಾಣ.

೬೩ ಅದೇ, ಕಾಪು : ೬೫೩ ವೀರಶೈವ ಷಟ್‌ಸ್ಥಲ.

೬೪ ಅದೇ. ಕಾಪು : ೧೬೭೪/೨ ಸ್ಕಂದಪುರಾಣ (ಕನ್ನಡಾನುವಾದ).

೬೫ ಕಗ್ರಂಸಂಶಾ, ಪುಟ : ೪೫.

೬೬ ಧಾವಭಾಂ, ಕಾಪು : ೧೩೪/೩ ಪ್ರಭುದೇವರ ಟೀಕಿನ ವಚನಗಳು.

೧೭ ಸೋಮವಾಸರೇ ಪುಷ್ಯ ನಕ್ಷತ್ರೇ ಶೋಭನನಾಮಯೋಗೇ ವ್ಯೆಯಾಕರಣಕ್ಕೆ ॥೦॥ ಶ್ರೀ ಬಸವೇಶ್ವರದೇವರ ಪುರಾಣ ಬರದು ಸಂಪೂರ್ಣವಾಯಿತು. ಯಾ ಪುಸ್ತಕವಂ ಬರಸಿದವರು ಅರುಯೆಂದರೆ ಶ್ರೀಮನ್ ಮಹಾನಿರಂಜನ ಜಗದ್ಗುರು ಶೂನ್ಯ ಸಿಂಹಾಸನಾಧೀಶ್ವರ ಭೂಪುರದ ಮೂರುಸಾಹಸ್ರ ಮಠಾಧಿಕಾರಿಗಳಾದ ಗಂಗಾಧರಸ್ವಾಮಿಯವರ ಕರಕಮಲೋದ್ಭವರಾದ ಗುರುಸಿದ್ಧ ಸ್ವಾಮಿಯವರು ಬರಸಿದ್ದು..."[೭೭] "ಶ್ರೀ ತೋಂಟದ ಸಿದ್ಧೇಶ್ವರದೇವರ ಸಂಪ್ರದಾಯಕರಾದ ವಿರಕ್ತಮಠದ ನೀಲಕಂಠ ಸ್ವಾಮಿಗಳವರಿಗೆ ತಮ್ಮ ಕಾರುಣ್ಯಪ್ರಿಯ ಭಕ್ತರಾದಂಥ... ದೇವರ ವರಪ್ರಸನ್ನರಾದ ರಾಜಾಧಿರಾಜ ಶ್ರೀ ಹಂಡೇರಾಮಪ್ಪ ನಾಯಕರು ಭಕ್ತಿಯಿಂದ ಬರಸಿ ನಮಸ್ಕರಿಸಿದಂಥ ಭಕ್ತಿರಸಸೋನೆಯ ಪುಸ್ತಕ (ಶಕ ೧೬೪೧. ಬಹುಧಾನ್ಯನಾಮ ಸಂವತ್ಸರ. ಶ್ರಾವಣ ಶುದ್ಧ ೧೦ ಸೋಮವಾರ ಅಭಿಜನ್ ಮುಹೂರ್ತ ಶುಕ್ರನ ಹೋರೆ (ಗ್ರಂಥ) ಮುಕ್ತಾಯ)".[೭೮] "ಶ್ರೀಮನ್ನೃಪ ಶಾಲಿವಾಹನಶಕ ೧೭೦೭ನೆಯ ವಿಶ್ವಾವಸುನಾಮ ಸಂವತ್ಸರದ ಶ್ರಾವಣ ಶುದ್ಧ ೩ ಸೋಮವಾರ ಉತ್ರಿ ನಕ್ಷತ್ರ ಬುದುವನ ಹೋರ್ಯದಲ್ಲಿ ಶುಭಲಗ್ನ ಶುಭಮುಹೂರ್ತದಾಗ ಪಂಚತಂತ್ರ ಪುಸ್ತಕ ಸಂಪೂರ್ಣ... ಬರಸಿದವರು ಅರೆಂದರೆ ಬೀಳಿಗಿಸೀಮೆ ಸೊನ್ನದ ದೇಸಾಯಿ ಭೀಮಪ್ಪನ ಸುಗರ್ಭಸಂಜಾತ ಫಕೀರಪ್ಪನ ಧರ್ಮಬಾಲಕನಾದಂಥ ಸಂಕ್ರೆಪ್ಪ । ಆತನ ವರಕುಮಾರನಾದ ಬಸಪ್ಪನು । ಈತನ ಮಗನಾದ ಮಳಿಯಪ್ಪನು......".** "ಸ್ವಸ್ತಿ ವಿಜಯಾಭ್ಯುದಯ ಶಾಲಿವಾಹನಶಕ ವರುಷ ೧೫೦೨ನೆಯ ವಿಕ್ರಮ ಸಂವತ್ಸರದ ಕಾರ್ತಿಕ ಬಹುಳ ೩ ಮಂಗಳವಾರದಲ್ಲು ಸರ್ವಾಧಾರಸಂಪಂನ ಏಕಲಿಂಗ ನಿಷ್ಠಾಪರ ವೀರಶೈವ ಸಂಪಂನ ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತೃರಾದ ವಿರಕ್ತ ಸಿದ್ಧಲಿಂಗದೇವರಿಗೆ ಹದಿನಾಡ ಎಳಂದೂರ ಅರಸು ಚೆಂನೊಡೆಯರು ಈ ಶೂನ್ಯಸಂಪಾದನೆಯ ವಚನ ಸಂಗ್ರಹವನ್ನು ಬರಸಿ ಸೇವಾರ್ಪಿತವಾಗಿ ನಮಸ್ಕರಿಸಿದರು."[೮೦]

ಹೀಗೆ ಈ ಉಕ್ತಿಗಳಿಂದ ಹುಬ್ಬಳ್ಳಿ ಮೂರುಸಾವಿರಮಠದ ಗುರುಸಿದ್ಧಸ್ವಾಮಿ (ಶಕ ೧೩೫೩). ಹಂಡೆ ರಾಮಪ್ಪನಾಯಕ (ಶಕ ೧೬೪೧). ಸೊನ್ನದ ದೇಸಾಯಿ ಮಳಿಯಪ್ಪ (ಶಕ ೧೭೦೭). ಹದಿನಾಡ ಎಳಂದೂರು ಅರಸು ಚೆನ್ನೊಡೆಯರ (ಶಕ ೧೫೦೨) ಕಾಲಾವಧಿ ಸ್ಪಷ್ಟವಾಗಿ ಗೊತ್ತಾಗುವವು.

ಹಸ್ತಪ್ರತಿಗಳ ಪ್ರಶಸ್ತಿಭಾಗದ ಸೂಕ್ಷ್ಮವಾದ. ವ್ಯವಸ್ಥಿತವಾದ ಅಧ್ಯಯನದಿಂದ ಕರ್ನಾಟಕದ (ಮೊದಲಿದ್ದ) ವೀರಶೈವ–ಜೈನ–ಬ್ರಾಹ್ಮಣ ಮಠಗಳ ಹೆಸರು. ಸಂಖ್ಯೆ

---

೭೭ ಕಂಗ್ರಸಂ, ಪುಟ : ೫೦.

೭೮ ಧಾವಭಾಂ, ಕಾಪ್ರ : ೨೫೮೨.

೭೯ ಅದೇ, ಕಾಪ್ರ : ೭೧೬.

೮೦ ಅದೇ, ತಾಪ್ರ : ೪೮೮.

ಸ್ವರೂಪ, ಮಠಾಧಿಪತಿಗಳ ಹೆಸರು, ಕಾಲಾವಧಿ, ಶಿಷ್ಯಪರಂಪರೆ, ಕರ್ತವ್ಯ ಹಾಗೂ ಪ್ರಾದೇಶಿಕ ವಿಸ್ತಾರಗಳನ್ನೂ ನಾಡಗೌಡ, ಗೌಡ, ದೇಸಾಯಿ, ನಾಯಕ, ಕರಣಿಕ ಮುಂತಾದವರಿಗೆ ಸಂಬಂಧಿಸಿದ ಚರಿತ್ರೆಯ ವಿವರಗಳನ್ನೂ ವ್ಯಾಪಕವಾಗಿ ಗುರುತಿಸಲು ಸಾಧ್ಯವಿದೆಯೆಂಬುದನ್ನು ಮರೆಯಬಾರದು. ಇದಲ್ಲದೆ ಈ ಕೆಳಗೆ ಕೊಟ್ಟಿರುವ,

"ಈ ಪುಸ್ತಕವ ದೇವರ ದಾಸ್ಮೈಯ್ಯನ ಸಂಪ್ರದಾಯಕ ಚಿತ್ತಾಪುರದ ಅಮಾತಪ್ಪನವರಿಗೆ... ಬರದುಕೊಟ್ಟ ಪಂಚತಂತ್ರದ ಕಥೆ"[೮೧]

ಈ ಕಥಾಗರ್ಭವನ್ನು ಬರದವನು ಕಲ್ಯಾಣದ ಕಲಬುರ್ಗಿಯ ನಡುಮಧ್ಯದ ಗ್ರಾಮವಾದ ಗೌಡನಹಳ್ಳಿಯ ಕಿನ್ನರಿಬ್ರಹ್ಮಯ್ಯನ ಸಾಂಪ್ರದಾಯಕರಾದ ಮಲ್ಲಪ್ಪನವರ ಪುತ್ರನಾದ ಬಸಪ್ಪನು ಬರದ ಹಸ್ತಾಕ್ಷರ..."[೮೨]

ಚಿತ್ತರಗಿ ಹಿರೇಮಠದ ಮುಪ್ಪಿನಸ್ವಾಮಿಗಳ ಶಿಷ್ಯ ಶ್ರೀಮತು ಸಜ್ಜನಶುದ್ಧ ಶ್ರೀ ಬಸವೇಶ್ವರ ಸಾಂಪ್ರದಾಯಿಕ ಶಿವಭಕ್ತ ಶಿರೋಮಣಿ ಗುರುಲಿಂಗಜಂಗಮಪ್ರೇಮಿ ಚೆಪ್ಪರಡ್ಡಿ ಸಂಗನಬಸಪ್ಪನು ತನ್ನ ಸುಹಸ್ತದಿಂದ ತನ್ನ ಮನೋಪ್ರೀತಿಯಲಿ ವೋದಿ ಹೇಳಬೇಕೆಂದು ಬರದನು"[೮೩]

"ಶ್ರೀಮತು ಷಟ್‌ಸ್ಥಲ ಚಕ್ರವರ್ತಿ ತೋಂಟದಾರ್ಯ ಸಂಪ್ರದಾಯರಾದ ಮುರಿಗೆಯ ಶಾಂತವೀರಯ್ಯನರ ಪ್ರಬೋಧಕರಾದ ಲೋಚಿನ ರುದ್ರಯ್ಯನವರು[೮೪]"

ಮುರಿಗಾ ಸಂಪ್ರದಾಯಿಕ ಶ್ರೀ ಶಿವಲಿಂಗ ಬಸವಶಾಂತ ಸಿದ್ಧನಿರಂಜನ ಪ್ರಭು ಗಂಗಾಧರ ಗುರುಗಳಿಂ ಈ ಲೇಖನಕ್ಕೆ ಶುಭವಸ್ತು..."[೮೫] ಮೊದಲಾದವು ವೀರಶೈವ ಶರಣರ ಸಂಪ್ರದಾಯದ ಇತಿಹಾಸವನ್ನು ತಿಳಿಸಿಕೊಡುತ್ತವೆ.

ಹೆಚ್ಚಿನ ಸಂಖ್ಯೆಯ ಹಸ್ತಪ್ರತಿಗಳಲ್ಲಿ ಲಿಪಿಕಾರರು ಲೇಖನಮಿತಿ ಹೇಳಿಲ್ಲ. ಹೀಗಿದ್ದರೂ ನೂರಕ್ಕೆ ಇಪ್ಪತ್ತರಷ್ಟು ಜನ ಲಿಪಿಕಾರರು ಮಾತ್ರ ಅಂತ್ಯದಲ್ಲಿ ಹಸ್ತಪ್ರತಿ ನಕಲುಕಾರ್ಯ ಪೂರ್ಣಗೊಂಡ ಮಿತಿಯನ್ನು ಹೇಳಿರುವರು. ಆದರೆ ಆದಿಯಲ್ಲಿ ಕೇವಲ ಲೇಖನಾರಂಭದ ಮಿತಿ ಉಲ್ಲೇಖಿಸಿರುವವರು ಅಲ್ಪಜನ. ಪ್ರತಿಮಾಡುವ ಕಾರ್ಯ ಆರಂಭಗೊಂಡ ಮಿತಿ, ಮುಕ್ತಾಯವಾದ ಮಿತಿಗಳನ್ನು ನಮೂದಿಸಿರುವವರು ಇನ್ನೂ ಅತ್ಯಲ್ಪ ಜನ. ಇವುಗಳಲ್ಲಿ ಈಗ ಲಿಪಿಕಾರರು ಗ್ರಂಥದ ಪ್ರಾರಂಭ ಮತ್ತು ಮುಕ್ತಾಯ ಮಿತಿಗಳನ್ನು ಹೇಳಿದ ಹಸ್ತಪ್ರತಿಗಳನ್ನು ನೋಡಬಹುದು.

(ಆದಿಯಲ್ಲಿ) "ಶಾಲಿವಾಹನಶಕ ವರುಷಂಗಳು ೧೭೪೯ನೆಯ ಪ್ಲವಂಗನಾಮ ಸಂವತ್ಸರದ ಕಾರ್ತಿಕ ಶುದ್ಧ ೪ ಬುಧವಾರ ದಿವಸ ಜೋರಬಸವ ಚಾರಿತ್ರ ಬರವುದಕ್ಕೆ

---

೮೧ ಕಗ್ರಂಸಂಶಾ, ಪುಟ : ೪೯.

೮೨ ಅದೇ, ಪುಟ : ೫೦.

೮೩ ಧಾವಭಾಂ, ಕಾಪ್ರ : ೪೧/೨ ರಾಘವೇಶ್ವರನ ಕಾವ್ಯ.

೮೪ ಅದೇ, ಕಾಪ್ರ : ೧೮೬೭/೧ ಗಿರಿಜಾ ಕಲ್ಯಾಣ.

೮೫ ಅದೇ, ತಾಪ್ರ : ೪೦೩ ಬಸವರಾಜ ವಿಜಯ.

ಶುಭಮಸ್ತು... (ಅಂತ್ಯದಲ್ಲಿ) ಪ್ಲವಂಗನಾಮ ಸಂವತ್ಸರದ ಮಾರ್ಗಶಿರ ಬ. ೧೧ ಶುಕ್ರವಾರ ವಿಶಾಖಾ ನಕ್ಷತ್ರದಲ್ಲಿ ಚೋರಬಸವ ಚಾರಿತ್ರ ಸಂಪೂರ್ಣ ಮುಗಿದು ಇದ್ದಿತು"೮೬

(ಆದಿಯಲ್ಲಿ) "ಶಾಲಿವಾಹನಶಕ ೧೭೫೬ನೇ ಪ್ರವರ್ತಮಾನ ಜಯಸಂವತ್ಸರದ ಜೇಷ್ಠ ಬ. ೫ ಭಾರ್ಗವವಾರದಲ್ಲು ಪ್ರೌಢರಾಯನ ಕಾವ್ಯವನ್ನು ಪ್ರಾರಂಭವಾಡಿ ಬರುವುದಕ್ಕೆ ಶುಭಮಸ್ತು... (ಅಂತ್ಯದಲ್ಲಿ) ಶಾಲಿವಾಹನಶಕ ವರುಷ ೧೭೫೬ನೆಯ ಪ್ರವರ್ತಮಾನ ಜಯಸಂವತ್ಸರದ ಶ್ರಾವಣ ಶುದ್ಧ ಬೃಹಸ್ಪತಿವಾರ ಪ್ರೌಢರಾಯ ಕಾವ್ಯ ಸಮಾಪ್ತ"೮೭

(ಆದಿಯಲ್ಲಿ) ಶಕ ೧೮೦೭ ಪಾರ್ಥಿವನಾಮ ಸಂವತ್ಸರ ಭಾದ್ರಪದ ಶುದ್ಧ ೧೩ ಚಂದ್ರವಾರ ಆರಂಭಮಾಡಿ, ಭಾದ್ರಪದ ಬಹುಳ ೪ ರವಿವಾರ ೨೫ ಘಟಿಕದೊಳಗೆ ಸಂಪೂರ್ಣವಾಯಿತು"೮೮

(ಆದಿಯಲ್ಲಿ) "ಬನಹಟ್ಟಿ ಮಠದಲ್ಲಿ ಆರಂಭಮಾಡಿದ್ದು. ಪ್ರಾರಂಭದ ಮಿತಿ ಶಕ ೧೮೦೭ ಸಾಲದಾ ಪಾರ್ಥಿವನಾಮ ಸಂವತ್ಸರ ಆಷಾಢ ವದ್ಯ ಮಂಗಳವಾರ ದಿವಸ ಹಗಲ ೫ ತಾಸು... (ಅಂತ್ಯದಲ್ಲಿ) ಸಮಾಪ್ತ ಆದುದು. ಹೂನೂರ ಹೊರಗಿನ ಮಠದಲ್ಲಿ. ಕರಣಹಸಿಗೆ ಮುಗಿದ ಮಿತಿ ಶಕ ೧೦೭ ಸಾಲದಾ ಪಾರ್ಥಿವನಾಮ ಸಂವತ್ಸರ ಶ್ರಾವಣ ಸುದ್ದ ೬ ರವಿವಾರ ೯ ತಾಸು"೮೯

"ವರುಷದ ಮೇಲೆ ಆರು ತಿಂಗಳು. ದಿನ ೭ ಅಶ್ವಿಜ ಶುದ್ಧ ಸಪ್ತಮಿ ಸೋಮವಾರ ದಿನದಲ್ಲಿ......"೯೦

ಈ ಮೇಲಿನ ಉದಾಹರಣೆಗಳು ಚೋರಬಸವ ಚಾರಿತ್ರ. ಪ್ರೌಢರಾಯನ ಕಾವ್ಯ. ಸೂಕ್ಷ್ಮತಂತ್ರ. ಕರಣಹಸಿಗೆ. ಜ್ಯೋತಿಷ್ಯಶಾಸ್ತ್ರ ಗ್ರಂಥಗಳನ್ನು ಪ್ರತಿಮಾಡಲು ಲಿಪಿಕಾರರು ತೆಗೆದುಕೊಂಡ ಅವಧಿಯನ್ನು ಹೇಳುತ್ತವೆ.

ಲಿಪಿಕಾರರು ಲಿಪಿಗೈದ ಸ್ಥಳಗಳನ್ನು ತಿಳಿದುಕೊಳ್ಳುವುದು ಗ್ರಂಥಸಂಪಾದನೆಯ ದೃಷ್ಟಿಯಿಂದ ಅತ್ಯಂತ ಉಪಯುಕ್ತ ಕಾರಣ ಇದಕ್ಕಾಗಿ ಕೆಳಗಿನ ಉದಾಹರಣೆಗಳನ್ನು ಗಮನಿಸಬೇಕು :

"ಯಲಬುರಿಗೆ ಸೀಮೆಯೊಳಗಣ ಮು. ಕಲ್ಲೂರ ಸ್ಥಳಕ್ಕೆ ಮುಖ್ಯ ಕರ್ತೃವಾಗಲ್ಪಟ್ಟಂಥ ಕಲ್ಲೇಶ್ವರನ ದೇವಾಲಯದ ರಂಗಮಧ್ಯದಲ್ಲಿ ಕುಳಿತು ಎಡದಲ್ಲಿ ಕಲ್ಲಿನಾಥ. ಬಲದಲ್ಲಿ ಬಸವೇಶ್ವರನ ಸನ್ನಿಧಿಯಲ್ಲಿ ಕುಳಿತು ಬರಕೊಂಡ ಪುಸ್ತಕವು"೯೧

---

೮೬ ಅದೇ, ತಾಪ್ರ : ೨೫೧೦.
೮೭ ಅದೇ, ತಾಪ್ರ : ೨೫೧೬.
೮೮ ಧಾವಭಾಂ, ಕಾಪ್ರ : ೧೩೦೭/೨ ಸೂಕ್ಷ್ಮತಂತ್ರ.
೮೯ ಅದೇ, ಕಾಪ್ರ : ೨೦೯/೪.
೯೦ ಅದೇ, ತಾಪ್ರ : ೪೬೬ ಜ್ಯೋತಿಷ್ಯಶಾಸ್ತ್ರ.
೯೧ ಅದೇ, ಕಾಪ್ರ : ೩೦೬ ರಾಘವಾಂಕನ ಕಾವ್ಯ.

"ದುಮ್ಮಿಯ ವೀರೇಶ್ವರನ ಗುಡಿಯೊಳಗೆ ಮೂಡಮುಖವಾಗಿ ಕುಳಿತು ಬರದ. ಗುರುಬೋಧಾಮೃತವನು. ಓದಿಸುವ ಗೋವಿಂದಯ್ಯನು...[೯೨]

"ಶ್ರೀಕ್ಷೇತ್ರ ಸೊನ್ನಲಾಪುರದಲ್ಲಿ ಲೇಖನಸಮಾಪ್ತಿ"[೯೩]

"ಬನಪಟ್ಟಿ ಹಿರೇಮಠದಲ್ಲಿ ಮೇಲಮಾಳಿಗೆ ವಳಗ ಕೂತಕೊಂಡು ಬರದುದು.[೯೪]

"ಬಿಜ್ಜಕಲ್ಲಮಠದಲ್ಲಿ ಪ್ರಾರಂಭಿಸಿ ತಾವರಗೇರಿಯ ವಳಿತವಾದ ಒಂದಾಲೆಯಲ್ಲಿ ಮುಕ್ತಾಯವಾಯಿತ್ತು"[೯೫]

"ಆದವಾನಿ ತಾಲೂಕು ಪೈಕಿ ಕುರುಕಳ್ಳಿ ಒಳಗೆ ಇರುವ ನಂದೀಪುರದ ಕರಿ ಬಸಯ್ಯನವರು ಒಳಗೆ ಜಾಣಕನೂರು ಒಳಗೆ ಸಾಲಿ ಹೇಳುವ ವ್ಯಾಳ್ಯ ಹುಡುಗರ ಗದ್ದಲ ಒಳಗೆ ಬರದು ಇದ್ದೇನೆ"[೯೬]

"ಸಿರಪುರ ಶ್ರೀಮಹಾಲಿಂಗೇಶ್ವರಾಧೀಶಚ್ಛತ್ರದಲ್ಲಿ ಪರಿಸಮಾಪ್ತ"[೯೭]

"ನನ್ನಯ್ಯನ ಚಾರಿತ್ರ ಪಾ(ಹ)ಡಗಲಿಯ ಭೀಮರಾಯನ ಮುಖಮಂಟಪದಲ್ಲಿ ಮುಗಿಯಿತ್ತು"[೯೮]

"(ಮಡ) ರಾಮಿ ಸ್ಥಳದಲ್ಲಿ ಡಂಬಳದವರ ಗೃಹದಲ್ಲಿ ಮುಗಿಯಿತ್ತು"[೯೯]

"ಬಿದು ಅಂದಾನಿಸ್ವಾಮಿಗಳ ಪಾದತ್ರಾವ ಮುಗಿತು"[೧೦೦]

"ಹಾರನಹಳ್ಳಿ ನೀಲಲೋಚನಾಖ್ಯ ದೇಶೀಕೇಂದ್ರ ಕಲ್ಲುಮಠದಲ್ಲಿ ಬರಯಲ್ಪಿಟ್ಟಿತು...[೧೦೧]

"ಮುಂದ್ವೈಯನಕೊಪ್ಪದ ಮಠದ ಮೂರಂಕಳದಲ್ಲಿ ಬರೆದು ಮುಗಿಸಿದ ಷಟ್ಕಾವ್ಯದ ಪುಸ್ತಕ"[೧೦೨]

ಮಹಾಂಕಾಳೆಯೆಂಬ ಪುರಾತನರು ಇದ್ದ ಸ್ಥಾನವೆಂಬ ಜಂಬೂರ ವಿರಕ್ತ ಮಠದಲ್ಲಿ..."[೧೦೩]

---

೯೨ ಅದೇ. ತಾಪ್ರ : ೧೦೨೦/೧ ಗುರುಬೋಧಾಮೃತ.
೯೩ ಅದೇ, ಕಾಪ್ರ : ೨೨೩/೬ ಶ್ರೀ ಶೈಲಕಲ್ಪ.
೯೪ ಅದೇ, ಕಾಪ್ರ : ೨೦೨೯/೨ ಏಕೋತ್ತರಶತಸ್ಥಲಟೀಕೆ.
೯೫ ಅದೇ. ತಾಪ್ರ : ೨೬೪೬/೪ ಷಟಸ್ಥಲಜ್ಞಾನಸಾರಾಮೃತ.
೯೬ ಅದೇ. ಕಾಪ್ರ : ೨೭೧೮ ಶರಣ ಲೀಲಾಮೃತ.
೯೭ ಅದೇ, ಕಾಪ್ರ : ೨೬೧೭ ೩ ರಾಜಶೇಖರ ವಿಳಾಸ.
೯೮ ಧಾಪಭಾಂ, ಕಾಪ್ರ : ೨೦೩೧.
೯೯ ಅದೇ, ಕಾಪ್ರ : ೨೦೮೨ ಪ್ರಭುಲಿಂಗಲೀಲೆ.
೧೦೦ ಅದೇ. ತಾಪ್ರ : ೧೭೯/೧೧ ಷಟಸ್ಥಲ ವಚನ (ಬಸವಣ್ಣ).
೧೦೧ ಅದೇ. ತಾಪ್ರ : ೨೪೬ ವೀರಶೈವ ಚಿಂತಾಮಣಿ
೧೦೨ ಅದೇ. ತಾಪ್ರ : ೧೮೯೧/೭ ಮನೋವಿಜಯ
೧೦೩ ಅದೇ. ಕಾಪ್ರ : ೧೩೬೭/೧ ಬಸವ ಪುರಾಣ

"ಕುಂದಗೋಳದ ಸಾದುಗೇರಿಯ ಮೂಕಬಸವೇಶ್ವರನ ಗುಡಿಯಲ್ಲಿ ರಾಘವಾಂಕನ ಕಾವ್ಯ ಸಮಾಪ್ತಿ"[೧೦೪]

"ಕಂಚುಗಲ್ಲು ಬಿದರಿಯಲ್ಲಿದ್ದ ಕಲ್ಮೇಶ್ವರನ ಗುಡಿಯಲ್ಲಿ ಸಮಾಪ್ತಿಯು"[೧೦೫]

"ತ್ರಿಭುವನತಿಲಕ ಚೂಡಾಮಣಿ ಬಸದಿಯ ಚಂದ್ರನಾಥಸ್ವಾಮಿಯ ಸನ್ನಿಧಾನದಲ್ಲೂ ವೇಣುಪುರದ ಚಂದ್ರಯ್ಯನು ಬರದ ಹರಿವಂಶ ಗ್ರಂಥ"[೧೦೬]

"ಕಂದಗಲ್ಲ ವಿರಕ್ತಮಠದಲ್ಲಿ ಶುಕ್ರವಾರ ಮುಕ್ತಾಯವಾಯಿತು"[೧೦೭]

"ನಾಗಲಪುರದ ಒಪ್ಪತ್ತಿನ ಸ್ವಾಮಿಗಳ ಮಠದಲ್ಲಿ ಒಂಬತ್ತನೆ ತಾಸಿನೊಳಗೆ ಸಕಲಗಣಂಗಳ ಕರುಣಾವಲೋಕನದಿಂ ಶಾಂತಮಲ್ಲದೇವನು ಬರದ ಲೇಖಿನದ ಪುಸ್ತಕ"[೧೦೮]

"ಗದುಗಿನ ಹಿರಿಯಮಠದಲ್ಲಿ ಮುಗಿಯಿತ್ತು"[೧೦೯]

"ಸುಳೇಗಾವಿ ಮಹಾನಾಡಿನ ಮಠದಲ್ಲಿ ಸಾಸಲಭೈರವೇಶ್ವರಕಾವ್ಯ ಬರದು ಸಂಪೂರ್ಣವಾಯಿತು"[೧೧೦]

ಇವುಗಳಿಂದ ಲಿಪಿಕಾರರ ಮನೋಧರ್ಮ. ಹಸ್ತಪ್ರತಿಗಳ ಪ್ರಾದೇಶಿಕತೆ ತಿಳಿದು ಬರುವುದು. ಹಸ್ತಪ್ರತಿಗಳ ಆದಿ ಇಲ್ಲವೆ ಅಂತ್ಯದಲ್ಲಿ ಹೇಳುವ "ಶ್ರೀಗುರು ಕೊಟ್ಟೂರೇಶಾಯನಮಃ[೧೧೧] "ಶ್ರೀ ಮೊಗಲಿ ಸಂಗಮೇಶ್ವರಾಯನಮಃ[೧೧೨]"ಚಿತ್ತರಗಿ ಬಸವಲಿಂಗಸ್ವಾಮಿಗಳ ಪಾದವೇ ಗತಿ"[೧೧೩] ಎಂಬ ಮಂಗಲವಾಚಕಗಳು ಅವರ ಇಷ್ಟದೈವವನ್ನೂ ಪ್ರಾದೇಶಿಕತೆಯನ್ನೂ ಸೂಚಿಸುವಂತಿವೆ.

ಹೀಗೆ ಲಿಪಿಕಾರರ ವಾಸಸ್ಥಳ. ಲೇಖನ ಮಿತಿ. ಲಿಪಿಗೈದ ಸ್ಥಳಗಳಿಂದ ಪ್ರಾದೇಶಿಕ ಪಾಠ ಸಂಪ್ರದಾಯ. ಆ ಕಾಲದ ಸ್ವರೂಪ. ಭಾಷೆಯ ಸ್ವರೂಪಗಳೆಂಬ ಮಹತ್ವದ ಅಂಶಗಳು ವ್ಯಕ್ತವಾಗುತ್ತವೆ.

---

೧೦೪ ಅದೇ, ಕಾಪು : ೭೦೫ ರಾಘವಾಂಕ ಕಾವ್ಯ
೧೦೫ ಅದೇ, ಕಾಪು : ೨೨೪ ಭಾವಚಿಂತಾರತ್ನ
೧೦೬ ಅದೇ, ಕಾಪು : ೨೯೭ ನೇಮಿಜಿನೇಶ ಸಂಗತಿ
೧೦೭ ಅದೇ. ಕಾಪು : ೨೬೩೭/೨ ಏಕೋತ್ತರಶತಸ್ಥಲ ಟೀಕೆ
೧೦೮ ಅದೇ. ಕಾಪು : ೨೬೩೭/೧ ಪ್ರಭುದೇವರ ಟೀಕಿನ ವಚನ
೧೦೯ ಅದೇ. ಕಾಪು : ೧೭೩೩/೨ ಭೈರವೇಶ್ವರ ಕಾವ್ಯದ ಕಥಾಸಾಗರ
೧೧೦ ಅದೇ, ಕಾಪು : ೮೨೨/೧ ಭೈರವೇಶ್ವರ ಚಾರಿತ್ರ
೧೧೧ ಅದೇ. ಕಾಪು : ೮೦೬ ವೃಷಭೇಂದ್ರ ವಿಜಯ
೧೧೨ ಅದೇ, ಕಾಪು : ೨೯೯ ಅಖಂಡೇಶ್ವರ ವಚನ
೧೧೩ ಅದೇ. ಕಾಪು : ೧೭೯/೧ ಗುರುಗಳ ವ್ಯಾಖ್ಯಾನ

ಲಿಪಿಕಾರರು ಗುರುವಿನ ಬಳಿಯಲ್ಲಿದ್ದು ಹಸ್ತಪ್ರತಿ ನಕಲು ಮಾಡುವುದನ್ನು ಕಲಿಯುತ್ತಿದ್ದಿರಬೇಕು. "ಬರಹವ ಕಲಿಸಿದ ಮಲ್ಲಯ್ಯನ ಪಾದಕ್ಕೆ ಶರಣು ಶರಣು"[೧೧೪] "ವಿದ್ಯಾಗುರು ಸಿದ್ಧಲಿಂಗದೇವರ ಕೃಪೆಯಿಂದ ಬರೆದುಕೊಟ್ಟಾತ ಗೌಡನು"[೧೧೫] ಎಂಬ ಉಲ್ಲೇಖಗಳು ಈ ಸಂಗತಿಯನ್ನು ಸೂಚಿಸುವಂತಿವೆ.

ಲಿಪಿಕಾರರು ಹಸ್ತಪ್ರತಿಗಳ ಬಗೆಗೆ ಅತ್ಯಂತ ಪೂಜ್ಯಭಾವನೆ ಹೊಂದಿದ್ದರು. ಹಸ್ತಪ್ರತಿಗಳ ಆದಿ ಅಂತ್ಯಗಳಲ್ಲಿ ಹೇಳಿದ ಮಂಗಲವಾಚಕ ಪದಗಳು; ದೇವಾಲಯ, ಮಠ ಪುಣ್ಯಕ್ಷೇತ್ರಗಳಲ್ಲಿ ಮಾಡಿದ ಗ್ರಂಥಲೇಖನ ಕಾರ್ಯಗಳು ಅವರು ಹಸ್ತಪ್ರತಿಗಳ ಬಗೆಗೆ ಇಟ್ಟುಕೊಂಡಿದ್ದ ಭಕ್ತಿ, ಗೌರವ ಹಾಗೂ ಪವಿತ್ರ ಭಾವನೆಗಳನ್ನು ಪ್ರಕಟಪಡಿಸುತ್ತವೆ.

ಹಸ್ತಪ್ರತಿಗಳಲ್ಲಿ ನಡೆಯುವ ಗ್ರಂಥಲೋಪ. ಗ್ರಂಥಪ್ರಕ್ಷಿಪ್ತಗಳ ಪರಿಜ್ಞಾನ ಲಿಪಿಕಾರರಿಗಿದ್ದಿತು.

"ಬಸವಪುರಾಣದಲ್ಲಿಯ ಷಟ್ಪದಂಗಳು ಸೂತ್ರ ತಪ್ಪಿ ಹಿಂದುಮುಂದಾಗಿರುತ್ತಿದ್ದಾಗ ಪೂರ್ವಾರ್ಧ ಉತ್ತರಾರ್ಧ ಪದನು ಹಿಂದು ಮುಂದಾಗಿದ್ದ ಕಡೆಯು। ಹಿಂಚು ಮುಂಚಾಗಿರುತ್ತಿದ್ದ ಖಾಂಡಗಳು ಹಿಂಚು ಮುಂಚಾಗಿರುತ್ತಿದ್ದವು ॥೦॥ ಖಾಂಡದಲ್ಲಿ ಬಂದ ನಾಂದ್ಯಗಳ ಪುನರಪಿಯಾಗಿ ಬರುತ್ತಿದ್ದವು. ಬರಲಾಗದು... ಖಾಂಡಕ್ಕೆ ಬಂದ ನಾಂದ್ಯವೆ ಪುನರಪಿ ಪುನರಪಿಯಾಗಿ ಬರಲಾಗದು। ಎಂಬ ಸಂಜ್ಞೆಗೆ ಶುದ್ಧ ಅಂತು ಖಂಡ ೮ ಕಂ ಸಂಧಿ ೬೦ ಕ್ಕಂ ಪದನು ೩೬೨೧ಕ್ಕಂ ಹೆಚ್ಚಾಗಿದ್ದಡೆ ಹೆಚ್ಚಿನದೆಂದು ತಿಳಿಯುವುದು. ಕಡಿಮೆಯಾಗಿದ್ದಡೆ ಲೇಖನದೋಷವೆಂದರಿಯುವುದು. ಶುದ್ಧಪ್ರತಿಯಲ್ಲಿ ನೋಡಿ ಬರೆದುದು"[೧೧೬]

"ಅಂತು ಸಂಧಿ ೭ಕಂ ಪದ ೪೯೫ಕ್ಕಂ ಮಂಗಳ ಮಹಾಶ್ರೀ। ಅಂತು ಕಾಂಡ ೮ಕ್ಕಂ ಸಂಧಿ ೬೦ ಕ್ಕಂ ಪದ ೩೦೫೨. ಇದಕ್ಕೆ ಸ್ತೋತ್ರ ಪದ ಆಶೀರ್ವಾದ ಪದಗಳಿಂದ ೨೧ ಪದನ ಕಳೆದು ಕಥಾಲಾಪಣಗೆ ೩೦೩೧ ಪದನು ಭೀಮಕವಿಯ ಪ್ರೋಕ್ತಂಗಳು. ಗುರುಭಕ್ತನ ಕಥೆ ಮೊದಲಾದವು ಪ್ರಕ್ಷಿಪ್ತಂಗಳು. ಆ ಕಥೆಗೆ ಸೇರಿದ ಪದಗಳು ಸಂಧಿ ೧೦ ಕ್ಕಂ ಪದ ೫೬೨. ಅಂತು ಉಭಯಂ ಕೂಡಿ ಸಂಧಿ ೬೦ ಕ್ಕಂ ಪದ ೩೬೨೧ ಕ್ಕಂ ಮಂಗಳ ಮಹಾಶ್ರೀ ಅಂತು ಉಭಯಂ ॥[೧೧೭]

---

೧೧೪ ಕಹ ೩, ಪುಟ : ೭೧

೧೧೫ ಸ್ವಂತ ಸಂಗ್ರಹ

೧೧೬ ಧಾವಭಾಂ. ತಾಪ್ರ : ೧೩೬೫/೬ ಬಸವ ಪುರಾಣ

೧೧೭ ಅ ಆದೇ. ಕಾಪ್ರ : ೧೧೯೩ ಬಸವಪುರಾಣ

"ಅಂತು ಸಂಧಿ ೬೩ ಕ್ಕಂ ಪದನು ೨೮೮೩. ಇದಲ್ಲದೆ ಐವತ್ತು ಮೂರನೆ ಸಂಧಿಯಲ್ಲಿ ಇನ್ನೊಂದು ಪ್ರತಿಯಲ್ಲಿ ಇದ್ದ ಹೆಚ್ಚಿನ ಪದ ೧೦. ಉಭಯಂ ಪದನು ೨೮೯೩ ಕಂ ಚೆನ್ನಬಸವಪುರಾಣ ಸಂಪೂರ್ಣಂ..."[೧೧೭]

ಇವು ಬಸವಪುರಾಣ, ಚೆನ್ನಬಸವಪುರಾಣ ಪ್ರತಿಗಳಲ್ಲಿಯ ಗ್ರಂಥಲೋಪ. ಗ್ರಂಥ ಪ್ರಕ್ಷಿಪ್ತಗಳನ್ನು ಎತ್ತಿ ತೋರಿಸುತ್ತವೆ. ಇವುಗಳಲ್ಲದೆ

"ಸದರಿ ಬರೆದ ಸಂಗ್ರ ಸಂಪೂರ್ಣ ಇಲ್ಲದ ಕಾರಣ ಅರ್ಥ ಬರೆದು ಇರುತ್ತದೆ. ತಿಳಿದಿರಬೇಕು"[೧೧೮]

"ಮುಂದೆ ದೊಡ್ಡಪ್ರಕರಣಕ ಪಾಲಿ ಸಾಲಲಿಲ್ಲ. ಮತ್ತೆ ಬರದೇವೆಂತಬಿಟ್ಟೆವು. ಬರೆಯೋಣವಾಗಲಿಲ್ಲ. ಇನ್ನುವಾದರು ನಿಘಂಟುಕಾರರು ವಿಚಾರಿಸಿ ಬರೆಯಬೇಕು."[೧೧೯]

"ಈ ಪ್ರಸಾದ ಚಿಂತಾಮಣಿ ಪುಸ್ತಕಾ ವುದಗಿರಿಯಲ್ಲಿ ಚವಕಿಮಠದಾ ಚೆನ್ನಯ್ಯನು ಈ ಪುಸ್ತಕಾ ಪೂರ್ಣವಿಲ್ಲದಕ್ಕಾಗಿ ಇಲ್ಲಿಗೆ ಸಮಾಪ್ತ"[೧೨೦]

"ವಚನಗಳ ಸಂಖ್ಯ ಪೂರ್ವಪ್ರತಿ ಲೇಖಕ ಬರಿಯದ ಕಾರಣ ಶ್ರೀ ಬಸವೇಶ್ವರ ದೇವರ ವಚನದೊಳಗಣಕ್ಷರಗಳ ಕ್ಲುಪ್ತಿಗೆ ತರುವ ಬುದ್ಧಿಗಳಿಲ್ಲ. ವಚನಗಳಿಗ್ಯಾತರ ಕ್ಲುಪ್ತಿಯೆಂದು ಬಟ್ಟಿದ್ದಾರಾದೀತೆಂದು ನಾನು ಬರಿಯಲಿಲ್ಲವು"[೧೨೧]

ಎಂಬ ವಿಶೇಷ ಉದಾಹರಣೆಗಳನ್ನು ಇಲ್ಲಿ ಲಕ್ಷಿಸಬೇಕು.

ಹಸ್ತಪ್ರತಿ ಹಾಗೂ ಶಾಸನ ಲಿಪಿಕಾರರ ಲೇಖನ ಪರಿಣತಿ. ಸೌಂದರ್ಯಪ್ರಜ್ಞೆಗಳನ್ನು ಸುಂದರ ಲೇಖನ. ಅಲಂಕಾರಲೇಖನ. ಶೀಘ್ರಲೇಖನ. ಬಹುಲಿಪಿಲೇಖನ. ಸಣ್ಣಲಿಪಿ ಲೇಖನಗಳೆಂದು ವಿದ್ವಾಂಸರು ಪರಿಭಾವಿಸಿದ್ದಾರೆ.[೧೨೨] ಆದರೆ ಹಸ್ತಪ್ರತಿ ಲಿಪಿಕಾರರು ಕೇವಲ ಸುಂದರಲೇಖನ, ಸಣ್ಣಲಿಪಿಲೇಖನ ಪರಿಣತಿ ಹೊಂದಿರುದು ಕಂಡುಬರುತ್ತದೆ.

ಸುಂದರ ಲೇಖನ: ಕೆಲವು ಲಿಪಿಕಾರರು ಕನ್ನಡ ಅಕ್ಷರಗಳನ್ನು ಮುತ್ತಿನಂತೆ ಬರೆದಿದ್ದಾರೆ. ಇಂಥ ಲಿಪಿಕಾರರ ಗುಂಪಿಗೆ ಸೇರುತ್ತಾನೆ. ಪುಷ್ಪದಂತ ಪುರಾಣವನ್ನು ಪ್ರತಿ ಮಾಡಿದವ ನವಿಲ್ಗುಂದದ ಮಾದಿರಾಜ. ಈತನು "ಬಿಂದುವಿನೊಂದು ಶೋಭೆ.

---

೧೧೭ ಅದೇ. ಕಾಪ್ರ : ೧೦೧೬ ಚೆನ್ನಬಸವಪುರಾಣ

೧೧೮ ಅದೇ. ಕಾಪ್ರ : ೨೯೩೯ ಜ್ಞಾನಸಿಂಧು (?)

೧೧೯ ಅದೇ. ಕಾಪ್ರ : ೧೦೪೬ ರಾಜಶೇಖರ ವಿಳಾಸ ಟೀಕೆ

೧೨೦ ಅದೇ. ಕಾಪ್ರ : ೩೨೨/೧ ಪ್ರಸಾದ ಚಿಂತಾಮಣಿ ಟೀಕೆ

೧೨೧ ಅದೇ. ಕಾಪ್ರ : ೧೦೭೩ ಸಿಂಗಿರಾಜ ಪುರಾಣ

೧೨೨ ಕಗ್ರಂಸಂಶಾ, ಪುಟ : ೩೨

ತಲೆಕಟ್ಟಿನ ಪೊರ್ಕುಳಿ ಚೆಲ್ವು, ಮಾತ್ರೆಯೊಳ್ ಇದು ೪ ಸಾಲಿನ ಪದ್ಯಸಿಂದ ಬೆಡಂಗು ಬಳ್ಳಿಯೊಳೊರಂಬಡುತಿರ್ದ ನಯಂ, ವಿಸರ್ಗದೊಳೊಳ್ಪಿಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿಲ್ಗುಂದದ ಮಾದಿರಾಜ ವಿಭುಧಂ ವಿಬುಧೋದಿತ ನವ್ಯ ಕಾವ್ಯಮಂ ॥ ಎಂಬ ಪದ್ಯದಲ್ಲಿ[೧೨೩] ಬರೆವಣಿಗೆಯ ಚಲುವಿಕೆ, ಸುಸ್ಪಷ್ಟತೆಗಳನ್ನು ಒತ್ತಿ ಹೇಳಿದ್ದಾನೆ.

ಸಣ್ಣ ಲಿಪಿ ಲೇಖನ: ಲಿಪಿಕಾರರಲ್ಲಿ ಕೆಲವರು ಇದನ್ನು ಒಂದು ಕಲೆಯಾಗಿ ಪರಿಪಾಲಿಸಿಕೊಂಡು ಬಂದುದು ಸ್ಪಷ್ಟವಾಗುತ್ತದೆ. ಇಲ್ಲಿಯ

"ಚೆನ್ನವೀರದೇವರು ಸಣ್ಣ ಬರಹದ ಗುರುನಂಜಯ್ಯನವರಿಗೆ ಲೇಖನವ ಬರದು ಕೊಟ್ಟ"[೧೨೪]

"ಸಂಪಾದನೆಯ ಸಂಣ ಬರಹದ ಗುರುಬಸವರಾಜದೇವರು ಸೇರಿಸಿದ ಶರಣ ಚಾರಿತ್ರದ ವಚನ"[೧೨೫]

"ಸಂಣ ಬರಹದಗುರುಬಸವರಾಜದೇವರು ಶ್ರೀಪಾದ ಕಟಾಕ್ಷದಿಂದ ಶಿವಲಿಂಗ ದೇವರಿಗೆ ಟೀಕು ಯೇಕೋತ್ತರ ಸಮಾಪ್ತಿ[೧೨೬]

ಎಂಬ ಮಾತುಳು ಗುರುನಂಜಯ್ಯ ಹಾಗೂ ಗುರುಬಸವರಾಜದೇವರ "ಸಂಣ ಬರಹ"ವನ್ನು ತಿಳಿಸುವವು.

ಹೀಗೆ ಸುಂದರಲೇಖನ, ಸಣ್ಣಲಿಪಿ ಲೇಖನಗಳನ್ನು ಕಲೆಯಾಗಿ ಪೋಷಿಸಿಕೊಂಡು ಬಂದ ಲಿಪಿಕಾರರು ಹಲವು ಸಂಖ್ಯೆಯ ಹಸ್ತಪ್ರತಿಗಳನ್ನು ಲಿಪಿಗೊಳಿಸಿದ್ದಾರೆ. ಇದಲ್ಲದೆ ಸಾಮಾನ್ಯಲಿಪಿಕಾರರು ಸಾವಿರಾರು ಸಂಖ್ಯೆಯ ಗ್ರಂಥಗಳನ್ನು ಪ್ರತಿಮಾಡಿದ್ದಾರೆ. ಇದು ಲಿಪಿಕಾರರು ನಾಡಿನಕವಿಗಳನ್ನು ಅಮರರನ್ನಾಗಿಸಿದ, ನಾಡವರ ಸಂಸ್ಕೃತಿಯನ್ನು ಅಕ್ಷಯವಾಗಿ ಉಳಿಸಿದ ಪರಮಪುಣ್ಯಕಾರ್ಯ. ಹಸ್ತಪ್ರತಿಗಳ ಮೂಲಕ ಇಂಥ ಲಿಪಿಕಾರರ "ಬದುಕಿನ ಶಿಸ್ತು–ಅಶಿಸ್ತು, ಹೊಣೆಗಾರಿಕೆ– ಹೊಣೆಗೇಡಿತನ, ಗಂಭೀರ ಲಘು ಸ್ವಭಾವಗಳೆಲ್ಲ ವೇದ್ಯವಾಗುತ್ತವೆ. ಆದಕ್ಕಾಗಿ ಒಂದರ್ಥದಲ್ಲಿ ಹಸ್ತಪ್ರತಿಗಳ ಅಭ್ಯಾಸವೆಂದರೆ ಪ್ರಾಚೀನ ಲಿಪಿಕಾರರ ಮನೋಧರ್ಮದ ಅಭ್ಯಾಸವೆನಿಸುತ್ತದೆ" ಎಂಬ ಡಾ॥ ಎಂ. ಎಂ. ಕಲಬುರ್ಗಿ[೧೨೭] ಅವರ ಮಾತು ಹೆಚ್ಚು ಅರ್ಥಪೂರ್ಣವಾಗಿದೆ.

ವಿವಿಧ ಮಟ್ಟದ ಲಿಪಿಕಾರರು ತಾವು 'ಪ್ರತಿಸಮಾನವಾಗಿ', 'ಪ್ರತಿಯಿದ್ದಂತೆ, ನಕಲುಕಾರ್ಯ ಮಾಡಿರುವುದಾಗಿ ಹೇಳಿದ್ದಾರೆ. ಹೀಗಿದ್ದರೂ ಹಸ್ತವೇಗ, ಮರಹು,

---

೧೨೩. ಕಗ್ರಸಂಶಾ, ಪುಟ : ೫೪

೧೨೪ ಧಾವಭಾಂ, ತಾಪ್ರ : ೬೨೩ ಬಸವರಾಜವಿಜಯ

೧೨೫ ಕಗ್ರಸಂಶಾ, ಪುಟ : ೫೬

೧೨೬ ಅದೇ.

೧೨೭ ಅದೇ, ಪುಟ : ೫೭

ಆಲಸ್ಯಗಳಿಂದ ಅನೇಕ ತಪ್ಪುಗಳು ಹಸ್ತಪ್ರತಿಗಳ ಒಡಲಲ್ಲಿ ಮೂಡಿನಿಂತಿವೆ. ಇವು ಮುಂದೆ ಬಳಿನಕಲು, ಪ್ರತಿನಕಲುಗಳಲ್ಲಿ ದಟ್ಟವಾಗಿ ಬೆಳೆದುಬಂದಿವೆ. ಕಾರಣ ತಪ್ಪು ಗಳಾಗದಂತೆ ಪ್ರತಿಮಾಡುವ ಆದರ್ಶವ್ರತವನ್ನು ಲಿಪಿಕಾರರು ಹಿಡಿದರು, ತ್ರಿಕರಣ ಪೂರ್ವಕ ಅದನ್ನು ಪಾಲಿಸಿದರು. ಹಸ್ತಪ್ರತಿಗಳ ಅಂತ್ಯದಲ್ಲಿರುವ.

ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ ।
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ॥

ತಪ್ಪಂ ಬರೆದಾತಂ ಕಡುಜಡ
ನಪ್ಪಾತನೆಂದು ಬಯ್ಯಲ್ ಬೇಡಂ
ತಪ್ಪಿಲ್ಲ ಶುದ್ಧಮಕ್ಕುಂ
ತಪ್ಪಿಲ್ಲದೆ ಪ್ರತಿಸಮಾನವಾಗಿಯೆ ಬರೆಂ ।

ಬಲ್ಲಪುರುಷರು ನೋಡಿ ಗ್ರಂಥದ
ಸೊಲ್ಲು ತಪ್ಪೇಕೆಂದು ಬರದನ
ಹೊಳ್ಳುಗಳೆಯದೆ ನೀತಿಯುಲ್ಲಿ ತಿದ್ದೂದು ಮನವೊಲಿದು
ಬಲ್ಲವನ ತಾನಲ್ಲ ಪ್ರತಿಯೊಳ
ಗುಳ್ಳುದನು ನೋಡುತ್ತ ಬರೆದೆನು
ಸಲ್ಲದಾವುದು ಸಲುವುದಾವುದುದೆಯೆಂದು ನಾನರಿಯೆ ॥[೧೨೮]

ಯಿಂತು ಸೇರಿವೆಯ ಕ್ರಮದಲ್ಲಿ ತಪ್ಪುಳ್ಳಡೆ ನಿಮ್ಮ ಅಕ್ಷರಜ್ಞಾನದಿಂದಲಿ ತಿದ್ದಿ ಯಿವನಾನುಭಾವ ಪ್ರಸಂಗಮುಂ ಶುದ್ಧಮಾಡಿ ಸುಖಿಸುವುದು । ತಪ್ಪು ಬರದುದ ಕಂಡು ಜರಿದು ನುಡಿಯಲುಬೇಡ । ತಪ್ಪು ಮರವಿಂಗಲ್ಲದೆ ಬರೆವಂಗುಂಟೆ ? ನಾನಾ ದರು ಪ್ರತಿಯಿದ್ದಂತೆ ಬರೆದಿದ್ದೇನೆ. ತಪ್ಪುಳ್ಳಡೆ ಬಲ್ಲವರು ತಿದ್ದಿ ಲಕ್ಷಣಮನಡಸು ವದು । ನಿಮ್ಮ ಧರ್ಮ ನಿಮ್ಮ ಧರ್ಮ ಶರಣು ಶರಣಾರ್ಥಿ"[೧೨೯]

ಎಂಬ ಪದ್ಯ ಗದ್ಯಗಳಲ್ಲಿ ಲಿಪಿಕಾರರ ಶ್ರದ್ಧೆ. ನಿಷ್ಠೆ. ವಿಧೇಯತೆ. ಪ್ರಾಮಾಣಿಕತೆಗಳು ಒಡೆದುಕಾಣುತ್ತವೆ. ಇದ್ದುದನ್ನು ಇದ್ದಂತೆ ಬರೆದಿದ್ದೇನೆ. ತಪ್ಪು ನನ್ನದಲ್ಲ ಮೂಲ ಪ್ರತಿಯದೆಂದು ಹೇಳುವ ಇವರ ನೇರಮನಸ್ಸು ಮೆಚ್ಚುವಂತಹದಾಗಿದೆ. ಮರಹು ಆಲಸ್ಯ. ಹಸ್ತವೇಗ. ದೃಷ್ಟಿದೋಷ ಶ್ರವಣದೋಷಗಳಿಂದ ಗ್ರಂಥಗಳಲ್ಲಿ ತಪ್ಪುಗಳಾಗು ವುದು ಸಹಜ. ಆದುದರಿಂದ ಈ ಅನಿವಾರ್ಯ ತಪ್ಪುಗಳನ್ನು ಮನ್ನಿಸಬೇಕೆಂದು

ಕರವೇಗದೊಳಗಾಲಸ್ಯ
ಭರದೊಳು ಉರು ಮದದಿಂ ಹಂಕಾರದಿಂ

---

೧೨೮ ಕಗ್ರಂಸಂಶಾ, ಪುಟ : ೫೮

೧೨೯ ಧಾವಭಾಂ, ಕಾಪ್ರ : ೩೩೫/೧ ಗಣಭಾಷಿತರತ್ನಮಾಲೆ

ಬರೆದ ಲಿಪಿಯೊಳು ತಪ್ಪಿ
ದ್ದರಿದನು ಕೂಡಿ ಸೆರೆ ತಿದ್ದಿ ಮೆರೆವುದು ಸುಜನರು ॥೧೩೦

ಪದಪದ್ಧತಿಗಳ ಬರದವ
ನಥವಂ ಪಾಷಂಡಿ ಮಾತ್ರುಗಳಿಂ ಜನವರಿಯುದ
ಮುದಡಿದೆ ಕೃತಿಗೆಟ್ಟನೆನ್ನದಿರಿ
ಚದುರರು ತಪ್ಪಿದರೆ ತಿದ್ದಲು ಕೀರ್ತಿ ತರುಕು ॥೧೩೧

ಕವಿತೆಯ ಗುಣಮನೆ ತಿಳಿಯುದೆ
ಯಿವನೇತಕೆ ಬರೆದನೆಂದು ನಿಂದಿಸಲು ಬೇಡ
ಶಿವಶರಣರೆನ ತಪ್ಪನು
ವಿವರಿಸದೆ ತಿದ್ದಿ ತಪ್ಪ, ನಮಿಸುವೆ ನಿಮಗಂ ॥ ೧೩೨

ಕುಂದಿದ ಪದಕ್ಷರಂಗಳ
ಒಂದೊಂದ ತೆಗೆದು ಈಗಲಿ ಬಯ್ಯಲಿ ಬೇಡ
ಮುಂದುಗೆ ಬೇಕೆಂದು ಭಕ್ತರ
ಚಂದದಿ ಶ್ರೀಚರಣವ ನೆನೆವೆನು ನಡಿಸಿ ಪ್ರತಿಯಂ ೧೩೩

ಎಂಬ ಪದ್ಯಗಳಲ್ಲಿ ಅವರು ಕಳಕಳಿಯ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಇಂಥ ಪದ್ಯಗಳನ್ನು ಪ್ರೌಢಲಿಪಿಕಾರರಲ್ಲಿ ಮಾತ್ರ ಕಾಣುತ್ತೇವೆ. ಇವು ಆಯಾ ಲಿಪಿಕಾರರ ಸ್ವಂತ ರಚನೆಗಳಾಗಿರಬಹುದು ಇಲ್ಲವೆ ಸಾಂಪ್ರದಾಯಿಕವಾಗಿ ಬಳಸಿಕೊಂಡಂಥವುಗಳಾಗಿರಬಹುದು. ಸಾಮಾನ್ಯ ಲಿಪಿಕಾರರು ತುಂಡುಗದ್ಯಗಳಲ್ಲಿ ವಿವಿಧ ರೀತಿಯಾಗಿ ವಿನಂತಿಸಿಕೊಂಡಿದ್ದಾರೆ. ಪದ್ಯಗಳಿಗಿಂತಲೂ ಗದ್ಯದಲ್ಲಿ ಸ್ವತಂತ್ರ ರಚನೆ ಅಧಿಕವೆನಿಸುತ್ತದೆ. ಒಟ್ಟಿನಲ್ಲಿ ತಪ್ಪುಗಳನ್ನು ತಿದ್ದಿಕೊಳ್ಳಬೇಕೆಂಬ ಲಿಪಿಕಾರರ ಪ್ರಾರ್ಥನೆ ಸ್ವಂತ ಗದ್ಯ ಹಾಗೂ ಸಾಂಪ್ರದಾಯಿಕ ಪದ್ಯಗಳಲ್ಲಿ ವಿಪುಲವಾಗಿಯೂ ಸ್ವಂತ ಪದ್ಯಗಳಲ್ಲಿ ವಿರಳವಾಗಿಯೂ ಇರುವುದು ಗೊತ್ತಾಗುತ್ತದೆ.

ಭಕ್ತಿ, ಪ್ರೀತಿ, ಉತ್ಸಾಹ, ಪರಿಶ್ರಮ, ಪ್ರಯತ್ನ ಹಾಗೂ ಸಮರ್ಪಣ ಭಾವನೆಯಿಂದ ತಾವು ಮಾಡಿದ ಸಕಲು ಕಾರ್ಯ ಮುಂದಿನ ಜನಾಂಗಕ್ಕೆ ನಡೆದು ಬರುವಂತಾಗಬೇಕು. ಲೇಖನತಪಸ್ಸು ಲೋಕದ ಜನರಿಗೆ ಸದ್ವಿನಿಯೋಗವಾಗಬೇಕು–ಎಂಬ ದಾರ್ಶನಿಕ ದೃಷ್ಟಿ ಲಿಪಿಕಾರರದು. ಆದುದರಿಂದ ಲೇಖನ, ಸಂರಕ್ಷಣ ಕಾರ್ಯಗಳೆರಡೂ ಲಿಪಿಕಾರರಿಗೆ ಸಮಾನ ಮಹತ್ವದವುಗಳಾಗಿ ಪರಿಣಮಿಸಿದವು. ಅಲ್ಲದೆ

---

೧೩೦ ಕಗ್ರಸಂಶಾ, ಪುಟ ೫೯

೧೩೧ ಸ್ವಂತ ಸಂಗ್ರಹ

೧೩೨ ಧಾಪಭಾಂ, ತಾಪ್ರ : ೪೨೧/೧೧ ಮಲ್ಲೇಶ್ವರಖಾಂಡ್ಯ

೧೩೩ ಅದೇ, ಕಾಪ್ರ : ೧೬೪೭ ಗುರುಬೋಧಾಮೃತ

ಲಿಪಿಕಾರರ ದೃಷ್ಟಿಯಲ್ಲಿ ಗ್ರಂಥಗಳು ದೈವೀಸ್ವರೂಪವನ್ನು ಪಡೆದಿದ್ದವು. ಹೀಗಾಗಿ ಅವುಗಳನ್ನು ನಾಶಮಾಡಬಾರದು ಎಂದು ಅಂತಃಕರಣಪೂರ್ವಕವಾಗಿ ಬಿನ್ನವಿಸಿಕೊಂಡಿದ್ದಾರೆ. ಹಸ್ತಪ್ರತಿಗಳ ಅಂತ್ಯದಲ್ಲಿರುವ

ಭಗ್ನಪೃಷ್ಠಕಟಿಗ್ರೀವಾ ಬದ್ಧದೃಷ್ಟಿರಧೋಮುಖಂ
ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯೇತ್ ॥

ಬೆನ್ನು, ಸೊಂಟ, ಕೊರಳುಗಳನ್ನು ನೋಯಿಸಿಕೊಂಡು ಮುಖ ಕೆಳಗೆಮಾಡಿ ಕಣ್ಣಲ್ಲಿ ಕಣ್ಣಿಟ್ಟು ಅತ್ಯಂತ ಕಷ್ಟಪಟ್ಟು ಬರೆದಿರುವ ಈ ಶಾಸ್ತ್ರವನ್ನು ಪ್ರಯತ್ನಪೂರ್ವಕವಾಗಿ ಕಾಪಾಡಿರಿ

ತೈಲಾದ್ರಕ್ಷೇಜ್ಜಲಾದ್ರಕ್ಷೇಚ್ಛಿಥಿಲ ಬಂಧನಾತ್ ।
ಮೂರ್ಖ ಹಸ್ತೇ ನ ದಾತವ್ಯಂ ಏವಂ ವದತಿ ಪುಸ್ತಕಂ ॥

(ನನ್ನನ್ನು ಎಣ್ಣೆಯಿಂದ ರಕ್ಷಿಸಿರಿ, ಜಲದಿಂದ ರಕ್ಷಿಸಿರಿ. ಸಡಿಲುಕಟ್ಟುವಿಕೆಯಿಂದ ರಕ್ಷಿಸಿರಿ. ಮೂರ್ಖನ ಕೈಯಲ್ಲಿ ನನ್ನನ್ನು ಕೊಡಬೇಡಿರಿ– ಎಂದು ಪುಸ್ತಕ ಹೀಗೆ ಬೇಡಿಕೊಳ್ಳುತ್ತದೆ.)

ಪುಸ್ತಕಂ ವನಿತಾ ವಿತ್ತಂ ಪರಹಸ್ತ ಗತಂ ಗತಂ
ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾಚ ಖಂಡಶಃ ॥

(ಪುಸ್ತಕ, ಸ್ತ್ರೀ, ಧನ– ಈ ಮೂರೂ ಬೇರೆಯವರ ಕೈಸೇರಿದರೆ ಹೋದಂತೆಯೇ. ಒಂದುವೇಳೆ ಅವು ತಿರುಗಿಬಂದರೆ (ಪುಸ್ತಕ) ಜೀರ್ಣವಾಗಿರುತ್ತದೆ. (ಸ್ತ್ರೀ) ಭ್ರಷ್ಟಳಾಗಿರುತ್ತಾಳೆ., (ಧನ) ಭಾಗಶಃ ಬರುತ್ತದೆ) ಎಂಬ ಮಾತುಗಳು ಲಿಪಿಕಾರರಿಗಿದ್ದ ಗ್ರಂಥರಕ್ಷಣೆಯ ಭಾವನೆಯನ್ನು ಪ್ರಚುರಪಡಿಸುತ್ತವೆ.

ಸಂಕ್ಷೇಪಗಳು :

ಕಗ್ರಸಂ – ಕನ್ನಡ ಗ್ರಂಥ ಸಂಪಾದನೆ.
ಕಗ್ರಂಸಂಶಾ – ಕನ್ನಡ ಗ್ರಂಥಸಂಪಾದನಾಶಾಸ್ತ್ರ
ಕಕಚ – ಕರ್ನಾಟಕ ಕವಿಚರಿತೆ
ಕಹಪ್ರಇ – ಕನ್ನಡ ಹಸ್ತಪ್ರತಿಗಳ ಇತಿಹಾಸ
ಕಾಪ್ರ – ಕಾಗದ ಪ್ರತಿ
ತಾಪ್ರಂ – ತಾಳೆಗರಿ ಪ್ರತಿ
ಧಾವಭಾಂ – ಧಾರವಾಡ (ಕನ್ನಡ ಅಧ್ಯಯನ ಪೀಠ) ವಚನಸಾಹಿತ್ಯ ಹಸ್ತಪ್ರತಿ ಭಾಂಡಾರ
ಮೈಹಸೂ – ಮೈಸೂರು ಹಸ್ತಪ್ರತಿ ಸೂಚಿ

ಕನ್ನಡ ಹಸ್ತಪ್ರತಿಗಳ ವಿಷಯ ವೈವಿಧ್ಯ

● ಡಾ. ವೀರಣ್ಣ ರಾಜೂರ

ಮಾನವನ ಮನಸ್ಸು ಅನುಭವಗಳ ಆಗರ. ಪ್ರಕೃತಿ. ಪರಿಸರ, ಸುತ್ತಲ ಪ್ರಪಂಚದಿಂದ ಕಂಡುಂಡ ಆ ಅನುಭವಗಳನ್ನು ಅವನು ಮೊದಲಿನಿಂದಲೂ ಒಂದಿಲ್ಲೊಂದು ಮಾಧ್ಯಮದ ಮೂಲಕ ಅಭಿವ್ಯಕ್ತ ಪಡಿಸುತ್ತ ಬಂದಿದ್ದಾನೆ. ಭಾಷೆಯು ಬಳಕೆ ಇನ್ನೂ ಇಲ್ಲದಿದ್ದಾಗ ಅದನ್ನು ಆಂಗಿಕ ಸಂಕೇತಗಳ ಮೂಲಕ ವ್ಯಕ್ತಪಡಿಸಿದ. ಆ ಸಂಕೇತಗಳು ಅವನ ಅಂತರಂಗದ ಎಲ್ಲ ಭಾವನೆಗಳನ್ನು ಪ್ರಕಟಿಸಲು ಸಮರ್ಥವಾಗಲಿಲ್ಲ. ಮತ್ತೊಂದು ಹಾದಿ ಹುಡುಕಿದ; ಮಾತು ರೂಢಿಸಿಕೊಂಡ. ಆಂಗಿಕ ಸಂಕೇತಗಳು ವಾಚಿಕ ಸಂಜ್ಞೆಗಳಾಗಿ ಅವುಗಳಿಗಿಂತ ಹೆಚ್ಚಿನ ಕಾರ್ಯವನ್ನು ನಿರ್ವಹಿಸ ತೊಡಗಿದವು. ಅಷ್ಟರಿಂದಲೇ ಅವನು ತೃಪ್ತನಾಗಲಿಲ್ಲ. ಆಡಿದ ಮಾತು ಮರುಕ್ಷಣದಲ್ಲಿಯೇ ಗಾಳಿಯಲ್ಲಿ ಲೀನವಾಗುತ್ತಿತ್ತು; ಸ್ಮರಣಶಕ್ತಿ ಕುಂದಿದಂತೆಲ್ಲ ಅದು ಬಹುಕಾಲ ಉಳಿಯದೆ ಮರೆತುಹೋಗತೊಡಗಿತು. ಅದನ್ನು ಶಾಶ್ವತಗೊಳಿಸಲು ಮತ್ತೊಂದು ಮಾರ್ಗಶೋಧ ನಡೆಸಿದ: ಲಿಪಿಯನ್ನು ಕಂಡುಕೊಂಡ. ಪ್ರಕೃತಿದತ್ತವಾದ ಕಲ್ಲು. ಕಟ್ಟಿಗೆ, ಚರ್ಮ, ಮರದ ಎಲೆ, ಗರಿ, ಕಾಗದ ಇತ್ಯಾದಿ ವಸ್ತುಗಳ ಮೇಲೆ ಅದನ್ನು ಮೂಡಿಸಿದ. ತನ್ನೆಲ್ಲ ಅನುಭವದ ರಾಶಿಯನ್ನು ಅದರಲ್ಲಿ ಹಿಡಿದಿಟ್ಟ, ಹೀಗೆ ಆಂಗಿಕ ಸಂಕೇತಗಳಿಂದ ಆರಂಭವಾದ ಅವನ ಅನುಭವದ ಅಭಿವ್ಯಕ್ತಿ ವಾಚಕ ರೂಪದಲ್ಲಿ ನಡೆದು, ಲಿಪಿಕವಚಪಡೆದು ಸ್ಥಿರಗೊಂಡಿತು. ಅವನು ಹಸ್ತದಿಂದ ಮರದ ಗರಿಗಳ ಮೇಲೆ ಕೊರೆದ, ಕಾಗದದ ಮೇಲೆ ಬರೆದ ಬರೆಹ ಹಸ್ತಲಿಖಿತವೆನಿಸಿತು. ಹಸ್ತಲಿಖಿತವನ್ನೊಳಗೊಂಡ ವಸ್ತುಗಳು ಹಸ್ತಪ್ರತಿಗಳೆನಿಸಿದವು.

ಹಸ್ತಪ್ರತಿಗಳಲ್ಲಿ ಅಳವಟ್ಟ ವಿಷಯ ಅನಂತಮುಖಿ. ಮಾನವನ ಆಲೋಚನೆಗಳ. ಕಲ್ಪನೆಗಳ ಎಲ್ಲ ಮಜಲುಗಳೂ ಅದರಲ್ಲಿ ಮೂರ್ತಸ್ವರೂಪ ತಾಳಿ ನಿಂತಿವೆ. ಎಷ್ಟು ಮನಸ್ಸುಗಳೋ ಅಷ್ಟು ಆಲೋಚನೆಗಳು. ಒಂದೊಂದು ಮನಸ್ಸಿನಲ್ಲಿಯೇ ಮತ್ತೆ ಅನೇಕ ಕಲ್ಪನೆಗಳ ಕವಲುಗಳು. ಅವುಗಳಿಗನುಗುಣವಾಗಿ ವಿಷಯಗಳಲ್ಲಿ ವೈವಿಧ್ಯ ವ್ಯೈದಾಳಿದೆ. ಈ ದೃಷ್ಟಿಯಿಂದ ಮಾನವನ ಆಲೋಚನೆಗಳ ವೈವಿಧ್ಯವೇ ಹಸ್ತಪ್ರತಿಗಳ ವಿಷಯ ವೈವಿಧ್ಯವೆನಿಸುತ್ತದೆ.

ಕನ್ನಡ ಹಸ್ತಪ್ರತಿಗಳ ಕನ್ನಡಿಗರ ಆಲೋಚನೆಗಳ ಕೇಂದ್ರಗಳು. ಅವುಗಳ ಅಧ್ಯಯನವೆಂದರೆ ಕನ್ನಡ ಸಾಹಿತ್ಯದ ಅಧ್ಯಯನ. ಅದಕ್ಕಾಗಿ ಕನ್ನಡ ಹಸ್ತಪ್ರತಿಗಳ

ವಿಷಯ ವೈವಿಧ್ಯವನ್ನು ನಾವು ಕನ್ನಡ ಸಾಹಿತ್ಯದ ವಿಷಯವೈವಿಧ್ಯದ ಜೊತೆಗೆ ವಿಚಾರಿಸ ಬೇಕಾಗುತ್ತದೆ.

ಕನ್ನಡ ಸಾಹಿತ್ಯಕ್ಕೆ ಸುಮಾರು ಒಂದೂವರೆ ಸಾವಿರ ವರುಷದ ಇತಿಹಾಸವಿದೆ. ಪ್ರಾರಂಭದಿಂದ ಅಂದರೆ ೯ನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದ ವರೆಗಿನ ಅದರ ಇತಿಹಾಸವನ್ನು ಅವಲೋಕಿಸಿದರೆ ಅನೇಕ ಮತದ ಕವಿಗಳಿಂದ ರಚಿತ ವಾದ ಅನೇಕ ಛಂದೋರೂಪ. ಸಾಹಿತ್ಯರೂಪವನ್ನು ಹೊಂದಿದ. ಅನೇಕ ವಿಷಯ ಗಳನ್ನು ಒಳಗೊಂಡ ಅಪಾರ ಗ್ರಂಥರಾಶಿ ನಮ್ಮನ್ನು ಎದುರುಗೊಳ್ಳುತ್ತದೆ. ಅದರ ವಿಷಯ ವೈವಿಧ್ಯ. ರೂಪವೈವಿಧ್ಯ ವಿಸ್ಮಯಗೊಳಿಸುತ್ತದೆ.

ಕನ್ನಡ ಸಾಹಿತ್ಯದ ಆರಂಭದ ಕವಿಗಳು ಜೈನರು. ಅವರು ತಮ್ಮ ಮತತತ್ತ್ವ ಪ್ರಚಾರಕ್ಕಾಗಿ ತೀರ್ಥಂಕರರ ಪುರಾಣಗಳನ್ನೂ ಕಾವ್ಯಶಕ್ತಿಯ ಪ್ರಕಟನೆಗಾಗಿ ರಾಮಾ ಯಣ. ಮಹಾಭಾರತದ ವಸ್ತುವನ್ನು ಆರಿಸಿಕೊಂಡು ತಮ್ಮ ಆಶಯಕ್ಕೆ ಹೊಂದಿಸಿ ಕೊಂಡು ಲೌಕಿಕ ಕಾವ್ಯಗಳನ್ನೂ ರಚಿಸಿದರು. ಅವರು ಆರಿಸಿಕೊಂಡ ವಿಷಯಾಭಿ ವ್ಯಕ್ತಿಗೆ ಚಂಪೂರೂಪ ಸಮರ್ಥ ವಾಹಕವಾಯಿತು. ಈ ಪರಂಪರೆ ಹನ್ನೊಂದನೆಯ ಶತಮಾನದ ಅಂತ್ಯದವರೆಗೂ ಸಾಗಿಬಂದಿತು.

ಹನ್ನೆರಡನೆಯ ಶತಮಾನಕ್ಕೆ ಕಾಲಮಾನದ ಅವಶ್ಯಕತೆಗನುಗುಣವಾಗಿ ಶಿವ ಶರಣರು ಉದಿಸಿಬಂದರು. ತಮ್ಮ ಅನುಭವ ಅಧ್ಯಾತ್ಮ ತತ್ತ್ವಜ್ಞಾನಗಳನ್ನು ಸರಳ ರೂಪದಲ್ಲಿ ಪ್ರಕಟಿಸಿದರು. ಅವರ ವಸ್ತುವಿಗೆ ತಕ್ಕ ವಚನ ರೂಪ ಸೃಷ್ಟಿಯಾಯಿತು. ಜೊತೆಗೆ ಅನೇಕ ದೇಶೀಪ್ರಕಾರಗಳು ಬಳಕೆಗೆ ಬಂದವು. ತ್ರಿಪದಿ. ತಾರಾವಳಿ. ದಂಡಕ. ಅಷ್ಟಕ. ಶತಕ. ಸ್ವರವಚನ. ಸಾಂದ್ಯ ಮೊದಲಾದ ಕಿರಿರೂಪಗಳು ಸ್ತೋತ್ರ. ತತ್ತ್ವ. ನೀತಿ. ಭಕ್ತಿ ವೈರಾಗ್ಯ ಮೊದಲಾದ ವಿಷಯಗಳನ್ನು ನಿರೂಪಿಸಲು ಯೋಗ್ಯ ಮಾಧ್ಯಮಗಳೆನಿಸಿದವು.

ವಚನದ ಉಬ್ಬರ ಇಳಿದೊಡನೆ ಹರಿಹರನಿಂದ ರಗಳೆ ರೂಪ ಸಾಹಿತ್ಯದ ಗದ್ದುಗೆ ಯನ್ನು ಏರಿತು. ಶಿವಲೀಲೆಗಳು. ಅರವತ್ತುಮೂರು ಪುರಾತನರ ಚರಿತ್ರೆ. ಬಸವಾದಿ ಶರಣರ ಚರಿತ್ರೆ ರಗಳೆ ವಾಹಕಕ್ಕೆ ತಕ್ಕ ವಸ್ತುಗಳಾದವು. ತರುವಾಯ ಷಟ್ಪದಿ ಪ್ರಕಾರ ರಾಘವಾಂಕನಿಂದ ದೀಕ್ಷೆ ಪಡೆದು ಅದೇ ಶಿವಲೀಲೆ. ಶರಣರ ಚರಿತ್ರೆ. ವೀರ ಶೈವ ತತ್ತ್ವ ಸಿದ್ಧಾಂತಗಳ ವಿವರಣೆಗೆ ಮೈವೊಡ್ಡಿ ನಿಂತಿತು. ವಚನ. ರಗಳೆ. ಷಟ್ಪದಿ ವೀರಶೈವ ಸಾಹಿತ್ಯ ಪ್ರಕಾರಗಳೆನಿಸಿದವು. ವೀರಶೈವ ಕವಿಗಳಿಂದ ಜನಪ್ರಿಯತೆ ಗಳಿ ಸಿದ ಷಟ್ಪದಿ ಮುಂದೆ ಬ್ರಾಹ್ಮಣ. ಜೈನ ಕವಿಗಳಿಗೂ ತನ್ನನ್ನು ಒಗ್ಗಿಸಿಕೊಂಡು ೧೬ನೆಯ ಶತಮಾನದವರೆಗೂ ದಿಗ್ವಿಜಯವನ್ನು ಸಾಧಿಸಿತು. ಬ್ರಾಹ್ಮಣ ಕವಿಗಳು ರಾಮಾ ಯಣ, ಮಹಾಭಾರತ, ಭಾಗವತಗಳ ವಸ್ತುಗಳನ್ನು ಅದರಲ್ಲಿ ಸರಿಯಾಗಿ ಹರಿಬಿಟ್ಟರು. ವೇದಾಂತ. ಸಿದ್ಧಾಂತ. ವೈದಿಕಮತ ತತ್ತ್ವಗಳನ್ನು ಚಿತ್ರಿಸಿದರು. ಷಟ್ಪದಿಯ ಬಳಕೆ

ಯಿಸ್ಸೂ ಪ್ರಚಾರದಲ್ಲಿರುವಾಗಲೇ ಸಾಂಗತ್ಯರೂಪ ಸಾಹಿತ್ಯ ಪ್ರವೇಶಿಸಿ ಅದರ ಜೊತೆಗೂಡಿ ನಡೆಯುತೊಡಗಿತು. ಜೈನ. ವೀರಶೈವ. ಬ್ರಾಹ್ಮಣ ಮೂರೂ ಮತದ ಕವಿಗಳಿಂದ ಧಾರ್ಮಿಕ. ತಾತ್ವಿಕ. ಲೌಕಿಕ ಮುಂತಾದ ಸಂಕೀರ್ಣ ವಿಷಯಗಳನ್ನು ಹೊಂದಿಸಿಕೊಂಡು ಮುಂದುವರಿಯಿತು. ಅದೇ ಕಾಲಕ್ಕೆ ಪುರಂದರ. ಕನಕ ಮೊದಲಾದ ಹರಿದಾಸರಿಂದ ಕೀರ್ತನವೆಂಬ ಹೊಸದೊಂದು ರೂಪ ಹುಟ್ಟಿಕೊಂಡು ಭಕ್ತಿ. ಜ್ಞಾನ. ಲೋಕನೀತಿ. ಸಮಾಜ ವಿಡಂಬನೆಯಂತಹ ವಿಷಯಗಳನ್ನು ಮಾರ್ಮಿಕವಾಗಿ. ಪ್ರಕಟಪಡಿಸಿತು. ಈ ಪ್ರಮುಖ ಪ್ರಕಾರದ ಜೊತೆಗೆ ಗದ್ಯಪ್ರಕಾರವೂ ಧಾರ್ಮಿಕ ಮತ್ತು ಲೌಕಿಕ ಕಥಾವಸ್ತುಗಳಿಗೆ ವಾಹಕವಾಗಿ ನಡೆದುಬಂದಿತು. ಶುದ್ಧ ಧಾರ್ಮಿಕ, ತಾತ್ವಿಕ ವಿಷಯಗಳ ಜೊತೆಗೆ ಶುದ್ಧ ಲೌಕಿಕ ಶಾಸ್ತ್ರ ವಿಷಯಗಳೂ ವಿವಿಧ ಪ್ರಕಾರದ ಕೃತಿಗಳಲ್ಲಿ ವಿಹರಿಸುತ್ತ ಬಂದವು.

ಹೀಗೆ ಕನ್ನಡ ಸಾಹಿತ್ಯ ಧರ್ಮತತ್ವ. ಸಾಹಿತ್ಯರೂಪ. ಛಂದೋರೂಪ ಮತ್ತು ವಿವಿಧ ವಸ್ತುಗಳ ಸಮನ್ವಯವನ್ನು ಸಾಧಿಸಿಕೊಂಡು ವೈವಿಧ್ಯಮಯವಾಗಿ ಬೆಳೆದು ಬಂದಿದೆ. ಕಾಲಕಾಲಕ್ಕೆ ಛಂದೋರೂಪಕ್ಕೆ ತಕ್ಕ ವಸ್ತು. ವಸ್ತುವಿಗೆ ತಕ್ಕ ಛಂದೋರೂಪ ಹೊಂದಿಕೊಳ್ಳುತ್ತ ಬಂದು ಈ ರೂಪಕ್ಕೆ ಈ ವಸ್ತುವೇ ಸರಿ ಎನ್ನುವಷ್ಟರ ಮಟ್ಟಿಗೆ ತಾದಾತ್ಮ್ಯವನ್ನು ಸಾಧಿಸಿರುದು ಕಂಡುಬರುತ್ತದೆ. ಕನ್ನಡ ಸಾಹಿತ್ಯದ ಈ ರೂಪವೈವಿಧ್ಯ ಮತ್ತು ವಿಷಯವೈವಿಧ್ಯವನ್ನೆಲ್ಲ ಕನ್ನಡ ಹಸ್ತಪ್ರತಿಗಳಲ್ಲಿಯೂ ಕಾಣುತ್ತೇವೆ.

ಕನ್ನಡ ಹಸ್ತಪ್ರತಿಗಳ ವಿಷಯವನ್ನು ೧. ಧಾರ್ಮಿಕ ಸಾಹಿತ್ಯ. ೨. ಕವಿಸಾಹಿತ್ಯ ೩. ಚರಿತ್ರ ಸಾಹಿತ್ಯ. ೪. ಶಾಸ್ತ್ರಸಾಹಿತ್ಯ. ೫. ಟೀಕಾಸಾಹಿತ್ಯ ಎಂದು ಸ್ಥೂಲವಾಗಿ ಐದು ವಿಭಾಗಗಳಲ್ಲಿ ಒಡೆದು. ಒಂದೊಂದು ವಿಭಾಗದಲ್ಲಿಯೂ ಮತ್ತೆ ಹಲವು ಉಪ ವಿಭಾಗಗಳನ್ನೂ ಕಲ್ಪಿಸಿ ಅಭ್ಯಸಿಸಬಹುದು.

೧. ಧಾರ್ಮಿಕ ಸಾಹಿತ್ಯ :

ಮಾನವನ ಬಾಳಿನಲ್ಲಿ ಅತ್ಯಂತ ಮಹತ್ವದ ಪಾತ್ರವಾಡುತ್ತ ಬಂದ ಧರ್ಮ. ಅವನ ಕಲ್ಪನೆಯ ಕೂಸುಗಳಾದ ಕೃತಿಗಳಲ್ಲಿಯೂ ಮೂಡಿನಿಂತಿದೆ. ಕನ್ನಡ ಸಾಹಿತ್ಯದಲ್ಲಂತೂ ಅದರ ಪ್ರಭುತ್ವ ಹಿರಿದು. ಅದಕ್ಕಾಗಿ 'ಧಾರ್ಮಿಕ ಸಾಹಿತ್ಯ' ವಿಭಜನೆಗೆ ಪ್ರಥಮ ಪ್ರಾಶಸ್ತ್ಯ.

ಈ ವಿಭಾಗದಲ್ಲಿ ಪುರಾಣ. ಮತತತ್ವ. ಮತ್ತು ಸ್ಥಳ ಮಹಾತ್ಮೆಗೆ ಸಂಬಂಧಿಸಿದ ಕೃತಿಗಳು ಸಮಾವೇಶಗೊಳ್ಳುತ್ತವೆ. ಪುರಾಣ ಮತ್ತು ಮತತತ್ವ ವಿಷಯಗಳಲ್ಲಿ ಜೈನ ಪುರಾಣ–ಮತತತ್ವ ಕೃತಿಗಳು. ವೀರಶೈವ ಪುರಾಣ–ಮತತತ್ವ ಕೃತಿಗಳು ಹಾಗೂ ವೈದಿಕ ಪುರಾಣ–ಮತತತ್ವ ಕೃತಿಗಳು ಎಂದು ಮತ್ತೆ ಮೂರು ಭಾಗಗಳನ್ನು ಮಾಡಬಹುದು.

ಜೈನ ಪುರಾಣಗಳಲ್ಲಿ ೨೪ ತೀರ್ಥಂಕರರ ಚರಿತ್ರೆಗಳು, ಕಾಮದೇವ: ಶಲಾಕಾ ಪುರುಷರು, ಇತರ ಕೇವಲಿಗಳು ಹಾಗೂ ಜೈನ ಮಹಾಪುರುಷರ ಚರಿತ್ರೆಗಳು ವಸ್ತುಗಳಾಗಿವೆ. ಪಂಪನ ಆದಿಪುರಾಣ, ರನ್ನನ ಅಜಿತಪುರಾಣ, ಪೊನ್ನನ ಶಾಂತಿಪುರಾಣ, ನೇಮಿಚಂದ್ರನ ನೇಮಿನಾಥಪುರಾಣ, ಆಚಣ್ಣನ ವರ್ಧಮಾನಪುರಾಣ, ಜನ್ನನ ಅನಂತನಾಥ ಪುರಾಣ, ಚಾವುಂಡರಾಯನ ತ್ರಿಷಷ್ಟಿ ಲಕ್ಷಣ ಮಹಾಪುರಾಣ, ನಾಗಚಂದ್ರನ ಮಲ್ಲಿನಾಥ ಪುರಾಣ, ಅಗ್ಗಳನ ಚಂದ್ರಪ್ರಭಪುರಾಣ, ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣ, ಶಾಂತಿನಾಥನ ಸುಕುಮಾರ ಚರಿತೆ, ಪಂಚಬಾಣನ ಭುಜಬಲಿ ಚರಿತೆ, ರತ್ನಾಕರನ ಭರತೇಶ ವೈಭವ ಮೊದಲಾದ ಕೃತಿಗಳು ಇದಕ್ಕೆ ಉದಾಹರಣೆ.

ತೀರ್ಥಂಕರರ ಪುರಾಣಗಳಲ್ಲಿ ಪಂಚಕಲ್ಯಾಣಗಳು, ಭವಾವಳಿಯ ಕಥೆಗಳು, ವಾಸುದೇವ ಪ್ರತಿವಾಸುದೇವರ ಚರಿತ್ರೆಗಳು, ಜೊತೆಗೆ ಜೈನಮತತತ್ತ್ವ ವಿಷಯ ನಿರೂಪಿತವಾಗಿದೆ.

ವೀರಶೈವ ಪುರಾಣಗಳು ಶಿವನ ಪಂಚವಿಂಶತಿ ಲೀಲೆಗಳು, ಅರವತ್ಮೂರು ಪುರಾತನರ ಚರಿತ್ರೆಗಳು, ಪಂಚಾಚಾರ್ಯರ ಚರಿತ್ರೆಗಳು, ಬಸವಾದಿ ಶಿವಶರಣರ ಹಾಗೂ ನೂರೊಂದು ವಿರಕ್ತರ ಚರಿತ್ರೆಗಳು, ಶಿವಭಕ್ತರ ಕಥೆಗಳು ಮತ್ತು ವೀರಶೈವ ತತ್ತ್ವಗಳನ್ನು ಮುಖ್ಯ ವಿಷಯವಾಗಿ ಸ್ವೀಕರಿಸಿವೆ. ಹರಿಹರನ ಗಿರಿಜಾಕಲ್ಯಾಣ, ರಾಘವಾಂಕನ ವೀರೇಶಚರಿತೆ, ಗುರುಲಿಂಗವಿಭುವಿನ ಭಿಕ್ಷಾಟನ, ವೀರಭದ್ರರಾಜನ ವೀರಭದ್ರವಿಜಯ, ಲಿಂಗನ ತ್ರಿಪುರದಹನ ಸಾಂಗತ್ಯ, ಶಾಂತವೀರನ ವೀರಭದ್ರಲೀಲಾರತ್ನ ಷಡಕ್ಷರದೇವನ ಶಬರಶಂಕರವಿಳಾಸ ಮೊದಲಾದುವು ಶಿವಲೀಲೆಗಳನ್ನೊಳಗೊಂಡ ಕೃತಿಗಳಿಗೆ ಉದಾಹರಣೆಗಳಾದರೆ, ಭೀಮಕವಿಯ ಬಸವಪುರಾಣ, ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ, ಯಳಂದೂರ ಹರೀಶ್ವರನ ಪ್ರಭುದೇವರ ಪುರಾಣ, ಚೆನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ರಾಘವಾಂಕನ ಸಿದ್ಧರಾಮ ಪುರಾಣಗಳು ಬಸವಾದಿ ಶಿವಶರಣರ ಚರಿತ್ರೆಗಳಿಗೂ, ಹರಿಹರನ ಪುರಾತನರ ರಗಳೆಗಳು, ಸುರಂಗಕವಿಯ ತ್ರಿಷಷ್ಟಿ ಪುರಾತನರ ಪುರಾಣ, ಶಿವಯೋಗಿ ಸೋಮೇಶನ ಅರವತ್ಮೂರು ಪುರಾತನರ ಚರಿತ್ರೆ, ಕಿತ್ತನಕೆರೆ ವೀರನ ಎಲ್ಲ ಪುರಾತನರ ಪುರಾಣ, ಅಂಬುಲಿಗೆ ಚೆನ್ನಮಲ್ಲೇಶನ ದೀಪದ ಕಲಿಯರ ಕಾವ್ಯ, ಮಹಾದೇವನ ಸಿರಿಯಾಳ ಸೆಟ್ಟಿಯ ಸಾಂಗತ್ಯ ಅರವತ್ಮೂರು ಪುರಾತನರ ಚರಿತ್ರೆಗಳಿಗೂ ಉದಾಹರಣೆ. ರುದ್ರ ಕವಿಯ ಕರಸ್ಥಲ ನಾಗಲಿಂಗನ ಚರಿತ್ರೆ, ಕುಟನೂರಮಲ್ಲನ ಸೊಪ್ಪೆಬಸವ ಸಾಂಗತ್ಯ ವಿರಕ್ತರ ಚರಿತ್ರೆಗಳನ್ನು ಹೇಳಿದರೆ, ಕಸ್ತೂರಿ ಸಿದ್ದನ ಗುರುಭಕ್ತನ ಕಥೆ, ಮೇದಿನಿರಾಯ, ಪರ್ವತದೇವರ ನನ್ನಯ್ಯನ ಸಾಂಗತ್ಯ, ಓದುವಗಿರಿಯ, ವಿರಕ್ತದೇವ, ಮಲ್ಲೇಶ ಕವಿಗಳ ಸಾನಂದಗಣೇಶ್ವರ ಸಾಂಗತ್ಯ ಶಿವಭಕ್ತರ ಕಥೆಗಳನ್ನು ಹೇಳುತ್ತವೆ.

ವೈದಿಕ ಪುರಾಣಗಳಲ್ಲಿ ಭಾರತ, ಭಾಗವತ, ರಾಮಾಯಣಗಳ ವಸ್ತು ಮೂಲ ದ್ರವ್ಯವಾಗಿದೆ. ರುದ್ರಭಟ್ಟನ ಜಗನ್ನಾಥವಿಜಯ, ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ, ತಿಮ್ಮಣ್ಣ ಕವಿಯ ಭಾರತ, ಚಾಟುವಿಠ್ಠಲನಾಥನ, ಭಾಗವತ, ಶ್ರೀಶೈಲಾರ್ಯನ ಕೃಷ್ಣ ಚಾರಿತ್ರ, ತಿಮ್ಮಕವಿಯ ಹರಿವಿಲಾಸ, ಚಿಕ್ಕುಪಾಧ್ಯಾಯನ ವಿಷ್ಣುಪುರಾಣ ಮೊದಲಾದುವು ಇದಕ್ಕೆ ಉದಾಹರಣೆ.

ಮತತತ್ವ ನಿರೂಪಣೆ ಆಯಾ ಮತದ ಪುರಾಣಗಳಲ್ಲಿ ಪರ್ಯಾಯವಾಗಿ ಬಂದಿದ್ದರೂ ಕೆಲವು ಕವಿಗಳು ಕೇವಲ ತತ್ವವಿಚಾರವನ್ನೇ ಪ್ರತಿಪಾದಿಸಲು ಕೆಲವು ಪ್ರತ್ಯೇಕ ಕೃತಿಗಳನ್ನು ಮೀಸಲಾಗಿರಿಸಿದ್ದಾರೆ. ಶುದ್ಧ ತಾತ್ವಿಕ ವಿಷಯಗಳನ್ನೊಳಗೊಂಡ ಕೃತಿಗಳು ಮೇಲೆ ಸೂಚಿಸಿದ ಮೂರೂ ಮತದವರಲ್ಲಿಯೂ ಕಂಡುಬರುತ್ತವೆ.

ಜೈನ ತಾತ್ವಿಕ ಗ್ರಂಥಗಳಲ್ಲಿ ಜೀವ. ಅಜೀವ, ಪುದ್ಗಲ ಕರ್ಮ, ಅಹಿಂಸೆ, ರತ್ನತ್ರಯ. ಶ್ರಾವಕರ ಆಚಾರ ವಿಚಾರ, ವ್ರತ ನಿಯಮ, ನೋಂಪಿಗಳು ಅಳವಟ್ಟರೆ, ವೀರಶೈವ ತಾತ್ವಿಕ ಕೃತಿಗಳಲ್ಲಿ ಷಟ್‌ಸ್ಥಲ, ಪಂಚಾಚಾರ್, ಅಷ್ಟಾವರಣ. ಶೀಲ, ಶಿವಯೋಗ. ವ್ರತ, ನಿಯಮ. ವಿಧಿ ನಿಷೇಧ, ನೀತಿ, ಭಕ್ತ ಜ್ಞಾನ, ವೈರಾಗ್ಯ ಇತ್ಯಾದಿ ವಿಷಯಗಳು ಅಡಕವಾಗಿವೆ. ಬ್ರಾಹ್ಮಣರ ತತ್ವಗ್ರಂಥಗಳಲ್ಲಿ ವೇದಾಂತ, ಸಿದ್ಧಾಂತ, ಆಚಾರತ್ರಯರದ್ವೈತ. ಅದ್ವೈತ. ವಿಶಿಷ್ಟಾದ್ವೈತ ತತ್ವಗಳು ಹೇಳಲ್ಪಟ್ಟಿವೆ. ನಯಸೇನನ ಧರ್ಮಾಮೃತ. ವಿಜಯಣ್ಣನ ದ್ವಾದಶಾನುಪ್ರೇಕ್ಷೆ. ಶ್ರಾವಕನೆಲೆ, ನೇಮಣ್ಣನ ಶ್ರಾವಕಾಚಾರ. ಬಂಧುವರ್ಮನ ಜೀವಸಂಬೋಧಿಸಿ. ಶಾಂತಿಕೀರ್ತಿಮುನಿಯ ಷೋಡಶ ಭಾವನಾಚರಿತ್ರೆ, ಕಲ್ಯಾಣಕೀರ್ತಿಯ ಅನುಪ್ರೇಕ್ಷೆ, ನೇಮಿವ್ರತಿಯ ಸುವಿಚಾರ ಚರಿತೆ, ಶಾಂತರಸನ ಯೋಗರತ್ನಾಕರ ಮೊದಲಾದವು ಜೈನ ತಾತ್ವಿಕ ಕೃತಿಗಳಿಗೆ ಉದಾಹರಣೆ. ಮಹಾಲಿಂಗದೇವನ ಏಕೋತ್ತರ ಶತಸ್ಥಲ, ಯಳಮಲೆಯ ಗುರುಶಾಂತದೇವ ಸೇರಿಸಿದ ಅಷ್ಟಾವರಣದ ವಚನ. ಷಟ್‌ಸ್ಥಲಸ್ತೋತ್ರ ವಚನ. ಚೆನ್ನಂಜೆದೇವ ಸೇರಿಸಿ ಆಚರಣೆಯ ವಚನಗಳು. ಮಗ್ಗೆ ಮಾಯಿದೇವನ ಶತಕತ್ರಯ. ನಿಜಗುಣ ಶಿವಯೋಗಿಗಳ ಕೈವಲ್ಯಪದ್ಧತಿ. ಪರಮಾನುಭವಬೋಧೆ, ಮರುಳ ಸಿದ್ಧೇಶನ ಗುರುಲಿಂಗ ಜಂಗಮಚಾರಿತ್ರ. ಜಡೆಯ ಸಿದ್ಧಲಿಂಗೇಶನ ಪ್ರಸಾದ ಚಿಂತಾಮಣಿ, ಮುಖದೋಳು ಸಿದ್ಧರಾಮಯೋಗಿಯ ಷಟ್‌ಸ್ಥಲ ತಿಲಕ. ಮಹಮೂರ್ತಿಯ ಅಷ್ಟಾವರಣ ತಿಲಕ. ಕೆರೆಯ ಪದ್ಮರಸನ ದೀಕ್ಷಾ ಬೋಧೆ. ಚೆನ್ನವೀರಾರ್ಯನ ಶಿವಯೋಗಪ್ರದೀಪಿಕೆ, ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ. ಪ್ರಭುದೇವ. ಚೆನ್ನಬಸವಣ್ಣರ ಮಂತ್ರಗೋಪ್ಯಗಳು ಅಲ್ಲದೆ ಮಿಶ್ರಾರ್ಪಣ ಪಂಚೀಕರಣ, ಕರಣಹಸಿಗೆ. ಸಕೀಲ. ಉದ್ಧರಣೆ, ಶೀಲಸಂಪಾದನೆ ಮೊದಲಾದ ಕೃತಿಗಳು ವೀರಶೈವ ತತ್ವಗ್ರಂಥಗಳಿಗೂ. ಭಗವದ್ಗೀತೆ. ವೇದ ಸಂಜೀವಿನಿ. ತತ್ವದ ಸೊಬಗಿನೋನೆ ಅನುಭವಾಮೃತ, ಸಾತ್ವಿಕ ಬ್ರಹ್ಮವಿದ್ಯಾವಿಲಾಸ, ಶಾಲ್ಯದಕೃಷ್ಣರಾಜನ ನಿಜದೀಪಿಕಾರತ್ನ, ಅನುಭವ ರಸಾಯನ, ಜಗನ್ನಾಥದಾಸರ

ಹರಿಕಥಾಮೃತಸಾರ, ವಾಸುದೇವಯತಿ ಶಿಷ್ಯನ ವಿವೇಕಸಾರ ಇತ್ಯಾದಿ ಬ್ರಾಹ್ಮಣ ತತ್ವಗ್ರಂಥಗಳಿಗೂ ಉದಾಹರಣೆಗಳು .

ಸ್ಥಳ ಮಹಾತ್ಮ್ಯಗಳು ಪುಣ್ಯಕ್ಷೇತ್ರ, ತೀರ್ಥಸ್ಥಾನಗಳ ಮಹತ್ವ ಮತ್ತು ಅಲ್ಲಿ ನೆಲೆಸಿರುವ ಅಧಿದೈವದ ಮಹಿಮೆಗಳನ್ನು ಸಾರುತ್ತವೆ. ಅವು ಧಾರ್ಮಿಕ ಕೇಂದ್ರಗಳಾಗಿ ಭಕ್ತಿ ನೀತಿ-ತತ್ವಗಳನ್ನು ಬೋಧಿಸುತ್ತವೆ. ಕಾರಣ ಧಾರ್ಮಿಕ ಸಾಹಿತ್ಯಕ್ಕೆ ಪೋಷಕವಾಗಿವೆ. ಚಿಕ್ಕುಪಾಧ್ಯಾಯನ ಪಶ್ಚಿಮರಂಗಮಹಾತ್ಮೆ ಬಸವಲಿಂಗನ ಬಳ್ಳಿಗಾವೆ ಮಹಾತ್ಮೆ, ಶ್ರೀನಿವಾಸನ ಯಾದವಗಿರಿ ಮಹಾತ್ಮೆ, ಅಖಂಡ ಕಾವೇರಿ ಮಹಾತ್ಮೆ, ಹಸ್ತಗಿರಿ ಮಹಾತ್ಮೆ, ಚುಂಚನಕಟ್ಟೆಯ ಮಹಾತ್ಮೆ, ಶ್ರೀಶೈಲ ಮಹಾತ್ಮೆ, ಗೋಪಾಲರಾಜನ ಕಮಲಾಚಲಮಹಾತ್ಮೆ, ಮೊದಲಾದವು ಇದಕ್ಕೆ ಉದಾಹರಣೆ.

೨. ಕವಿ ಸಾಹಿತ್ಯ :

ಕನ್ನಡ ಕವಿಗಳು ಧಾರ್ಮಿಕ ವಿಷಯಪರ ಕೃತಿಗಳ ಜೊತೆಗೆ ಲೌಕಿಕ ವಸ್ತುಪರ ಶುದ್ಧಕಾವ್ಯಗಳನ್ನು ರಚಿಸುತ್ತ ಬಂದಿದ್ದಾರೆ. ಅವುಗಳಲ್ಲಿ ತಮ್ಮ ಪ್ರತಿಭೆ, ಪಾಂಡಿತ್ಯ ಕವಿತಾಶಕ್ತಿಗಳನ್ನು ಸಮರ್ಥವಾಗಿ ವಿನಿಯೋಗಿಸಿದ್ದಾರೆ.

ಜೈನಕವಿಗಳಲ್ಲಿ ಕೆಲವರು ರಾಮಾಯಣ ಮಹಾಭಾರತದ ವಸ್ತುವನ್ನು ಆರಿಸಿಕೊಂಡು ಶುದ್ಧಲೌಕಿಕ ಕಾವ್ಯಗಳನ್ನು ರಚಿಸಿದ್ದಾರೆ. ಪಂಪನ ವಿಕ್ರಮಾರ್ಜುನವಿಜಯ, ರನ್ನನ ಸಾಹಸಭೀಮ ವಿಜಯ, ಪೊನ್ನನ ಭುವನೈಕ ರಾಮಾಭ್ಯುದಯ, ನಾಗಚಂದ್ರನ ರಾಮಚಂದ್ರಚರಿತಪುರಾಣ ಈ ಮಾದರಿಯವು. ಇನ್ನು ಕೆಲವರು ಕಾಲ್ಪನಿಕ ಕಥೆಗಳನ್ನು ಆರಿಸಿಕೊಂಡು ಶುದ್ಧಕಾವ್ಯ ನಿರ್ಮಿಸಿದ್ದಾರೆ. ನಾಗವರ್ಮನ ಕರ್ಣಾಟಕ ಕಾದಂಬರಿ, ಬಂಧುವರ್ಮನ ಕುಸುಮಾವಳಿ, ನೇಮಿಚಂದ್ರನ ಲೀಲಾವತಿ, ಆಂಡಯ್ಯನ ಕಬ್ಬಿಗರ ಕಾವ್ಯ ಇದಕ್ಕೆ ಉದಾಹರಣೆ ಮತ್ತೆ ಕೆಲವರ ಕಾವ್ಯದ ವಸ್ತು ಧಾರ್ಮಿಕವಾಗಿದ್ದರೂ ಅವುಗಳಲ್ಲಿ ಕಾವ್ಯಾಂಶಕ್ಕೆ ಹೆಚ್ಚಿನ ಮಹತ್ವದೊರಕಿ ಶುದ್ಧಕಾವ್ಯಗಳ ಸಾಲಿನಲ್ಲಿ ನಿಲ್ಲುವ ಅರ್ಹತೆಯನ್ನು ಪಡೆದಿವೆ. ಜನ್ನನ ಯಶೋಧರ ಚರಿತೆ, ರತ್ನಾಕರನ ಭರತೇಶವೈಭವ: ವೀರಶೈವ ಕವಿಗಳಾದ ಹರಿಹರನ ಗಿರಿಜಾ ಕಲ್ಯಾಣ, ಕೆಲವು ರಗಳೆಗಳು, ರಾಘವಾಂಕನ ಹರಿಶ್ಚಂದ್ರಕಾವ್ಯ ಚಾಮರಸನ ಪ್ರಭುಲಿಂಗಲೀಲೆ: ಬ್ರಾಹ್ಮಣ ಕವಿಗಳಾದ ಕುಮಾರವ್ಯಾಸನ ಭಾರತ, ಲಕ್ಷ್ಮೀಶನ ಜೈಮಿನಿ ಭಾರತ ಇದಕ್ಕೆ ಉದಾಹರಣೆ. ಇಲ್ಲೆಲ್ಲ ಧರ್ಮಗೌಣವಾಗಿ ಕಾವ್ಯಧರ್ಮದ ಕೈಮೇಲಾಗಿದೆ.

೩. ಚರಿತ್ರ ಸಾಹಿತ್ಯ :

ಭೂಮಿಯ ಮೇಲೆ ಯೋನಿಜರಾಗಿ ಜನಿಸಿ, ತಮ್ಮ ಕರ್ತೃತ್ವ ಶಕ್ತಿ, ಜ್ಞಾನಾನುಭವ ಆಧ್ಯಾತ್ಮಬಲ, ಪ್ರತಿಭೆ ಪಾಂಡಿತ್ಯಗಳಿಂದ ಅಮರರಾಗಿ ಹೋದ ಶರಣರ, ಮಹಾಪುರುಷರ ಮತ್ತು ಕವಿಗಳ ವ್ಯಕ್ತಿತ್ವ, ಜೀವನೇತಿಹಾಸವನ್ನು ವಾಸ್ತವವಾಗಿ ನಿರೂ

...ಸುವ ಕೃತಿಗಳು, ತಮ್ಮ ಶಕ್ತಿಸಾಮರ್ಥ್ಯ, ತೋಳ್ಬಲದಿಂದ ಸಾಮ್ರಾಜ್ಯಗಳನ್ನು ಸ್ಥಾಪಿಸಿ, ವೈಭವದಿಂದ ಈ ನಾಡಿನ ದೊರೆಗಳಾಗಿ ಆಳಿ, ಇತಿಹಾಸದ ಪುಟಗಳಲ್ಲಿ ತಮ್ಮ ಹೆಸರನ್ನು ಶಾಸನಗೊಳಿಸಿ ಹೋದ ಐತಿಹಾಸಿಕ ವ್ಯಕ್ತಿಗಳ ವೈಭವೋಪೇತ ವೀರಜೀವನ ವನ್ನು ವರ್ಣಿಸುವ ಕೃತಿಗಳು 'ಚರಿತ್ರ ಸಾಹಿತ್ಯ' ವಿಭಾಗದ ಅಡಿಯಲ್ಲಿ ಬರುತ್ತವೆ.

ಸಿದ್ಧನಂಜೇಶನ ರಾಘವಾಂಕ ಚರಿತ್ರೆ, ನೀಲಕಂಠಾಚಾರ್ಯನ ಅರಾಧ್ಯ ಚಾರಿತ್ರ್ಯ, ಶಾಂತನಿರಂಜನನ ಅಬ್ಬಲೂರ ಚರಿತ್ರೆ, ವಿರಕ್ತತೋಂಟದಾರ್ಯನ ಪಾಲ್ಕುರಿಕೆ ಸೋಮೇಶ್ವರ ಚರಿತ್ರೆ, ಪದ್ಮಣಾಂಕನ ಪದ್ಮರಾಜ ಪುರಾಣ, ಹರಿಹರನ ಬಸವಾದಿ ಶರಣರ ರಗಳೆ ಗಳು, ದೇವಚಂದ್ರನ ರಾಜಾವಳಿ ಕಥೆ ಮೊದಲಾದುವು ಕವಿಗಳು, ಶರಣರು ಮತ್ತು ಮಹಾಪುರುಷರು ಚರಿತ್ರೆಗಳಿಗೆ ಉದಾಹರಣೆ ಇನ್ನು ರಾಜಮಹಾರಾಜರ ಚರಿತ್ರೆ ಗಳನ್ನು ಹೇಳುವ ಕೃತಿಗಳೆಂದರೆ, ನಂಜುಂಡನ ರಾಮನಾಥ ಚರಿತ್ರೆ, ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯ, ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳಿ, ಮಲ್ಲಿಕಾರ್ಜುನನ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಚಾಮಯ್ಯನ ದೇವರಾಜೇಂದ್ರ ಸಾಂಗತ್ಯ, ಕೃಷ್ಣಶರ್ಮನ ಸರಜಾ ಹನುಮೇಂದ್ರ ಚರಿತೆ, ಚಿಕ್ಕರಸನ ಸೊಣ್ಣ ಭೈರೇಗೌಡನ ಚರಿತ್ರೆ, ಕೆಂಚಸೆಟ್ಟಿ ಸುತ ರಾಮನ ಸಿರುಮನ ಸಾಂಗತ್ಯ, ಪಾರ್ಶ್ವಕವಿಯ ನಿಂಬಸಾಮಂತ ಚರಿತ್ರೆ, ಲಿಂಗಣ್ಣನ ಕೆಳದಿನೃಪ ವಿಜಯ, ಅಜ್ಞಾತ ಕವಿಗಳ ಬೇಳಗಿ ಅರಸರ ವಂಶಾವಳಿ, ಹೊಯ್ಸಳ ರಾಜರ ಚರಿತ್ರೆ ಇತ್ಯಾದಿ.

೪. ಶಾಸ್ತ್ರ ಸಾಹಿತ್ಯ :

ನಮ್ಮ ಕವಿಗಳು ಬರಿ ಪಾರಲೌಕಿಕ ಪುರಾಣ, ಪುಣ್ಯಕಥೆ, ಧರ್ಮ, ತತ್ವ, ಮಹಾ ಪುರುಷರ ಚರಿತ್ರೆ ಕುರಿತ ಕೃತಿಗಳನ್ನು ರಚಿಸುವುದರಲ್ಲಷ್ಟೇ ಮೈಮರೆತವರಲ್ಲ; ಕೇವಲ ಕಾಲ್ಪನಿಕ ಕಾವ್ಯಾರಾಮದಲ್ಲಿ ಮಾತ್ರ ವಿಹರಿಸಿದವರಲ್ಲ. ಅದರ ಜೊತೆಗೆ ಭಾಷಾ ಉತ್ಪತ್ತಿಗೆ ಪೂರಕವಾದ ಕಾವ್ಯಶಾಸ್ತ್ರಗಳನ್ನೂ, ಲೋಕ ವ್ಯವಹಾರಕ್ಕೆ ಉಪಯುಕ್ತ ವಾದ, ಜೀವನಕ್ಕೆ ಅವಶ್ಯವಾದ ಶುದ್ಧ ವಿಜ್ಞಾನಕ್ಕೆ ಸಂಬಂಧಿಸಿದ ಉಪಯುಕ್ತ ಶಾಸ್ತ್ರ ಗಳ ಆವಶ್ಯಕತೆಯನ್ನೂ ಅರಿತವರಾಗಿದ್ದರು. ಅಂಥ ಶಾಸ್ತ್ರಗಳನ್ನು ರಚಿಸಿದ ಮಾನ ವನು ದೇವಸ್ವರೂಪ ಎಂದು ಭಾವಿಸಿದ್ದರು. ಈ ಮಾತಿಗೆ ಒಂದನೆಯ ಮಂಗರಾಜನ ಕೆಳಗಿನ ಹೇಳಿಕೆ ಸಮರ್ಥನೆ ನೀಡುತ್ತದೆ:

> ಮರನಂ ಗಾಳಿಯುಂ ದೂಳಿಯುಂ ರಜನಿಯುಂ ನೀರಾಟಮುಂ ಬೇಟಮುಂ
> ಸುರೆಯುಂ ಸೂಳೆಯುರಂ ವಿಟಾಟವಿಸರಮುಂ ಕೊಂಡಾಡಿ ಬೆಂಡಾಗದೀ
> ಧರೆಯೊಳ್ ಸರ್ವಜನೋಪಕಾರಕಮೆನಲೀ ಮಂತ್ರೌಷಧಿವ್ರಾತಮುಂ
> ನಿರುತಂ ಭಾವಿಸಿ ಪೇಳ್ದ ಮಾನವನೇ ತಾಂ ದೇವಂ ಧರಾಚಕ್ರದೊಳ್।೧

ಕಾವ್ಯ ಶಾಸ್ತ್ರಗಳಲ್ಲಿ ಅಲಂಕಾರ, ಛಂದಸ್ಸು, ವ್ಯಾಕರಣ ಮತ್ತು ನಿಘಂಟು ಸಮಾ ವೇಶಗೊಳ್ಳುತ್ತವೆ. 'ಕಲೆ ಮೊದಲು ಶಾಸ್ತ್ರ ನಂತರ' ಎನ್ನುವ ಸಿದ್ಧಾಂತದಂತೆ

ಕನ್ನಡದಲ್ಲಿ ಕಾವ್ಯಗಳು ರಚಿತವಾದ ನಂತರ ಅವುಗಳನ್ನು ಕುರಿತ ಶಾಸ್ತ್ರಗಳು ಹುಟ್ಟಿಕೊಂಡವು.

ಅಲಂಕಾರ ಶಾಸ್ತ್ರಗಳಲ್ಲಿ ಶ್ರೀವಿಜಯನ ಕವಿರಾಜಮಾರ್ಗವೇ ಪ್ರಥಮ ಕೃತಿ. ಇದರಲ್ಲಿ ದೋಷಾನುವರ್ಣನ ನಿರ್ಣಯ. ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳನ್ನು ಕುರಿತು ಹೇಳಲಾಗಿದೆ. ಎರಡನೆಯ ನಾಗವರ್ಮನ ಕಾವ್ಯಾವಲೋಕನ ಅರ್ಥಾಲಂಕಾರ, ಕವಿಸಮಯಗಳನ್ನು ವಿವರಿಸಿದರೆ, ಉದಯಾದಿತ್ಯನ ಉದಯಾದಿತ್ಯಾಲಂಕಾರ ಕಾವ್ಯಭೇದ. ರಸ, ರೀತಿ, ಕಾವ್ಯಗುಣ, ಶಬ್ದ–ಅರ್ಥಾಲಂಕಾರಗಳನ್ನೂ ಕವಿಕಾಮನ ಶೃಂಗಾರ ರತ್ನಾಕರ, ತಿಮ್ಮನ ನವರಸಾಲಂಕಾರ, ಸಾಳ್ವನ ರಸರತ್ನಾಕರಗಳು ಮುಖ್ಯವಾಗಿ ನವರಸಗಳನ್ನೂ ವರ್ಣಿಸುತ್ತವೆ. ಸಾಳ್ವನ ಶಾರದಾವಿಲಾಸ ಧ್ವನಿ ಪ್ರಕ್ರಿಯೆಯನ್ನು ಹೇಳುತ್ತದೆ. ತಿರುಮಲಾರ್ಯನ ಅಪ್ರತಿಮವೀರಚರಿತೆ. ಮಾಧವನ ಮಾಧವಾಲಂಕಾರ. ಜಾಯೇಂದ್ರನ ಕರ್ನಾಟಕ ಕುವಲಯಾನಂದ ಮತ್ತು ಅಳಿಯ ಲಿಂಗರಾಜನ ನರಪತಿಚರಿತ ಅಲಂಕಾರ ಶಾಸ್ತ್ರವನ್ನು ನಿರೂಪಿಸುವ ಇತರ ಕೃತಿಗಳಾಗಿವೆ.

ಒಂದನೆಯ ನಾಗವರ್ಮನ ಛಂದೋಂಬುಧಿ ಛಂದಶ್ಶಾಸ್ತ್ರವನ್ನು ಅಧಿಕೃತವಾಗಿ ತಿಳಿಸುವ ಚೊಚ್ಚಿಲಕೃತಿ. ಕನ್ನಡ ಕಾವ್ಯಗಳಲ್ಲಿ ಬಳಕೆಯಲ್ಲಿರುವ ಸಂಸ್ಕೃತದ ಅಕ್ಷರ ವೃತ್ತ, ಪ್ರಾಕೃತದ ಮಾತ್ರಾವೃತ್ತ, ಅಚ್ಚಗನ್ನಡದ ಅಂಶವೃತ್ತಗಳ ಬಗೆಗೆ ಇದರಲ್ಲಿ ಸವಿಸ್ತಾರವಾದ ವಿವರಣೆಯಿದೆ. ಜೊತೆಗೆ ಯತಿಪ್ರಾಸಗಳ ವಿಷಯವೂ ಬಂದಿದೆ. ಈಶ್ವರ ಕವಿಯ ಕವಿಜಿಹ್ವಾಬಂಧನ ಪ್ರಾಸ, ವಡಿ, ಅವುಗಳ ಭೇದಗಳು, ಅಕ್ಷರ, ಅವುಗಳ ಕುಲ, ಅಧಿದೇವತೆ, ಭಾವ, ಅಲಂಕಾರ, ಕಂದ ಷಟ್ಪದಿಗಳ ಲಕ್ಷಣಗಳನ್ನು ತಿಳಿಸುತ್ತದೆ. ಪ್ರಾಸದ ಮಹತ್ವವನ್ನು ಕುರಿತ ಅವನ ಒಂದು ಪದ್ಯ ಹೀಗಿದೆ:

ಉಸಿರಟಿದ ತನುವವೋಲ್ ಭಾ
ವಿಸಲುಂ ಪ್ರಾಸಿಲ್ಲದಿರ್ಪ ಪದ ಪದ್ಯಂಗಳ್
ಒಸೆದದನು ಹೇಟಿ ಕೇಳಿದ
ರಸಿಕರ್ಗಾಯುಷ್ಯ ಮಾನಹಾನಿಗಳಕ್ಕುಂ

ಗುಣಚಂದ್ರನ ಛಂದಸ್ಸಾರ ಮಾತ್ರಾಗಣ, ಸಮವೃತ್ತ, ವಿಷಮವೃತ್ತ ದಂಡಕ, ಯತಿ ಮತ್ತು ತಾಳಗಳ ವಿಚಾರವನ್ನು ಮಾಡುತ್ತದೆ.

ಭಾಷಾವ್ಯುತ್ಪತ್ತಿ ಮತ್ತು ಶುದ್ಧಿಗಳನ್ನು ಕುರಿತ ವ್ಯಾಕರಣ, ನಿಘಂಟುಗಳು ಕನ್ನಡದಲ್ಲಿ ಹೇರಳವಾಗಿ ರಚಿತವಾಗಿವೆ. ಎರಡನೆಯ ನಾಗವರ್ಮನ ಶಬ್ದಸ್ಮೃತಿ ಕೇಶಿರಾಜನ ಶಬ್ದಮಣಿದರ್ಪಣ ಕನ್ನಡದಲ್ಲಿ ಬರೆದ ಕನ್ನಡ ವ್ಯಾಕರಣ ನಿಯಮಗಳನ್ನು ನಿರೂಪಿಸುವ ಕೃತಿಗಳಾದರೆ, ನಾಗವರ್ಮನ ಕರ್ನಾಟಕ ಭಾಷಾಭೂಷಣ ಭಟ್ಟಾಕಲಂಕನ ಕರ್ಣಾಟಕ ಶಬ್ದಾನುಶಾಸನ ಸಂಸ್ಕೃತದಲ್ಲಿ ಬರೆದ ಕನ್ನಡ ವ್ಯಾಕರಣಗಳಾಗಿವೆ.

ನಿಘಂಟುಗಳಲ್ಲಿ ಕೆಲವು ಹಳಗನ್ನಡ ಪದಗಳಿಗೆ ಅರ್ಥವನ್ನು ಹೇಳುತ್ತಿದ್ದರೆ ಇನ್ನೂ ಕೆಲವು ಸಂಸ್ಕೃತ ಪದಗಳಿಗೆ ಕನ್ನಡ ಅರ್ಥವನ್ನು ತಿಳಿಸುತ್ತವೆ. ರನ್ನನ ರನ್ನಕಂದ, ಅಭಿನವ ಮಂಗರಾಜನ ಮಂಗಾಭಿದಾನ, ಚತುರಾಸ್ಯ ಬೊಮ್ಮರಸನ ಚತುರಾಸ್ಯ ನಿಘಂಟು, ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ, ವಿರಕ್ತತೋಂಟದಾರ್ಯನ ಕರ್ಣಾಟಕ ಶಬ್ದಮಂಜರಿ, ಶೃಂಗಾರಕವಿಯ ಕರ್ನಾಟಕ ಸಂಜೀವಿನಿ, ಅಜ್ಞಾತಕವಿಗಳ ಶಬ್ದಾಗಮ, ಶಬ್ದರತ್ನಾಕರ, ಭಾರತ ನಿಘಂಟು ಮೊದಲಾದುವು ಕನ್ನಡ ನಿಘಂಟುಗಳಿಗೆ ಉದಾಹರಣೆ. ನಾಗವರ್ಮನ ವಸ್ತುಕೋಶ, ದೇವೋತ್ತಮನ ನಾನಾರ್ಥರತ್ನಾಕರ, ಧನಂಜಯನ ಧನಂಜಯ ನಿಘಂಟು ಇತ್ಯಾದಿ ಸಂಸ್ಕೃತ ಪದಗಳಿಗೆ ಕನ್ನಡ ಅರ್ಥ ಕೊಡುವ ನಿಘಂಟುಗಳು. ಇವಲ್ಲದೆ ಸಂಸ್ಕೃತ ಕೋಶಗಳ ಕನ್ನಡ ಟೀಕೆಗಳೂ, ಕನ್ನಡ ವ್ಯಾಖ್ಯಾನಗಳೂ, ವೈದ್ಯಶಾಸ್ತ್ರ ನಿಘಂಟುಗಳೂ ಹುಟ್ಟಿಕೊಂಡಿವೆ. ಉದಾ: ಕವಿ ವಿಠಲನ ಅಮರಕೋಶ ಟೀಕೆ ನಾಗರಾಜನ ನಾಚರಾಜೀಯ, ಅಜ್ಞಾತ ಕವಿಗಳ ಧನ್ವಂತರೀಯ ನಿಘಂಟು, ವೈದ್ಯ ನಿಘಂಟು ಇತ್ಯಾದಿ.

ಶುದ್ಧ ಲೌಕಿಕ ಉಪಯುಕ್ತ ಶಾಸ್ತ್ರಗಳಲ್ಲಿ ವೈದ್ಯ, ಜೋತಿಷ್ಯ ಗಣಿತ, ಪಾಕಶಾಸ್ತ್ರ, ಕಾಮಶಾಸ್ತ್ರ, ರತ್ನಶಾಸ್ತ್ರ, ರಸಶಾಸ್ತ್ರ, ವಾಸ್ತುಶಾಸ್ತ್ರ, ಸಂಗೀತಶಾಸ್ತ್ರ, ಖಡ್ಗಶಾಸ್ತ್ರ, ಸ್ವರಶಾಸ್ತ್ರ, ಸಾಮುದ್ರಿಕಶಾಸ್ತ್ರ, ಶಕುನಶಾಸ್ತ್ರ ಇತ್ಯಾದಿಯಾಗಿ ಅನೇಕ ಪ್ರಕಾರಗಳು ಕಂಡುಬರುತ್ತವೆ.

ಆರೋಗ್ಯವೇ ಭಾಗ್ಯ; ಆರೋಗ್ಯವಿಲ್ಲದ ಬದುಕಿಗೆ ಬೆಲೆಯಿಲ್ಲ. ಅದು ನಿರರ್ಥಕ; ಅದಕ್ಕಾಗಿ ದೇಹಸ್ವಾಸ್ಥ್ಯವನ್ನು ಸದಾಕಾಪಾಡಿಕೊಂಡು ಹೋಗಬೇಕು ಎಂಬುದನ್ನು ನಮ್ಮವರು ಮೊದಲಿಂದಲೂ ಅರಿತು, ಅದರ ರಕ್ಷಣೆಗಾಗಿ ಅನೇಕ ಔಷಧೋಪಚಾರ ಗಳನ್ನು ಕಂಡುಹಿಡಿದು, ಪ್ರಯೋಗಿಸಿ, ಫಲಪಡೆದು, ಆ ಕುರಿತು ಗ್ರಂಥಗಳನ್ನೂ ರಚಿಸಿಟ್ಟಿದ್ದಾರೆ. ಅವು ವೈದ್ಯಶಾಸ್ತ್ರವೆಂದು ಪ್ರಸಿದ್ಧವಾಗಿವೆ. ಈ ವೈದ್ಯಶಾಸ್ತ್ರವು ಋಗ್ವೇದಕ್ಕೆ ಉಪವೇದವಾದ ಆಯುರ್ವೇದ ಎಂದು ಅವರು ನಂಬಿದ್ದರು. ಜಗದ್ದಳ ಸೋಮನಾಥನ ಕಲ್ಯಾಣಕಾರಕ, ಸಾಳ್ವನ ವೈದ್ಯಸಾಂಗತ್ಯ, ಬ್ರಹ್ಮನ ವೈದ್ಯಕಂದ, ಚೆನ್ನ ರಾಜನ ವೈದ್ಯಸಾರಸಂಗ್ರಹ, ಶ್ರೀಧರದೇವನ ವೈದ್ಯಾಮೃತ, ವೀರರಾಜೇಂದ್ರನ ಸಕಲ ವೈದ್ಯ ಸಂಹಿತಾ ಸಾರಾರ್ಣವ ಇವು ಸಮಗ್ರ ವೈದ್ಯಶಾಸ್ತ್ರವನ್ನು ಹೇಳುವ ಗ್ರಂಥ ಗಳಾದರೆ, ಸ್ತ್ರೀವೈದ್ಯ, ಬಾಲವೈದ್ಯ, ವ್ರಣವೈದ್ಯ, ವಿಷವೈದ್ಯ ಮೊದಲಾದುವು ವೈದ್ಯದ ಒಂದೊಂದು ಭಾಗವನ್ನು ಕುರಿತು ವಿಸ್ತಾರವಾದ ನಿರೂಪಣೆಯುಳ್ಳ ಕೃತಿಗಳಾಗಿವೆ. ರೋಗ–ಔಷಧಿ ಕುರಿತು ಕೆಲವು ಉದಾಹರಣೆಗಳು :

ಜ್ವರೋತ್ಪತ್ತಿ ಆಗಲು ಕಾರಣಗಳನ್ನು ಜಗದ್ದಳಸೋಮನಾಥ ಹೀಗೆ ಹೇಳುತ್ತಾನೆ:

ಮಲಸಂಗ್ರಹದಿಂದುದರಾ। ನಲನಟಿಪಿಂದಾಮಚಲನೆಯಿಂ ಜ್ವರಮೊಗೆಗುಂ
ಕೆಲರಾ ತ್ರಿಪುರಧ್ವಂಸಿಯ। ಲಲಾಟಲೋಚನದಿನೊಗೆದುದೆಂಬರ್
ಜ್ವರಮಂ।[೩]

ಬಿದ್ದನಾಲಿಗೆ ಬರಲು :

> ಪಲಕಾಲದ ಪ್ರಣಸೆಯು ಪ । ಜ್ಞ ಲೇಹ್ಯಮಂ ಮಾಡೆ ಸನ್ನಿಪಾತಜ್ವರದಿಂ
> ಸಲೆ ಪೊರಳದಿರ್ದ ನಾಲಗೆ । ಗೆ ಲೇಸನೀಗುಂ ಜ್ವರಂಗಳ ಪಿಂಗಿಸುಗುಂ ।[೪]

ಕಜ್ಜಿ ತುರಿಕೆಗೆ ಔಷಧಿ :

"ಕಜ್ಜಿಗೆ ಹಸುವಿನ ಗೋಮೂತ್ರವನ್ನು ದಿನ ಒಂದಕ್ಕೆ ಒಂದು ಸೊಲಿಗೆ ಹೊಟ್ಟೆಗೆ ಸೇವನೆಯಂ ಮಾಡೆ. ಮೂರುದಿವ್ಸ ಕಜ್ಜಿ ತುರಿ ಸಹಾ ಶಮನಾ ಪತ್ಯಾ ಮಜ್ಜಿಗೆ ಅನ್ನಾ"[೫]

ಮೊಲೆ ಹಾಲು ಇಳಿಸಲು ಔಷಧಿ :

"ಕುಂಬಳದ ಬೇರನರೆದು ನಿಂಬೆಯ ಕಾಯಷ್ಟು ಸಕ್ಕರೆಯು ಹಾಕಿ ಹಸಿಯ ಹಾಲೊಳಗೆ ಹನ್ನೊಂದು ದಿನಂ ತೆಗೆದುಕೊಳೆ ಮೊಲೆಹಾಲು ಬರುವುದು"[೬]

ಬಾಳೆ ಎಲೆಯುಲ್ಲಿ ಊಟಮಾಡಿದರೆ ಆಗುವ ವೈದ್ಯಕೀಯ ಲಾಭಗಳನ್ನು 'ವೈದ್ಯ ಶಾಸ್ತ್ರ' ಹೀಗೆ ಹೇಳುತ್ತದೆ :

"ಕದಳೀ ಪತ್ರ ಗುಣಂ : ಅತಿ ಶುಚಿಯಾಗಿ ಮಹಾಪ್ರಿಯರಾಗಿ ವಾತಶ್ಲೇಷ್ಮ ದೋಷಂಗಳನ್ನು ಪರಿಪರಿಸಿ ಬಲವನ್ನು ಆರೋಗ್ಯವನ್ನು ಉಂಟು ಮಾಡಿ, ರತಿಪ್ರಿಯ ಪನು, ಶರೀರ ಕಾಂತಿಯನು. ಅನ್ನದಮೇಲೆ ಅಪೇಕ್ಷೆಯನು ಉಂಟುಮಾಡುವುದೆ ಬಾಳೆ ಎಲೆಯ ಗುಣಂ"[೭]

ಒಂದನೆಯ ಮಂಗರಾಜನು ಸದ್ವೈದ್ಯನಿಗಿರಬೇಕಾದ ಲಕ್ಷಣಗಳನ್ನು ಹೀಗೆ ಹೇಳಿದ್ದಾನೆ :

> ಸ್ಥಿರ ಬುದ್ಧಿ ಭಾವಯುತನನ್ವಯ ಶುದ್ಧನನೂನಮೂರ್ತಿ ಸ
> ತ್ಪುರುಷನನೂನ ವಾಕ್ಯನಮಲಾಂಗನಕುತ್ಸಿತ ಕರ್ಮನಾಗಳುಂ
> ಪರಹಿತವೃತ್ತನೊಳ್ಪಿದನುದಾರ ಗಭೀರ ಗುಣಾಢ್ಯನಪ್ಪವಂ
> ಧರೆಗೆ ಭಿಷಗ್ವರಾಗ್ರಣಿಯೆನಿಪ್ಪನ ತಂದ್ರನವದ್ಯ ವರ್ಜಿತಂ ।[೮]

ಮಾನವ ವೈದ್ಯದಂತೆ ಪ್ರಾಚೀನರು ಪಶುವೈದ್ಯಶಾಸ್ತ್ರ ರಚನೆಯಲ್ಲೂ ಪ್ರವೀಣರಾಗಿದ್ದರು. ಪಶುವೈದ್ಯಶಾಸ್ತ್ರಗಳಲ್ಲಿ ಅಭಿನವಚಂದ್ರನ ಅಶ್ವಶಾಸ್ತ್ರ. ರಾಮಚಂದ್ರ. ಬಾಚರಸರ ಅಶ್ವವೈದ್ಯ. ಪದ್ಮಣ ಪಂಡಿತನ ಹಯಸಾರ ಸಮುಚ್ಚಯ ಕೃತಿಗಳು ಕುದುರೆಗಳ ಆಕೃತಿ. ಲಿಂಗ. ವರ್ಣ. ನೆಲೆ. ಭೇಷಜಗಳನ್ನು ಕುರಿತು ಹೇಳಿದರೆ. ಕೀರ್ತಿವರ್ಮನ ಗೋವೈದ್ಯ ಆಕಳುಗಳ ವ್ಯಾಧಿ. ಅವುಗಳಿಗೆ ತಕ್ಕ ಔಷಧಿ. ಬರೆ ಹಾಕುವ ವಿಧಾನಗಳನ್ನು ತಿಳಿಸುತ್ತದೆ. ಚಾವುಂಡರಾಯನ ಲೋಕೋಪಕಾರಕ ಪಶುವೈದ್ಯ, ಅಶ್ವವೈದ್ಯ. ಗಜಶಾಸ್ತ್ರಗಳ ಜೊತೆಗೆ ಕೃಷಿ. ತೋಟಗಾರಿಕೆ. ಜಲ. ಶಿಲ್ಪ. ನರವೈದ್ಯ,

ಪಾಕಶಾಸ್ತ್ರಗಳನ್ನು ಕುರಿತೂ ಮಾಹಿತಿ ಒದಗಿಸುತ್ತದೆ. ಸೋದೆಯ ಸದಾಶಿವನೃಪತಿಯ ಸದಾಶಿವ ನೀತಿಯಲ್ಲಿ ಗಜ ಮತ್ತು ತುರಗಗಳ ಲಕ್ಷಣಗಳನ್ನು ಹೇಳಲಾಗಿದೆ.

ಜ್ಯೋತಿಷ್ಯಶಾಸ್ತ್ರ ಕ್ಷೇತ್ರದಲ್ಲಿ ವಿಶ್ವಕ್ಕೆ ಭಾರತ ಕೊಟ್ಟ ಕೊಡುಗೆ ಹಿರಿದು. ನಮ್ಮವರಿಗೆ ಅದು ಬಾಳ ಜ್ಯೋತಿ ಇದ್ದಂತೆ. ಬದುಕಿನ ಒಂದು ಅವಿಭಾಜ್ಯ ಅಂಗವಾಗಿ ಅದು ಮೊದಲಿನಿಂದಲೂ ಮಹತ್ವದ ಪಾತ್ರವನ್ನು ಆಡುತ್ತ ಬಂದಿದೆ. ಯಾವುದೇ ಶುಭಕಾರ್ಯಮಾಡಬೇಕಾದರೂ ನಮ್ಮ ಪ್ರಾಚೀನರು ಜ್ಯೋತಿಷ್ಯದ ಮೊರೆ ಹೋಗುತ್ತಿದ್ದರು. ಅವರಷ್ಟೇ ಏಕೆ ವೈಜ್ಞಾನಿಕ ಮನಸ್ಸಿನ ಇಂದಿನ ನಾವೂ ಕೂಡ ಶುಭಗಳಿಗೆ ಶುಭವಾರ. ಶುಭತಿಥಿಗಳನ್ನು ನೋಡಿ ಒಳ್ಳೆಯ ಕಾರ್ಯ ಪ್ರಾರಂಭಿಸುವುದನ್ನು ಬಿಟ್ಟಿಲ್ಲ; ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಪ್ರಾರಂಭಿಸಿದರೆ ಅದಕ್ಕೆ ಯಶಸ್ಸು ದೊರೆಯುತ್ತದೆ ಎಂಬ ನಂಬಿಕೆಯಿಂದ ದೂರಾಗಿಲ್ಲ. ಇಂದಿನ ಪ್ರತಿಯೊಂದು ಪತ್ರಿಕೆಯಲ್ಲಂತೂ ಜ್ಯೋತಿಷ್ಯಕ್ಕೆ ಒಂದು ಶಾಶ್ವತ ಸ್ಥಾನ ಇದ್ದೇ ಇದೆ. ಅದಕ್ಕಾಗಿ ನಮ್ಮಲ್ಲಿ ಈ ಶಾಸ್ತ್ರ ಕುರಿತು ಹೇರಳ ಗ್ರಂಥಗಳು ಸಿಕ್ಕುತ್ತವೆ.

೧೦೪೯ರಲ್ಲಿದ್ದ ಶ್ರೀಧರಾಚಾರ್ಯನ ಜಾತಕ ತಿಲಕ ಕನ್ನಡದ ಮೊಟ್ಟಮೊದಲ ಜ್ಯೋತಿಷ್ಯ ಗ್ರಂಥ. ಕಂದ. ವೃತ್ತಗಳಲ್ಲಿ ರಚಿತವಾದ ಈ ಕೃತಿ ಸಂಜ್ಞಾ ಬಲಾಬಲ, ಗರ್ಭ. ಜನ್ಮ. ತಿರ್ಯಗ್ಜನ್ಮ. ಅರಿಷ್ಟ. ಅರಿಷ್ಟ ಭಂಗ, ಆಯುರ್ದಾಯ. ದಶಾಂತರ್ದಶಾ, ಅಷ್ಟಕವರ್ಗ. ಜೀವ ರಾಜಯೋಗ, ನಾಭಿ ಸಂಯೋಗ, ಚಂದ್ರಯೋಗ. ದ್ವಿತ್ರಿಯೋಗ, ದೀಕ್ಷಾಯೋಗ, ರಾಶಿ, ಲಗ್ನಭಾವ. ದ್ರೇಕ್ಕಾಣ. ದೃಷ್ಟ, ಅನಿಷ್ಟ, ಸ್ತ್ರೀಜಾತಕ, ನಿರ್ಯಾಣ. ನಷ್ಟಜಾತಕ–ಎಂಬ ೨೪ ಅಧಿಕಾರಗಳಲ್ಲಿ ವಿಸ್ತೃತಗೊಂಡಿದೆ.

ಸ್ತ್ರೀ ಪುಂ ಜನನ ಜಾತಕಕ್ಕೆ ಒಂದು ಉದಾ :

ಅಸಮಾಲಯದೊಳ್ ನಿಲೆ ಸೂ । ರ್ಯಸುರೇಜ್ಯರ್ ಬಳಯುತರ್
ನರಂ ಪುಟ್ಟುಗುಮಾ
ಅಸಿತೇಂದುಗಳತಿಬಳರಾ । ಗಿ ಸಮದೊಳಿರೆ ರಮಣಿ ಪುಟ್ಟುಗುಂ
ಬುಧ ಮಿತ್ರಾ ।[೯]

ಅರ್ಹದ್ದಾಸನ 'ಕಟ್ಟಮತ' ಕನ್ನಡದ ದ್ವಿತೀಯ ಮಹತ್ವದ ಜ್ಯೋತಿಷ್ಯ ಕೃತಿ. ವಿವಿಧ ಛಂದಗಳಲ್ಲಿ ರಚಿತವಾದ ಇದರಲ್ಲಿ ಮಳೆಯ ಕುರುಹು, ಆಕಸ್ಮಿಕ ಲಕ್ಷಣ. ಶಕುನ, ವಾಯುಚಕ್ರ. ಗೋಪ್ರವೇಶ. ಭೂಕಂಪ. ಭೂಜಾತಫಲ. ಮಳೆಯ ನಯ. ಉತ್ಪಾತ ಲಕ್ಷಣ. ಇಂದ್ರಧನುರ್ಲಕ್ಷಣ. ಪ್ರಥಮ ಗರ್ಭಲಕ್ಷಣ. ದ್ರೋಣ ಸಂಖ್ಯೆ, ಮಿಂಚಿನ ಲಕ್ಷಣ. ಪ್ರತಿಸೂರ್ಯಲಕ್ಷಣ. ಸಂವತ್ಸರ ಫಲ. ಗ್ರಹಂಗಳ ಪಗೆಕೆಳೆ, ಮೇಘಗಳ ನಾಮ ಕುಲ ವರ್ಣಧ್ವಾನ ವಿಚಾರ. ದೇಶವೃಷ್ಟಿ. ಮಾಸಫಲ, ರಾಹುಚಕ್ರ. ನಕ್ಷತ್ರಫಲ. ಚಿತ್ತುವ ಶಕುನ ಇತ್ಯಾದಿ ವಿಷಯಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ.

ಅತಿ–ವೃಷ್ಟಿ ಅನಾವೃಷ್ಟಿ ಲಕ್ಷಣ :

ಜಲಜಸಖಬಿಂಬಮತ್ಯು । ಜ್ವಲಮಪ್ಪೊಡೆ ವಾಯು ಪವನನೊಳ್
ಬೀಸುವೊಡಂ
ಜಲದಂಗಳ ರುಚಿಗಳ್ ನಿ । ರ್ಮಳಮಪ್ಪೊಡಧಿಕ ವೃಷ್ಟಿಯಕ್ಕುಂ ರಟ್ಟಾ ।
ಕಾಗೆ ಬಿಳಿದಾದೊಡಿರುಳಾ । ದಾಗಳ್ ಸುರಚಾಪವಾದೊಡಂ
ಕಪ್ಪೆಗೆ ಚಿ
ಲ್ವಾಗಿಯೆ ಚಂಡಿಕೆ ನೆಗೆದೊಡ । ಮಾಗದು ಮಳೆಪಾವರಂಗಳಕ್ಕು
ರಟ್ಟಾ ।೧೦

ಇವಲ್ಲದೆ ರಟ್ಟ ಜಾತಕ, ನರಪಿಂಗಲಿ, ವೃಷ್ಟಿಶಾಸ್ತ್ರ, ಶಕುನಪ್ರಪಂಚ, ಕೇರಳ ಪ್ರಶ್ನೆ, ಹಲ್ಲಿಶಕುನ, ಹಲ್ಲಿಬಿದ್ದಫಲ, ದೇಹಹಾರಿದ ಫಲ, ಗೋತ್ರವಿವರ, ಶಕುನಸಾರ, ಅಬ್ಧಿಕಲ್ಪ, ಸ್ತ್ರೀ ಲಕ್ಷಣಗಳು, ಮೈನೆರೆದಫಲ, ಜ್ಯೋತಿಷ್ಯ ಪ್ರಶ್ನೆಚಿಂತಾಮಣಿ, ಮಾಸ ಫಲ, ಸಾಮುದ್ರಿಕಲಕ್ಷಣ, ಬಾಲಗ್ರಹನಿವಾರಣೆ, ಗ್ರಹಬಿಡಿಸುವಕ್ರಮ, ಮರಣಮಣಿ ದರ್ಪಣ, ಪ್ರಶ್ನೆಶಾಸ್ತ್ರ ಇತ್ಯಾದಿ ಅನೇಕ ಗ್ರಂಥಗಳು ಜ್ಯೋತಿಷ್ಯವನ್ನು ನುಡಿಯುತ್ತವೆ.

'ಜ್ಯೋತಿಷ್ಯ ಸಂಗ್ರಹ' ಎಂಬ ಕೃತಿಯಲ್ಲಿ ಮನೆ ಬಾಗಿಲು ಬಿಡುವ ಕ್ರಮವನ್ನು ಹೀಗೆ ಹೇಳಿದೆ :

"ಕಾಲುಕಡೆ ಬಾಗಿಲಬಿಡೆ ಹೆಂಡತಿಗೆ ಸಾವು: ತಲೆ ಕಡೆ ಬಾಗಿಲ ಬಿಡೆ ಕನ್ನ ಕೊರೆವರು; ಚಿನ್ನ ಕಡೆ ಬಾಗಿಲ ಬಿಡೆ ರಾಜಭಯಾ: ಹೊಟ್ಟೆ ಕಡೆ ಬಾಗಿಲಬಿಡೆ ಮುಟ್ಟಿದ್ದು ಘನವಾಗಿ ಲಕ್ಷ್ಮಿ ಸೇರುವಳು; ಇದನರಿತು ತನ್ನ ಹೆಸರಿನ ಬಾಗಿಲ ಆರುತಿಂಗಳು ಸಾಧಿಸಿ ಒಳ್ಳೆ ನಕ್ಷತ್ರ, ಒಳ್ಳೆ ದಿವಸ, ತನಗೆ ಚಂದ್ರುಬಲ ಸೂರ್ಯಬಲ ಉಂಟಾದಲ್ಲಿ ಮುಹೂರ್ತ ಗಂಬವ ನಿಕ್ಕುವುದು"೧೧

ಹಕ್ಕಿಯ ಶಕುನವನ್ನು 'ಶಕುನ ಪ್ರಪಂಚ' ಕೆಳಗಿನಂತೆ ಹೇಳುತ್ತದೆ :

ಮದುವೆಯ ಗೃಹದೊಳ್ ಪಕ್ಕಿಯು
ಮುದದಿಂ ಶಿಖಿರವದಿನಂತರಾಳದಿ ಕೂಗಲ್
ಮದುವೆಯುಮಕ್ಕುಂ ಕಡೆಯೊಳ್
ಮದುಪಳಿಗೆಯು ಬೇಟದೊರ್ವಗಂ ಮಧುವಪ್ಪ್ಪ್೧೨

ಹೆಣ್ಣಿಗೆ ಸುಳಿಹುಟ್ಟಿದ ಲಕ್ಷಣವನ್ನು 'ಸಾಮುದ್ರಿಕ ಲಕ್ಷಣ' ಕೃತಿ ಹೀಗೆ ತಿಳಿಸುತ್ತದೆ : "ಸುಳಿ ಹುಬ್ಬಿನ ಮೇಲೆ ಇರಲು ಧನಲಾಭ. ಭುಜದ ಮೇಲೆ ಇರಲು ಗಂಡನ ಮೇಲೆ ಸ್ನೇಹ ಉಳ್ಳವಳು. ಮೊಲೆಯ ಮೇಲೆ ಇರೆ ಜಾರೆ. ನಡುದಲೆಯ ಮೇಲೆ ಇದ್ದರೆ ಹುಟ್ಟಿದ ಮನೆ ಹೊಕ್ಕ ಮನೆ ಹರಿದ್ರವಹುದು. ಮುಂದಲೆ ಮೇಲೆ ಇರೆ ಶುಭ. ನಡುನೆತ್ತಿಯ ಮೇಲಿರೆ ಧನ ಹೆಚ್ಚುವುದು. ಎಡದಲೆ ಮೇಲೆ ಇರೆ ಕಷ್ಟ. ಹಣೆಯ

ಮೇಲೆ: ಕಿವಿಯ ಮೇಲೆ ಇರೆ ಸಂಪದ, ಬೆನ್ನ ಮೇಲೆ ಇರೆ ಸಂತೋಷ, ಹೊಕ್ಕಳ ಮೇಲೆ ಇರೆ ಪತಿವ್ರತೆ, ಬಲಗಲ್ಲದ ಮೇಲಿರೆ ಇರೆ ಜಗಳಗಂಟಿಯಕ್ಕು."[೧೩]

ಶಾಂತಾಚಾರ್ಯನ 'ಮರಣಮಣಿದರ್ಪಣ ಶತಕ'ದಲ್ಲಿ ಮರಣ ಸೂಚನೆ, ಆಯು ವೃದ್ಧಿಯ ಲಕ್ಷಣಗಳನ್ನು ಹೀಗೆ ಹೇಳಲಾಗಿದೆ:

ಮರಣ:

> ಗೂಗೆ ಕಪೋತಂ ಬಲಿಗಳ್
> ಬೇಗದಿ ಬಂಡೇಱಿ ಪುಸ್ತಕದಿ ಕುಳ್ಳಿರೆ ತಾಂ
> ಯೋಗೀಂದ್ರ ಕೇಳು ಹರಣ
> ಪೋಗುವುದಾಱಿಸೆಂಬ ಮಾಸಕಿದು ನಿಜವೆಂದಂ ।[೧೪]

ಆಯುವೃದ್ಧಿ:

> ನುಡಿಯದೆ ನಿಂದಕವಮಂ ಪರ
> ಮಡದಿಯರಂ ಮಾತೆಯೆಂದು ಮನದೊಳ್ ಭಾವಿಸು
> ತೆಡೆಬಿಡದೆ ಸತ್ಯವಾಡಲ್
> ಪೊಡವಿಯೊಳವಗಕ್ಕುಂ ನಿರುತದೀರ್ಘಾಯುಷ್ಯಂ ।[೧೫]

'ಪ್ರಶ್ನ ಶಾಸ್ತ್ರ' ಎಂಬ ಕೃತಿಯಲ್ಲಿ ಪ್ರಶ್ನೆಗಳಿಗೆ ಹೇಳಿದ ಉತ್ತರಗಳಿಗೆ ಒಂದು ಉದಾಹರಣೆ:

"ನೀನು ಚಿಂತಿಸಿದ ಕಾರ್ಯವು ದುಃಖದಿಂದಲ್ಲದೆ ಆಗದು. ನೀನು ಬಡವನಾಗಿ ಯಿದ್ದೆ. ಆರನೂ ನಂಬಬೇಡ. ನೀನು ಚಿಂತೆಯ ಮಾಡುತಿದ್ದೆ. ನಿನ್ನ ಬಂಧು ಗಳು ನಿನ್ನ ಮೇಲೆ ವಿರುದ್ಧವ ತಾಳುತ್ತಿದ್ದಾರು. ಅದರ ಪರಿಹಾರಾರ್ಥವಾಗಿ ದೇವ ಪೂಜೆಯಂ ಮಾಡುತ್ತಿರಲಾಗಿ ನಿನಗೆ ನೆನೆದ ಕಾರ್ಯವೆಲ್ಲವು ಆದಾವು, ಸಂದೇಹಂ ಮಾಡಬೇಡ."[೧೬]

ಭೂಮಿಯಲ್ಲಿ ಅಡಗಿದ ದ್ರವ್ಯದ ಸುಳುಹು, ಅದನ್ನು ಒಲಿಸಿಕೊಳ್ಳುವ ರೀತಿ ಯನ್ನು 'ಧನವಾಸ್ತು ನಿರ್ಣಯ' ಎಂಬ ಕೃತಿ ಹೀಗೆ ವಿವರಿಸುತ್ತದೆ.

"ಆ ಪುರದ ಪೂರ್ವಭಾಗದಲ್ಲಿ ಕಾವೇರಿ ತೀರದ ಅಗ್ನಿದಿಕ್ಕಿಗೆ ಸಾಲು ವನಂ ಇರು ವುದು. ಅಲ್ಲಿ ಐದುಮಂಟಪ ಇರುವುದು. ಆ ಮಂಟಪದ ಮಧ್ಯಮಂಟಪದಲ್ಲಿ ಒಂದು ವೃಷಭ ಇರುವುದು. ಅದರ ಕೆಳಗೆ ಒಂದು ಲಕ್ಷಧನಂ ಇರ್ಪುದು ಅದರಾಯು ಐದುವರೆ ಸಾವಿರ ವರುಷ. ಅದಕ್ಕೆ ಬಲಿ ನೂರುಮಾನ ನೆಲ್ಲಕ್ಕಿ ಅನ್ನ, ಹಣ್ಣು ಕಾಯಿ. ಧೂಪ ದೀಪ ಚಂದನಗಂಧಾಕ್ಷತೆ ತಾಂಬೂಲ"[೧೭]

ಶುದ್ಧ ವೈಜ್ಞಾನಿಕ ಶಾಸ್ತ್ರವಾದ ಗಣಿತದಲ್ಲಿ ನಮ್ಮವರ ಪರಿಶ್ರಮವೇನು ಕಡಿಮೆ ಯದಲ್ಲ. 'ಗಣಿತ ವಿಲಾಸ' 'ಗಣಿತ ವಿರಿಂಚ' ಎಂಬ ಬಿರುದುಗಳನ್ನು ಪಡೆದ ರಾಜಾ

ದಿತ್ಯನು ಕ್ಷೇತ್ರ ಗಣಿತ, ವ್ಯವಹಾರಗಣಿತ, ವ್ಯವಹಾರರತ್ನ, ಲೀಲಾವತಿ ಚಿತ್ರಹಸುಗೆ ಎಂಬ ಕೃತಿಗಳನ್ನು ರಚಿಸಿದ್ದಾನೆ. ತುಂಬ ದೊಡ್ಡದಾದ ವ್ಯವಹಾರ ಗಣಿತ ಕೃತಿಯನ್ನು ಅವನು ಕೇವಲ ಐದು ದಿವಸಗಳಲ್ಲಿ ಬರೆದು ಮುಗಿಸಿದನಂತೆ:

ಲೆಕ್ಕದ ಕವಿತೆಯ ಬಲ್ಮೆ ಜ-
ಗಕ್ಕೆಸೆದಿರೆ ಸಕಲಗಣಿತಮೀಗ್ರಂಥದೊಳಂ
ತೆಕ್ಕನೆ ತೀವಿರಯ್ದು ದಿ-
ನಕ್ಕಂ ನೆಱಿಪೇಟ್ಟಿನಲ್ತೆ ರಾಜಾದಿತ್ಯಂ ।೧೮

ಭಾಸ್ಕರನ 'ಬೇಹಾರಗಣಿತದಲ್ಲಿ ಚಕ್ರಬಡ್ಡಿ ಸೂತ್ರ, ಪದಪಿನ ಸೂತ್ರ, ಪದಕದ ಸೂತ್ರ, ಅಡಗೂಲಿಸೂತ್ರ, ಟಂಕಶಾಲೆಯಲ್ಲಿ ಕಟ್ಟುವ ಇಚ್ಛಾವರ್ಣಕ್ಕೆ ಸೂತ್ರ– ಎಂಬ ವಿಷಯಗಳು ಅಡಕವಾಗಿವೆ. ಬಾಲವೈದ್ಯದ ಚೆಲುವ ಭಾಸ್ಕರನ ಲೀಲಾವತಿಯನ್ನು ಕನ್ನಡಿಸಿದ್ದಾನೆ. ತಿಮ್ಮರಸನ 'ಕ್ಷೇತ್ರಗಣಿತ' ಉದ್ದಗಲ ಅಳತೆಯ ಲೆಕ್ಕವನ್ನು ತಿಳಿಸುತ್ತದೆ. ಅಳತೆಯು ತಪ್ಪಿದರೆ ದೋಷಕರ; ತಪ್ಪಿದವನು ನರಕಭಾಜನನಾಗುತ್ತಾನಂತೆ:

ಅಂಗುಲ ಭೂಮಿಯ ತಪ್ಪಲು
ಪಿಂಗದೆ ತಾಂ ನರಕದಲ್ಲಿ ಸಂತತಮಿರ್ಪಂ
ಅಂಗುಲ ಹೆಚ್ಚದೆ ತಗ್ಗದೆ
ಸಂಗತಮಾಗಳೆಯೆ ಭೂಮಿರಕ್ಷಿಪಳೆಂದುಂ ।೧೯

ಕಥಾರೂಪದ ಲೆಕ್ಕಕ್ಕೆ ಒಂದು ಉದಾ :

ಪತಿ–ಸತಿಯು ಮುನಿದು ಪೋಗಲ್
ಸತತಂ ಗಾವುದವ ಸಪ್ತದಿವಸಾಂತರದಿಂ
ಪತಿ ಗಾವುದರೆಯಸನುದಿನ
ಗತಿ ನಡೆಯಲ್ ಸತಿಯನೆಂದು ಪತಿಯೈದುಗುಮೋ ।೨೦

ಉತ್ತರ. ೧೪ ದಿನಕ್ಕೆ ಪತಿ–ಸತಿಯನ್ನು ಮುಟ್ಟುವನು.

ವಿನೋದಪರ ಲೆಕ್ಕಕ್ಕೆ ಒಂದು ಉದಾ.

ಎಂಟುದಿನಕ್ಕೈದು ಗ್ರಂಥವ–
ನುಂಟೆನಿಸುತ ಕಲಿತು ಮಱೆವನೈದಕೆ ಮೂರಂ
ಎಂಟಂ ಕೂಡಿದ ನೂಱಕೆ
ವಂಟಿಸಿ ನಾಲ್ವತ್ತಕೊಂದು ದ್ವಾದಶ ವರ್ಷಂ । ೨೧

ಪಾಕಶಾಸ್ತ್ರದಲ್ಲಿ ನಮ್ಮವರ ಪರಿಣತಿ ಅಪಾರವಾದುದು. ವಿವಿಧ ಭಕ್ಷ ಭೋಜಗಳನ್ನು ತಯಾರಿಸುವ ವಿಧಾನ, ಬಳಸುವ ವಸ್ತು, ಅವುಗಳ ರುಚಿಗಳನ್ನು ಕುರಿತು ಓದುಗರ ಬಾಯಲ್ಲಿ ನೀರೂರುವಂತೆ ವರ್ಣಿಸಿದ್ದಾರೆ. ಇಂದಿನ ಯಾವ ಹೋಟೆಲ್ಲುಗ

ರುಚಿ ಶುಚಿಯಾದ ಅಡುಗೆಗಳಿಗೂ ಕಡಿಮೆಯಿಲ್ಲದ ರೀತಿಯಲ್ಲಿ ಅಡುಗೆಯ ಕಲೆಯನ್ನು ಪ್ರಕಟಿಸಿ ಅವರು ತಮ್ಮ ರುಚಿ ಜ್ಞಾನವನ್ನು, ಊಟದ ಮೇಲಿನ ಒಲವನ್ನು ತೋರಿದ್ದಾರೆ. ಈ ವಿಷಯ ಕುರಿತು ರಚಿತವಾದ ಅನೇಕ ಕೃತಿಗಳು ಇದಕ್ಕೆ ಸಾಕ್ಷಿ ನೀಡುತ್ತವೆ.

ಚಾವುಂಡರಾಯ ತನ್ನ 'ಲೋಕೋಪಕಾರಕ'ದಲ್ಲಿ ಇತರ ಶಾಸ್ತ್ರ ವಿಷಯಗಳ ಜೊತೆಗೆ ಸೂಪಶಾಸ್ತ್ರ ವಿಷಯವನ್ನೂ ವಿವರಿಸಿದ್ದಾನೆ. ಜಯಬಂಧುನಂದನನ ಸೂಪ ಶಾಸ್ತ್ರದಲ್ಲಿ ಲಡ್ಡುಗೆ, ಪಾಲುಂಡೆ, ಅಡರಿಗೆ ಇತ್ಯಾದಿ ಪದಾರ್ಥಗಳನ್ನು ಮಾಡುವ ವಿಧಾನವನ್ನು ಹೇಳಲಾಗಿದೆ. ಅವನು ತಿಳಿಸುವ ಲಡ್ಡುಗೆ ಸಿದ್ಧಪಡಿಸುವ ವಿಧಾನವನ್ನು ನೋಡಿ.

ಕಾಸಿದ ಪಾಲೊಳಿಕ್ಕಿ ಮೊಸರಂ ನಜಿ಼ ಪೊಟ್ಟಿಸೆವಂತಮಂತ್ರೆಯುಂ
ಕಾಸಿ ಘೃತಾನ್ವಿತಂ ಕಳಮಚೂರ್ಣಮನಿಕ್ಕಿ ಬಟಿಕ್ಕೆ ಸೀರೆಯೊಳ್
ಮಾಸರಮಾಗೆ ಸೇವಿಗೆಯನೊತ್ತಿ ಸೀತೋದಕದಿಂದೆ ಮತ್ತೆ ಸಂ
ಪಾಸಿಸಿ ಮಾಜ಼ಿಕ್ಕೆ ಲಡ್ಡುಗೆಯನೀತೆಱದಿಂ ಜಯಬಂಧುನಂದನಾ ।೨೨

ಮೂರನೆಯ ಮಂಗರಸನ 'ಸೂಪಶಾಸ್ತ್ರ' ೬ ಅಧ್ಯಾಯ ೩೫೭ ವಾರ್ಧಕ ಷಟ್ಪದಿಗಳಲ್ಲಿ ರಚಿತವಾದ ಅಡುಗೆಯಶಾಸ್ತ್ರವನ್ನು ಅಚ್ಚುಕಟ್ಟಾಗಿ ಹೇಳುವ ಕೃತಿ. ಇದರಲ್ಲಿ ಪಿಷ್ಟಪಾಕ, ಪಾನಕ, ಕಳಮಾನ್ನಪಾಕ, ಶಾಕಪಾಕ ಇತ್ಯಾದಿ ಷಡ್ರಸ ವಿಪಾಕ ಭೇದವನ್ನು ತಿಳಿಸಲಾಗಿದೆ. ಮಂಗರಸನ ಪ್ರಕಾರ 'ಘರಿವಿಳಂಗಾಯಿ' ಎಂಬ ಪಾಕವನ್ನು ಸಿದ್ಧಪಡಿಸುವ ರೀತಿ ಹೀಗಂತೆ:

ಹುರಿದ ತೆಂಗಾಯಿ ನಸುಬೆಂದ ಬೇಳೆಯ ಹೆಸರು
ಹುರಿದು ಬೇಯಿಸಿದ ಸೊಜ್ಜಿಗೆಯಿವನು ಕೂಡಿ ಸ–
ಕ್ಕರೆಯಿಕ್ಕಿ ಕರ್ಪೂರವನು ತಳಿದು ಪಿಂಡಮಂ ಮಾಡಿಯೆ ಸಣ್ಣನಾಗಿ
ಅರೆದಕ್ಕಿಯೊಳಗದ್ದಿ ಹೊಚ್ಚ ಹೊಸ ತುಪ್ಪದೊಳು
ಹುರಿದು ಹಸನಾಗಿ ಬೇಯಿಸಿ ತೆಗೆದು ತುಪ್ಪವಿಡೆ
ಘರಿವಿಳಂಗಾಯೆಂದು ಪೆಸರ್ವಡೆದು ನಾಲಗೆಯ ಕೊನೆಗೆ
ಪಿಯೂಷವಾಯ್ತು ।೨೩

ಈ ವಿವರಣೆಯನ್ನು ಕೇಳಿದರೆ ಯಾರಬಾಯಲ್ಲಿ ತಾನೆ ನೀರು ಬರದು? ಇಂದಿನ ಮಹಿಳೆಯರು ಮಾಡಿನೋಡಿ ತಮ್ಮ ಪುರುಷರ ರಸನೆಗೆ ಹೊಸರುಚಿಯ ಅನುಭವವನ್ನು ತಂದುಕೊಡಬಹುದು.

ಹೀಗೆಯೆ ಹಾಲಗಾರಿಗೆ, ಸವಡುರೊಟ್ಟಿ, ಪಿವಾಂಬುಪಾನಕಗಳನ್ನು ಮಾಡುವ ರೀತಿಯನ್ನೂ ರಸಪೂರ್ಣವಾಗಿ ವರ್ಣಿಸಲಾಗಿದೆ. ಅಜ್ಞಾತ ಕವಿಯ 'ಪಾಕಶಾಸ್ತ್ರ'

ವೆಂಬ ಅತ್ಯಂತ ಪುರಾತನ ಹಸ್ತಪ್ರತಿಯಲ್ಲಿ ಹಾಲಿನಿಂದ ತುಪ್ಪತೆಗೆಯುವ ವಿಧಾನದ ವಿವರಣೆ ಕುತೂಹಲಕಾರಿಯಾಗಿ ಬಂದಿದೆ. ಇವಲ್ಲದೆ ನಳಪಾಕ, ಭೀಮಪಾಕ, ಗೌರೀ ಪಾಕಗಳನ್ನು ಕುರಿತ ಕೃತಿಗಳೂ ಸಿಕ್ಕುತ್ತವೆ.

ಲೈಂಗಿಕ ಶಿಕ್ಷಣ ಬೇಕೋ ಬೇಡವೋ ಎಂದು ಇಂದು ಚರ್ಚೆ ನಡೆದಿದೆ. ಆದರೆ ಹಿಂದೆ ನಮ್ಮವರು ಅದು ಜೀವನಕ್ಕೆ, ಸುಖ–ದಾಂಪತ್ಯಕ್ಕೆ ಅವಶ್ಯವೆಂದು ಅರಿತಿದ್ದರು. ಅದಕ್ಕಾಗಿ ಆ ಶಾಸ್ತ್ರಕ್ಕೆ ಸಂಬಂಧಿಸಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಚಂದ್ರರಾಜನ ಮದನತಿಲಕ, ಕಲ್ಲರಸನ ಜನವಶ್ಯ, ಅಜ್ಞಾತ ಕವಿಗಳ ಅಂಗಜಬೋಧೆ. ಕಾಮಶಾಸ್ತ್ರ ಮಲ್ಲಿಕಾರ್ಜುನ ನೃಪಾಲನ ಮದನವಿಜಯ, ಅಜ್ಞಾತ ಕವಿಯ ಕಕ್ಕೋಕಶಾಸ್ತ್ರ ಟೀಕೆ ಇದಕ್ಕೆ ಉದಾಹರಣೆ.

ಬಾಲವೈದ್ಯದ ಚೆಲುವ ಕವಿಯ 'ರತ್ನಶಾಸ್ತ್ರ' ರತ್ನಗಳ ಜಾತಿ, ಪರೀಕ್ಷೆ ಇತ್ಯಾದಿ ವಿಷಯ ತಿಳಿಸುವ ಅಪೂರ್ವ ಗ್ರಂಥ. ಇದರಲ್ಲಿ ಅಳವಟ್ಟ ವಿಷಯಗಳನ್ನು ಕೆಳಗಿನ ಪದ್ಯ ಹೀಗೆ ತಿಳಿಸುತ್ತದೆ.

ನವರತ್ನಗಳ ಪೆಸರು ಪುಟ್ಟುತಿಹ ದೇಶವನು
ಭುವನದೊಳು ಗಣಿಗಳನು ವರ್ಣಜಾತಿಯುದೋಷ
ಸವನಿಸಿದ ಗುಣಗಳನು ಬೆಲೆ ಹಸ್ತ ಸಂಜ್ಞೆಯನು ಮಂಡಲಿಯ
ಕುಶಲತೆಯನು ।೨೪
ಎವೆಯ ಪರಿಮಾಣವನು ಕಣಜರತಿಮಂಜಾಡಿ
ಚವುನೋಟಯುಗಭೇದ ಕೃತಿಮದ ರತುನಗಳು
ತವತವಗೆ ತಿಳಿವಂತೆ ಪೇಳ್ವೆನಿದ ಕನ್ನಡದಿ ಮುನಿಯುಗಸ್ತ್ಯನ
ಕೃಪೆಯೊಳು ।

ಕೃತಿಮ ಮುತ್ತನ್ನು ಪರೀಕ್ಷಿಸುವ ವಿಧಾನ ಹೀಗಂತೆ.

ಕೃತಿಮದ ಮುತ್ತು ತಾನಿರಲು ಪರಿಕಿಸುವ ಪರಿ
ಮುತ್ತದನು ಮಡಕೆಯೊಳು ಗೋಮೂತ್ರವನು ತುಂಬಿ
ತತ್ತುಗೊಳ್ಳಿಸಿ ಲವಣವನು ಮಣಿಯ ನೆನೆಯಿಸಲುಬೇಕೊಂದು
ರಾತ್ರಿಯದನು
ಭತ್ತಗೋದಿಯ ಹೊಟ್ಟಿನೊಳಗದನು ಉದ್ದಿಯೊಳ
ಸುತ್ತನೋಡಲು ವರ್ಣಪೋಗದಿರೆಯಾ ಮಣಿಯು
ವಿತ್ತನೋತ್ತಮವೆಂದು ಪೇಟ್ಬನಾಸ್ತ್ಯಮುನಿ ಚಿತ್ತರಿಸೆ ಮುನಿವರರ್ಗೆ। ೨೫

'ಖಡ್ಗಶಾಸ್ತ್ರ' ಎಂಬ ಮತ್ತೊಂದು ಮಹತ್ವದ ಕೃತಿಯಲ್ಲಿ ಮಲ್ಲವಿದ್ಯೆ, ಕೃತಿ ವರಸೆಗಳ ವಿಧಾನಗಳನ್ನು ತಿಳಿಸಲಾಗಿದೆ. 'ವಾಸ್ತುಶಾಸ್ತ್ರ'ವೆಂಬ ಕೃತಿಯಲ್ಲಿ ಮನೆ

ಕಟ್ಟುವ ರೀತಿಯನ್ನು ವರ್ಣಿಸಲಾಗಿದೆ. ರಸಾಯನ ಕೌತುಕ, ರಸವಾದ, ರಸ ಸಿಂಧೂರವಮಾಡುವ ಕ್ರಮ, ರಸವಾದವಿದ್ಯ ಎಂಬ ಕೃತಿಗಳು ಬಂಗಾರ, ತಾಮ್ರ, ಪಿತ್ತಾಳೆ, ಇತ್ಯಾದಿ ಲೋಹಗಳನ್ನು ತಯಾರಿಸುವ ವಿಧಾನವನ್ನು ಹೇಳುತ್ತದೆ.

ಧೂತಲಕ್ಷಣ, ಸಾಯಿಕಾಲಲಕ್ಷಣ, ಸಭಾಪತಿ ಲಕ್ಷಣಗಳೂ ಶಾಸ್ತ್ರಗಳಂತೆ ಬೆಳೆದು ಬಂದಿವೆ. ಅಂದಿನ ಸಭಾಪತಿಯ ಲಕ್ಷಣ ಹೀಗಿರಬೇಕಿತ್ತಂತೆ.

"ಒಡ್ಡೋಲಗಂಗೊಟ್ಟು ಕುಳ್ಳಿರ್ದ ಸಭಾಪತಿಯ ಲಕ್ಷಣಮೊಂತೆಂದೊಡೆ. ಸೋಮ ಸೂರ್ಯ ವಂಶೋದ್ಭವನಾಗಿ. ಸ್ವಾಮ್ಯ. ಅಮಾತ್ಯ ರಾಷ್ಟ್ರ ದುರ್ಗ ಕೋಶ ಬಲ ಸುಹೃತ್ತುಗಳೆಂಬ ಸಪ್ತಾಂಗಮನರಿದು. ಸಾಮಭೇದ ದಾನದಂಡ ಮಯ ಉಪಾಯ ಮಹೇಂದ್ರಜಾಲ ಎಂಬ ಸಪ್ತೋಪಾಯಮಂ ಅರಿತು. ಕಾಶ್ಮೀರ ಕಾಂಭೋಜ ಗಾಂಧಾರ ಕೇರಳ ಗುಜ್ಜರ ಕುಂತಳ ಅವಂತಿಯೆಂಬ ಛಪ್ಪನ್ನ ದೇಶಭಾಷಾ ವಿಜ್ಞಾನ ನಾಗಿ– ಇಂತು ಸಕಲ ಕಲಾಪ್ರವೀಣನಾದಾತನು ಸಭಾಪತಿತ್ವಕ್ಕೆ ಯೋಗ್ಯನೆನಿಪಂ, ಧರೆಯೊಳ್ ಮಹಾತ್ಯಾಗ ದಯಾಯುಕ್ತಂ ಸತ್ಯ ಭಾಷಾ ಸಮನ್ವಿತಂ ಸಭಾಪತಿ ಲಕ್ಷಣಂ"[೨೬]

ಇವಲ್ಲದೆ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳೂ ಸಿಕ್ಕುತ್ತವೆ.

೫. ಟೀಕಾ ಸಾಹಿತ್ಯ :

ಪ್ರೌಢ ಭಾಷೆಯಲ್ಲಿರುವ ಕಾವ್ಯ–ಶಾಸ್ತ್ರಗಳು ಜನಸಾಮಾನ್ಯರಿಗೆ ಅರ್ಥವಾಗಲಿ ಎಂಬ ಉದ್ದೇಶದಿಂದ ನಮ್ಮವರು ಮೊದಲಿನಿಂದಲೂ ಅಂಥಗ್ರಂಥಗಳಿಗೆ ಟೀಕೆ ಟಿಪ್ಪಣಿ. ವ್ಯಾಖ್ಯಾನ. ವಿವರಣೆಗಳನ್ನು ಬರೆಯುತ್ತ ಬಂದಿದ್ದಾರೆ. ಕಾವ್ಯಸಾಹಿತ್ಯ ಶಾಸ್ತ್ರಸಾಹಿತ್ಯಗಳಂತೆ ಟೀಕಾಸಾಹಿತ್ಯವು ಒಂದು ಪ್ರಕಾರವಾಗಿ ಕನ್ನಡದಲ್ಲಿ ಬೆಳೆದು ಬಂದಿದೆ. ಕನ್ನಡ ಟೀಕಾಸಾಹಿತ್ಯದಲ್ಲಿ ಕನ್ನಡ ಕಾವ್ಯ. ಶಾಸ್ತ್ರಗಳಿಗೆ ಬರೆದ ಕನ್ನಡ ಟೀಕೆಗಳೂ. ಸಂಸ್ಕೃತ ಕಾವ್ಯ. ಶಾಸ್ತ್ರಗಳಿಗೆ ಬರೆದ ಕನ್ನಡ ಟೀಕೆಗಳೂ ಸಮಾವೇಶ ಗೊಳ್ಳುತ್ತವೆ.

ರಾಜಶೇಖರ ವಿಳಾಸ ಟೀಕೆ, ಕೈವಲ್ಯಪದ್ಧತಿ ಟೀಕೆ, ಕುಮಾರವಿಜಯ ವಿಳಾಸ ಟೀಕೆ, ಕರಣಹಸಿಗೆ ಟೀಕೆ. ಚೆನ್ನಮಲ್ಲೇಶ್ವರ ಶತಕಟೀಕೆ, ಮಂತ್ರಗೋಪ್ಯಟೀಕೆ, ಗುರು ರಗಳೆ ಟೀಕೆ. ಏಕೋತ್ತರಶತಸ್ಥಲ ಟೀಕೆ. ಅಷ್ಟಾವರಣ ಮಣಿದರ್ಪಣ ಸಂಗ್ರಹಟೀಕೆ. ಅನುಭವಸಾರಟೀಕೆ ಮೊದಲಾದವು ಕನ್ನಡ ಕಾವ್ಯಗಳಿಗೆ ಬರೆದ ಕನ್ನಡ ಟೀಕೆಗಳಿಗೆ ಉದಾಹರಣೆಯಾದರೆ. ಬಸವಪುರಾಣ ವ್ಯಾಖ್ಯಾನ (ಶಂಕರ ಕವಿ). ಅನಾಮಯಸ್ತೋತ್ರ ಟೀಕೆ (ದಂಡಿ) ಕಾಳಿದಾಸ ಭೋಜರ ಕೃತಿಗಳ ಟೀಕೆ. ವೀರಭದ್ರವಿಜಯ ಟೀಕೆ ಮೊದಲಾದುವು ಸಂಸ್ಕೃತ ಕಾವ್ಯಗಳಿಗೆ ಬರೆದ ಕನ್ನಡ ಟೀಕೆಗಳಿಗೆ ಉದಾಹರಣೆ. ಏಕಾಕ್ಷರ ನಿಘಂಟು ಟೀಕೆ. ಯಜುರ್ವೇದ ಭಾಷ್ಯ ಟೀಕೆ, ಸಾರಸ್ವತವ್ಯಾಕರಣ ಟೀಕೆ. ಜೈನ

ಗಣಿತ ಸೂತ್ರ ಟೀಕೋದಾಹರಣೆ. ಗಣಿತಸಾರಸಂಗ್ರಹಟೀಕೆ, ತಂತ್ರಪ್ರಕಾಶಟೀಕೆ ಇತ್ಯಾದಿ ಕೃತಿಗಳು ಕನ್ನಡ. ಸಂಸ್ಕೃತ ಶಾಸ್ತ್ರ ಗ್ರಂಥಗಳಿಗೆ ಬರೆದ ಕನ್ನಡ ಟೀಕೆಗಳಾಗಿವೆ.

ಈ ಐದು ವಿಭಾಗದಡಿಯಲ್ಲಿ ಸೇರುವ ಕೃತಿಗಳಲ್ಲದೆ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಯಕ್ಷಗಾನ. ಬಯಲಾಟ. ದುಂದುಮೆ, ಒಗಟು, ಗಾದೆ. ಲೆಕ್ಕ ಹಾಡುಗಳ ಅನೇಕ ಹಸ್ತಪ್ರತಿಗಳೂ, ಕೈಫಿಯತ್ತುಗಳೂ ಸಿಕ್ಕುತ್ತವೆ.

ಒಟ್ಟಿನಲ್ಲಿ ಕನ್ನಡ ಹಸ್ತಪ್ರತಿಗಳಲ್ಲಿ ಮಾನವನ ಮಾನಸಿಕ ನೆಮ್ಮದಿಗೆ ಬೇಕಾದ ಪುರಾಣ ಧಾರ್ಮಿಕ ಕಾವ್ಯಗಳೂ. ದೈಹಿಕ ಸ್ವಾಸ್ಥ್ಯಕ್ಕೆ, ಲೋಕವ್ಯವಹಾರಕ್ಕೆ ಪೂರಕವಾದ ಲೌಕಿಕಶಾಸ್ತ್ರಗಳೂ ಅಡಕವಾಗಿವೆ. ಅವುಗಳ ಅಧ್ಯಯನದಿಂದ ಪ್ರಾಚೀನ ಕನ್ನಡಿಗರ ಮನೋಧರ್ಮ, ಇತಿಹಾಸ. ಪರಂಪರೆ. ಸಂಸ್ಕೃತಿ. ಧರ್ಮ. ನೀತಿ. ತತ್ವ. ಆಚಾರ ವಿಚಾರ, ನಡೆ ನುಡಿ. ಶೀಲ ಸಂಪ್ರದಾಯ ಜೀವನಮೌಲ್ಯ ಎಲ್ಲವೂ ತಿಳಿದುಬರುತ್ತವೆ.

ಶ್ರೀಮಾನ್ ಎಚ್. ದೇವಿರಪ್ಪನವರು ಹೇಳುವಂತೆ "ಹಸ್ತಪ್ರತಿಗಳಲ್ಲಿ ಏನಿದೆ ? ಎಂಬ ಪ್ರಶ್ನೆಗೆ ಏನಿಲ್ಲ ? ಎಂಬುದೇ ಉತ್ತರ. ಕನ್ನಡ ಜನರ ಜೀವನವು ವೈವಿಧ್ಯ ಪೂರ್ಣವು ವರ್ಣರಂಜಿತವು ವಿವಿಧ ಧಾತುಸಮನ್ವಿತವು ಸುಸಂಸ್ಕೃತವೂ ಆಗಿ ಸರ್ವಾಂಗಸುಂದರವಾಗಿ ಬೆಳೆದು ಪರಿಪೂರ್ಣತೆಯನ್ನು ಸಾಧಿಸುವುದಕ್ಕೆ ಏನೇನು ಬೇಕೋ ಅದೆಲ್ಲವೂ ಹಸ್ತಪ್ರತಿಗಳಲ್ಲಿದೆ ಎಂಬುದೇ ಆ ಉತ್ತರದ ನಿರ್ವಚನ"[೨೭]

●●

ಭಾಷೆ - ಅಕ್ಷರ - ವಾಚನಪದ್ಧತಿ

● ಎನ್. ಬಸವಾರಾಧ್ಯ

ಗ್ರಂಥಸಂಪಾದನೆಯಲ್ಲಿ ಭಾಷೆ ಅಕ್ಷರ ಮತ್ತು ವಾಚನಪದ್ಧತಿ ಅಪರಿಹಾರ್ಯ ವಾದ ಅಂಗಗಳಾಗಿವೆ. ಅಷ್ಟೇ ಅಲ್ಲ ಇವು ಪ್ರಮುಖವಾದ ಅಂಗಗಳೂ ಆಗಿವೆ. ಅತ್ಯಂತ ಪ್ರಾಚೀನ ಕಲೆಗಳಲ್ಲಿ ಗ್ರಂಥಸಂಪಾದನೆಯೂ ಒಂದು. ಕವಿಯ ಮೂಲ ಪಾಠವನ್ನು ಕಂಡು ಹಿಡಿಯುವುದೇ ಗ್ರಂಥಸಂಪಾದನೆಯ ಪರಮೋದ್ದೇಶ. ಈ ಕಾರ್ಯಕ್ಕಾಗಿ ಅನುಸರಿಸುವ ಹಲವು ವಿಧಾನಗಳಲ್ಲಿ ಭಾಷೆ ಅಕ್ಷರ ಮತ್ತು ವಾಚನ ಪದ್ಧತಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತವೆ. ಇವು ನಿರ್ವಹಿಸುವ ಪಾತ್ರ ವನ್ನು ಇಲ್ಲಿ ವಿಶ್ಲೇಷಿಸಲು ಯತ್ನಿಸಲಾಗಿದೆ.

ಸುಮಾರು ಒಂದು ಸಾವಿರ ವರ್ಷಗಳಿಗಿಂತಲೂ ಪ್ರಾಚೀನತೆಯುಳ್ಳ ಕನ್ನಡ ಸಾಹಿತ್ಯದಲ್ಲಿ ಭಾಷೆ ಸಾಹಿತ್ಯಚರಿತ್ರೆಯನ್ನು ವಿಂಗಡಿಸಲು ಪ್ರಮುಖಸಾಧನವಾಗಿದೆ. ಕನ್ನಡ ಭಾಷೆಯ ಅವಸ್ಥೆಗಳು ಸ್ಥೂಲವಾಗಿ (೧) ಪೂರ್ವದ ಹಳಗನ್ನಡ (೨) ಹಳ ಗನ್ನಡ (೩) ನಡುಗನ್ನಡ ಮತ್ತು (೪) ಹೊಸಗನ್ನಡ ಎಂದು ವಿದ್ವಾಂಸರು ನಿರ್ಧ ರಿಸಿದ್ದಾರೆ. ಕನ್ನಡ ಹಸ್ತಪ್ರತಿಗಳನ್ನು ಈ ದೃಷ್ಟಿಯಿಂದ ವಿಭಜಿಸಬಹುದಾಗಿದೆ.

ಭಾಷೆ ಮಾನವನ ಸಂಪರ್ಕಸಾಧನವಾಗಿದೆ. ಅಭಿಪ್ರಾಯಗಳ ಅಭಿವ್ಯಕ್ತಿಗಾಗಿ ಇದು ಸೃಷ್ಟಿಗೊಂಡಿದೆ. ಇದು ಆಯಾಕಾಲದ ಪರಿಸ್ಥಿತಿಯನ್ನು ಸ್ವರೂಪವನ್ನೂ ವ್ಯಕ್ತಪಡಿಸುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಕನ್ನಡಭಾಷೆ ವೈವಿಧ್ಯವನ್ನು ಪಡೆ ಯಿತು. ಬಸವೇಶ್ವರರ ನೇತೃತ್ವದಲ್ಲಿ ಇದಕ್ಕೆ ಒಂದು ಹೊಸ ಆಯಾಮ ದೊರೆ ಯಿತು. ಸಾಂಪ್ರದಾಯಿಕ ಸಂಕೋಲೆಗಳನ್ನು ಕಳಚಿಕೊಂಡ ಶರಣರ ಅನುಭಾವದ ಆಡುಭಾಷೆ ಗ್ರಂಥಸ್ಥ ಭಾಷೆಯಾಯಿತು. ಒಂದು ಹೊಸ ಜಾಡು ನಿರ್ಮಾಣ ವಾಯಿತು.

ಲಿಂಗಯ್ಯನೆಂಬ ಒಬ್ಬ ಕನ್ನಡ ಕವಿ ತನ್ನ ಪರ್ವತ ಚಾರಿತ್ರವೆಂಬ ಭಾಮಿನಿ ಷಟ್ಪದಿಯ ಕೃತಿಯಲ್ಲಿ :

> ವಾಲೆಯಲಿ ತುಂಬಿರ್ದ ಬರಹವ
> ನಾಲಿಗೆಗಳಿಂದರಿವರೈ ಸಲೆ
> ಆಲಿ ಕಿವಿಗಳು ನುಡಿಯಬಲ್ಲವೆ ಕಾರ್ಯಲಕ್ಷಣವಾ

ವೋಲೆಯಂತ್ತಿರೆ ಯೆಂನ್ನ ಮತಿಯನು
ಶೂಲಧರ ಶ್ರೀ ಮಲ್ಲಿನಾತಲಿಂಗನು
ಮೇಲೆ ಕಲಿಸಿದ ತನ್ನ ಮಹಿಮೆಯ ಮರೆಯಬೇಕೆಂದೂ°

ಎಂದು ಹೇಳಿರುವುದು ತುಂಬ ಔಚಿತ್ಯಪೂರ್ಣವಾಗಿದೆ.

ಹಸ್ತಪ್ರತಿಗಳಲ್ಲಿ ಪೂರ್ವದ ಹಳಗನ್ನಡಕ್ಕೆ ಯಾವ ದಾಖಲಾತಿಯೂ ಸಿಕ್ಕುವುದಿಲ್ಲ. ಕೃತಿಯ ಕಾಲ ಪ್ರತಿಕಾರನ ಕಾಲ ಭಿನ್ನವಾಗಿದ್ದು ಭಾಷೆಯಲ್ಲೂ ಕೂಡ ಸ್ಪಷ್ಟವಾದ ವ್ಯತ್ಯಾಸಗಳನ್ನೂ ಗಮನಿಸಬಹುದಾಗಿದೆ. ಒಂದೆರಡು ದೃಷ್ಟಾಂತಗಳನ್ನೂ ಪರಿಶೀಲಿಸಬಹುದು. ಚೆನ್ನಬಸವೇಶ್ವರರ ಕರಣಹಸಿಗೆಯ ಸಟೀಕಿನಲ್ಲಿ :

"ತತ್ವವಿಭಾಗೆಯೆಂತೆಂದೊಡೆ ವೊಕ್ಕಲಿಗನು ಮಳೆಯ ಹದ ಭೂಮಿಯ ಬೆದೆಯನಱಿದು ಹದಿನೆಂಟು ದಾನ್ಯಂಗಳಂ ಬಿತ್ತಿ ಬೆಳದು ಕೊಯಿದು ವೊಕ್ಕಿ ತೂರಿ ರಾಸಿಯಂ ಮಾಡಿ ನೆಲ್ಲು ಗೋದುಮೆ ವುದ್ದು ಕಡಲೆ ಹೆಸರು ಮೊದಲಾದುವು ಇಷ್ಟಿಷ್ಟೊಂದು ಅಳೆದು ಹಸುಗೆಯ ಮಾಡುವ ಹಾಂಗೆ ಪರಶಿವನು ತಂನ ಪಂಚಮುಖಗಳಿಂದೆ ಪಂಚಭೂತಂಗಳಂ ಪುಟ್ಟಿಸಿ ಆ ಪಂಚಭೂತಂಗಳಂ ಮಿಶ್ರದಿಂದಿಪ್ಪತ್ತೈಯಿದು ತತ್ವಂಗಳಂ ಪುಟ್ಟಿಸಿ ಆ ತತ್ವಾತ್ಮಕ ಶರೀರವನು ತಂನಂಶವಾದತ್ಮಂಗೆ ಸಂಬಂಧಿಸಿದವನಾಗಿ ಆತ್ಮವ ದೇಹಭಾಗವೆ ಭಾವದ ಮಾಱಸೆಯಿಂ ನಿಜವಂ ಮರೆದು ಪರಿಭವಂಗಳೊಳು ಹುಟ್ಟಿ ಬರುವಲ್ಲಿ ಪುಣ್ಯದಿಂ ದೇವತಾ ಜನ್ಮ ಪಾಪದಿಂ ಸ್ತಾವರಜನ್ಮ ಪುಣ್ಯಪಾಪಂಗಳ ಸಮಾನತ್ವದಿಂ ಮನುಷ್ಯ ಜನ್ಮವಹುದು"

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೧ ಪುಟ ೨೨೯)

ಎಂಬುದಾಗಿದೆ. ಹದಿನೆಂಟನೆಯ ಶತಮಾನದ ಕಳಲೆ ನಂಜರಾಜನ ಕಾಶೀಮಹಿಮಾರ್ಥ ದರ್ಪಣದ ಪ್ರಯೋಗ ಮಾನನೀಯವಾಗಿದೆ :

ಭಕ್ತಿಯಿಂದಲೂ ಮಹಾತ್ಮೆಯಂ ಕೇಳಲು ಪರಮೇಶ್ವರನನುಗ್ರಹದಿಂದ
ಪುತ್ರವಂತರಹರೂ ಕೇಳ್ಯೆಸೂತ ಹಲವು ಪ್ರಕಾರವಾಗಿ ಹೆಳ್ದರೇನು
ಯಿದ್ದೀತು
ಯಿ ಮಹಾತ್ಮೆಯಂ ಕೇಳಲು ಆರಾರಿಗೆಯೇನು ಮನೋರಥವುಂಟು
ಆಯಮೋರಥ ಸಿದ್ಧಿಗಳಹವೂ"

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೧–೨೯)

ಹೀಗೆಯೇ ಭಾಷಾಪ್ರಭೇದಕ್ಕೆ "ಅಕ್ಷರ ಕೇವಲಿ ನಿಮಿತ್ತ" ಎಂಬ ಕೃತಿಯಲ್ಲಿ :

ನೀನು ಚಿಂತಿಸಿದ ಕಾರ್ಯವು ದುಃಖದಿಂದಲ್ಲದೆ ಆಗದು. ನೀನು ಬಡವನಾಗಿಯಿದ್ದೆ ಆರನೂ ನಂಬಬೇಡ ನೀನು ಚಿಂತೆಯು ಮಾಡುತಿದ್ದೆ ಅದರ ಪರಿಹರಾರ್ಥವಾಗಿ ದೇವಪೂಜೆಯಂ ಮಾಡುತ್ತಿರಲಾಗಿ ನಿನಗೆ ನೆನೆದ ಕಾರ್ಯವೆಲ್ಲವು ಅಥಾವು ಸಂದೇಹಂ ಮಾಡಬೇಡ

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕಸೂಚೀ ೧–೮)

ಕನ್ನಡ ಹಸ್ತಪ್ರತಿಗಳಲ್ಲಿನ ಭಾಷೆ ಕನ್ನಡವೇ ಅಲ್ಲದೆ ಇತರ ಭಾಷೆಗಳಲ್ಲಿರುವುದೂ ಕಂಡುಬರುತ್ತದೆ. ಕನ್ನಡ ಲಿಪಿಯ ಹಸ್ತಪ್ರತಿಗಳ ಭಾಷೆ ತೆಲುಗಿನಲ್ಲಿರುವುದೂ ಸಂಸ್ಕೃತದಲ್ಲಿರುವುದೂ ಸರ್ವೇಸಾಮಾನ್ಯವಾಗಿದೆ. ಅನೇಕ ವೈದ್ಯಗ್ರಂಥಗಳು ಕನ್ನಡ ಲಿಪಿಯಲ್ಲಿದ್ದರೂ ತೆಲುಗು ಭಾಷೆಯಲ್ಲಿವೆ. ಕೆಲವು ಗ್ರಂಥಗಳಲ್ಲಿ ಎರಡೂ ಭಾಷೆಗಳಿವೆ. ಅನೇಕ ಟೀಕಿನ ಗ್ರಂಥಗಳು ಸಂಸ್ಕೃತ ಮೂಲದೊಂದಿಗೆ ಕನ್ನಡ ಭಾಷೆಯನ್ನೊಳಕೊಂಡಿವೆ. ಇದಕ್ಕೆ ನಿದರ್ಶನಗಳನ್ನು ಮುಂದೆ ಸೂಚಿಸಲಾಗಿದೆ.

ಹಸ್ತಪ್ರತಿಗಳ ಅಕ್ಷರ ವೈವಿಧ್ಯಪೂರ್ಣವಾಗಿರುತ್ತದೆ. ಅಕ್ಷರ ಕಾಲಕಾಲಕ್ಕೆ ಮಾರ್ಪಾಟುಹೊಂದುತ್ತ ಬಂದಿರುವುದನ್ನು ನಾವು ಗಮನಿಸಬಹುದು. ಮುದ್ರಣ ಸೌಲಭ್ಯಕ್ಕಾಗಿ ಅಕ್ಷರಗಳ ವಿನ್ಯಾಸ ಕ್ರಮೇಣ ಮಾರ್ಪಟ್ಟು ಇಂದಿನ ರೂಪವನ್ನು ಹೊಂದಿರುವುದನ್ನು ಮನಗಾಣಬಹುದಾಗಿದೆ.

ಶಾಸನಗಳಲ್ಲಿ ಅಕ್ಷರಗಳನ್ನು ಕೊರೆಯುವುದರ ಬಗೆಗೆ ವಿಶೇಷವಾದ ಉಲ್ಲೇಖಗಳು ದೊರೆಯುತ್ತವೆ. ಹಸ್ತಪ್ರತಿಗಳಲ್ಲೂ ಕೂಡ ಕೆಲವು ಮಾಹಿತಿಗಳು ದೊರಕುತ್ತವೆ. ದೀರ್ಘಾಕ್ಷರಗಳು ದ್ವಿತ್ವಾಕ್ಷರಗಳು ಸಂಯುಕ್ತಾಕ್ಷರಗಳು ಸ್ವರವ್ಯಂಜನಗಳು ಕಾಲಕಾಲಕ್ಕೆ ವಿಕಾಸವಾಗುತ್ತಾ ಬಂದಿವೆ. ಇವುಗಳಿಗೆ ಉದಾಹರಣೆಗಳನ್ನು ಮುಂದೆ ನಿರೂಪಿಸಲಾಗಿದೆ.

ಅಕ್ಷರಗಳು ಸ್ಫುಟವಾಗಿಲ್ಲದಿದ್ದರೆ ನಿರ್ದಿಷ್ಟವಾಗಿಲ್ಲದಿದ್ದರೆ ಹಸ್ತಪ್ರತಿಗಳನ್ನು ಓದುವುದು ದುರ್ಲಭವೂ ದುಸ್ತರವೂ ದುರ್ಭರವೂ ಆಗುತ್ತದೆ. ಆದ್ದರಿಂದಲೇ ಅಕ್ಷರಗಳನ್ನು ಬರೆದಿರುವವರು (ಕೊರೆದಿರುವವರು), ಕಂಡರಿಸಿರುವರು ತಮ್ಮ ಅನಿಸಿಕೆಗಳನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಚಿಕ್ಕಹಂದಿಗೋಳದ ಒಂದು ಶಾಸನದಲ್ಲಿ :

ಪರಿಕಿಪ್ರೊಡೆಲ್ಲಕ್ಕರಮುಮಕ್ಕರಮೋ ಪ್ರತಿಕಣ್ಣ ಚನ್ದನ
ಕ್ಕರಮು ನೆಗರ್ತೆಯಕ್ಕರಮನೇಕರುಮಂ ಪ್ರೊರೆವಕ್ಕರಂ ಮಹೀ
ಶ್ವರರ ಸಭಾಸ್ತರಾಳಮನಲಂಕರಿಪಕ್ಕರಮೆನ್ತುಮಾಳ್ದನಂ
ಪಿರಿಯಮಗುಸ್ತ್ರಿಯೊಳ್ನಿಲಿಸುವಕ್ಕರಯುಪ್ಪರವಟ್ಟದಕ್ಕರ

(ಸೌ.ಇಂ.–೯ ಪು. ೧೭೮. ಚಿಕ್ಕಹಂದಿಗೋಳ ಶಾಸನ. ಕನ್ನಡ ಗ್ರಂಥಸಂಪಾದನ ಶಾಸ್ತ್ರ ಪು. ೫೨)

ಹೀಗೆ ಹೇಳಿದೆ. ಪುಷ್ಪದಂತ ಪುರಾಣವನ್ನು ಪ್ರತಿಮಾಡಿದ ನವಿಲ್ಗುಂದದ ಮಾದಿರಾಜ ಹೇಳಿಕೊಂಡಿರುವುದು ಸರ್ವಜನಶ್ರುತವಾಗಿದೆ.

ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳ ಚೆಲ್ವು ಮಾತ್ರೆಯೊಳ್
ನಿಂದ ಬೆಡಂಗು ಬಳ್ಳಿಯೊಳೊಡಂಬಡುತಿರ್ಪ ನಯಂ ವಿಸರ್ಗದೊ
ಳ್ಪೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿ
ಲ್ಗುಂದದ ಮಾದಿರಾಜ ವಿಬುಧಂ ವಿಬುಧೋದಿತ ಸಪ್ತಕಾವ್ಯಮಂ

(ಕನ್ನಡ ಗ್ರಂಥ ಸಂಪಾದನಾಶಾಸ್ತ್ರ ಪು. ೫೪)

ಅಕ್ಷರಗಳ ಬಗೆಗೆ ದಾವಣಗೆರೆಯ ಒಂದು ಶಾಸನದಲ್ಲಿ

ಪೊಕ್ಕುಳು ತಲೆಕಟ್ಟಯನ
ನ್ತಕ್ಕರದವಯವಮನಱಿದು ಖಂಡರಿಸಲುಕೀ
ಇಕ್ಕುದನೆ ಬಲ್ಲನಱಿಯ
ಮ್ಮಿಕ್ಕವರೆನ್ದೊಸೆದು ಧರಣಿ ಬಣ್ಣಿಸುತಿರ್ಕುಂ

(ಎಕ–೧೧ ದಾವಣ ೧೪೯–೨೫; ೧೧೧೩)

ಎಂದಿರುವುದು ಗಮನಾರ್ಹವಾಗಿದೆ. ಹಾಗೆಯೇ ತಿಳುವಳ್ಳಿಯ ಒಂದು ಶಾಸನದಲ್ಲಿ ಅಕ್ಷರಗಳ ಬಗೆಗೆ ಆಲಂಕಾರಿಕವಾಗಿ ಹೇಳಿರುವ ಪದ್ಯ ಉಲ್ಲೇಖಾರ್ಹವಾಗಿದೆ :

ಶರನಿಧಿಯೊಳ್ನಿಲೆ (ಸಿ) (ದು) ವಂ
ಸರಸಿಜಭವನಾಯ್ದುಕೊಣ್ಡು ವಾಗ್ದೇಯಿಗೆ ದಿ
ತ್ತರದಿಂದೆ ಸಮೆದ ಮುತ್ತಿನ
ಸರಿಗೆಯು ನಮುಕರಿಪ್ಪುವಲ್ತೆ ಬಲ್ಲೆಯ ಲಿಖಿತಂ

[ಕಇ. ೫–೮ : ತಿಳುವಳ್ಳಿ. ಕನ್ನಡ ಗ್ರಂಥ ಸಂಪಾದನಶಾಸ್ತ್ರ. ಪು. ೫೨)

ಕರ್ನಾಟಕ ಭಾಷಾಭೂಷಣ ಎಲ್ಲರಿಗೂ ತಿಳಿದಿರುವಂತೆ ಒಂದು ಹಳಗನ್ನಡ ವ್ಯಾಕರಣ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಇದರ ಒಂದು ಹಸ್ತಪ್ರತಿ ಮಲಯಾಳಿ ಲಿಪಿಯುಲ್ಲಿದೆ. ಅದರ ಪ್ರಾರಂಭ ಹೀಗಿದೆ :

ಸರ್ವಜ್ಞಂ ನ್ತಮಹಂ ವನ್ದೇ ಪರಂಜ್ಯೋತಿಸ್ತಮೋಪಹಂ
ಪ್ರವೃತ್ತಾಯನ್ಮುಖಾದ್ದೇವೀ ಸರ್ವಭಾಷಾ ಸರಸ್ವತೀ

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೧–೨೪೪)

ಅಕ್ಷರ ಕನ್ನಡ, ಭಾಷೆ ತೆಲುಗು. ಇದಕ್ಕೆ ಮಹಮೂರ್ತಿಯ ಅಷ್ಟಾವರ್ಣ ತಿಲಕ ಉದಾಹರಣೆಯಾಗಿದೆ :

ಯೀ ಗ್ರಂಥ ವೀರಶೈವ ಮಥಸ್ತು ತೈನ ಜಂಗಾಲ ಅಷ್ಟವರ್ನಾಲು ಅಂಟೆ
೧ ಗುರು ೨ನೆ ಲಿಂಗ ೩ನೆ ಜಂಗಂ ೪ನೆ ವಿಭೂತಿ ೫ನೆ ರುದ್ರಾಕ್ಷಿ
೬ನೆ ಪಂಚಾಕ್ಷರಿ
೭ ಮಂತ್ರ ಪ್ರದೋದಕಂ ೮ನೆ ಪ್ರಸಾದಂ ಯಿವಿ ಅಷ್ಟವರ್ನ ತಿಲಕಂ
ಯೀ ವರ್ನಾಲ
ಮಹಾತ್ಮ್ಯಂ ಮಿಎಂ ನೂ ಜೈನುಲು ಕೊಂನ್ನು ವೀರಶೈವ
ಮಥಸ್ತುಲ ಕೂಂನು
ನಡಿಚಿನ ಖಿರ್ಪಣಮು ಯಿಂನ್ನು ಕೊಂತೆ ಯಂದಿ ರಾಜಲು
ರಾಜರೀಕಂಲೋ
ನಡಚಿನ ವಿಚಿತ್ರಮೂಲಂ ನೂವುಂ ನವಿಯೀ ಗ್ರಂಥ ಹಳೆಕನ್ನಡಂ
ವಾರ್ಧಿಕ
ಪದಮುತೋ ವುಂದಿ

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೧–೧೧೫)

ಅಸ್ಪಷ್ಟಾಕ್ಷರಗಳಿಗೆ ಅನ್ನದಾನಿ ವಿರಚಿತ ಅರುವತ್ತುಮೂರು ಪುರಾತನರ ನಾಮಾವಳಿಯ ಈ ಪದ್ಯ ಮೂಕ ಸಾಕ್ಷಿಯಂತಿದೆ :

ಕಂದ : ಗೋ ಕೈ ಚಾಂದ್ರೋಗಾನಿಂ
ಮ್ಯೆಕೊಂಕುಂ ಸೂಚಿ ಚೊಂಚಿಕೆ ಮೌಧೂಪಾಂ
ಶೂಕಂ ಚಂದೋಹಂ ಮಿಂ
ಗೌ ಕೂಚ್ಛಿಕಾಮ ಸೋಹಮೊಹಾಮುಂ ಗುಂ

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೫–೭೮)

ಅಲ್ಪಪ್ರಾಣ ಮಹಾಪ್ರಾಣಾಕ್ಷರಗಳ ಗೋಂದಲಕ್ಕೆ 'ಅರುವತ್ತು ಸಂವತ್ಸರಂಗಳ ವಾರ್ಧಿಕ' ಒಂದು ಸೊಗಸಾದ ದೃಷ್ಟಾಂತವಾಗಿದೆ :

ಬುದುವಾರದಲಿ ನೆರೆಯೆ ದನದಾನ್ಯವಮ್ರುತಗಳು
ಸಿರಿಯಾಗಿ ಸುಖಿ ಪೇಳ್ಳೆ ಗುರುವಾರ ಬಂದುಗಕೆ
ಮುದದಿ ಹಿತಪಾಗಿ ಸಕಲ ಸುಕಾರ್ಯಸಿದ್ಧ ಗಂಡನ ಮುಂದೆ ಮರಣ
ಮರಣವಹಳೂ
ವಿದಿತ ಶುಕ್ರನೊಳು ಕರಿದರ್ಮ ವರುಷದ ಭಕ್ತಿ
ವದಗಿ ಮುತ್ತೈದೆಯಾಗುವಳು ಶನಿವಾರದೊಳು
ಸುದತಿಯುರು ನೆರೆಯೆ ಪಾಪಿಗಳಾಗಿ ತಿರಿ……

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೫–೮೨)

ವಾದಿರಾಜರ (ದಾಸರ) ಕೃತಿಗಳ ಹಸ್ತಪ್ರತಿಯೊಂದು ತುಳುಲಿಪಿಯಲ್ಲಿದೆ. ಇದು ಸೋದೆಯ ವಾದಿರಾಜ ಮಠದಲ್ಲಿದೆ ಎಂದು ತಿಳಿದುಬಂದಿದೆ. ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ ಶ್ರೀವಾದಿರಾಜರ ಕೃತಿಯಲ್ಲಿ ಇದರ ಒಂದು ಪುಟವನ್ನು ಕೊಡಲಾಗಿದೆ. ಹಲವಾರು ವೈದ್ಯಗ್ರಂಥಗಳ ಅಕ್ಷರ ಕನ್ನಡವಾಗಿದ್ದು ಭಾಷೆ ತೆಲುಗು ಆಗಿರುವುದೂ ಹಾಗೆಯೇ ಅನೇಕ ಸಂಸ್ಕೃತ ಕಾವ್ಯಗಳು ಕನ್ನಡ ಅಕ್ಷರಗಳಲ್ಲಿರುವುದೂ ಸರ್ವರಿಗೂ ತಿಳಿದಿರುವ ಸಂಗತಿಯಾಗಿದೆ.

ಕೆಲವು ಹಸ್ತಪ್ರತಿಗಳ ಅಕ್ಷರಗಳು ಸುಂದರವಾಗಿದ್ದರೆ ಮತ್ತೆ ಕೆಲವು ಕಾಕಲಿಪಿ ದುರ್ಲಿಪಿಗಳಿಂದ ಕೂಡಿರುತ್ತವೆ. ಸುಂದರ ಬರವಣಿಗೆಯ ಹಸ್ತಪ್ರತಿಗಳನ್ನು ಯಾರು ಬೇಕಾದರೂ ಸರಾಗವಾಗಿ ಓದಬಹುದು. ಆದರೆ ಮೋಡೀ ಅಕ್ಷರಗಳ ಹಸ್ತಪ್ರತಿಗಳನ್ನು ಓದಬೇಕಾದರೆ ಈ ನಿಟ್ಟಿನಲ್ಲಿ ಪರಿಣತಿ ಮತ್ತು ಪ್ರಬುದ್ಧತೆ ಅವಶ್ಯವಾಗುತ್ತವೆ.

ಹಸ್ತಪ್ರತಿಯ ಕಾಲದೇಶ ವರ್ತಮಾನಗಳು ಅಕ್ಷರಗಳ ಮೇಲೆ ಬಹಳಷ್ಟು ಪ್ರಭಾವವನ್ನು ಬೀರುತ್ತವೆ. ಒಂದು ಹಸ್ತಪ್ರತಿ ಯಾವಕಾಲಕ್ಕೆ ಸೇರಿದ್ದು ಆ ಕಾಲದಲ್ಲಿ ಯಾವ ಲಿಪಿ ಪ್ರಚಲಿತವಾಗಿತ್ತು ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ಇಷ್ಟಾದರೂ ಅಕ್ಷರಗಳು ಓದುಗನಿಗೆ ಅನೇಕ ಸಮಸ್ಯೆಗಳನ್ನು ತಂದೊಡ್ಡುತ್ತವೆ. ಸಾದೃಶ್ಯದಿಂದ ಒಂದು ಅಕ್ಷರವನ್ನು ಮತ್ತೊಂದು ಅಕ್ಷರವನ್ನಾಗಿ ಓದುವುದೂ ಅದರಿಂದ ಭ್ರಾಂತಿಗೊಳಗಾಗುವುದೂ ಒಮ್ಮೊಮ್ಮೆ ಅಪಾರ್ಥಕ್ಕೊಳಗಾಗುವುದೂ ಸಾಮಾನ್ಯವಾದ ಸಂಗತಿಯಾಗಿದೆ. ಈ ಎಲ್ಲ ವಿವರಗಳನ್ನು ಮುಂದಿನ ವಾಚನಪದ್ಧತಿಯಲ್ಲಿ ವಿವರಿಸಲಾಗಿದೆ.

ವಾಚನ ಪದ್ಧತಿ ಎಂದರೆ ಓದುವ ಕ್ರಮ. ರೂಢಿ ಎಂದರ್ಥ. ಹಿಂದಿನಿಂದಲೂ ಹಸ್ತಪ್ರತಿಗಳ ವಾಚನದಲ್ಲಿ ಒಂದು ನಿಶ್ಚಿತಕ್ರಮವಿರುವುದನ್ನು ನಾವು ಗಮನಿಸಬಹುದು. ಈ ವಾಚನ ಪದ್ಧತಿ ವಿರುಪೇರಾದರೆ ಅಪಾರ್ಥಗಳೂ ಅಧ್ಯಾಸಗಳೂ ಸಂಭವನೀಯ. ಹಸ್ತಪ್ರತಿಗಳನ್ನು ಭ್ರಾಂತಿಮೂಲದಿಂದ ತಪ್ಪಾಗಿ ಓದಿರುವುದು ಕಂಡು ಬರುತ್ತದೆ. ಉದಾಹರಣೆಗೆ ಕೆಲವನ್ನು ಇಲ್ಲಿ ಪರೀಕ್ಷಿಸಬಹುದು. (೧) ಆಕಾರ-ಅಕಾರ. ಲಕಾರ (೨) ಉಕಾರ–ಲುಕಾರ, ಕಕಾರ–ತಕಾರ (೩) ಖಕಾರ–ಭಕಾರ (೪) ಗಕಾರ–ನಕಾರ (೫) ಚಕಾರ–ಜಕಾರ (೬) ಥಕಾರ–ಧಕಾರ (೭) ನಕಾರ–ಸಕಾರ (೮) ಮಕಾರ–ಯಕಾರ ಇತ್ಯಾದಿಯಾಗಿ ಓದಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಜೊತೆಗೆ ಸ್ವರಾಕ್ಷರಗಳನ್ನು ವ್ಯಂಜನಾಕ್ಷರಗಳಾಗಿ ಬರೆಯುವುದೂ. ದ್ವಿತ್ವಗಳನ್ನು ತಪ್ಪಾಗಿ ಓದುವುದು ಎತ್ವವನ್ನು ಅತ್ವವನ್ನಾಗಿ ಓದಿರುವುದು ಗೋಚರವಾಗುತ್ತದೆ.

೧. ಎಷ್ಟ ಎಂದರೆ ಸುಂದರ ಮನೋಹರ ಎಂಬುದು ನಿಘಂಟಿನ ಅರ್ಥ. ಕರ್ನಾಟಕ ಶಬ್ದಮಂಜರಿ (ವಿರಕ್ತತೋಂಟದಾರ್ಯ) ಯಲ್ಲಿ :

"...ಚೊಕ್ಕಡಿಕೆ ಚೊಕ್ಕ ರೈಯುಂ ಲೇಸು ಹಸಗಟ್ಟಿಯಡ್ಡವುನಲು ಪೊಡವಿಯೊಳಿ ಮನೋಹರ ವಾಚಿ ॥೫೬॥ ಎಂದಿದೆ. ಇದಕ್ಕೆ ಹೆಸರುಘಟ್ಟದ ಹೊನ್ನಪ್ಪ ತನ್ನ ವಿಬುಧಾನಂದಿನೀ ಟೀಕಿನಲ್ಲಿ: ಚೊಕ್ಕರೈಯುಂ–ಚೊಕ್ಕರೈಯೆಂದೂ, ಲೇಸು–ಲೇಸೆಂದೂ, ಹಸಗಟ್ಟಿ–ಹಸಗಟ್ಟಿಯೆಂದೂ, ಅಡ್ಡವನಲು– ಅಡ್ಡವನಲೆಂದೂ, ಪೊಡವಿಯೊಳು ಭೂಮಿಯಲ್ಲಿ ಈ ೬ ಮನೋಹರವಾಚಿ–ಮನಸ್ಸಿಗೆ ಹಿತಕರವಾದ ಮಾತುಗಳು"[೧] ಎಂದು ಬರೆದಿದ್ದಾನೆ. ಇದನ್ನು ಸರಿಯಾಗಿ ಅರ್ಥೈಸದೇ ಹೋದರೆ ಮುಂದಿನವರಿಗೆ ಇದೇ ಆಕರವಾಗಬಹುದು.

೨. ಪರ್ವತೇಶನ ಚತುರಾಚಾರ್ಯ ಪುರಾಣದ ಒಂದು ಪದ್ಯಭಾಗ ಇದು:

ತೆರಳ್ದಿದ ಪುಲಿಯಂತೆ ಘುಡುಘುಡಿಸಿಯಾ ವ್ಯಾಸ
ತೆರಳ್ದವಾ ತೃಣಪುರುಷವಿಪ್ಪಿಯೊಳ್ ಸೆಣಸುವಂ
ತರಳಂಬ ಹರನೊಡನೆಯ್ದಿರಿಪೋಲ್ ಸಿಂಹ ಭೇರುಂಡನಂ ಕೆಣಕುವಂತೆ[೨]

ಈ ಪ್ರಯೋಗದಲ್ಲಿ ತೆರಳ್ದಿದ ಪುಲಿಯಂತೆ ಎಂಬುದು ಅರ್ಥವಾಗುವುದಿಲ್ಲ. ಅಲ್ಲದೆ ಇಲ್ಲಿ ಛಂದೋಭಂಗವು ಆಗಿದೆ. ಆದರೆ ಈ ಕಾವ್ಯದ ಮತ್ತೊಂದು ಪ್ರತಿಯಲ್ಲಿ 'ಕೆರಳ್ದೀದ ಪುಲಿಯಂತೆ' ಎಂದಿದೆ. ಇದರಿಂದ ಅರ್ಥಸ್ವಾರಸ್ಯವುಂಟಾಗುವುದಲ್ಲದೆ ಛಂದಸ್ಸು ಸರಿಹೋಗುತ್ತದೆ. ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಬರುವ 'ಈಂದ ಪುಲಿಯಾಪೋಲ್' ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪ–ಬ ಅಕ್ಷರಗಳ ವಿನಿಮಯಕ್ಕೆ ಶ್ರೀಧರದೇವನ ವೈದ್ಯಾಮೃತದ ಈ ಪ್ರಯೋಗವನ್ನು ನೋಡಬಹುದು:

"ಮುತ್ತುಗದ ಬೀಜದಲ್ಲಿ ತೈಲವಂ ತೆಗೆದು ಅದರಲ್ಲಿ ಯರಡು
ಹಲ ಹಸುವಿನ
ಹಾಲಕೂಡಿ ತೆಗೆದುಕೊಳ್ಳಲು ಮೂರ್ಛಾಗತನಹನು ಹಲ್ಲ ಮೊಟಿ
ಹಾಲ ಹೊಯ್ದರೆ
ಮೂರ್ಛೆ ತಿಳಿವುದು. ಯಿೂ ಪ್ರಕಾರದಿಂ ತಿಂಗಳು ನಡಸೆ
ದಿವ್ಯಜ್ಞಾನಿಯಹನು
ಮೂರು ತಿಂಗಳಿಗೆ ದೂರಶ್ರವಣವಂ ಕೇಳುವನು
ಐದು ತಿಂಗಳಿಗೆಬೇಚರ–
ಗಾಮಿಯಹನು ಆರು ತಿಂಗಳಿಗೆ ಈಶ್ವರನಂತೆ ಲೋಕತ್ರಯುನಕ್ಕಂ
ಕರ್ತನಾಗಿ

---

೧ ಹಳಗನ್ನಡ ನಿಘಂಟು, ಪುಟ ೩೨೬.
೨ ಚತುರಾಚಾರ್ಯಪುರಾಣ ೫–೪–೨೬.

ಯೀಶ್ವರನ ಸಮಾನತ್ವ ಉಳ್ಳವನಹನು. ಮಂದು ವರುಷಕೊಳ್ಳಲು ಕಲ್ಪಾಂತ
ಪರಿಯಂತ ಬಾಳುವಂ"

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೪–೧೩೨)

ಇಲ್ಲಿ ಖೇಚರಗಾಮಿಯಹನು ಎಂದಿರಬೇಕಾದುದು ಬೇಚರಗಾಮಿಯಹನು ಎಂದು ಓದಿಕೊಳ್ಳಲಾಗಿದೆ.

ಹಸ್ತಪ್ರತಿಗಳನ್ನು ತಪ್ಪಾಗಿ ವಾಚನ ಮಾಡಿಕೊಂಡಿರುವುದಕ್ಕೆ ವೈದ್ಯಗ್ರಂಥದ ಈ ದೃಷ್ಟಾಂತ ಸಾಕ್ಷಿಯಾಗಿದೆ:

"ಬಾಲಾಮೃತಮಾಡತಕ್ಕವಿಧಾನ"
ಗಿಡ್ಡ ಡಬ್ಬಗಳ್ಳಿ ಹಂಣು ತಂದು ಕಾಲ್ಪಿಕಲ್ಲಸಕ್ರಿಸೆಂ ತಂದು ಪಾಕಮಾಡುವಾಗ್ಯ
ಮೇಲಿನ ಹಂಣಿನರಸ ಹಿಂಡಬೇಕು ಆದರೆ ಕುಂಕುಮ ಕೇಶರಿ ಅದರೊಳಗೆ
ಹಾಕಬೇಕು ಯಿದುಯೆಲ್ಲಾ ತಯಾರ ಆದ ಮೇಲೆ ಮಂದು ಶೀಶೆಯೊಳಗೆ ಹಾಕಿಟ್ಟು
ಸಂಣ ಕೂಸುಗಳಿಗೆ ನಿತ್ಯ ತ್ಥೊಲಿರೆಮ್ಮತ್ತು ಕುಡ್ಡಿದರೆ ಬಲವಾಗುವು"

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೮–೧೬೯)

ಇಲ್ಲಿ ನಿತ್ಯ ತ್ಥೊಲಿರೆಮ್ಮತ್ತು ಕುಡ್ಡಿದರೆ ಎಂಬುದು ನಿತ್ಯ ೧ ತೊಲಿ ಕಿಮ್ಮತ್ತು ಕುಡ್ಸಿದರೆ ಎಂದಿದೆ. ಇದನ್ನು ಅರ್ಥಮಾಡಿಕೊಳ್ಳದೆ ತಪ್ಪಾಗಿ ಓದಿ ಲಿಖಿಸಲಾಗಿದೆ. ಜೊತೆಗೆ ಈ ಪ್ರತಿಯಲ್ಲಿ ದ್ವಿತ್ವಗಳಿಗೆ ಬದಲಾಗಿ ಅಕ್ಷರಗಳ ಬುಡದಲ್ಲಿ ಒಂದು ಗೀಟನ್ನು ಎಳೆಯಲಾಗಿದೆ.ಗಿಡ, ಡಬ, ಇತ್ಯಾದಿ.

ಸ್ವರ ವ್ಯಂಜನಗಳನ್ನು ಭ್ರಾಂತಿಮೂಲದಿಂದ ತಪ್ಪಾಗಿ ಓದಿಕೊಂಡಿರುವುವಕ್ಕೆ ಹೇರಂಬ ಕವಿಯ ಸಿದ್ಧಲಿಂಗ ಚಾರಿತ್ರದಲ್ಲಿ:

ಬೀದಿಯ ಸುತ್ತಲೀ ತೆರದಿ ಉತ್ಸಹದಿ ವಿ
ನೋದದಿಂದಾಗಲರ್ಥಿಯಲಿ "೨೨–೬೨"

ಈ ರೀತಿಯಿದೆ. ಇಲ್ಲಿ ಉತ್ಸವದಿ ಎಂಬುದನ್ನು ಲು ತ್ಸವದಿ ಎಂದು ಓದಲಾಗಿದೆ. ಉಕಾರ ಲುಕಾರಗಳಿಗೆ ಭ್ರಾಂತಿಯುಂಟಾಗಿದೆ. ಇದೇ ಕವಿಯ ಮತ್ತೊಂದು ಪ್ರಯೋಗದಲ್ಲಿ ಕಕಾರ ತಕಾರಗಳಿಗೆ ಆಗಿರುವ ವ್ಯತ್ಯಾಸವನ್ನು ನೋಡಿ:

ವಾಮದೇವಾಯ ಜ್ಯೇಷ್ಠಾಯ
ಭೀಮಾಯ ಶ್ರೇಷ್ಠಾಯನಮೊ
ಕಾಮಹಾರಾಯ ಕಾಲಾಯ ನಮೋ ನಮೋ
ಸೋಮಾರ್ಕ ಶಿಖಿನೇತ್ರಾಯ "೨೫–೨೩"

ಇಲ್ಲಿ ತಾಮಹರಾಯ ಎಂಬುದನ್ನು ಕಾಮಹಾರಾಯ ಎಂದು ವಾಚಿಸಲಾಗಿದೆ.

ದ್ವಿತ್ವಾಕ್ಷರಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ಓದಿರುವುದಕ್ಕೆ ಮಗ್ಗೆಯ ಮಾಯಿದೇವರ ಏಕೋತ್ತರಶತಸ್ಥಲದ ಒಂದು ಪ್ರಯೋಗವನ್ನು ನೋಡಬಹುದು.

"ವೇದಾಂತ ಸಿದ್ಧಾಂತಮಂ ಪರಿವಿಡಿಯಿಂ ತಿರಸ್ಮರಿಸಿ ವೀರಶೈವ ಸಿದ್ಧಾಂತಮಂ ಕ್ರಿಯಾಜ್ಞಾನವಿಡಿದಾಚರಿಸಿ"

(ಕನ್ನಡ ಅಧ್ಯಯನ ಸಂಸ್ಥೆ : ಹಸ್ತಪ್ರತಿ ಕೆ. ೧೭೬೯)

ಇದರಲ್ಲಿ ಪರಿವಿಡಿಯಂ ತಿರಸ್ಕರಿಸಿ ಎಂದಿರುವುದು ಪರಿವಿಡಿಯಿಂ ತಿರಸ್ಮರಿಸಿ ಎಂದಾಗಿದೆ.

ಪದವಿಭಾಗವನ್ನು ಸರಿಯಾಗಿ ಮಾಡದೆ ಅದರಿಂದಾಗುವ ಅಪಾರ್ಥಕ್ಕೆ ಷಡಕ್ಷರ ಮಹಿಮೆಯ ಈ ಪದ್ಯ ಸಾಕ್ಷಿಯಾಗಿದೆ :

ಅರಸನುಗಿದನು ಬತ್ತಳಿಕೆಯಿಂ
ದುರುತರ ಬ್ರಹ್ಮಾಸ್ತ್ರವನು ಮುಂ
ಬರಿದೆ ಸಲ್ವಾರಾಸಿ ತುಳುಕಲು ಧಾತ್ರಿಕಂಪಿಸಲು
ಬರುವ ಶೂಲವ ಕಳದು ರಕ್ಕಸ
ನುರದೊಳಿಳ್ದುದು ಬಾಣ ನೆಲದೊಳ
ಗುರುಳಿ ಹಶಣವ ಕಳದನಮರರು ಕೊಂಡಾಡೆ

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೪–೩೦೫)

ಈ ಪದ್ಯದಲ್ಲಿ ಬ್ರಹ್ಮಾಸ್ತ್ರವನು ಮುಂಬರಿದೆಸಲ್ ವಾರಾಶಿ ತುಳುಕಲು ಎಂದಿರಬೇಕಾದುವನ್ನು ಬ್ರಹ್ಮಾಸ್ತ್ರವನು ಮುಂಬರಿದೆ ಸಲ್ವಾರಾಸಿ ಎಂದು ಓದಲಾಗಿದೆ. ಹಾಗೆಯೇ ಹರಣವ ಕಳೆದ ಎಂಬುದಕ್ಕೆ ಹಶಣವ ಕಳೆದ ಎಂದೂ ವಾಚಿಸಲಾಗಿದೆ.

ಕಡೆಯದಾಗಿ ಅಶ್ವಪರೀಕ್ಷೆಯ ಒಂದು ದೃಷ್ಟಾಂತವನ್ನೂ ನೋಡಬಹುದು :

"ಜಲಾಬು ಆಗುವುದಕ್ಕೆ ನೀರು ಗೋಣಿಸೊಪ್ಪು ೨–೩ ಹಿಡಿ ಅದಕಚ್ಚ ಬೇಯಿಶಿ ೧ ತೊಲಾ ಸೈಂದಲವಣಾ ಪುಡಿಮಾಡಿ ಹಾಕಿ ೧ ಬ್ಯಾಲದ ಕಾಯಷ್ಟು ಉಂಡೆ ಮಾಡಿಕೊಟ್ಟರೆ ಜುಲಾಬು ಆಗುತ್ತೆ. ಬಂದಾಗ ಬೇಕಾದರೆ ಅದರ ಮೇರೆಗೆ ಕೊಡುವುದು ಕುದುರೆ ಲಾಗರಿ ಆಗಿ ಯಿಪ್ಪಂಥೆ ತಾಜಾ ಆಗಕ್ಕದಕೆ ಅವುಷದಿ ಹಿರಾಗೊಗ್ಗಳ ೧ ತೊಲಾ ಬೆಲ್ಲಾ ಸೇರಿಸಿ ಯಿದನೆಲ್ಲ ಮಿಲಾಯಿಶಿ ೨೧ ದಿವ್ಸ ಯಿೂ ಮೇರೆಗೆ ತಿಂಸಿಸಬೇಕು. ಪಣಗದ ಹಸಿಗಡಲೆ ಹೊಟ್ಟೆ ತುಂಬಾ ತಿಂಸಿಸಬೇಕು. ಹರಿಯೋ ನೀರು ಕುಡಿಸಕೂಡದು ಭಾವೀ ನೀರು ಕೊಡ್ಸಬೇಕು. ಕುದುರೆ ಬುವತ್ತಾಗಿ ತಾಜಾ ಆಗುತ್ತೆ.

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ೫–೧೦೦)

ಇಲ್ಲಿ ನೀರು ಮತ್ತು ಗೋಣಿಸೊಪ್ಪು ಬೇರೆ ಬೇರೆಯಲ್ಲ. ಅದು ನೀರುಗೋಣಿ ಸೊಪ್ಪು. ಹಾಗೆಯೇ ಕುಡಿಸಬೇಕು ಎಂಬುದನ್ನು ಕೂಡ್ಸಬೇಕು ಮುಂತಾಗಿ ಓದಿ ಕೊಳ್ಳಲಾಗಿದೆ.

ಲಿಪಿಕಾರರಿಂದ ಸಂಭವಿಸುವ ಸ್ಖಾಲಿತ್ಯಗಳನ್ನು ಇಂತಿಷ್ಟೇ ಎಂದು ಹೇಗೆ ಪಟ್ಟಿ ಮಾಡಿ ತೋರಿಸುವುದು ಸಾಧ್ಯವಿಲ್ಲವೋ ಹಾಗೆಯೇ ಹಸ್ತಪ್ರತಿ ಓದುಗರ ಸ್ಖಾಲಿತ್ಯ ಗಳನ್ನು ಸಮಗ್ರವಾಗಿ ಪಟ್ಟಿಮಾಡಿ ತೋರಿಸುವುದು ಸಾಧ್ಯವಿಲ್ಲದ ಕೆಲಸ. ಈ ಓದು ಗರ ಸಂಸ್ಕಾರ ಅನುಭವ ವ್ಯುತ್ಪತ್ತಿಗಳಿಗನುಗುಣವಾಗಿ ಸ್ಖಾಲಿತ್ಯಗಳ ಸಂಖ್ಯೆಯೂ ಏರುಪೇರಾಗುತ್ತದೆ.

ವೈದ್ಯಗ್ರಂಥವೆಂಬ ಹಸ್ತಪ್ರತಿಯನ್ನು ಓದಿದವರು :

ಲಿಂತ್ರಗತಜ್ವರಕೆ ಕೊಸರೆಗೆಂಡೆ ಅರಿಶಿನ ಕೊರಟ್ಸೊಗೆ ಬೇರು ದ್ರಾಕ್ಷಿಹಣ್ಣು
ಹಿಪೆಹುವು ಪಂಲಿಮರದವಂಳಿ ಪರ್ಪಟಕ ಚಂಗಲಕುಷ್ಠ ಹಂಣು
ಚವನಾ ಕಹಿಪಡವಲದ ಸಿಪೆ ಶುಂಠಿ ನೆಲಟೇವು ಯಿವಂ ಸಮಾನಂಗೊಂಡು
ಕಸವಂ ನಿಕಿಕೊಂಳೆ ಲಿಂತ್ರರಗತ್ತ ಜ್ವರ ಹರ ಪಂಕೆ ಹುಳಿ ಕರವರ್ಜಿತ[1]

ಈ ರೀತಿ ಅಚ್ಚುಮಾಡಿಸಿದ್ದಾರೆ. ಆದರೆ ಹಸ್ತಪ್ರತಿಯಲ್ಲಿ ವಾಸ್ತವವಾಗಿ ಇರುವುದು ಅಂತ್ರಗತಜ್ವರಕ್ಕೆ…… ಅಮರದವಳ್ಳಿ… ಜವನಾ… ಕಸಾಯವಂ… ಪತ್ಯಕ್ಕೆ… ಕಾರವರ್ಜಿತ. ಅಂತ್ರಗತಜ್ವರವನ್ನು ಲಿಂತ್ರಗತಜ್ವರ ಎಂದೂ ಅಮರದವಳ್ಳಿ ಎಂಬು ದನ್ನು ಪಂಲಿಯರದವಂಳಿ ಎಂದೂ ಹಣ್ಣುಜವನಾ ಎಂಬುದನ್ನು ಹಣ್ಣು ಚವನಾ ಎಂದೂ ಕಷಾಯವಂ ಎಂಬುದನ್ನೂ ಕಸವಂ ಎಂದೂ. ಕಾರ ಎಂಬುದನ್ನು ಕರ ಎಂದು ಬದಲಾಗಿದೆ. ವೈದ್ಯಗ್ರಂಥಗಳನ್ನು ಈ ರೀತಿ ಓದಿ ಅಚ್ಚುಮಾಡಿಸಿದರೆ ಇವನ್ನು ಓದಿದವರು ಯಾರಾದರೂ ಇದನ್ನು ಅನುಷ್ಠಾನಕ್ಕೆ ತಂದರೆ ಆಗುವ ಅನರ್ಥಗಳನ್ನು ಊಹಿಸಲೂ ಸಾಧ್ಯವಿಲ್ಲ.

ಜಗನ್ನಾಥದಾಸರ ಕೀರ್ತನೆಯೊಂದರಲ್ಲಿ :

ಕಮಲಾಕ್ಷ ಮರಿಯಿಟ್ಟ ದ್ರೌಪದಿಯ ಕಾಯ್ದೋ ಅಳುಕಾದೇ

ಎಂದಿದೆ. ಆದರೆ ಹಸ್ತಪ್ರತಿಯಲ್ಲಿ ಕಮಲಾಕ್ಷ ಮೊರೆಯಿಟ್ಟ ದ್ರೌಪದಿಯ ಕಾಯ್ದೊ ಅಳುಕಾದೆ ಎಂದಿದೆ. ದ್ರೌಪದಿ ಮರಿಯಿಡುವುದು ಸಾಧ್ಯವಿಲ್ಲ ಎಂಬುದು ಹಸ್ತಪ್ರ ಓದಿದವರಿಗೆ ತಿಳಿಯದೇ ಹೋದುದು ದುರ್ದೈವದ ಸಂಗತಿ.

ಪ್ರಸನ್ನ ವೆಂಕಟದಾಸರ ಕೃತಿಯ ಒಂದು ಕೀರ್ತನೆ :

ಉಪ್ಪಬಡಿಸಯ್ಯ ಕೃಷ್ಣ ಉಪ್ಪಬಡಿಸಯ್ಯ ಕೃಷ್ಣ ಎಂದು ಅಚ್ಚಾಗಿದೆ.

---

೧ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ೮–೨೦೪.

ಇದು ವಾಸ್ತವವಾಗಿ ಉಪ್ಪವಡಿಸಯ್ಯ ಕೃಷ್ಣ ಎಂದಿದೆ. ಈ ಶಬ್ದವನ್ನು ಅರ್ಥ ಮಾಡಿಕೊಳ್ಳಲಾಗದವರು ಉಪ್ಪಬಡಿಸಯ್ಯ ಕೃಷ್ಣ ಎಂದು ಓದಿಬಿಟ್ಟಿದ್ದಾರೆ.

ಕೃತಿಗಳ ವಾಚನಪದ್ಧತಿ ಗ್ರಂಥಸಂಪಾದನೆಯಲ್ಲಿ ಯಾವ ಮಹತ್ತರವಾದ ಪಾತ್ರವನ್ನು ವಹಿಸಬಲ್ಲುದು ಎಂಬುದನ್ನು ಈ ಮೇಲಿನ ದೃಷ್ಟಾಂತಗಳು ಎತ್ತಿ ಸಾರುತ್ತಿವೆ. ಹಸ್ತಪ್ರತಿಗಳನ್ನು ಓದುವುದು ಒಂದು ಕಲೆ. ಇದು ಒಂದು ಶಾಸ್ತ್ರ. ಈ ಶಾಸ್ತ್ರ ಪರಿಭಾಷೆಗಳನ್ನು ಅರ್ಥಮಾಡಿಕೊಳ್ಳದೇ ಹೋದರೆ ಅನರ್ಥಗಳು ಸಂಭವಿಸುತ್ತವೆ. ಆದ್ದರಿಂದ ಹಸ್ತಪ್ರತಿಗಳನ್ನು ಪರಿಶೀಲಿಸುವವರಿಗೆ ಪಾಂಡಿತ್ಯ ಶಬ್ದಜ್ಞಾನ ಶಾಸ್ತ್ರಪರಿಚಯ ಲಿಪಿಯ ಪರಿಜ್ಞಾನ ಅವಶ್ಯವಾಗಿ ಇರಬೇಕು. ಹಸ್ತಪ್ರತಿಯ ಕಾಲ ದೇಶ ವರ್ತಮಾನಗಳನ್ನೂ ಯಾವ ಯಾವ ಕಾಲದಲ್ಲಿ ಯಾವ ಯಾವ ಲಿಪಿ ಪ್ರಚಲಿತವಾಗಿದ್ದಿತೆಂಬುದನ್ನು ಅರಿತುಕೊಳ್ಳುವುದು ಬಹುಮುಖ್ಯವಾದುದು. ಹೀಗಾದಾಗ ಮಾತ್ರ ಹಸ್ತಪ್ರತಿಗಳ ಭಾಷೆ ಅಕ್ಷರ ವಾಚನ ಪದ್ಧತಿಯನ್ನು ಸಮರ್ಥವಾಗಿಯಲ್ಲದಿದ್ದರೂ ಸಮರ್ಪಕವಾಗಿ ನಿರ್ವಹಿಸಬಹುದೆಂದು ಭಾವಿಸಬಹುದಾಗಿದೆ.

ಹಸ್ತಪ್ರತಿಯ ಲಿಪಿಕಾರರು :

> ಭಗ್ನಪೃಷ್ಠ ಕಟಿಗ್ರೀವಾ ಬದ್ಧದೃಷ್ಟಿರಧೋ ಮುಖಂ
> ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯನ್

(ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರ, ೬೦)

ಎಂದು ಹೇಳಿಕೊಂಡಿದ್ದಾರೆ. ಆದರೆ ಈ ಪ್ರಬಂಧವನ್ನು ಕಿರುಕುವಲ್ಲಿ ನಾನೂ ಇಷ್ಟೇ ಕಷ್ಟವನ್ನು ಪಟ್ಟಿದ್ದೇನೆ. ಆದ್ದರಿಂದ ಅತ್ಯಂತ ಕಷ್ಟದಿಂದ ಲಿಖಿಸಿರುವ ಈ ಪ್ರಬಂಧವನ್ನು ಯತ್ನೇನ ಪರಿಪಾಲಯನ್ ಎಂದು ಕೇಳಿಕೊಳ್ಳುತ್ತೇನೆ.

ಮತ್ತೊಬ್ಬ ಲಿಪಿಕಾರ :

> ಯದ್ದೃಶಂ ಪುಸಕಂ ದೃಷ್ಟಂ ತಾದೃಶಂ ಲಿಖಿತಂ ಮಯಾ
> ಅಬದ್ಧೋ ವಾ ಸುಬದ್ಧೋ ವಾ ಮಮದೋಷೇ ನವಿದ್ಯತೇ

ಎಂದಿದ್ದಾನೆ. ಇದರಂತೆ ನಾನೂ ಸಹ ಮೂಲ ಮಾತೃಕೆಗಳನ್ನು ನೋಡಿ ಇದ್ದುದನ್ನು ಇದ್ದಂತೆಯೇ ಬರೆದಿದ್ದೇನೆ. ಇದರಲ್ಲಿ ನನ್ನ ತಪ್ಪು ಏನೂ ಇಲ್ಲ ಎಂಬುದನ್ನು ಶ್ರುತಪಡಿಸುತ್ತೇನೆ.

ಹಸ್ತಪ್ರತಿಯನ್ನು ಪ್ರತಿಮಾಡಿದ ಒಬ್ಬ ವೃದ್ಧಪಿತಾಮಹ :

> ಎಪ್ಪತ್ತನಾಲ್ಕು ವರುಷದ
> ಮುಪ್ಪಿನಮಂ ಬರದ ಬರಹದರೊಳಗೊಂದರೆ
> ತಪ್ಪು ತಡೆಯಿದ್ದರೆಲ್ಲವ
> ಸೊಪ್ಪದಿ ತಿದ್ದುವುದು ನೋಡಿ ವಿದ್ಯಾವಂತರು

ಎಂದು ಪ್ರಾರ್ಥಿಸಿಕೊಂಡಿದ್ದಾನೆ. ಕಡೆಯದಾಗಿ ಈ ಶ್ಲೋಕಗಳಿಂದ ಈ ಪ್ರಬಂಧವನ್ನು ಮುಗಿಸುತ್ತೇನೆ :

ಪುಸ್ತಕಂ ವನಿತಾವಿತ್ತಂ ಪರಹಸ್ತಗತಂ ಗತಂ
ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾಚ ಖಂಡಶಃ॥
ತೈಲಾದ್ರಕ್ಷೇಜ್ಜಲಾದ್ರಕ್ಷೇ ರಕ್ಷೇಚ್ಛಿಥಿಲ ಬಂಧನ್ಯಾತ್
ಮೂರ್ಖಹಸ್ತೇ ನ ದಾತವ್ಯಯೇವಂ ವದತಿ ಪುಸ್ತಕಂ॥

●●

ಹಸ್ತಪ್ರತಿಗಳ ವಿನ್ಯಾಸ-ಸೌಂದರ್ಯ

● ಬಿ. ಕೆ. ಹಿರೇಮಠ

ಮನುಷ್ಯನನ್ನು ಒಂದು Organism ಎಂಬುದಾಗಿ ನೋಡುವುದು ಒಂದು ನಿಟ್ಟಿನ ನೋಟವಾದರೆ ಅವನನ್ನು Organiser ಎಂಬುದಾಗಿ ಕಾಣುವುದು ಇನ್ನೊಂದು ನಿಟ್ಟಿನ ನೋಟವಾಗಿದೆ. ಇವೆರಡೂ ಒಟ್ಟಿಗೆ ಮನುಷ್ಯನ ಪೂರ್ಣ ನೋಟವನ್ನು ಕೊಡುತ್ತವೆ. ಅವನು ಕೇವಲ Organism ಆಗಿದ್ದರೆ ಆಹಾರ ನಿದ್ರಾ ಮೈಥುನ ಗಳಿಂದಲೇ ತೃಪ್ತನಾಗಿ ಬಿಡುತ್ತಿದ್ದನು. ಆದರೆ ಮನುಷ್ಯನ ಬಯಕೆಗಳು ಅಷ್ಟಕ್ಕೆ ಕುಂಠಿತವಾಗಿಲ್ಲ ! ವಿಕಾಸದತ್ತ ಸಾಗಿದೆ. ಅಂತೆಯೇ ಈ ಮೂರನ್ನೂ ಮೀರಿದ ಜ್ಞಾನದ ಹಸಿವು ರಸಾನಂದದ ನೀರಡಿಕೆಗಳನ್ನು ತೃಪ್ತಪಡಿಸಿಕೊಳ್ಳಲು ಬೆಳೆಯುತ್ತಲೇ ಬಂದಿದ್ದಾನೆ. ಈ ಪ್ರಬಲವಾದ ಬಯಕೆಗಳೇ ಮನುಷ್ಯನನ್ನು ಜ್ಞಾನಾರ್ಥಿಯನ್ನಾಗಿ ಸೌಂದರ್ಯೋಪಾಸಕನನ್ನಾಗಿ ಮಾಡಿವೆಯೆನ್ನಬಹುದು.

ಮಾನವನ ಬೆಳವಣಿಗೆಯಲ್ಲಿ ತನ್ನ ಅನಿಸಿಕೆಯನ್ನು ಅಭಿವ್ಯಕ್ತಗೊಳಿಸಲು ಪ್ರಯತ್ನಿಸುತ್ತಿರುವಾಗ ಶಬ್ದ–ಮಾತು–ಭಾಷೆ–ಅಕ್ಷರ ಸಂಕೇತಗಳು–ಬರವಣಿಗೆ ಇದಕ್ಕಾಗಿ ಅವನು ರೂಢಿಸಿದ ಸಾಧನ ಸಲಕರಣೆಗಳೆಲ್ಲವೂ ವಿಕಾಸದ ಅನೇಕ ಮೆಟ್ಟಿಲುಗಳು; ಪರಮಾಶ್ಚರ್ಯದ ಸಾಧನೆಗಳು. ಈ ಸಾಧನೆಯ ಹಿಂದುಗಡೆ "ತನಗೆ ಅನಿಸಿದ್ದನ್ನು ಅಭಿವ್ಯಕ್ತಿಸಬೇಕು" ಮತ್ತು ಅದನ್ನು ಸಾಧ್ಯವಿದಷ್ಟು ಮಟ್ಟಿಗೆ "ಸ್ಥಿರಗೊಳಿಸಬೇಕು" ಎನ್ನುವ ಮಾನವನ ಹಂಬಲವು ಪ್ರಬಲವಾಗಿ ಕೆಲಸಮಾಡಿದೆ ಎನ್ನಬೇಕು. ಮೊದ ಮೊದಲು ಮಾನವನು ತನ್ನ ಅನಿಸಿಕೆ–ಅನುಭವ–ಚಿಂತನೆಗಳಿಂದ ಹುಟ್ಟಿದ ಜ್ಞಾನವನ್ನು ಮುಖದಿಂದ ಮುಖಕ್ಕೆ "ಪಾರಂಪರ್ಯ" ವಾಹಕದ ಮೂಲಕ ಸ್ಥಿರಗೊಳಿಸಲು ಪ್ರಯತ್ನಿಸಿರಬೇಕು. ಆಗ ತನ್ನ ಆಯುಷ್ಯದ ಅಲ್ಪತೆ, ಬದುಕಿನ ಅನಿರೀಕ್ಷಿತತೆಗಳು ಅವನನ್ನು ಕಾಡಿರಬೇಕು; ತನ್ನಲ್ಲಿರುವ ಜ್ಞಾನವನ್ನೂ ಸ್ಥಿರಗೊಳಿಸುವ ಬೇರೆ ಮಾರ್ಗವನ್ನು ಹುಡುಕುವಂತೆ ಪ್ರೇರಿಸಿರಬೇಕು. ಅದರ ಪರಿಣಾಮವೇ ಈ ಅಕ್ಷರ ಸಂಕೇತಗಳು, ಅವುಗಳನ್ನು ಕೊರೆಯಲು, ಮೂಡಿಸಲು ಗುರುತಿಸಿಕೊಳ್ಳಲು ಅಥವಾ ಬರೆದು ಕೊಳ್ಳಲು ಕಂಡುಕೊಂಡ ಲೇಖ್ಯ–ಲೇಖನ ಸಾಮಗ್ರಿಗಳು. ಹೀಗೆ ತಾನು ಕಂಡುಹಿಡಿದ ಸೌಲಭ್ಯಗಳನ್ನು ಬಳಸಿಕೊಂಡು ಸ್ವ–ಹಸ್ತದಿಂದ ಬರೆದು, ಒಟ್ಟಿಗೆ ಕಟ್ಟಿ ತನಗೆ ಬೇಕಾದಾಗ ಓದಿಕೊಳ್ಳಲು ಬರುವಂತೆ ಹಾಗು ಮುಂದಿನ ಪೀಳಿಗೆಗೆ ಜ್ಞಾನದ ಬುತ್ತಿಯಾಗುವಂತೆ ವ್ಯವಸ್ಥಿತವಾಗಿರಿಸಿದ ದಾಖಲೆಗಳನ್ನೇ ನಾವು ಹಸ್ತಪ್ರತಿಗಳೆಂದು ಕರೆಯುತ್ತೇವೆ.

ಪ್ರಾಚೀನ ಕಾಲದಿಂದಲೂ ಭಾರತೀಯರು ಮಣ್ಣು, ಕಲ್ಲು, ಮರ ಮುಂತಾದ ಲೋಹೇತರ ಫಲಕಗಳನ್ನು, ಲೋಹದ ಫಲಕಗಳನ್ನು, ಚರ್ಮ, ಬಟ್ಟೆ, ಭೂರ್ಜ ಪತ್ರ, ಕಡತ ತಾಳೆಗರಿ ಹಾಗು ಕಾಗದಗಳನ್ನು ಲೇಖ್ಯ ವಸ್ತುಗಳನ್ನಾಗಿಯೂ ಉಳಿ, ಕಂಠ, ಲೆಕ್ಕಣಿಕೆ ಮಸಿ, ಬಣ್ಣ, ಕುಂಚ, ಕೈವಾರ, ರೇಖಾ ಪಟ್ಟಿಗಳನ್ನು ಲೇಖನ ಮತ್ತು ಅಲಂಕರಣ ಸಾಧನಗಳನ್ನಾಗಿಯೂ ಬಳಸಿಕೊಂಡು ಹಸ್ತಪ್ರತಿಗಳನ್ನು ಸಿದ್ಧಗೊಳಿಸುತ್ತಿದ್ದರೆಂಬುದು ಗೊತ್ತಾಗುತ್ತದೆ. ಕರ್ನಾಟಕದಲ್ಲಿಯೂ ಹಸ್ತಪ್ರತಿಗಳನ್ನು ತಯಾರಿಸಲು ಹೆಚ್ಚು ಕಡಿಮೆ ಇವೇ ಲೇಖ್ಯ–ಲೇಖನ ಮತ್ತು ಅಲಂಕರಣ ಸಾಧನಗಳನ್ನು ಬಳಸಲಾಗಿದೆ. ಕನ್ನಡದ ಕವಿಗಳಾದ ಪಂಪ, ರನ್ನ ಪೊನ್ನ ಬಂಧುವರ್ಮ, ಹರಿಹರ, ಮಂಗರಾಜ, ಪದ್ಮಣಾಂಕ ಕುಮಾರವ್ಯಾಸ, ಕನಕದಾಸ, ಗೋವಿಂದ ವೈದ್ಯ, ಮುಂತಾದವರು ಹೇಳುವ ಅಳಕ, (ಪತಾಕಾ) ಪಟ ಕಡಿತ, ತಾಳೆ, ಪತ್ರ, ಪತ್ತಳಿಕೆ ಕಾಗಜ ಈ ಮುಂತಾದ ಪದಗಳನ್ನು ಲಕ್ಷಿಸಿದಾಗ ಇವು ಪ್ರಾಚೀನ ಕನ್ನಡ ನಾಡಿನಲ್ಲಿ ಬಳಕೆಗೊಳ್ಳುತ್ತಿದ್ದ ಲೇಖ್ಯ ವಸ್ತುಗಳೆಂದೂ ಇವುಗಳ ಮೇಲೆ ಬರೆಯಲು ಕಂಠ, ಲೇಖನಿ, ಬಳಪ, ಮಸಿ, ಕಪ್ಪು ಮುಂತಾದ ಲೇಖನ ಸಾಧನ–ಸಾಮಗ್ರಿಗಳನ್ನು ಬಳಸುತ್ತಿದ್ದರೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಇವುಗಳಲ್ಲಿಯೇ ತಾಳಿಕೆ–ಬಾಳಿಕೆ ಮತ್ತು ಸೌಲಭ್ಯದ ದೃಷ್ಟಿಯಿಂದ ತಾಳೆಯೋಲೆ ಮತ್ತು ಕಾಗಗದಳೇ–ಹಸ್ತಪ್ರತಿಗಳನ್ನು ಸಿದ್ಧಗೊಳಿಸಲು ಅಧಿಕವಾಗಿ ಬಳಸಲ್ಪಟ್ಟಿವೆ ಎನ್ನಬಹುದಾಗಿದೆ.

ಹಸ್ತಪ್ರತಿಗಳು ಕೇವಲ ಕೈಬರಹಗಳಲ್ಲ. ಅವು ಪಂಪ, ರನ್ನ, ಪೊನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸರ ಕಾವ್ಯಗಳಾಗಿರಬಹುದು. ಬಸವಾದಿ ಪ್ರಮಥರ–ದಾಸವರ್ಯರ ವಚನ–ಕೀರ್ತನೆಗಳಾಗಿರಬಹುದು. ನೃಪತುಂಗ ಶಿವಮಾರ, ಚಾವುಂಡರಾಯ ಶ್ರೀಧರಾಚಾರ್ಯ ಅರ್ಹದ್ದಾಸ ಮೊದಲಾದವರ ಅಲಂಕಾರ ಛಂದಸ್ಸು, ಗಜಶಾಸ್ತ್ರ, ಲೋಕೋಪಕಾರ, ಜಾತಕ, ರಟ್ಟಮತ ಮುಂತಾದ ಶಾಸ್ತ್ರಗ್ರಂಥಗಳಾಗಿರಬಹುದು. ಒಟ್ಟಿನಲ್ಲಿ ಕಾವ್ಯ–ಶಾಸ್ತ್ರ ವಿಷಯಗಳನ್ನೊಳಗೊಳ್ಳುವ ಹಸ್ತಪ್ರತಿಗಳು ಜ್ಞಾನದಾಗರಗಳು; ಜ್ಞಾನದ ಮಡುವುಗಳು; ಶತಶತಮಾನಗಳುದ್ದಕ್ಕೂ ಮಾನವನ ಬುದ್ಧಿ–ಭಾವಗಳ ಸಮೃದ್ಧವಾದ ಬದುಕನ್ನು ಚಿತ್ರಿಸುತ್ತ ಬಂದ ಕೈದೀವಿಗೆಗಳು ಎನ್ನಬಹುದು. ಹಸ್ತಪ್ರತಿಗಳಲ್ಲಿರುವ ಜ್ಞಾನವು ಎಂಥದು ? ಅಲ್ಲಿನ ವಿಷಯ ವೈವಿಧ್ಯವೆಷ್ಟು ? ಎಂಬುದು ಈ ಪ್ರಬಂಧಕ್ಕೆ ಹೊರಗಿನ ವಿಷಯವಾಗುತ್ತದೆ. ಆದ್ದರಿಂದ ಶ್ರೀ ಎಚ್. ದೇವಿರಪ್ಪನವರ ಈ ಕೆಳಗಿನ ಮಾತುಗಳನ್ನು ಉದ್ಧರಿಸಿ ಮುಂದುವರಿಯಬಹುದಾಗಿದೆ– "ಹಸ್ತ ಪ್ರತಿಗಳಲ್ಲಿ ಏನಿದೆ ? ಎಂಬ ಪ್ರಶ್ನೆಗೆ 'ಏನಿಲ್ಲ' ಎಂಬುದೇ ಸರಿಯಾದ ಉತ್ತರ. ಕನ್ನಡ ಜನರ ಜೀವನವು ವೈವಿಧ್ಯಪೂರ್ಣವೂ, ವರ್ಣರಂಜಿತವೂ ವಿವಿಧ ಧಾತು ಸಮನ್ವಿತವೂ ಸುಸಂಸ್ಕೃತವೂ ಆಗಿ ಸರ್ವಾಂಗ ಸುಂದರವಾಗಿ ಬೆಳೆದು ಪರಿಪೂರ್ಣತೆಯನ್ನು ಸಾಧಿಸುವುದಕ್ಕೆ ಏನೇನು ಬೇಕೋ ಅದೆಲ್ಲವೂ ಕನ್ನಡ ಹಸ್ತಪ್ರತಿಗಳಲ್ಲಿದೆ ಎಂಬುದೇ ಆ ಉತ್ತರದ ನಿರ್ವಾಚನ". ಹಸ್ತಪ್ರತಿಗಳಲ್ಲಿ ಏನೆಲ್ಲವೂ ಇದೆ ಎಂಬ ಮಾತು ಮೇಲಿನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಈ ಪ್ರಬಂಧದ ವಿಷಯ

ಮಾತ್ರ ಹಸ್ತಪ್ರತಿಯ ಅಂತರಂಗಕ್ಕೆ ಮುಖ್ಯತಃ ಸಂಬಂಧಪಟ್ಟುದಲ್ಲ; ಹಸ್ತಪ್ರತಿಯ ಬಹಿರಂಗಕ್ಕೆ ಸಂಬಂಧಪಟ್ಟುದು ಎನ್ನಬಹುದು.

ಅನೇಕರ ದೃಷ್ಟಿಯಲ್ಲಿ ಹಸ್ತಪ್ರತಿಯ ಬಹಿರಂಗ ಮುಖ್ಯವಾಗಿರಲಿಕ್ಕಿಲ್ಲ. ಅಂಥವರಿಗೆ ಅಲ್ಲಿರುವ ವಿಷಯ ಮುಖ್ಯವೇ ಹೊರತು ಅದನ್ನು ಹೇಗೆ ಬರೆದಿದ್ದಾರೆ, ಹೇಗೆ ಸಂಯೋಜಿಸಿದ್ದಾರೆ, ಹೇಗೆ ಅಲಂಕರಿಸಿದ್ದಾರೆ ಎಂಬುದು ಅಷ್ಟೇನು ಮುಖ್ಯವಲ್ಲ ಎಂದೆನಿಸಬಹುದು. ಒರೆಯಲ್ಲಿರುವ ಖಡ್ಗದ ಬೆಲೆ ಕಟ್ಟಬೇಕಾದುದು ಮುಖ್ಯವೇ ಹೊರತು ಒರೆಯದೇನು ? ಅನ್ನಬಹುದು. ಇಂಥ ಅನಿಸಿಕೆಗಳು–ಗಿಡವು ಯಾತಕ್ಕೆ ವ್ಯರ್ಥವಾಗಿ ಎಲೆ, ಮೊಗ್ಗು, ಹೂವುಗಳನ್ನು ಬಿಡುತ್ತದೆಯೋ ಏನೋ ಒಮ್ಮೆಲೆ ಹಣ್ಣು ಬಿಟ್ಟರಾಗದೆ ಎನ್ನುವ ಅನಿಸಿಕೆಯಂತೆ ಅತೀ ವ್ಯಾವಹಾರಿಕ ಎನಿಸದೆ ಇರದು. ಹಸ್ತಪ್ರತಿಗಳಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದದ್ದು ಜ್ಞಾನದ ಹೂರಣವನ್ನು ಎಂಬ ಮಾತನ್ನು ಮುಕ್ತವಾಗಿ ಒಪ್ಪಿಕೊಳ್ಳಬಹುದಾದರೂ ಆ ಜ್ಞಾನದ ಹೂರಣವನ್ನು ಹಿಡಿದಿಟ್ಟ ಕಣಕ ಹೇಗಿದ್ದರೇನು ? ಅಥವಾ ಇಲ್ಲದಿದ್ದರೂ ಏನು ? ಎಂಬುದನ್ನು ಒಪ್ಪಲಿಕ್ಕಾಗದು. ಯಾಕೆಂದರೆ ಮಾನವನಲ್ಲಿ ದೈಹಿಕವಾದ ಹಲವು ಬಯಕೆಗಳಿದ್ದಂತೆ ಮಾನಸಿಕವಾದ ಜ್ಞಾನದ ಹಸಿವು, ಕಲಾನುಭೂತಿಯ ನೀರಡಿಕೆ ಇದ್ದೇ ಇರುತ್ತದೆ. ಅದಕ್ಕಾಗಿಯೇ ನಾವು ಬಳಸುವ ನಿತ್ಯದ ವಸ್ತುಗಳು ನಮ್ಮ ಅವಶ್ಯಕತೆಯನ್ನು ತಮ್ಮ ಉಪಯುಕ್ತತೆಯಿಂದ ತೀರಿಸುತ್ತಿದ್ದರೂ ಅವುಗಳ ರಚನೆ–ಮಾಟ ಕಲಾತ್ಮಕವಾಗಿರಬೇಕೆಂದು ನಾವು ಆಶಿಸುತ್ತೇವೆ.

ಪ್ರಾಚೀನ, ಕನ್ನಡಿಗರ ಜೀವನ–ಜೀವನ ದೃಷ್ಟಿಗಳನ್ನು ಗಮನಿಸಿದಾಗ ಕನ್ನಡಿಗರು ಜ್ಞಾನ ಸಮೃದ್ಧವಾದ ಜೀವನ ನಡೆಸಿದವರು ಎಂಬುದಕ್ಕೆ ಅಸಂಖ್ಯಾತವಾಗಿ ದೊರೆಯುವ ಕಾವ್ಯ–ಶಾಸ್ತ್ರಗಳ ಹಸ್ತಪ್ರತಿಗಳೇ ಸಾಕ್ಷಿ ನುಡಿಯುತ್ತವೆ. ಅದರಂತೆ ರಸಿಕತೆಯಿಂದೊಡಗೂಡಿದ, ಕಲಾಪೂರ್ಣವಾದ ಬದುಕು ಕನ್ನಡಿಗರದು ಎಂಬುದನ್ನು ಕಾಣಲು ನಾಡಿನ ಸಂಗೀತ ನೃತ್ಯ, ನಾಟ್ಯ ಶಿಲ್ಪ–ವಾಸ್ತುಶಿಲ್ಪ, ಮೂರ್ತಿಶಿಲ್ಪ ಭಿತ್ತಿ ಚಿತ್ರಗಳು–ಒಟ್ಟಿನಲ್ಲಿ ನಾಡಿನ ಲಲಿತಕಲಾ ಕರಂಪರೆಯತ್ತ ದೃಷ್ಟಿಯನ್ನು ಹೊರಳಿಸಬೇಕಾಗುತ್ತದೆ. ಹಸ್ತಪ್ರತಿಗಳ ವಿನ್ಯಾಸ–ಸೌಂದರ್ಯಕ್ಕೆ ಸಂಬಂಧಪಟ್ಟ ಸಂಗತಿಗಳು ನಾಡವರ ಕಲಾಭಿರುಚಿಯ. ನುಡಿನ ಚಿತ್ರಕಲಾ ಪರಂಪರೆಯ ಮಹತ್ವದ ಮುಖವನ್ನು ತೋರುವುದಾಗಿದೆ.

ಕರ್ನಾಟಕದಲ್ಲಿ ಹಸ್ತಪ್ರತಿಗಳನ್ನು ತಯಾರಿಸುವುದು ಒಂದು ಕೌಶಲವಾಗಿ ಹಾಗು ಕಲೆಯಾಗಿ ಬೆಳೆದು ಬಂದಿತ್ತೆನ್ನಬಹುದು. ಕನ್ನಡಿಗರು ಹಸ್ತಪ್ರತಿಗಳಿಗಾಗಿ ವಿಶೇಷವಾಗಿ ಬಳಸಿಕೊಂಡದು ತಾಳೆಯೋಲೆ ಮತ್ತು ಕೋರಿ ಕಾಗದಗಳನ್ನು,[೧] ತಾಳೆಯೋಲೆ ಮರದ ಎಲೆಯಾಗಿರುವುದರಿಂದ ಹಸ್ತಪ್ರತಿಗಳ ಅಳತೆಯಲ್ಲಿ ಏಕರೂಪತೆ ಕಂಡು ಬರುವುದಿಲ್ಲ. ಗರಿಗಳು ಅಗಲಕ್ಕೆ ಒಂದು ಅಂಗುಲದಿಂದ ನಾಲ್ಕು ಅಂಗುಲದವರೆಗೂ,

---

೧ ಈಗ ಉಪಲಬ್ಧವಾಗಿರುವ ಪ್ರಕಾರ ಇವುಗಳ ಸಂಖ್ಯಾ ಪ್ರಮಾಣ ೭೦ : ೩೦ ಕ.ಗ್ರ.ಸಂ.ಶಾ. ಪುಟ ೧೨೨

ಉದ್ದಕ್ಕೆ ಮೂರು ನಾಲ್ಕು ಅಡಿಗಳವರೆಗೂ ಇವೆ. ಕವಿಗಳಾಗಲಿ, ಪ್ರತಿಕಾರರಾಗಲಿ ಅಥವಾ ಹಸ್ತಪ್ರತಿಗಳನ್ನು ತಯಾರಿಸಲು ಬಯಸುತ್ತಿದ್ದ ವ್ಯಕ್ತಿ ಇಲ್ಲವೆ ಸಂಸ್ಥೆಯಾಗಲಿ ತಾಳೆಯೋಲೆಗಳನ್ನು ಓಲೆಕಾರರಿಂದ ಪಡೆಯುತ್ತಿದ್ದಿರಬೇಕು.[೨] ತಾಳೆಗರಿಗಳನ್ನು ಹದ ಮಾಡುವುದು ಕೂಡ ಒಂದು ಕಲೆ. ಮರದಿಂದ ಕೊಯ್ದು ತಂದ ಗರಿಗಳನ್ನು ಹಸಿಯಾಗಿರುವಾಗಲೇ ಕುದಿನೀರಿನಲ್ಲಿ ಬೇಯಿಸಿ ನೆರಳಿನಲ್ಲಿ ಒಣಗಿಸಿದ ನಂತರ ನುಣುಪುಗೊಳಿಸುವುದು, ಗರಿಯ ಬೆಳವಣಿಗೆಯನ್ನು ಲಕ್ಷಿಸಿ ನಿಶ್ಚಿತ ಆಕಾರಕ್ಕೆ ಅವುಗಳನ್ನು ಕತ್ತರಿಸುವುದು, ಗರಿಯ ಉದ್ದಳತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಂಧ್ರ ಕೊರೆಯುವುದು– ಈ ಮುಂತಾದ ಕಾರ್ಯಗಳು ಲೇಖನಕ್ಕಾಗಿ ಓಲೆಗರಿಗಳನ್ನು ಹದಗೊಳಿಸಿ ಅಣಿಮಾಡುವ ಬೇರೆ ಬೇರೆ ಹಂತಗಳು ಓಲೆಕಾರರೇ ನಿರ್ವಹಿಸಬೇಕಾಗಿದ್ದ ಕಾರ್ಯದಲ್ಲಿಯ ಒಂದು ಘಟ್ಟ ಇದಾದರೆ ಅದರ ಇನ್ನೊಂದು ಘಟ್ಟ ಹದಗೊಂಡ ಓಲೆಗರಿಗಳಿಗೆ ದಕ್ಕೆಯಾಗದಂತೆ ಗರಿಗಳ ಅಳತೆಗಿಂತಲೂ ಸ್ವಲ್ಪ ಹೆಚ್ಚು ಅಳತೆಯಿಟ್ಟು ಕೊರೆದ ಕಟ್ಟಿಗೆಯ ರಕ್ಷಾಫಲಕಗಳನ್ನು ಜೋಡಿಸುವುದಾಗಿದೆ. ರಕ್ಷಾ ಫಲಕಗಳನ್ನು ನುಣುಪುಗೊಳಿಸಿ ರಂಧ್ರ ಕೊರೆಯಬೇಕಾಗುತ್ತಿತ್ತು, ಇಂಥವುಗಳನ್ನು ಓಲೆಗರಿಗಳ ಕಟ್ಟಿನ ಎರಡೂ ಬದಿಗೆ ಜೋಡಿಸಬೇಕಾಗುತ್ತಿತ್ತು. ಅಲಂಕಾರರಹಿತ ಫಲಕಗಳು ಒಂದು ತೆರನಾಗಿದ್ದರೆ ಅವುಗಳಿಗೆ ಬಣ್ಣ ಬಳಿದು. ನಕ್ಷೆಗಳನ್ನು ರಚಿಸಿ, ಕಲಾತ್ಮಕವಾದ ಚಿತ್ರಗಳನ್ನು ಬಿಡಿಸಿ ವರ್ಣರಂಜಿತಗೊಳಿಸಿದ್ದ ಫಲಕಗಳು ಇನ್ನೊಂದು ವಿಧ. ಕಟ್ಟಿಗೆ ನುಣುಪುಗೊಳಿಸುವ, ಬಣ್ಣ ಹಚ್ಚುವ. ಚಿತ್ರ ಬರೆಯುವ ಕಾರ್ಯವನ್ನು ಓಲೆಯುವರೇ ನಿರ್ವಹಿಸುತ್ತಿದ್ದರೋ ಅಥವಾ ಆಯಾ ಕೆಲಸಗಳನ್ನು ಬಡಿಗರೋ, ಬಣ್ಣಗಾರರೊ ಚಿತ್ರಕಲಾವಿದರೋ ಮಾಡುತ್ತಿದ್ದರೊ ಎಂಬುದು ಖಚಿತವಾಗಿ ಗೊತ್ತಾಗುವುದಿಲ್ಲ. ಆದರೆ ಈ ಬಗೆಯ ಎಲ್ಲ ಶಿಕ್ಷಣವನ್ನು ಕಲಿಸುತ್ತಿದ್ದ ಮಠ, ವಿದ್ಯಾಸಂಸ್ಥೆಗಳು[೩] ಇದ್ದವು ಎಂಬುದು ತಿಳಿದುಬರುತ್ತದೆ.

---

೨ ಕರ್ನಾಟಕದಲ್ಲಿ ಓಲೆಕಾರ, ಓಲೆಯುವರು ಓಲಿ ಎಂಬ ಹೆಸರಿನ ಮನೆತನಗಳು ಓಲಿಮಠ ಮುಂತಾದ ಮಠಗಳು ಇಂದಿಗೂ ಇವೆ. ಬಹುಶಃ ಹಿಂದೆ ಇವು ತಾಳೆಯೋಲೆಗಳನ್ನು ಹದಗೊಳಿಸಿ ಪೂರೈಸುವ ವೃತ್ತಿಯನ್ನು ಅವಲಂಬಿಸಿದ್ದಿರಬೇಕು. ಕಾಗದದ ಬಳಕೆ ಈ ಮನೆತನಗಳು ಬೇರೆ ವೃತ್ತಿಯನ್ನವಲಂಬಿಸುವಂತೆ ಮಾಡಿರಬೇಕು.

೩ "ಓಲೆಗರಿಗಳನ್ನು ಮಾಡುವುದನ್ನು ಬಹು ಹಿಂದಿನ ಕಾಲದಿಂದಲೂ 'ಸಾಲಿಮಠಗಳಲ್ಲಿ' ಕಲಿಸುತ್ತಿದ್ದರು* ಗರಿಗಳನ್ನು ನುಣುಪುಗೊಳಿಸುವುದು. ಒಂದೇ ಅಳತೆಗೆ ಕತ್ತರಿಸುವುದು ಅವುಗಳಲ್ಲಿ ಸರಿಯಾದ ಕಡೆ ರಂಧ್ರಮಾಡುವುದು. ಓಲೆಗಳ ಅಳತೆಗಿಂತ ಕೊಂಚ ಹೆಚ್ಚು ಉದ್ದ ಅಗಲ ಇಟ್ಟು ರಕ್ಷಾಫಲಕಗಳನ್ನು ಮಾಡಿ ಅವನ್ನು ನುಣುಪು ಮಾಡುವುದು. ಲೇಖಕರ ಇಚ್ಛಾನುಸಾರವಾಗಿ ಆ ಫಲಕಗಳ ಅಥವಾ ಪಟ್ಟಿಕೆಗಳ ಒಳಮುಖ ಹೊರಮುಖಗಳ ಮೇಲೆ ವರ್ಣರಂಜಿತ ಚಿತ್ರಗಳನ್ನು ಬರೆಯುವುದು. ಅಥವಾ ಬರೀ ಬಣ್ಣ ಹಚ್ಚುವದು. ಗರಿಗಳ ಮೇಲೆ ರೇಖಾಪಟ್ಟಿ ಕೈವಾರಗಳನ್ನು ಬಳಸಿ ಬಗೆಬಗೆಯ ನಕ್ಷೆ. ಪುಷ್ಪ. ಪುಷ್ಪಕಗಳನ್ನು ಬಿಡಿಸುವದು ಗರಿಗಳ ಮೇಲೆಯೂ ಬಣ್ಣ-ಬಣ್ಣದ ಚಿತ್ರಗಳನ್ನು ಬರೆಯುವದು ಕಂತಗಳನ್ನು ಮಾಡುವುದು – ಈ ಮುಂತಾದ ಕೆಲಸಗಳನ್ನು ಸಾಲಿಮಠಗಳಲ್ಲಿ ಹೇಳಿಕೊಡುತ್ತಿದ್ದರು. ಇಲ್ಲಿ ಓಲೆ ಮಾಡುವುದನ್ನು ಕಲಿತವರು ತಾವು ಸಿದ್ಧಮಾಡಿದ ಕಟ್ಟುಗಳನ್ನು ಹೊತ್ತು ಊರೂರು ತಿರುಗಿ ಮಾರುತ್ತಿದ್ದರು."

* B. S. Gaddagimath : The Kayaka System of Education (Studies in Education & Culture) P. 260 ಕ. ಹ. ಇ. ಪುಟ. ೧೭

ಇಂಥ ಮಠಗಳಲ್ಲಿ ಈ ಎಲ್ಲ ವಿದ್ಯೆಗಳನ್ನು ಕಲಿತು ಈ ವೃತ್ತಿಯನ್ನು ವಂಶ ಪಾರಂಪರ್ಯವಾಗಿ ಅಭಿವೃದ್ಧಿಪಡಿಸಿಕೊಳ್ಳುತ್ತ ಬಂದವರೇ ಹಸ್ತಪ್ರತಿಗಳ ಸುಂದರ ವಿನ್ಯಾಸಗಳಿಗೆ ಕಾರಣರಾಗಿದ್ದಾರೆ. ಕನ್ನಡ ನಾಡಿನಲ್ಲಿ ಈ ವೃತ್ತಿಯುವರು ಇದ್ದ ರೆಂಬುದಕ್ಕೆ ಹಲವಾರು ನಿದರ್ಶನಗಳು ದೊರಕುತ್ತವೆ. ಬಸವಣ್ಣನವರ ಕಾಲದಲ್ಲಿಯ ಅನುಭವ ಮಂಟಪ ಮತ್ತು ವಚನ ಭಂಡಾರವನ್ನು ನೆನೆದುಕೊಂಡಾಗ ಈ ಕಾಯಕ ವನ್ನಾಶ್ರಯಿಸಿದ ಓಲೆಯ ಶಾಂತಯ್ಯ[೪] ಓಲೆಯ ರಾಮಯ್ಯ[೪] ಮೊದಲಾದ ಅನೇಕ ಶರಣರು ಇದ್ದ ಸಂಗತಿ ತಿಳಿಯುತ್ತದೆ. ಹಾಗೆಯೆ ಓಲೆಗಳನ್ನು ತಯಾರಿಸಿ ಮಾರುವ ಕಾಯಕದ ನಿಜಲಿಂಗ ಚಿಕ್ಕಯ್ಯ ನೂತನ ಶರಣರಾದ ಓಲೆಯ ಕಾಯಕದವರಾದ ಕಡವೂರು ರಾಮಣಯ್ಯ, ತಿರುವಾರೂರು ತಮ್ಮಣ್ಣ, ತಿರುಚೆಟ್ಟಪಳ್ಳಿಯ ತಿಪ್ಪಣ್ಣ[೫] ಮೊದಲಾದವರ ಹೆಸರುಗಳನ್ನು ಲಕ್ಕಣ್ಣ ದಂಡೇಶ ಹೆಸರಿಸುವುದನ್ನು ಇಲ್ಲಿ ಸ್ಮರಿಸ ಬೇಕು. ಇವೆಲ್ಲವುಗಳು ಓಲೆಕಾಯಕದ, ಓಲೆಕಾಯಕವನ್ನಾಶ್ರಯಿಸಿದವರ ಸ್ಪಷ್ಟ ಉಲ್ಲೇಖಗಳಾಗಿವೆ. ಓಲೆಗಳನ್ನು ಸೂಡುಕಟ್ಟಿ ಸಂತೆಗಳಲ್ಲಿ ಮಾರುತ್ತಿದ್ದ ಮತ್ತು ಇದಕ್ಕಾಗಿ ಸುಂಕ ಕೊಡಬೇಕಾಗಿದ್ದ ಸಂಗತಿಯು ಬೆಳಗಾವಿಯ ಒಂದು ಶಾಸನದಲ್ಲಿ[೬] ಉಕ್ತವಾಗಿರುವುದನ್ನು ಗಮನಿಸಿದರೆ ಅದೊಂದು ಅತ್ಯಂತ ಬೇಡಿಕೆಯಿದ್ದ ವಸ್ತುವಿನ ಅಭಿವೃದ್ಧಿಶೀಲ ವೃತ್ತಿಯಾಗಿದ್ದಿರಬೇಕೆಂಬುದು ತಿಳಿಯುತ್ತದೆ.

---

೪ ನನ್ನಲ್ಲಿದ್ದ ತಾಳದೋಲೆಯ ಸಂಗ್ರಹದಲ್ಲಿ "ಗಣನಾಮಸ್ತೋತ್ರ ತ್ರಿವಿಧಿ" ಎಂಬುದೊಂದು ಗ್ರಂಥವು ಸಿಕ್ಕಿದೆ. . . . . ಇವುಗಳಲ್ಲಿ ಬಸವಣ್ಣನವರ ಸಮಕಾಲೀನರಾದ ಅನೇಕ ಶಿವಶರಣರ ಹೆಸರುಗಳು ಅವರವರ ಊರು ಕಾಯಕಗಳ ಸಮೇತ ಕೊಡೋಣವಾಗಿದೆ. ಇಲ್ಲಿ ಓಲೆಯ ಕಾಯಕದ ವಿಷಯವಾಗಿ ವಚನ ಭಂಡಾರಿ ಶಾಂತರಸನ ಹೆಸರಲ್ಲದೆ ಓಲೆಯ ರಾಮಯ್ಯನ ಹೆಸರೂ ಬರುತ್ತದೆ. . . . . . ಉಭಯುತರ ಹೆಸರುಗಳನ್ನು ಹೇಳುವ ಈ ತ್ರಿಪದಿಗಳನ್ನು ಇಲ್ಲಿ ಕೊಡುತ್ತೇನೆ.

ರಾಮಯ್ಯ ಓಲೆಯ ರಾಮಯ್ಯ ಏಕಾಂತ
ರಾಮಯ್ಯ ಸಿದ್ಧರಾಮಯ್ಯ ಮೈದುನ
ರಾಮಯ್ಯ ನನಗೆ ಕೃಪೆಯಾಗು ॥೩೭॥

. . . .

ಶಾಂತಯ್ಯ ಓಲೆಯ ಶಾಂತಯ್ಯ ಗಿರುಗಟ್ಟಿ
ಶಾಂತಯ್ಯ ಕೋಲು ಶಾಂತಯ್ಯ ಯೋಗೇಶ
ಶಾಂತಯ್ಯ ನನಗೆ ಕೃಪೆಯಾಗು ॥ ೪೧ ॥

ಬಸವೇಶ್ವರರ ಸಮಕಾಲೀನರು – ಬಸವ ಸಮಿತಿ ಬೆಂಗಳೂರು ಶ್ರೀ ಎಸ್. ಆರ್. ಗುಂಜಾಳ ಅವರ 'ವಚನ ಭಂಡಾರಿ ಶಾಂತರಸ' ಲೇಖನ

೫ ಕ. ಹ. ಇ. ಪುಟ ೧೭

೬ "ಓಲೆಯ ಹೇರಿಂಗೆ ಓಲೆಯ ಸೂಡೆರಡು ಆ ಹೇರಿಗೆ ಸೂಡೊಂದು" ಉದ್ಧೃತ : ಗ್ರಂ. ಸಂ. ಶಾ. ಪರಿಚಯ ಪುಟ–೧೨

ಬರೆಯದಿರುವ ತಾಳೆಯೋಲೆಗಳನ್ನು ಅಳಕ[೭], ಅಲೇಖ[೭ಅ] ಎಂದು ಕರೆದಿದ್ದಾರೆ. ಹದಗೊಳಿಸಿದ ತಾಳೆಯೋಲೆಗಳ ಕಟ್ಟನ್ನು ಪಡೆದ ಪ್ರತಿಕಾರರು ತಾವು ಉದ್ದೇಶಿಸಿದ ಗ್ರಂಥವನ್ನು ಪ್ರತಿಮಾಡಲು ತೊಡಗುತ್ತಿದ್ದರು. ಪ್ರತಿಕಾರರು ನಿಯುಕ್ತ, ಹವ್ಯಾಸಿ ಇಲ್ಲವೆ ವೃತ್ತಿ ಪ್ರತಿಕಾರ ಯಾರೇ ಆಗಿರಲಿ ಹಸ್ತಪ್ರತಿ ಸಿದ್ಧಪಡಿಸುವುದು ಸುಲಭ ಸಾಧ್ಯವಾದ ಕಾರ್ಯವಾಗಿರಲಿಲ್ಲ.

ಭಗ್ನ ಪೃಷ್ಠ ಕಟಿಗ್ರೀವಾ ಬದ್ಧದೃಷ್ಟಿರದೋ ಮುಖಂ ।
ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯ ॥[೮]

ಎಂಬುದಾಗಿ ಹೇಳಿಕೊಂಡಿರುವ ಸ್ವ–ಅನುಭವದ ನುಡಿಯು ಸುಳ್ಳೇನಲ್ಲ ಎನಿಸುತ್ತದೆ. ಬರೆಯಲು ಬರುವವರೆಲ್ಲರೂ ಲಿಪಿಕಾರ ಅಥವಾ ಪ್ರತಿಕಾರರಾಗುತ್ತಿರಲಿಲ್ಲ. ಯಾಕೆಂದರೆ ಅವನಿಗೆ "ತಕ್ಕಮಟ್ಟಿನ ಕಾವ್ಯ ಪರಿಚಯ, ಹಸ್ತಕೌಶಲ, ತಾಳ್ಮೆ, ಹೊಣೆಗಾರಿಕೆ ಎಲ್ಲಕ್ಕೂ ಮಿಗಿಲಾಗಿ ಸಾಹಿತ್ಯಾಭಿಮಾನ ಧರ್ಮಾಭಿಮಾನ"[೯] ಈ ಕನಿಷ್ಠ ಯೋಗ್ಯತೆಗಳಾದರೂ ಇರಬೇಕಾಗುತ್ತಿತ್ತು. ಇದರೊಟ್ಟಿಗೆ ಪ್ರತಿಕಾರನಿಗೆ ಕಲಾಭಿರುಚಿ ಮತ್ತು ಸೌಂದರ್ಯ ದೃಷ್ಟಿಗಳಿದ್ದರೆ ಹಸ್ತ ಪ್ರತಿಗಳು ಚಿತ್ತಾಕರ್ಷಕವಾಗಿ ರೂಪುಗೊಳ್ಳುತ್ತಿದ್ದವು. ಇಂತಹ

---

೭ . . . . ಪಂಪ ಮಹಾಕವಿಯುಂ ಅಳಿಗವಿಗಳನ್ನು ಲೇವಡಿ ಮಾಡುತ್ತ ಬರೆಪಗಾರರ ಕೈಗಳ ಕೇಡು ನುಣ್ಣನಪ್ಪಳಕದ ಕೇಡು ಎಂಬಲ್ಲಿ . . . 'ಅಳಕ' ಎಂಬ ಪದವನ್ನು ಇನ್ನೂ ಬರವಣಿಗೆ ಆಗದಿರುವ ತಾಳೆಯೋಲೆಯ ಗರಿ ಎಂಬ ಅರ್ಥದಲ್ಲಿ ಪ್ರಯೋಗಿಸಿರುವನು– ಕ. ಹ. ಇ. ಪುಟ ೪

೭ಅ ಶಾಂತರಸನ ವಚನಗಳ ಅಂಕಿತ 'ಅಲೇಖನಾದ ಶೂನ್ಯ ಕಲ್ಲಿನೊಳಗಾದ' ಎಂಬುದು ಇದರ ಅರ್ಥವನ್ನು ಉತ್ತಂಗಿಯವರು ಕಂಡುಕೊಂಡ ರೀತಿ ಅರ್ಥವತ್ತಾಗಿದೆ 'ಅಲೇಖ' ಎಂದರೆ ಬರೆಯದ ಓಲೆ ಎಂಬರ್ಥವನ್ನಿಟ್ಟುಕೊಂಡು ಬರೆಯದ ಓಲೆಯಂತಾದ ಶೂನ್ಯ ಸ್ವರೂಪನಾದ ಪರಶಿವನು ಕಲ್ಲಿನೊಳಗಾದ, ಅಂದರೆ ಸಾಕಾರ ನಿರಾಕಾರಗಳೆರಡನ್ನೂ ಒಳಗೊಂಡ ಇಷ್ಟಲಿಂಗ ವಾದ ಎಂದು ಈ ಅಂಕಿತಕ್ಕೆ ಅರ್ಥವನ್ನು ಕಲ್ಪಿಸಿದ್ದಾರೆ.– ಚಂದ್ರಿಕೆ ಪುಟ–೪.

೮ ಇಷ್ಟೆಲ್ಲ ಕಷ್ಟದ ವೃತ್ತಿಯನ್ನು ಪ್ರತಿಕಾರ ಕೈಕೊಳ್ಳಲು ಉದರಂಭರಣಕ್ಕಿಂತ ಮಿಗಿಲಾಗಿ ಅದೊಂದು ಸತ್ಕಾರ್ಯ. ಧಾರ್ಮಿಕ ಕಾರ್ಯ, ಪುಣ್ಯಕಾರ್ಯ ಎಂಬ ಧಾರ್ಮಿಕ ನಂಬುಗೆ ಹೆಚ್ಚು ಕಾರಣವಾಗಿರಬೇಕು. ಇದಕ್ಕೆ ಪ್ರತಿಕಾರರ ಈ ಕೆಳಗಿನ ಮಾತುಗಳು ಸಮರ್ಥನೆ ನೀಡುತ್ತವೆ.

"ಯಿಂತಿ ಶಿವಗಣಂಗಳ ನಿರೂಪಮಂ ಕೈಕೊಂಡು ಬರುವುದಕ್ಕೆಯನ್ನ ಕಂಗಳು ಚಿತ್ತ ಕರಂ ಕವನಗಳು ಗತಿ–ಮತಿ ಚೈತನ್ಯಕ್ಕೆ ಸಮಸ್ತ ಸದ್ಭಕ್ತವೀರ ಮಾಹೇಶ್ವರರುಗಳೇ ಕರ್ತರಾದ ಕಾರಣ . . ." ಕ. ಹ. ವ. ಸೂ. Vol. I ಪಿಠೀಕೆ "ಈ ಲಿಂಗಲೀಲಾ ವಿಲಾಸ ಚಾರಿತ್ರವನು ಬರದು ಓದಿ ಕೇಳಿ ಅರಿದು ಆನಂದಿಸುವ ಭಕ್ತ ಜನಂಗಳಿಗೆ ಇಹಪರದ ಸುಖವ ಕೊಡುವುದು. . ." D. C. Ms. Vol. VI. 146

". . . ಚೀರವು ಚಾತ್ರವುಂ ಪದದಿಂದೆ ಬರದೋದಿ ಕೇಳಿ ವಿಸ್ತರಿಸುವರ್ಗೊದಗಿಪ್ಪುದಾಯುರಾರೋಗ್ಯ ಸಂಪದ ಸರ್ವಸಿದ್ಧಿ ಸತ್ಯಂ ಸತ್ಯವು"–D.C. Ms. Vol-I Pg. 45

೯ ಕ. ಹ. ಇ. ಪುಟ. ೭೧

ವ್ಯಕ್ತಿಗಳ ಹೆಸರು ಅವರ ಬರವಣಿಗೆಯು ಪ್ರಾವಿಣ್ಯಗಳು ಶಾಸನೋಕ್ತವಾಗಿಲ್ಲದಿರಬಹುದು. ಆದರೆ ಧರಣ ಬಣ್ಣಿಸುವಂತೆ 'ಪ್ರೊಕ್ಕಳು ತಲೆಕಟ್ಟುಮನಕ್ಕರ ಪಯುಪಮನರಿದು[೧೦] ಕಂಡರಿಸುವ 'ಮುತ್ತಿನ ಸರಿಗೆಯುನನುಕರಿಸೆ'[೧೦] "ಸರಸ್ವತಿಯ ಕೊರಳ ಮುತ್ತುವೊಲ್"[೧೦] ಬರೆಯುತ್ತಿದ್ದ ಶಾಸನಲಿಪಿಕಾರರ ಉದಾಹರಣೆಗಳು ಸಾಕಷ್ಟು ದೊರೆಯುತ್ತವೆ. ಇಂತಹ ಚಲುವಿನಕ್ಷರಗಳನ್ನು ಬರೆಯುವ ಪ್ರತಿಕಾರರೂ ಇರುವ ಸಾಧ್ಯತೆ ಇಲ್ಲದಿಲ್ಲ. ಯಾಕಂದರೆ ಶಾಸನಗಳನ್ನು ಕಂಡರಿಸುವ ಮೊದಲು ತಾಳೆಗರಿಯ ಮೇಲೆ ಶಾಸನದ ಪಾಠವನ್ನು ಬರೆಯುತ್ತಿದ್ದ ಮತ್ತು ಅನೇಕ ವೇಳೆ ಆ ಲಿಪಿಕಾರರೇ ಕಲ್ಲಿನ ಮೇಲೆ ಅಕ್ಷರಗಳನ್ನು ಬರೆಯುತ್ತಿದ್ದ, ಅದರಂತೆ ಶಿಲ್ಪಿಗಳು ಕಂಡರಿಸುತ್ತಿದ್ದ ಸಂಗತಿ ತಿಳಿದು ಬರುತ್ತದೆ[೧೧] ಇದನ್ನು ನೆನೆದಾಗ ಹಸ್ತಪ್ರತಿಕಾರರಲ್ಲಿಯೂ ಇಂತಹ ಸುಹಸ್ತ ಪಡೆದ ಲಾಲಿತ್ಯಪೂರ್ಣವಾದ ಬರವಣಿಗೆ ಮಾಡಬಲ್ಲ ನಿಪುಣರು ಇದ್ದಿರಲೇಬೇಕೆನಿಸುತ್ತದೆ. ಇವಕ್ಕೊಂದು ಉತ್ತಮ ನಿದರ್ಶನವೆಂದರೆ ನವಿಲ್ಗುಂದದ ಮಾದಿರಾಜನೆಂಬವನದು. ಅವನು—

ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳಿ ಚೆಲ್ವು ಮಾತ್ರೆಯೊಳ್
ನಿಂದ ಬೆಡಂಗು ಬಳ್ಳಿಯೊಳೊಡಂಬಡುತಿರ್ಪ ನಯಂ ವಿಸರ್ಗದೊ
ಳ್ವೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿ
ಲ್ಗುಂದದ ಮಾದಿರಾಜ ವಿಬುಧಂ ವಿಬುಧೋದಿತ ಸವ್ಯಕಾವ್ಯಮಂ[೧೨]

ಎನ್ನುವಲ್ಲಿ ಸುಂದರ ವಿನ್ಯಾಸವನ್ನೊಳಗೊಂಡ ತನ್ನ ಲೇಖನ ಕಲೆಯನ್ನು ಕುರಿತು ಆತ್ಮವಿಶ್ವಾಸದಿಂದ ಹೇಳಿಕೊಂಡಂತಿದೆ. ಆದರಂತೆ ಹಸ್ತಪ್ರತಿಗಳಲ್ಲಿ ಬರೆಯುವುದು ಬರೀ ಅಕ್ಷರಗಳನ್ನಲ್ಲ ಎಂದು ಭಾವಿಸದ ಚಿಕ್ಕಯ್ಯನೆಂಬವನು ಒಂದು ದೇವಾಲಯದ ಭವ್ಯ ಕಲಾಪೂರ್ಣ ವಾಸ್ತುವಿಗೆ ತಕ್ಕಂತೆ ಗರ್ಭಗುಡಿಯಲ್ಲಿನ ಪ್ರಮಾಣಬದ್ಧ ಸುಲಕ್ಷಣವಾದ ದೇವತಾ ಮೂರ್ತಿ ಹೇಗೆ ಇರಲೇಬೇಕೋ ಹಾಗೆಯೇ ಹಸ್ತ ಪ್ರತಿಗಳ್ಲಿಯ ಲಿಪಿಗಾರಿಕೆ ಇರಬೇಕು ಎಂದು ಬಯಸುತ್ತಾನೆ. ಅವನ ದೃಷ್ಟಿಯಲ್ಲಿ ಎರಡು ಹಲಗೆ ಅಥವಾ ರಕ್ಷಾಫಲಕಗಳ ಮಧ್ಯ ಕಟ್ಟಲ್ಪಟ್ಟ ಓಲೆಗಳ ಕಟ್ಟಿನ ಒಟ್ಟು ಸ್ವರೂಪ" ಎಂಟು ಮೂಲೆ ಎಂಟು ಲೋವೆಗಳುಳ್ಳ ಚಲುವಾಗಿರುವ ದಿವ್ಯ ದೇವಾಲಯ[೧೩]ವಾಗಿದೆ. ಈ ದೇವಾಲಯ ಬರಿದಾಗಿರಬಾರದು ಅಲ್ಲಿ "ಬಿಂದು ವಿಸರ್ಗ ದಡ್ಡತೆವೊಂದಿದಾವೃತ್ತೋರ್ದ್ವ ರೇಫೆ ದೀರ್ಘ ಹ್ರಸ್ವದಿಂದೊಪ್ಪುಲೆರ್ದ ಅಕ್ಷರ ಮೂರ್ತಿಗಳಂ ಲೇಖನವಂ

---

೯ ಕ. ಹ. ವ. ಸೂ. Vol. ೧ ಪಿಠಿಕೆ x

೧೦ ಕ. ಗಂ. ಸಂ. ಶಾಸ್ತ್ರ ಪುಟ ೫೪–೫೫

೧೧ ಸುಂದರ ಲಿಪಿಗಳನ್ನು ಬರೆದು ಕಂಡಿರಿಸಬಲ್ಲ ವಿದ್ಯಾವಂತ ಶಿಲ್ಪಿಗಳೂ ಇದ್ದರೆಂಬ ಬಗ್ಗೆ ಇನ್ನೊಂದು ಅಭಿಪ್ರಾಯವಿಲ್ಲ.

೧೨ ಕ. ಹ. ಇ. ಪುಟ ೭೨

೧೩ ಕ. ಹ. ವ. ಸೂ. vol. ೧ ಪೀಠಿಕೆ x.

ಮಾಡೆಂದು ಬಯಸುತ್ತಾನೆ. 'ಅಕ್ಷರ ಮೂರ್ತಿ' ಎಂಬುದಾಗಿ ಭಾವಿಸಿದ ಅವನ ಭಾವನೆಯಲ್ಲಿ ಸೌಂದರ್ಯ, ಪೂಜ್ಯತೆ ಏನೆಲ್ಲವೂ ಇದೆ. ಹಸ್ತಪ್ರತಿಯ ಲಿಪಿಗಾರಿಕೆಯಲ್ಲಿರಬೇಕಾದ ಲಕ್ಷಣ ಪ್ರಜ್ಞೆ, ಸೌಂದರ್ಯಪ್ರಜ್ಞೆ ಆ ಬಗ್ಗೆ ಲಿಪಿಕಾರನಾದವನು ವಹಿಸಬೇಕಾದ ಎಚ್ಚರವನ್ನು ಮಾರ್ಮಿಕವಾಗಿ ಈ ಮಾತು ತಿಳಿಸುತ್ತದೆ. ಇಂಥ ಕಲಾಭಿರುಚಿಯ ದಾತೃಗಳಿದ್ದುದರಿಂದಲೇ ಹಸ್ತಪ್ರತಿಗಳು ಕೇವಲ ನಕಲುಗಳಾಗದೆ ಕಲಾವಸ್ತುಗಳಾಗಿ, ಕಾಲದಿಂದ ಕಾಲಕ್ಕೆ ಅಲಂಕಾರ ಲೇಖನ (Calligraphy) ದ ಪರಂಪರೆಯನ್ನೂ, ಕನ್ನಡಿಗರ ಸದಭಿರುಚಿಯನ್ನು ಎತ್ತಿತೋರುತ್ತ ಬಂದಿವೆಯೆನ್ನಬಹುದು.

ಜಗನ್ನಾಥ ವಿಜಯದ ಪ್ರಥಮಾಶ್ವಾಸದ ೧೫ನೆಯ ಈ ಕೆಳಗಿನ ಪದ್ಯವನ್ನು ಲಕ್ಷಿಸಬೇಕು.

ಪೊಸತೆನೆ ಪೇಟ್ವ ತಿರ್ದುವಜಿವೆನ್ನೊಳೆ ಸನ್ನಿದಮಾದೊಡಂ ಕರಂ
ರಸಿಕರಿನೆಯ್ಗೆ ತಿರ್ದಿಸಿದೊಡಲ್ಲದೆ ನಿಲ್ಲದು ಚಿತ್ರಮಂತೆ ತಿ
ರ್ದಿಸುವುದೆ ನಲ್ ನಯಂ ಬೆಳಗೆ ಕನ್ನಡಿ ಸೋದಿಸೆ ಪೊನ್ ವಿರಾಜಿಪಂ
ತೆಸೆದು ಬಟಿಕ್ಕೆ ಮತ್ಕೃತಿ ಚಮತ್ಕೃತಿಯಂ ಧರೆಗುಂಟು ಮಾಡುಗುಂ ॥

ತಮ್ಮ ಹಸ್ತಾಕ್ಷರಗಳಿಂದ ಹಸ್ತಪ್ರತಿಗಳಲ್ಲಿ ಸೌಂದರ್ಯ ಒಡಮೂಡಬೇಕು ಎಂಬ ಮನೀಕ್ಷೆಯಿಂದಲೇ ಬರೆಯುತ್ತಿದ್ದ ಲಿಪಿಕಾರರು ಲೋಹದ ಕಂಠದಿಂದ ಬರೆಯುತ್ತಿದ್ದರು. ಆಗ ಅಕ್ಷರಗಳು ಮೂಡುತ್ತಿದ್ದವಾದರೂ ಹಾಗೆಯೆ ಅದನ್ನು ಓದಿಕೊಳ್ಳುವುದು ದುಸ್ತರವಾಗುತ್ತಿತ್ತು ಎಂಬುದು ಗೊತ್ತಿದ್ದ ಮಾತು. ಅದಕ್ಕಾಗಿಯೇ ಕಂಠ ಲಿಖಿತ ಪತ್ರಗಳಿಗೆ ಕಪ್ಪನ್ನಿಡುತ್ತಿದ್ದರು. "ಯಿ ಪುಸ್ತಕದಲ್ಲಿ ಬರೆದು ಕಪ್ಪನಿಟ್ಟಿರುವ ವಾಲೆ ೨೫೩ ನಿಧಾನವಾಗಿದೆ"[೧೪] "ಲೀಲಾವತಿಗೆ ಕಪ್ಪಿಡಿಸಿದ"[೧೫] "ಲೀಲಾವತಿಗೆ ಕಪ್ಪನಿಡುವಲ್ಲಿ"[೧೫] ಎನ್ನುವ ದೊಡ್ಡಯ್ಯನ ದೇವ ಚಂದ್ರನಮಾತುಗಳು ಇಲ್ಲಿ ಲಕ್ಷಿಸಬೇಕಾದವುಗಳು. ಕಪ್ಪನಿಟ್ಟವರ ಹೆಸರುಗಳು ಹಸ್ತಪ್ರತಿಗಳಲ್ಲಿ ಉಲ್ಲೇಖಗೊಂಡಿರುವುದು ತುಂಬಾ ವಿರಳ. ಇಂದ್ರ ನಂದಿಯ ಜ್ವಾಲಾಮಾಲಿನಿ ಕಲ್ಪದ ಹಸ್ತಪ್ರತಿ ದೇವೇಂದ್ರ ಕೀರ್ತಿ ಎನ್ನುವವನು. ಕಪ್ಪನ್ನಿಟ್ಟ ಸಂಗತಿ ಆ ಗ್ರಂಥದ ಕೊನೆಯಲ್ಲಿ ಬರುವ "ಶ್ರೀಮತು ದೇವೇಂದ್ರಕೀರ್ತಿ ಹಸ್ತಾಂಜನ" ಎಂಬ ಮಾತಿನಿಂದ ಗೊತ್ತಾಗುತ್ತದೆ. ಇದಲ್ಲದೆ ಹಸ್ತಪ್ರತಿಗೆ ಲೇಪಿಸುವ ಕಪ್ಪನ್ನು ತಯಾರಿಸುವ ವಿಧಾನವನ್ನು ಕೂಡ ಹೇಳಿರುವುದು ತುಂಬಾ ಮಹತ್ವದ್ದಾಗಿದೆ. ಬಹುಶಃ ಲೇಪ್ಯದಂತೆ ತಯಾ

---

೧೪ ಕ. ಹ. ಪ. ಸೂ. ಸಂ. ೧ ಪುಟ ೨೭೭
೧೫ ಉದ್ಧೃತ: ಕ. ಗ್ರ. ಸಂ. ಶಾಸ್ತ್ರ ಪುಟ ೪೪_೪೫

ಸಿದ ಈ ಕಪ್ಪನ್ನು ಅಥವಾ ಅಂಜನವನ್ನು ತಯಾರಿಸುವುದು; ಜಾಗರೂಕತೆಯಿಂದ ತಾಳೆಯೋಲೆಗಳಿಗೆ ಲೇಪಿಸುವುದರ ಮೂಲಕ ಅಕ್ಷರಗಳು ಸ್ಫುಟವಾಗಿ ಕಾಣುವಂತೆ ಮಾಡುತ್ತಿದ್ದುದು ಒಂದು ಕುಶಲ ಕರ್ಮವೇ ಆಗಿತ್ತು. ಬರೆಯಲ್ಪಟ್ಟ ಗ್ರಂಥ ಅಸ್ತವ್ಯಸ್ತವಾಗದಂತೆ ಗರಿಗಳು ಮುರಿಯದಂತೆ ಕಪ್ಪನ್ನಿಡುವ ಈ ಕಾರ್ಯವು ಸೂಕ್ಷ್ಮ ಚಿತ್ರಕ್ಕೆ ಕಣ್ಣು ಮೂಗನ್ನು ಬರೆಯುವಷ್ಟು ಕಾಳಜಿ ವಹಿಸಬೇಕಾದುದು ಮತ್ತು ಲಿಪಿಕಾರನ ಲಕ್ಷಣವಾದ ಬರಹಕ್ಕೆ ಜೀವ ತುಂಬುವ ಕೌಶಲದ್ದು ಎನ್ನಬಹುದು.

ಕಪ್ಪನಿಟ್ಟು ಕ್ರಮವಾಗಿ ಒಟ್ಟಿಗೆ ಸೇರಿಸಿದ ಹಸ್ತಪ್ರತಿಗಳು ಹೊತ್ತಿಗೆಯ ರೂಪವನ್ನು ತಳೆಯುತ್ತಿದ್ದವು. ಇದಕ್ಕೂ ಮೊದಲು ಬರೆದ ಓಲೆಗಳನ್ನು ಕ್ರಮವಾಗಿ ಕಟ್ಟಿಡುತ್ತಿದ್ದರೆ ಹೊರತು ದಾರದಲ್ಲಿ ಪೋಣಿಸಿ ಇಡುತ್ತಿದ್ದಂತೆ ಕಾಣುವುದಿಲ್ಲ. "...ಕವಿಜನ ಶೇಖರಂ ಬರೆದು ಪೊತ್ತಿಗೆಗೇಱಿಸಿದಂ ಪುರಾಣಮಂ"[೧೨] ಎಂಬ ಚಾವುಂಡರಾಯ ಪುರಾಣದಲ್ಲಿಯ ಉಕ್ತಿಯು ಇಲ್ಲಿ ಪರಿಶೀಲಿಸಬೇಕಾದುದಾಗಿದೆ. ಹಾಗೆಯೆ, ಬರೆಯುತ್ತಿದ್ದಂತೆ ಓಲೆಗಳನ್ನು ದಾರದಲ್ಲಿ ಸೇರಿಸುತ್ತಿದ್ದ ಸಾಧ್ಯತೆಗಳು ಇಲ್ಲದಿಲ್ಲ. ಹೀಗೆ ಪೊತ್ತಿಗೆಗೇಱಿಸಿದ ಕೃತಿ ಸ್ವತಃ ಕವಿಯಿಂದಲೋ ಪ್ರತಿಕಾರನಿಂದಲೋ ಪರಿಣತರಿಂದಲೋ ತಿದ್ದಲ್ಪಡುತ್ತಿತ್ತು[೧೩] ಎಂಬುದು ಹಸ್ತಪ್ರತಿಗೆ ಕಪ್ಪನ್ನಿಟ್ಟನಂತರ ಅಲ್ಲಲ್ಲಿ ತಿದ್ದಿದ ಕೆಲವು ನಿದರ್ಶನಗಳಿಂದ ಗೊತ್ತಾಗುತ್ತದೆ. ಇದು ಹಸ್ತಪ್ರತಿಯ ಸೊಬಗಿಗೆ ಭಂಗ ತಂದರೂ ಹಸ್ತಪ್ರತಿಯ ಶುದ್ಧತೆ ಕಾಯ್ದುಕೊಳ್ಳುವ ದೃಷ್ಟಿಯಿಂದ ಅವಶ್ಯಕ ಎನ್ನಬಹುದು.

ಹೀಗೆ, ಒಂದು ಹಸ್ತಪ್ರತಿಯು ಹದಗೊಂಡ ಗರಿಗಳನ್ನೊಳಗೊಂಡು, ಮುದ್ದಾದ ಅಕ್ಷರಗಳಲ್ಲಿ ಓರಣವಾಗಿ, ಸುಲಕ್ಷಣವಾಗಿ ಬರೆಯಲ್ಪಟ್ಟು ಅದಕ್ಕೆ ಕಿರೀಟವಿಟ್ಟಂತೆ ವರ್ಣಮಯ ರಕ್ಷಾಫಲಕಗಳನ್ನು ಹೊಂದಿ ಮೋಹಕವಾಗಿ ಕಾಣಬೇಕಾದರೆ ಓಲೆಕಾರ, ಪ್ರತಿಕಾರ, ಅಂಜನಕಾರ, ಚಿತ್ರಕಾರ ಈ ಎಲ್ಲರ ಪಳಗಿದ ಕೈಯಲ್ಲಿ ಹಾಯ್ದು ಬರಬೇಕಾಗುತ್ತಿತ್ತು. ಆದುದರಿಂದ ಇವರನ್ನು ಹಸ್ತಪ್ರತಿಯ ವಿನ್ಯಾಸಕಾರರು ಎಂದು ಕರೆಯಬಹುದಾಗಿದೆ. ತಮ್ಮ ಪರಿಶ್ರಮ, ಪರಿಣತಿ, ಏಕನಿಷ್ಠೆಗಳ ಪ್ರತಿಫಲವೆಂಬಂತಿರುವ ಸುಂದರ ಹಸ್ತಪ್ರತಿಗಳನ್ನು ನೀಡಿದ ಈ ವಿನ್ಯಾಸಕಾರರ ಹೆಸರುಗಳು (ಪ್ರತಿಕಾರರನ್ನುಳಿದು) ಸಿಕ್ಕದಿರುವುದು ದುರ್ದೈವದ ಸಂಗತಿಯಾಗಿದೆ. ಹಸ್ತಪ್ರತಿಗಳ ಈ ವಿನ್ಯಾಸಕಾರರಲ್ಲಿ ಓಲೆಕಾರ ಮತ್ತು ಅಂಜನಕಾರನ ಗೈಮೆ ಒಮ್ಮೆಲೆ ಲಕ್ಷ್ಯಕ್ಕೆ ಬರುವಂತಹದಲ್ಲ. ಪ್ರತಿಕಾರ ಮತ್ತು ಚಿತ್ರಕಾರರ ಕುಶಲತೆ ಮಾತ್ರ ಒಮ್ಮೆಲೆ ಮನಸೂರೆಗೊಳ್ಳುವಂತಹದು. ಈ ವಿನ್ಯಾಸಕಾರರ ಕಲಾ ಕೌಶಲ ಹಾಗೂ ನೈಪುಣ್ಯಗಳು

---

೧೨ D.C.Ms Vol I Pg. 4

೧೩ 'ದಂಡನಾಯಕಂ ಕೇಶಿ ತಿರ್ದೆ' ಎಂಬ ಗದಾಯುದ್ಧದಲ್ಲಿನ ಮಾತನ್ನೂ ಗಮನಿಸಿರಿ.

ಹಸ್ತಪ್ರತಿಯ ಸೌಂದರ್ಯವನ್ನು ಹೆಚ್ಚಿಸಲು ಕಾರಣವಾದ ಕೆಲವು ಉದಾಹರಣೆಗಳನ್ನಿಲ್ಲಿ ಪರಿಶೀಲಿಸಬಹುದು.

ಹಸ್ತಪ್ರತಿಯ ವಿನ್ಯಾಸದ ದೃಷ್ಟಿಯಿಂದ ಓಲೆಗರಿಗಳಲ್ಲಿ ಮಾಡಿದ ಕಲಾತ್ಮಕ ನಕ್ಷೆಗಳು ತುಂಬಾ ಮಹತ್ವದವೆನಿಸುತ್ತವೆ. ಹಸ್ತಪ್ರತಿಯ ಮೊದಲಲ್ಲಿ ಮತ್ತು ಕಡೆಯಲ್ಲಿ ಬರೆಯದಿರುವ ಕೆಲವು ಓಲೆಗಳನ್ನು ಜೋಡಿಸುತ್ತಿದ್ದುದು ಬರೆದ ಓಲೆಗಳ ಸುರಕ್ಷತೆಗಾಗಿ ಎಂಬುದು ಸ್ಪಷ್ಟ. ಇಂಥ ಗರಿಗಳು ಬರಿದಾಗಿರುವುದು ಸಾಮಾನ್ಯವಾಗಿದ್ದರೂ ಕೆಲವು ಹಸ್ತಪ್ರತಿಗಳಲ್ಲಿ ಕೈವಾರ ರೇಖಾಪಟ್ಟಿ ಮತ್ತು ಕಂಠದ ಸಹಾಯದಿಂದ ಕಲಾಪೂರ್ಣ ಜ್ಯಾಮಿತಿ ರಚನೆಗಳನ್ನು ಮಾಡಿರುವುದು ಕಂಡುಬರುತ್ತದೆ. ಸಾಕಷ್ಟು ವೈವಿಧ್ಯಪೂರ್ಣವಾಗಿ ರಚಿಸಲ್ಪಟ್ಟ ಈ ನಕ್ಷೆಗಳು ನಯನ ಮನೋಹರವಾದವುಗಳಾಗಿವೆ. ವರ್ತುಲಗಳು, ಅಂತರ್ಗತ ವರ್ತುಲಗಳು. ಒಂದನ್ನೊಂದು ಛೇದಿಸುವ ವರ್ತುಲಗಳು, ತಳುಕು ತಳುಕಾದ ವರ್ತುಲಗಳು. ಒಂದರ ಮೇಲೆ ಇನ್ನೊಂದು ಆವರಿಸುವಂತೆ ಚಿತ್ರಿಸಿದ ವರ್ತುಲಗಳು ಇಂಥ ವರ್ತುಲಗಳ ಮಧ್ಯದಲ್ಲಿ ಕೈವಾರದಿಂದ ರಚಿಸಿದ ಮೊನಚಾದ ಎಸಳುಗಳುಳ್ಳ ವಿಕಸಿತ ತಾವರೆಯಂತಿರುವ ಪುಷ್ಪಗಳು. ಅರೆ ಬಿರಿದ ತಾವರೆಯ ಮಗ್ಗಲು ನೋಟದ ಚಿತ್ರ. ದೊಡ್ಡ ವರ್ತುಲದಲ್ಲಿಯೇ ಹೂತುಂಬಿದ ಅನೇಕ ಸಣ್ಣವರ್ತುಲಗಳು, ನಕ್ಷತ್ರ, ಅರ್ಧ ವರ್ತುಲ. ತ್ರಿಕೋನಗಳು. ಮೊಗ್ಗು ಈ ಮುಂತಾದ ಹಲವಾರು ಬಗೆಯ ಅಲಂಕಾರಿಕ ನಕ್ಷೆಗಳನ್ನು ಬಿಡಿಸಲಾಗಿದೆ. ಚಿತ್ತಾಕರ್ಷಕವಾಗಿ ರಚಿಸಲ್ಪಟ್ಟ ಈ ರಚನೆಗಳು ಸ್ಫುಟವಾಗಿ ಕಾಣಬೇಕೆಂಬ ಉದ್ದೇಶದಿಂದ ಕಂಠದ ಮೊನೆಯಿಂದ ಚುಕ್ಕೆಗಳನ್ನು ದಟ್ಟವಾಗಿ ಚಿತ್ರಿಸಿ ಒಂದು ಬಗೆಯ ತಳಹದಿ (Back ground) ನಿರ್ಮಿಸಿ ಒಟ್ಟು ನಕ್ಷೆಗೆ ವಿಶೇಷವಾದ ಕಳೆ ತುಂಬಿದ್ದಾರೆ. ಕಪ್ಪನ್ನಿಡದೇ ಇದ್ದ ಇಂಥ ಅಲಂಕಾರ ಗರಿಗಳು ಸಿಕ್ಕುವುದರಿಂದ ಇವನ್ನು ಕಪ್ಪನಿಟ್ಟ ಮೇಲೆ ಅಂದರೆ ಹೊತ್ತಿಗೆಗೇರಿಸುವ ಸಮಯದಲ್ಲಿ ಜೋಡಿಸಿಕೊಳ್ಳುತ್ತಿದ್ದರೊ ಏನೋ ಎಂಬ ಸಂದೇಹವುಂಟಾಗುತ್ತದೆ. ಇಂತಹ ಅಲಂಕಾರದ ನಕ್ಷೆಗಳನ್ನು ಪ್ರತಿಕಾರರೇ ರಚಿಸಿರಬಹುದಾದ ಸಂಭವ ಹೆಚ್ಚಾಗಿದ್ದರೂ ಓಲೆಕಾರರು ಇಂಥ ಅಲಂಕಾರದ ಗರಿಗಳನ್ನು ಸೇರಿಸಿಯೇ ಮಾರುತ್ತಿದ್ದ ಸಾಧ್ಯತೆ ಇಲ್ಲದಿಲ್ಲ. ಹಲವಾರು ಬಗೆಯ ಜ್ಯಾಮಿತಿ ಅಲಂಕರಣಗಳು ಅವರೊಟ್ಟಿಗೆ ಹೂ ಮೊಗ್ಗು ಗಿಳಿ. ನವಿಲು ನಕ್ಷತ್ರ ಮುಂತಾಗಿ ರಚಿಸಿದ ಚಿತ್ರದ ಅಲಂಕಾರಗಳು ಈ ಕಲೆಯ ವಿವಿಧ ಮುಖಗಳನ್ನು ತೋರಿಸುತ್ತವೆ. ಇಂಥ ಅಲಂಕಾರ ಪಟ್ಟಿಕೆ ಅಥವಾ ಗರಿಗಳನ್ನು ಕಂಡಾಗ ಇವುಗಳಿಗಿಂತ ಬೇರೆಯಾವ ಅಲಂಕಾರ ನಕ್ಷೆ, ಜ್ಯಾಮಿತಿ ನಕ್ಷೆಗಳನ್ನು ರಚಿಸುವುದು ಬಹುಶಃ ಸಾಧ್ಯವಾಗಲಾರದು ಎನ್ನುವಷ್ಟರ ಮಟ್ಟಿಗೆ ಆಯಾ ಉಪಕರಣಗಳನ್ನು ಬಳಸಿ ವಿನ್ಯಾಸಗೈದಿದ್ದಾರೆ. ಇಂಥ ಉಪಕರಣಗಳಿಂದ ಮಾಡಬಹುದಾದ ಅಲಂಕಾರ ಸಾಧ್ಯತೆಗಳೆಲ್ಲವನ್ನು ಹಸ್ತಪ್ರತಿಕಾರರು ಸೂರೆಗೈದಿದ್ದಾರೆ ಎನ್ನುವ ಮಾತು ಅತಿಶಯೋಕ್ತಿಯಾಗಲಾರದು.

ಅನೇಕ ಹಸ್ತಪ್ರತಿಗಳಲ್ಲಿ ಜ್ಯಾಮಿತಿ ನಕ್ಷೆಗಳನ್ನಲ್ಲದೆ ಪ್ರತಿಕಾರನಾದವನು ಈಶ್ವರ ಲಿಂಗ, ನಂದಿ ನವಿಲು, ಗಿಳಿ ಮುಂತಾದವುಗಳನ್ನೂ ಹಾಗೆಯೇ ಶರಣರ ಕಾಲ್ಪನಿಕ ಭಾವಚಿತ್ರಗಳನ್ನೂ ಮತ್ತು ಆಯಾ ಕಾವ್ಯಗಳ ರಸವತ್ತಾದ, ಮಹತ್ವದ ಘಟನೆಗಳನ್ನು ಕೂಡ ಚಿತ್ರಿಸಿದ್ದು ಕಂಡುಬರುವದು. ಇಂತಹ ರಚನೆಗಳು ಸೂಕ್ಷ್ಮ ಕುಂಚದಿಂದ ಎಳೆದ ರೇಖಾಚಿತ್ರಗಳಂತೆ ಭಾಸವಾಗುತ್ತವೆ. ಇಂತಹ ಹಲವು ನಿದರ್ಶನಗಳನ್ನು ವಿವರವಾಗಿ ಇಲ್ಲಿ ವರ್ಣಿಸಬಹುದಾದರೂ ಪ್ರತಿಕಾರನ ಕಲಾಭಿಜ್ಞತೆಯನ್ನು ಎತ್ತಿ ತೋರುವ ಒಂದು ಉದಾಹರಣೆಯನ್ನು ಮಾತ್ರ ಕೊಡಬಯಸುತ್ತೇನೆ.

ಪ್ರೊ. ಉಮಾಪತಿ ಶಾಸ್ತ್ರಿಯವರ ಹಸ್ತಪ್ರತಿ ಸಂಗ್ರಹದಲ್ಲಿಯ (ಕ. ನಂ. ೧೬ ಗ್ರಂ. ನಂ. ೨೯-೩೦) ಶಬರ ಶಂಕರ ವಿಳಾಸ ಮತ್ತು ಗಿರಿಜಾಕಲ್ಯಾಣ ಕಾವ್ಯಗಳಿರುವ ಹಸ್ತ ಪ್ರತಿಯಲ್ಲಿ – ಗಿರಿಜಾಕಲ್ಯಾಣ ಕಾವ್ಯದ ಕೊನೆಯ ತಾಳೆಗರಿಯ ಒಂದು ಮಗ್ಗಲಿಗೆ ಕಿರಾತಾರ್ಜುನೀಯ ಪ್ರಸಂಗವನ್ನು ಕಂಠದಿಂದ ಚಿತ್ರಿಸಲಾಗಿದೆ. ಎಡ ತುದಿಯಿಂದ ಬಲತುದಿಯತ್ತ ಚಿತ್ರದ ವಿವರ ಹೀಗಿದೆ: ಧನುರ್ಧಾರಿಣಿಯಾದ ಪಾರ್ವತಿ. ಅರ್ಜುನ ನನ್ನು ಹೋರಾಟದಲ್ಲಿ ಎದುರಿಸಿ ಬಾಣಗಳನ್ನೆಸೆಯುತ್ತಿರುವ ಶಿವ. ಎದುರ್ಗಡೆ ಅರ್ಜುನ ಶಿವನೊಡನೆ ಕಾದುತ್ತಿದ್ದಾನೆ. ಇಬ್ಬರ ಮಧ್ಯ ಎಸೆಯಲ್ಪಟ್ಟ ಅನೇಕ ಬಾಣಗಳಿವೆ. ಅರ್ಜುನನ ಹಿಂದೆ ವರಾಹವಿದ್ದು ಸುತ್ತಲೂ ಅನೇಕ ಋಷಿಮುನಿಗಳು ಉಗ್ರ ತಪಸ್ಸನ್ನಾಚರಿಸುತ್ತಲಿದ್ದಾರೆ. ಮುಂದೆ ಕೈವಾರದಿಂದ ಮಾಡಿದ ವರ್ತುಲವಿದ್ದು ಅದರಲ್ಲಿ ನಕ್ಷೆಯಿದೆ. ವರ್ತುಲದ ಮೇಲೆ ಚೌಕೋನಾಕೃತಿಯನ್ನು ಬರೆದು ಮಧ್ಯದಲ್ಲಿ ನಂದಿ ವಿಗ್ರಹವನ್ನು ಚಿತ್ರಿಸಿದೆ. ಅದರ ಇನ್ನೊಂದು ಬದಿಗೆ ತಪೋನಿರತರಾದ ಋಷಿ ಗಳಿದ್ದು ಅಲ್ಲಿಯೇ ಒಂದು ವೃಕ್ಷಾಕೃತಿ ಇದೆ. ಆ ಮುಂದೆ ಮತ್ತೆ ಶಿವಪಾರ್ವತಿ ಯರು ಎದುರ್ಗಡೆ ಪಾಶುಪತಾಸ್ತ್ರಕ್ಕಾಗಿ ಅರ್ಜುನ ತಪಗೈಯುತ್ತಿದ್ದಾನೆ. ಕೊನೆ ಯಲ್ಲಿ ಇನ್ನೊಂದು ಮನುಷ್ಯಾಕೃತಿಯಿದ್ದು ಅದರ ಮೇಲೆ ಅಲ್ಲಮಪ್ರಭು ಎಂದು ಬರೆಯಲಾಗಿದೆ. ಈ ಚಿತ್ರದ ಮೇಲ್ಭಾಗ ಮತ್ತು ಕೆಳಭಾಗಗಳಲ್ಲಿ ವಿವರಣಾತ್ಮಕ ಬರಹವಿದೆ. ಶಬರರೂಪದ ಶಿವಪಾರ್ವತಿಯರ ಮೇಲ್ಗಡೆ ಪುಳುಂಬೆ । ಪುಳುಂಬ ಎಂದೂ ಅರ್ಜುನನ ಮೇಲೆ ಫಲ್ಗುಣ । ಎಂದೂ ವರಾಹನ ಕೆಳಗಡೆ ಮೂಕದಾನವ ॥ ಎಂದೂ ವರ್ತುಲಾಕೃತಿಯ ಒಂದು ಮಗ್ಗಲಲ್ಲಿ ಇಂದ್ರಕೀಲ ಪರ್ವತ ॥ ಎಂದು ಮುಂತಾಗಿ ಬರೆದು ನೀಡಿದ ವಿವರಣೆ ಕಿರಾತಾರ್ಜುನೀಯ ಪ್ರಸಂಗವನ್ನು ಕಣ್ಗೆ ಕಟ್ಟುವಂತೆ ಮಾಡಿದೆ. ಈ ಪ್ರಸಂಗದ ಮಹತ್ವದ ಘಟನೆಗಳನ್ನು ಅತ್ಯಂತ ಆಕರ್ಷಕ ವಾಗಿ ನಿರೂಪಿಸುವ ಈ ಚಿತ್ರವು ಚಿತ್ರಕಾರನೂ ಆಗಿರಬಹುದಾದ ಪ್ರತಿಕಾರನ ಸಮೃದ್ಧ ಕಲ್ಪನೆಯ ದ್ಯೋತಕವಾಗಿದೆ. ತಾನು ಪ್ರತಿಗೈಯುತ್ತಿದ್ದ ಕೃತಿಯಲ್ಲಿನ ಸನ್ನಿವೇಶವನ್ನು ಚಾಕ್ಷುಕ್ಷಗೊಳಿಸಿದ ಅವನ ಕೌಶಲ ಮೆಚ್ಚುವಂಥದು. ಈ ಚಿತ್ರದಲ್ಲಿಯ ಸಂಯೋಜನೆ, ಸಮತೋಲ ರೇಖಾವಿನ್ಯಾಸ. ಅಲಂಕಾರ ವಿಧಾನ ಪ್ರಶಂಸನೀಯವಾದವುಗಳಾಗಿವೆ.

ಕೈವಾರ, ರೇಖಾಪಟ್ಟಿ ಮತ್ತು ಕಂಠದ ಸಹಾಯದಿಂದ ಓಲೆಗರಿಯ ಮೇಲೆ ರಚಿಸಿದ ಕಲಾತ್ಮಕ ನಕ್ಷೆಗಳ, ಭಾವಚಿತ್ರಗಳ. ಕಾವ್ಯಪ್ರಸಂಗಗಳ ಉದಾಹರಣೆಗಳನ್ನು ಕೊಡಬಹುದಾದರೂ, ಅಂಥವುಗಳನ್ನು ಕಂಡು ಆನಂದಿಸುವುದೇ ಮೇಲು ಎನ್ನ ಬಹುದು ಯಾಕೆಂದರೆ ಎಂಥ ಸೂಕ್ಷ್ಮ ಸಂಗತಿಯು ವಿವರಣೆಯೂ ಆ ಚಿತ್ರದ ವಿನ್ಯಾಸ ಸೌಂದರ್ಯದ ಕಲ್ಪನೆಯನ್ನು ಮಾಡಿಕೊಡಲಾರದು. ಈ ಮೇಲೆ ಕೊಡಮಾಡಿದ ಕಂಠದಿಂದ ಬರೆದ ನಕ್ಷೆಗಳ ಮತ್ತು ಚಿತ್ರದ ವಿವರಣೆಯು ಕಲಾಸಕ್ತರ ದೃಷ್ಟಿಯನ್ನು ಆ ದೆಸೆಯಲ್ಲಿ ಹರಿಸಲು ಮಾತ್ರ ಎಂದು ಹೇಳಬಹುದು.

ಹಸ್ತಪ್ರತಿಗಳ ಗರಿಗಳಲ್ಲಿ ಕೈವಾರ, ರೇಖಾಪಟ್ಟಿಗಳನ್ನು ಬಳಸಿಕೊಂಡು ಕಂಠ ದಿಂದ ರಚಿಸಿದ ನಕ್ಷೆಗಳು. ಚಿತ್ರಗಳು ಅಧಿಕ ಸಂಖ್ಯೆಯಲ್ಲಿ ದೊರಕುತ್ತದೆಯಾದರೂ ತಾಳೆಗರಿಯ ಮೇಲೆ ವರ್ಣ ಚಿತ್ರಗಳನ್ನು ರಚಿಸುತ್ತಿದ್ದ ನಿದರ್ಶನಗಳು ಕರ್ನಾಟಕದಲ್ಲಿ ವಿರಳವೆಂದೇ ಹೇಳಬೇಕು. ವಿನ್ಯಾಸ ಮತ್ತು ಸೌಂದರ್ಯದ ದೃಷ್ಟಿಯಿಂದ ಇಂಥ ಪ್ರತಿಗಳು ಮಹತ್ವದವಾಗುತ್ತವೆ. ಗರಿಗಳ ಮೇಲೆ ಬಣ್ಣಗಳು ಬಹಳ ಕಾಲ ನಿಲ್ಲು ವುದಿಲ್ಲ. ಎಂಬುದೇನೋ ನಿಜ. ಆದಾಗ್ಯೂ ಗರಿಗೆ ಬಿಳಿವರ್ಣದ ದಟ್ಟವಾದ ಲೇಪ ವನ್ನು ಮಾಡಿ ಆ ತಳಹದಿಯ ಮೇಲೆ ವರ್ಣಚಿತ್ರಗಳನ್ನು ಬಿಡಿಸಿದ್ದು ಲೇಖನಿಯಿಂದ ಬರೆದದ್ದು ಕಂಡು ಬರುತ್ತದೆ.

ಪ್ರೊ. ಉಮಾಪತಿಶಾಸ್ತ್ರಿಗಳ ಸಂಗ್ರಹದಲ್ಲಿರುವ ೨೯ನೆಯ ನಂಬರಿನ ಹಸ್ತ ಪ್ರತಿಯಲ್ಲಿ ವರ್ಣಚಿತ್ರಗಳನ್ನು ಬಿಡಿಸಿದ ಗರಿಗಳನ್ನು ಗ್ರಂಥದ ಆರಂಭ ಮತ್ತು ಕೊನೆಯಲ್ಲಿ ಜೋಡಿಸಿದ್ದಿರಬೇಕೆಂಬುದು ತಿಳಿಯುತ್ತದೆ. ದುರ್ದೈವದ ಸಂಗತಿ ಯೆಂದರೆ ಆ ವರ್ಣ ಚಿತ್ರಗಳು ಗುರುತಿಸಲು ಬಾರದಷ್ಟು ನಾಶವಾಗಿ ಅಲ್ಲಲ್ಲಿ ಹಳದಿ, ಕೆಂಪು, ನೀಲಮಿಶ್ರ ಹಸಿರುಬಣ್ಣದ ಹಕ್ಕಳಿಗಳು ಮಾತ್ರ ಕಾಣಸಿಗುತ್ತವೆ. ಕನ್ನಡ ಹಸ್ತಪ್ರತಿಗಳಲ್ಲಿ ಓಲೆಗರಿಯ ಮೇಲೆ ರಚಿಸಿದ ವರ್ಣಚಿತ್ರಗಳನ್ನೊಳಗೊಂಡ ಮತ್ತು ಸುಸ್ಥಿತಿಯಲ್ಲಿರುವ ಗ್ರಂಥಗಳೆಂದರೆ ಮೂಡಬಿದರೆಯ ಜೈನ ಮಠದಲ್ಲಿರುವ ಧವಲಾ, ಜಯಧವಲ ಮತ್ತು ಮಹಾಧವಲ ಎಂಬ ಕೃತಿಯ ಹಸ್ತಪ್ರತಿಗಳು. ಇವುಗಳಲ್ಲಿ ತೀರ್ಥಂಕರರ, ಜಿನಮುನಿಗಳ ಮತ್ತು ಯಕ್ಷಯಕ್ಷಿಯರ ಸತ್ವಪೂರ್ಣವಾದ ಚಿತ್ರ ಗಳನ್ನು ಗರಿಯ ಎರಡೂ ಮಗ್ಗಲುಗಳಲ್ಲಿ ಚಿತ್ರಿಸಿ. ಓಲೆಯ ಮಧ್ಯದಲ್ಲಿ ಮಾತ್ರ ಗ್ರಂಥದ ಬರಹವನ್ನು ಬರೆಯಲಾಗಿದೆ. ಈ ಹಸ್ತಪ್ರತಿಯನ್ನು ಕಂಠದಿಂದ ಬರೆಯದೆ ಕಪ್ಪು ಶಾಯಿ ಮತ್ತು ಲೇಖನಿಯಿಂದ ಬರೆಯಲಾಗಿದೆ. ಈ ಹಸ್ತಪ್ರತಿಯ ವಿನ್ಯಾಸ–ಸೌಂದರ್ಯಗಳನ್ನು ಸರಿಗಟ್ಟಬಲ್ಲ ಪ್ರತಿಗಳು ಸಿಕ್ಕುವದು ಕಷ್ಟ. ತೀರ್ಥಂಕರ. ಯಕ್ಷಿ ಮೊದಲಾದ ಮಾನವಾಕೃತಿಗಳನ್ನು. ಗಿಡ ಬಳ್ಳಿ ನಕ್ಷೆ ಮೊದಲಾದವುಗಳನ್ನು ಚಿತ್ರಿಸು ವಲ್ಲಿ ಕಲಾವಿದನು ಮೆರೆದಿರುವ ಕಲಾ ಪ್ರೌಢಿಮೆಗೆ ತಲೆದೂಗಬೇಕಾಗುತ್ತದೆ. ಚಿತ್ರ ಗಳ ಆಯಾ ಆಕೃತಿಗಳಿಗೆ ಹಾಕಿದ ಅಂಚುಗೆರೆ (Outline) ಯಲ್ಲಿರುವ ಲಾಲಿತ್ಯ

ಮತ್ತು ಸತ್ವ ಅದರಂತೆ ಚಿತ್ರಗಳಲ್ಲಿನ ಸಂಯೋಜನೆ ಮೆಚ್ಚಿ ಕೊಂಡಾಡುವಂತಹವು ಗಳು. ಈ ಹಸ್ತಪ್ರತಿಯ ಸೌಂದರ್ಯದ ಬಗೆಗೆ ಕೊಡಮಾಡುವ ವಿವರಣೆ ಎಷ್ಟಿದ್ದರು ಅದು ಕಡಿಮೆಯೆ ಎನ್ನಬಹುದಾಗಿದೆ.[೧೮]

ಹಸ್ತಪ್ರತಿಗಳ ಸೌಂದರ್ಯದ ಬಗೆಗೆ ವಿಚಾರಿಸುವಾಗ ಪ್ರಥಮವಾಗಿ ಗಮನಿಸ ಬೇಕಾದುದು ಹಸ್ತಪ್ರತಿಗಳ ರಕ್ಷಾಫಲಕಗಳನ್ನು. ಓಲೆಗಳನ್ನು ಹವಗೊಳಿಸಿ ಕಟ್ಟುಕಟ್ಟಿ ಕೊಡುತ್ತಿದ್ದ ಓಲೆಯವರೆ ಬಹುಶಃ ಇಂಥ ಫಲಕಗಳನ್ನು ತಯಾರಿಸಿ ಕೊಡುತ್ತಿದ್ದಿರ ಬೇಕು. ಫಲಕಗಳ ಒಳ ಮತ್ತು ಹೊರ ಮೈಯನ್ನು ನಯಗೊಳಿಸಿದ ಮೇಲೆ ಹವ್ಯಾಸಿ ಚಿತ್ರಕಾರರಾಗಲಿ ನುರಿತ ಚಿತ್ರಕಾರರಾಗಲಿ ಚಿತ್ರ ಬರೆಯುತ್ತಿದ್ದಿರಬೇಕು. ಕೆಲವು ಹಸ್ತಪ್ರತಿಗಳ ಮೇಲಿನ ಅಪ್ರಬುದ್ಧ ಶೈಲಿಯ ಚಿತ್ರಗಳನ್ನು ಇನ್ನು ಕೆಲವು ಹಸ್ತ ಪ್ರತಿಗಳ ಮೇಲಿನ ಪ್ರಬುದ್ಧ ಶೈಲಿಯ ಚಿತ್ರಗಳನ್ನು ಕಂಡಾಗ ಈ ಅಭಿಪ್ರಾಯವು ಖಚಿತವಾಗುತ್ತದೆ. ಇಂಥ ಚಿತ್ರಕಾರರ ಕುಶಲ ಹಸ್ತದಿಂದ ಮೂಡಿಬಂದ ಚಿತ್ರಗಳು ವೈವಿಧ್ಯ ಪೂರ್ಣವಾದವುಗಳು: ವೈಶಿಷ್ಟ್ಯ ಪೂರ್ಣವಾದವುಗಳು. ಅಲಂಕಾರಿಕ ನಕ್ಷೆ, ಶಿವನೋಲಗ. ಕೃಷ್ಣಲೀಲೆ ರಾಮನೋಲಗ, ಜಿನ ಮೂರ್ತಿಗಳು, ಶರಣರ ಭಾವ ಚಿತ್ರಗಳು, ಹಸ್ತಪ್ರತಿಯ ಕಾವ್ಯವಸ್ತು ಅಥವಾ ಕಾವ್ಯ ನಾಯಕನ ಜೀವನದ ಮುಖ್ಯ ಘಟನೆಗಳ ಚಿತ್ರ ಸರಣಿ ಹೀಗೆ ಹಲವಾರು ಜನಪ್ರಿಯವಾದ, ಆಯಾ ಕಾವ್ಯಗಳಿಗೆ ಒಪ್ಪುವ ಜನತೆಯ ಧಾರ್ಮಿಕ ಭಾವನೆಗೆ ರಸದೂಟವಾಗುವ ಚಿತ್ರಗಳನ್ನು ಅವರು ರಚಿಸಿದ್ದುಂಟು. ಇವುಗಳಲ್ಲಿಯೇ ಪಾರ್ವತಿ ಸಮೇತನಾದ ಶಿವ, ಗಣಪತಿ, ವೀರಭದ್ರ ಷಣ್ಮುಖರೊಂದಿಗೆ ವಿರಾಜಮಾನನಾಗಿದ್ದು ಅವರ ಎದುರಿಗೆ ಇಲ್ಲವೆ ಬದಿಗೆ ನಂದಿ, ನೃತ್ಯನಿರತ ಭೃಂಗಿ ತುಂಬುರು ನಾರದ ಶುಕಮುನಿ ? (ಮನುಷ್ಯ ಶರೀರಿ ಗಿಳಿಮುಖದವ) ಹೀಗೆ ಶಿವನ ಪರಿವಾರದ ಓಲಗದ ಚಿತ್ರಗಳು. ಗಣಪತಿ ಸರಸ್ವತಿಯರ ಚಿತ್ರಗಳು ಶಿವಲಿಂಗ ಅದರ ಎರಡೂ ಮಗ್ಗುಲಿಗೆ ನಂದಿಗಳು ಇಲ್ಲವೆ ಶಿವಾರಾಧನೆಯಲ್ಲಿ ತೊಡಗಿದ ಭಕ್ತ ಅಥವಾ ಮೃಗಶರೀರಿ ಮಾನವನ ಚಿತ್ರ. ಎಲೆ ಹೂ, ಹೂಗೊಂಚಲುಗಳ ಸತ್ವ ಪೂರ್ಣ ನಕ್ಷೆ ಈ ಮೊದಲಾದವುಗಳು ಅತ್ಯಂತ ಜನಪ್ರಿಯವಾದವುಗಳೆಂದು ಹೇಳ ಬಹುದಾಗಿದೆ. ಈ ಚಿತ್ರಕಾರರು ತಮಗೆ ಅವಕಾಶಸಿಕ್ಕಾಗ ಜನತೆಯ ಒಲವನ್ನು ಗಮನದಲ್ಲಿಟ್ಟುಕೊಂಡು ವರ್ಣಮಯ ಫಲಕಗಳನ್ನು ತಯಾರಿಸಿ ಇಡುತ್ತಿದ್ದಿರಬೇಕು.

---

೧೮ ಈ ಹಸ್ತಪ್ರತಿಯಲ್ಲಿನ ಚಿತ್ರಗಳ ಮಾದರಿಗೆ ಅವುಗಳ ವಿವರವಾದ ಮಾಹಿತಿಗೆ ಡಾ. ಶಿವರಾಮ ಕಾರಂತರ 'ಕರ್ನಾಟಕದ ಚಿತ್ರಕಲೆ' ಎಂಬ ಗ್ರಂಥದ ೪-೫-೬ ವರ್ಣಚಿತ್ರಗಳನ್ನೂ, ವಿವರಣೆಗೆ ೪೦ ರಿಂದ ೪೫ ರ ವರೆಗಿನ ಪುಟಗಳನ್ನು ನೋಡಬಹುದು.

ಆಗ ಕೊಳ್ಳುವವರು ತಮಗೆ ಇಷ್ಟವಾದದನ್ನು ಆಯ್ದುಕೊಳ್ಳುತ್ತಿದ್ದಿರಬೇಕು.[೧೯] ಅನೇಕ ಸಂದರ್ಭಗಳಲ್ಲಿ ಹಸ್ತಪ್ರತಿಗಳನ್ನು ಮಾಡಿಸುತ್ತಿದ್ದ ಒಡೆಯನ ಇಚ್ಛೆಯಂತೆ ಅಥವಾ ಪ್ರತಿಕಾರನ ಆಶಯದಂತೆ ವರ್ಣಚಿತ್ರಗಳನ್ನು ಚಿತ್ರಕಾರರು ಬರೆಯಬೇಕಾಗುತ್ತಿತ್ತೆನ್ನಬಹುದು. ಇಂಥ ಒಡೆಯರು ತಮ್ಮ ಅಂತಸ್ತಿಗೆ ತಕ್ಕಹಾಗೆ ತಮ್ಮ ಆಸಕ್ತಿ, ಶ್ರದ್ಧೆಗಳಿಗನುಗುಣವಾಗಿ ಫಲಕಗಳನ್ನು ತಯಾರಿಸುವಂತೆ ಬಯಸುತ್ತಿದ್ದರು. ಇಂಥ ರಕ್ಷಾ ಫಲಕಗಳು ಓಲೆಗರಿಗಳಿಗೆ ರಕ್ಷಣೆ ಕೊಡುವುದರ ಜೊತೆಗೆ ಹಸ್ತಪ್ರತಿಯ ಅಂದವನ್ನು ಹೆಚ್ಚಿಸುತ್ತಿದ್ದವು ಅಲ್ಲದೆ ನೋಡುಗನಲ್ಲಿ ಭಕ್ತಿ. ಪೂಜ್ಯತೆಗಳನ್ನು ಮೂಡಿಸುತ್ತಿದ್ದವು. ಇವು ಹಿಂದೆ ಆಯಾ ವ್ಯಕ್ತಿಯ ಹೆಮ್ಮೆಯ ವಸ್ತುವಾಗಿರುತ್ತಿದ್ದರೆ ಇಂದು ನಾಡಿನ ಕಲಾವಸ್ತುಗಳಾಗಿ ಗೌರವ ಪಡೆಯುತ್ತವೆ ಎನ್ನಬಹುದು.

ಈ ಕಲಾಪೂರ್ಣ ರಕ್ಷಾಫಲಕಗಳ ವಿನ್ಯಾಸವು ಸಾಮಾನ್ಯವಾಗಿ ಹೀಗಿರುತ್ತದೆ: ವಿಶೇಷವಾಗಿ ಕೆಂಪು ವರ್ಣವನ್ನೇ ಲೇಪಿಸಿದ ಫಲಕದ ಸುತ್ತಲೂ ಇಳಿಜಾರಾದ ಅಂಚು ಇದ್ದು ತಾವು ಮಧ್ಯದಲ್ಲಿ ರಚಿಸುವ ಚಿತ್ರಕ್ಕೆ ಒಂದು ಚೌಕಟ್ಟನ್ನು ನಿರ್ಮಿಸಿಕೊಳ್ಳುವಂತೆ ಸುತ್ತಲೂ ಒಂದು ಬಣ್ಣದ ಅಂಚುಪಟ್ಟಿಯನ್ನು ಎಳೆದು ಆ ಪಟ್ಟಿಯಲ್ಲಿ ಇನ್ನೊಂದು ಬಣ್ಣದಿಂದ ಓರೆಯಾಗಿ ಅಥವಾ ನೇರವಾಗಿ ಎಳೆದ ಕುಂಚದ ಗೆರೆಗಳಿಂದಲೋ. ಹೂ ಎಲೆಗಳಿಂದಲೋ. ಮುತ್ತಿನಂತೆ ಕಾಣುವ ಬಿಳಿವರ್ಣದ ಚುಕ್ಕೆಗಳನ್ನಿಟ್ಟೋ ಅಲಂಕರಿಸುತ್ತಿದ್ದರು. ಈ ಅಂಚು ಪಟ್ಟಿಗಳಲ್ಲಿ ಕರಿ. ಹಳದಿ. ಬಿಳಿ ಬಣ್ಣಗಳು ಪ್ರಧಾನವಾಗಿ ಬಳಕೆಗೊಂಡಿದ್ದು ಅದರಲ್ಲಿನ ಸುಳಿವು. ನಕ್ಷೆಗಳಿಗಾಗಿ ಹಸಿರು. ಕೆಂಪು, ಬಿಳಿ, ಬಿಳಿ ಮಿಶ್ರ ಕೆಂಪು. ಸುನೇರಿ ಮುಂತಾದ ಬಣ್ಣಗಳನ್ನು ಬಳಸಿಕೊಂಡಿರುವುದು ಕಂಡು ಬರುತ್ತದೆ.

ಈ ವರ್ಣಚಿತ್ರಗಳಿಂದ ಕೂಡಿದ ಫಲಕಗಳನ್ನು ಪರಿಶೀಲಿಸಿದಾಗ ಇಂಥ ಚಿತ್ರಗಳನ್ನು ಬರೆಯುವ ವಿಧಾನ ಹೇಗಿತ್ತು ಎಂಬುದೊಂದು ಪ್ರಶ್ನೆ ಏಳುವುದು ಸ್ವಾಭಾವಿಕವಾಗಿದೆ. ಅವರು ಚಿತ್ರ ಬರೆಯುವ ವಿಧಾನ ಬಹುಶಃ ಹೀಗಿರಬಹುದಾಗಿದೆ. ರಕ್ಷಾಫಲಕಗಳು ವಿಶೇಷವಾಗಿ ನಯವಾದ ಕಟ್ಟಿಗೆಯುವಾಗಿದ್ದು. ಇದರ ಮೇಲೆ ನೇರವಾಗಿ ಅಥವಾ ಫಲಕದ ಮೇಲೆ ಬಟ್ಟೆಯನ್ನು ಅಂಟಿಸಿಯಾಗಲಿ. ಅಥವಾ ಮಧ್ಯದಲ್ಲಿ ದಪ್ಪವಾದ ಕಟ್ಟನ್ನಿರಿಸಿ ಮೇಲೆ ಬಟ್ಟೆ ಹಚ್ಚಿ ಅದಕ್ಕೆ ಬಿಳಿವರ್ಣದ ದಟ್ಟ ಲೇಪನ ಗೈದು

---

೧೯ ನಾನು ಸಮೀಕ್ಷಿಸಿದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸಂಗ್ರಹದಲ್ಲಿನ ೮೩೦ನೆಯ ಕಟ್ಟಿನ ಫಲಕಗಳ ಮೇಲೆ ತಳಹದಿಗೆ ಹಸಿರು ಬಣ್ಣವನ್ನು ಬಳಿಯಲಾಗಿದ್ದು ಅದರ ಮೇಲೆ ಹಳದಿ ಕೆಂಪು ಬಣ್ಣಗಳಿಂದ ನೈಸರ್ಗಿಕ ಅಲಂಕಾರ ನಕ್ಷೆಗಳನ್ನು ಚಿತ್ರಿಸಿದ್ದಾರೆ. ಆದರೆ. ಒಳಗಿರುವ ತಾಳೆಗರಿಗಳಲ್ಲಿ ಏನನ್ನು ಬರೆದಿಲ್ಲದಿರುವುದು ಗಮನಾರ್ಹ ಇದನ್ನು ಲಕ್ಷಿಸಿದಾಗ ವರ್ಣಮಯ ಚಿತ್ರಫಲಕಗಳೊಂದಿಗೆ ಓಲೆಗರಿ ಕಟ್ಟುಗಳು ಮಾರಲು ಸಿಕ್ಕುತ್ತಿರಬೇಕು ಎಂದೆನಿಸುತ್ತದೆ.

ವರ್ಣಚಿತ್ರ ಬಿಡಿಸಲು ಬೇಕಾದ ಮೇಲ್ಮೈ[೨೦]ಯನ್ನು ತಯಾರಿಸಿಕೊಳ್ಳುತ್ತಿದ್ದರು. ಇದರ ಮೇಲೆ ಒಂದು ಬಣ್ಣವನ್ನು (ಸಾಮಾನ್ಯವಾಗಿ ಕೆಂಪು) ಹಚ್ಚಿ ಆ ಮೇಲೆ ತಾವು ರಚಿಸಬೇಕಾದ ಚಿತ್ರವನ್ನು ರಚಿಸುತ್ತಿದ್ದರು. ರೇಖೆಗಳಿಂದ ಇಡೀ ಚಿತ್ರವನ್ನು ಗುರುತಿಸಿಕೊಂಡು ಆ ಮೇಲೆ ಬಣ್ಣ ತುಂಬುವುದು ಇಂದಿನ ಸಾಮಾನ್ಯ ವಿಧಾನವಾಗಿದ್ದರೂ ಹಸ್ತಪ್ರತಿ–ಫಲಕಗಳ ಚಿತ್ರಕಾರರು ಈ ವಿಧಾನವನ್ನು ಬಳಸಿಕೊಂಡವರಲ್ಲ. ಮನುಷ್ಯ, ಪಕ್ಷಿ ಮಂಟಪ ಆಸನ ಆಭರಣ ಈ ಯಾವುದೇ ಚಿತ್ರವನ್ನು ಯಾವ ಬಣ್ಣದಿಂದ ಬರೆಯಲು ನಿರ್ಧರಿಸಿಕೊಂಡಿರುತ್ತಿದ್ದರೋ ಆಯಾ ಆಕೃತಿಗಳಂತೆ ಆ ಬಣ್ಣವನ್ನು ಮೊದಲು ತುಂಬಿಕೊಳ್ಳುತ್ತಿದ್ದರು. ಅನಂತರ ಕಪ್ಪು ಮಸಿಯಲ್ಲಿ ಅದ್ದಿದ ಲೇಖನಿಯಿಂದಲೋ ಅಥವಾ ಕಪ್ಪು ವರ್ಣದಲ್ಲಿ ಅದ್ದಿದ ಕುಂಚದಿಂದಲೋ ಬಾಹ್ಯ ರೇಖೆಯನ್ನೆಳೆದು ಚಿತ್ರದ ಎಲ್ಲ ವಿವರಗಳನ್ನು ಸೂಕ್ಷ್ಮಗಳನ್ನು ಸ್ಫುಟವಾಗಿ ಕಾಣುವಂತೆ ಚಿತ್ರಿಸುತ್ತಿದ್ದರು. ಚಿತ್ರ ಪೂರ್ಣಗೊಂಡ ಮೇಲೆ ಚಿತ್ರಕ್ಕೆ ಹೊಳಪು ಮತ್ತು ತಾಜಾತನ (Freshness) ಉಳಿಯುವಂತೆ ವಾರ್ನಿಶದಂತಹ ಲೇಪವೊಂದನ್ನು ಕೊಡುತ್ತಿದ್ದರು ಎಂಬುದು ತಿಳಿದು ಬರುತ್ತದೆ.

ಈ ಚಿತ್ರಕಾರರು ಚಿತ್ರರಚನೆಗಾಗಿ ಬಳಸಿಕೊಂಡ ಬಣ್ಣಗಳ ಸಂಖ್ಯೆ ಕಡಿಮೆ. ಪ್ರಧಾನವಾಗಿ ಮೂಲವರ್ಣಗಳಾದ ಕೆಂಪು, ಹಳದಿ ಕ್ವಚಿತ್ತಾಗಿ ನೀಲಿ ಬಣ್ಣಗಳನ್ನಲ್ಲದೆ, ಮಿಶ್ರ ಬಣ್ಣಗಳಾದ ಹಸಿರು. ತೆಳುಹಸಿರು. ಹಳದಿ ಮಿಶ್ರ ಬಿಳಿ. ಕೆಂಪು ಮಿಶ್ರ ಬಿಳಿ. ಕಡುಗುಲಾಬಿ. ಸುನೇರಿ ವರ್ಣಗಳನ್ನು ಮೂಲ ವರ್ಣಗಳು ಕಡಿಮೆಯಿದ್ದರೂ ಬಿಳಿ ವರ್ಣದೊಂದಿಗೆ ಇನ್ನುಳಿದ ಬಣ್ಣಗಳನ್ನು ಮಿಶ್ರಗೊಳಿಸುವುದರ ಮೂಲಕ ವರ್ಣ ಶ್ರೇಣಿಯನ್ನು ಹೆಚ್ಚಿಸಿಕೊಂಡಿದ್ದು ತಿಳಿದು ಬರುತ್ತದೆ. ಕಪ್ಪು ವರ್ಣವಂತೂ ಚಿತ್ರಕ್ಕೆ ಜೀವಕಳೆಯನ್ನು ತುಂಬುವ ಬಣ್ಣವಾಗಿತ್ತೆಂದು ಹೇಳಬಹುದಾಗಿದೆ.

---

೨೦ ಈ ಮೇಲ್ಮೈಯನ್ನು ತಯಾರಿಸಿಕೊಳ್ಳುವುದು ಹೇಗೆ ಎಂಬುವರ ಬಗ್ಗೆ ಡಾ. ಬೆಂಜಮಿನ್ ಹೈನ್ ಸಂಗ್ರಹಿಸಿದ ವಿವರ ಈ ಕೆಳಗಿನಂತಿದೆ.

"To make the ground for any colour take Senkusudda (the finest levigated pipeclay) mix it with a little gum and water, and lay it on the walls or plank which is to be coloured; it is afterwords to be rubbed with a stone till it becomes quite smooth. 'On this ground. . . . colours . . . are to be laid" —Mysore Gazetteear – Vol. II Part I (1930) Ed by C. Hayavadana Rao – Page 341 ಇಲ್ಲಿಯೇ ಅನೇಕ ಬಣ್ಣಗಳನ್ನು ತಯಾರಿಸಿಕೊಳ್ಳುವ ವಿಧಾನದ ವಿವರವನ್ನು ಅವರು ಕೊಟ್ಟದ್ದುಂಟು.

ಇಷ್ಟೆಲ್ಲಾ ಸಾಧನ ಸಲಕರಣೆ, ಶ್ರೀಮಂತ ಕಲ್ಪನೆ ಮತ್ತು ನೈಪುಣ್ಯಗಳಿಂದ ಚಿತ್ರಿಸಿದ ಫಲಕಗಳು ಒಂದೆಡೆ ಕೆಂಪು ಇಲ್ಲವೆ ಹಳದಿ ತಳಹದಿಯ ಮೇಲೆ ಅಂಚಿನ ಗುಂಟ ಬೆರಳಗಲದ ಚಿತ್ತಾರದ ಪಟ್ಟಿಯನ್ನು ಹೊತ್ತ ಸಾಧಾರಣ ಅಲಂಕಾರವಾಗಿದ್ದರೆ ಇನ್ನೊಂದೆಡೆ ಕಾವ್ಯ ವಸ್ತುವಿನ ಹಲವು ಪ್ರಸಂಗಗಳನ್ನು ಚಾಕ್ಷುಷಗೊಳಿಸಿದ ಅನುಪಮ ಕಲಾಕೃತಿಗಳಾಗಿವೆ. ಹೀಗೆ ಹಸ್ತಪ್ರತಿಯ ಚೆಲುವನ್ನು ಹೆಚ್ಚಿಸಲು ಕಾರಣವಾದ ರಕ್ಷಾಫಲಕಗಳ ಒಂದೆರಡು ಉದಾಹರಣೆಗಳನ್ನಿಲ್ಲಿ ವಿವರಿಸಿ ಹೇಳಬಹುದಾಗಿದೆ.

೧. ಪ್ರೊ. ಉಮಾಪತಿ ಶಾಸ್ತ್ರಿಯವರ ಸಂಗ್ರಹದಲ್ಲಿರುವ ಒಂದು ರಕ್ಷಾ ಫಲಕದ ಮೇಲಿನ ಚಿತ್ರವು ಅಧಿಕವಾಗಿ ರಕ್ಷಾಫಲಕಗಳ ಮೇಲೆ ಕಂಡುಬರುವ ಶಿವನ ಓಲಗದ ಚಿತ್ರವಾಗಿದ್ದರೂ ವೈಶಿಷ್ಟಪೂರ್ಣವಾದುದು. ಸಂಪೂರ್ಣ ಕಪ್ಪು ಬಣ್ಣದ ತಳಹದಿಯನ್ನು ಹೊಂದಿದ ಈ ಫಲಕದ ಸುತ್ತಲಿನ ಅಂಚು ಬಿಳಿ ಸುನೇರಿ ವರ್ಣದ ರೇಖೆಗಳ ಮಧ್ಯ ಚಿನ್ನದ ಸರಪಳಿಯಂತಿರುವ ನಕ್ಷೆ ಹಾಗೆಯೇ ಸಣ್ಣ ಸಣ್ಣ ಗುಲಾಬಿ, ಬಿಳಿವರ್ಣದ ಹೂವು ಸುನೇರಿ ವರ್ಣದ ಎಲೆಗಳ ನಕ್ಷೆಯಿಂದ ಕೂಡಿ ತುಂಬಾ ಆಕರ್ಷಕ ವಾಗಿದೆ. ಇಂತಹ ಅಪೂರ್ವ ಚೌಕಟ್ಟಿನ ಅಲಂಕಾರದಲ್ಲಿ ಮಧ್ಯ ಶಿವಪಾರ್ವತಿ ಸಮೇತ ಅಲಂಕೃತ ನಂದಿಯನ್ನೇರಿ ಕುಳಿತ ಚಿತ್ರವಿದೆ. ಒಂದು ಬದಿಗೆ ಕೈಯಲ್ಲಿ ತಳಿಗೆಯನ್ನು ಹಿಡಿದು ನಿಂತ ಸ್ತ್ರೀ ಚಿತ್ರ. ಅವಳ ಹಿಂದುಗಡೆ ಅಂಗಿ ಧೋತ್ರ ಧರಿಸಿ ತಲೆಗೆ ಪೇಟ ಸುತ್ತಿ ಕೈಮುಗಿದು ನಿಂತ ಪುರುಷ. ಅವಳ ಮುಂದುಗಡೆಯಲ್ಲಿ ಶಿವನಿಗೆ ಶ್ವೇತಛತ್ರವನ್ನು ಹಿಡಿದು ಸೇವೆ ಸಲ್ಲಿಸುತ್ತಿರುವ ಧೋತರ, ಬರಿಮೈ ಕೀರಿಟ ಧಾರಿಯಾದ ಸೇವಕ. ಶಿವನ ಇನ್ನೊಂದು ಮಗ್ಗಲಿಗೆ ಒಬ್ಬ ಸ್ತ್ರಿ, ಮುಂದೆ ನರ್ತಿಸು ತ್ತಿರುವ ಭೃಂಗಿಯ ಅಪೂರ್ವ ಚಿತ್ರವಿದೆ. ಎರಡು ಕಾಲನ್ನೂರಿ ಒಂದು ಕಾಲನ್ನು ಪಕ್ಕಕ್ಕೆ ತೂರಿ ನರ್ತಿಸುತ್ತಿರುವ ಭೃಂಗಿಯ ಚಿತ್ರ ಒಮ್ಮೆಲೆ ಆಕರ್ಷಿಸುವಂತಹದು. ಭೃಂಗಿಯ ವೇಷ ಭೂಷಣಗಳು ಅದರಲ್ಲಿಯೂ ಅವನು ಧರಿಸಿದ ಕಿರೀಟವು ಗ್ರೀಕ ದೇವತೆಗಳ ಶಿರೋಭೂಷಣದಂತೆ ಕುದುರೆಯ ಗೋಣನ್ನೇ ಕಿರೀಟವನ್ನಾಗಿ ಧರಿಸಿ ಕೊಂಡಂತಿದೆ. ಚಿತ್ರದ ಬರಿಯ ಸ್ಥಳವನ್ನು ತುಂಬಿಕೊಳ್ಳಲು ಸುನೇರಿ, ಬಿಳಿ, ಗುಲಾಬಿ ಬಣ್ಣಗಳಿಂದ ರಚಿಸಿದ ಹೂ ದೇಟುಗಳು ಇಡೀ ಚಿತ್ರಕ್ಕೆ ಹೊಂದಿಕೊಂಡು ಮೆರಗನ್ನೀಯುತ್ತಿವೆ. ಈ ಫಲಕದ ಚಿತ್ರಶೈಲಿಯು ಲೇಪಾಕ್ಷಿಯ ಭಿತ್ತಿಚಿತ್ರಗಳ ನೆನಪನ್ನು ತರುತ್ತದೆ. ಶ್ರೀ ಶಾಸ್ತ್ರಿಗಳವರ ಸಂಗ್ರಹದಲ್ಲಿಯೂ ಕನ್ನಡ ಅಧ್ಯಯನ ಪೀಠದ ಸಂಗ್ರಹದಲ್ಲಿಯೂ ಶಿವನೋಲಗದ ಅಪೂರ್ವ ಚಿತ್ರಗಳ ವೈವಿಧ್ಯಪೂರ್ಣವಾದ. ಒಂದಕ್ಕಿಂತ ಇನ್ನೊಂದು ಮಿಗಿಲು ಎಂಬ ಭಾವನೆ ಮೂಡುವ ಹಲವಾರು ಫಲಕಗಳು ಸಿಕ್ಕುತ್ತವೆ. ಈ ಚಿತ್ರವಸ್ತುವೊಂದನ್ನೆ ಆಳವಾಗಿ, ತುಲನಾತ್ಮಕವಾಗಿ ಅಭ್ಯಸಿಸಬಹು ದಾದ ಸಾಧ್ಯತೆ ಇದೆ ಎಂಬುದನ್ನಿಲ್ಲಿ ಹೇಳಬಯಸುವೆ.

೨. ಕನ್ನಡ ಅಧ್ಯಯನ ಪೀಠದ ಸಂಗ್ರಹದಲ್ಲಿರುವ ೧೩೩೫ನೆಯ ನಂಬರಿನ ಹಸ್ತಪ್ರತಿಯ ಎರಡೂ ಬದಿಯ ಫಲಕಗಳ ಮೇಲೆ ವರ್ಣಮಯ ಚಿತ್ರಗಳಿವೆ. ಒಂದು ಬದಿಗೆ ಹಳದಿ ಅಂಚುಪಟ್ಟಿಯಿಂದ ಅಲಂಕೃತವಾದ ಕೆಂಪು ತಳಹದಿಯ ಮೇಲೆ ಆದಿಶೇಷನನ್ನು ಮೆಟ್ಟಿನಿಂತಿರುವ ನೀಲವರ್ಣದ ಬಾಲಗೋಪಾಲನ ಚಿತ್ರವಿದೆ. ಈ ಚಿತ್ರದ ಪಕ್ಕಗಳಲ್ಲಿ ಗಣೇಶ ಮತ್ತು ಸರಸ್ವತಿಯ ಚಿತ್ರಗಳಿವೆ. ಇನ್ನೊಂದು ಫಲಕದ ಮೇಲೆ ಸೀತಾ ಸಮೇತ ಸಿಂಹಾಸನವೇರಿ ಕುಳಿತ ರಾಮ, ಅಡಿಯಲ್ಲಿ ಪಾದಸೇವಾ ನಿರತನಾದ ಮಾರುತಿ ಚಿತ್ರ ಚಾಮರ ಹಿಡಿದ ಇಬ್ಬರು ಸೇವಕರು ಭರತ ಶತ್ರುಘ್ನ ಹೀಗೆ ರಾಮನೋಲಗವೇ ಮೈವೆತ್ತಂತಿರುವ ಚಿತ್ರ ಇದಾಗಿದೆ. ನೀಲಿ ಕೆಂಪು ಹಳದಿ ಬಣ್ಣಗಳನ್ನು ಬಳಸಿಕೊಂಡು ರಚಿಸಿದ ಈ ಚಿತ್ರದ ಆಯಾ ದೇವತೆಯ ಮೈಮೇಲಿನ ಬಟ್ಟೆ, ಆ ಬಟ್ಟೆಗಳಲ್ಲಿನ ಸೂಕ್ಷ್ಮ ನಕ್ಷೆಗಳು ಬೆರಗನ್ನುಂಟು ಮಾಡುವವುಗಳು. ಈ ಹಸ್ತಪ್ರತಿಯ ಕೊನೆಯಲ್ಲಿ "ಶಕೆ ೧೭೫೪ನೆಯ ಪ್ರವರ್ತಮಾನೆ ನಂದನನಾಮ ಸಂವತ್ಸರದ ಮಾರ್ಗಶಿರಷ ಶು॥ ೨ ಶನಿವಾರದಲ್ಲು" ಎಂಬ ಬರಹವಿರುವುದರಿಂದ ಈ ಚಿತ್ರದ ಕಾಲವನ್ನು ಅದೇ ಎಂದು ಗ್ರಹಿಸಬಹುದಾಗಿದೆ.

೩. ಪ್ರೊ. ಉಮಾಪತಿಶಾಸ್ತ್ರಿಗಳ ಸಂಗ್ರಹದಲ್ಲಿಯ ಎರಡು ಹಸ್ತಪ್ರತಿಗಳ ರಕ್ಷಾಫಲಕಗಳು (ಎರಡೂ ಬೇರೆ ಬೇರೆ ಹಸ್ತಪ್ರತಿಗಳವು) ಗಣಪತಿ ಮತ್ತು ಸರಸ್ವತಿಯ ಚಿತ್ರವನ್ನು ಹೊಂದಿವೆ. ಎರಡೂ ಫಲಕಗಳು ಕೆಂಪು ತಳಹದಿಯನ್ನು ಹೊಂದಿದ್ದರೂ ಎರಡರ ಅಂಚು ಪಟ್ಟಿಗಳು ಮಾತ್ರ ಭಿನ್ನವಾಗಿವೆ. ಒಂದರ ಅಂಚುಪಟ್ಟಿ ಕಪ್ಪು ಬಣ್ಣದ್ದಾಗಿದ್ದು ಅದರಲ್ಲಿ ಸಾಲಾಗಿ ಹಳದಿ ಬಣ್ಣದ ನಾಲ್ಕೆಸಳಿನ ಹೂಗಳನ್ನು ಚಿತ್ರಿಸಿ ಅಲಂಕರಿಸಲಾಗಿದೆ. ಇನ್ನೊಂದರದು ಹಳದಿ ವರ್ಣದ ಮೇಲೆ ಕಪ್ಪು ರೇಖೆಯ ಚೌಕಟ್ಟಿನಲ್ಲಿ ನೇರಗೆರೆಗಳನ್ನೆಳೆದು ಮಾಡಿದ ಅಲಂಕಾರವಾಗಿದೆ. ಎರಡೂ ಫಲಕಗಳಲ್ಲಿ ಚಿತ್ರಿತರಾದ ಈ ದೇವತೆಗಳು ಲೋಡಿಗಾತು ಕುಳಿತಿದ್ದಾರೆ. ಸರಸ್ವತಿ ಮಾತ್ರ ಒಂದರಲ್ಲಿ ಮಯೂರವನ್ನೇರಿ ಕುಳಿತಿದ್ದಾಳೆ. ವಿದ್ಯಾದೇವತೆಗಳಿಬ್ಬರೂ ಸಂಭಾಷಿಸುತ್ತಿರುವಂತೆ ಕಾಣುವ ಈ ಎರಡೂ ಫಲಕದ ಚಿತ್ರಗಳಲ್ಲಿ ಒಂದು ಕುಂಚದಿಂದ ರಚಿಸಿದ್ದು ಇನ್ನೊಂದು ಲೇಖನಿಯ ಸಹಾಯದಿಂದ ರಚಿಸಿದ್ದಾಗಿದೆ. ಕುಂಚದಿಂದ ಬಣ್ಣಿಸಿದ ಫಲಕದಲ್ಲಿ ಬರಿದಾದ ಸ್ಥಳವನ್ನು ಹೂ, ಹೂಗೊಂಚಲಿಂದ ತುಂಬಿಕೊಂಡಿದ್ದರೆ ಲೇಖನಿಯಿಂದ ರಚಿಸಿದ ಫಲಕದಲ್ಲಿ ಅಲಂಕಾರಿಕ ಹೂ ಮತ್ತು ಕಲಶದಂತಹ ಸುಂದರ ಆಕೃತಿಯನ್ನು ತುಂಬಿಸಿದೆ. ಈ ಎರಡೂ ಫಲಕಗಳಲ್ಲಿನ ಕೆಂಪು ಮುಖದ ಗಣಪತಿ ಉದ್ದ ತೋಳಿನ ಹಸಿರು ಅಂಗಿಯನ್ನು ತೊಟ್ಟಿರುವುದು ಗಮನಾರ್ಹವಾದುದು ಕುಂಚದಿಂದ ಬಣ್ಣತುಂಬಿ ಬಾಹ್ಯರೇಖೆ (Oultine) ಯನ್ನೆಳೆದ ಚಿತ್ರದಲ್ಲಿ ಕುಂಚದ ಬೀಸು, ರೇಖಾ ವಿನ್ಯಾಸದ ನಯಗಾರಿಕೆ, ಸೂಕ್ಷ್ಮತೆ ಬಣ್ಣದಲ್ಲಿ ನೆರಳು ಬೆಳಕನ್ನು ತೋರಿಸಲು ಮಾಡಿದ ಪ್ರಯತ್ನ ಮತ್ತು ಚಿತ್ರಕಾರನ ಮುಕ್ತವಾದ ಕುಂಚದ ಓಡಾಟವನ್ನು ಗಮನಿಸ

ಬಹುದಾಗಿದೆ. ಅದೇ ರೀತಿಯಾಗಿ ಕುಂಚದಿಂದ ಬಣ್ಣ ತುಂಬಿದ್ದರೂ ಲೇಖನಿಯಿಂದ ಬಾಹ್ಯರೇಖೆಯನ್ನೆಳೆದ ಇನ್ನೊಂದು ಚಿತ್ರದಲ್ಲಿ ಹಿಂದೆ ವಿವರಿಸಿದ ಚಿತ್ರದಲ್ಲಿನ ನಯಗಾರಿಕೆ ಕಂಡು ಬರುವುದಿಲ್ಲ. ಬದಲಾಗಿ ಖಚಿತವಾದ, ದೃಢವಾದ ರೇಖೆಗಳು ಆ ಚಿತ್ರದ ಇನ್ನೊಂದು ಪದ್ಧತಿ (Style) ಯನ್ನೇ ತೋರ್ಪಡಿಸುತ್ತವೆ. ಎರಡೂ ಫಲಕಗಳ ಚಿತ್ರಗಳೂ ಅಷ್ಟೆ ಸುಂದರ ಮತ್ತು ಆಕರ್ಷಕವಾದವುಗಳು. ಈ ಚಿತ್ರಗಳ ಚಿತ್ರಕಾರರಿಬ್ಬರ ಕೈಗಳು ಚಿತ್ರ ರಚನೆಯಲ್ಲಿ ನುರಿತವುಗಳು ಎಂಬುದರಲ್ಲಿ ಸಂದೇಹವಿಲ್ಲ. ಚಿತ್ರದ ವಸ್ತು ಒಂದೇ ಆಗಿದ್ದರೂ, ಬಳಸಿಕೊಂಡ ಬಣ್ಣಗಳು ಹೆಚ್ಚು ಕಡಿಮೆ ಒಂದೇ ಆಗಿದ್ದರೂ ಬಾಹ್ಯ ರೇಖೆಯನ್ನೆಳೆಯುವಾಗ ಈ ಇಬ್ಬರು ಬಳಸಿದ ಸಾಧನಗಳು ಬೇರೆಯಾದ ಕಾರಣ ಅವೆರಡೂ ಚಿತ್ರಗಳು ಭಿನ್ನ ಭಿನ್ನ ಶೈಲಿಯ ಚಿತ್ರಗಳಂತೆ ಕಾಣುತ್ತಿರುವುದು ಲಕ್ಷಿಸಬೇಕಾದುದು. ತುಲನಾತ್ಮಕ ಅಧ್ಯಯನಕ್ಕೆ ಯೋಗ್ಯವಾದ ಇಂತಹ ಫಲಕಗಳು ಚಿತ್ರಕಲೆಯ ಬೇರೆ ಬೇರೆ ವಿಧಾನಗಳ ಮತ್ತು ಪದ್ಧತಿಗಳ ಅಭ್ಯಾಸಕ್ಕೆ ದಾರಿ ಮಾಡಿಕೊಡುತ್ತವೆ. ಮತ್ತು ಈ ದೆಸೆಯಲ್ಲಿ ನಡೆಯಬೇಕಾದ ಅಧ್ಯಯನದ ಅವಕಾಶಗಳನ್ನು ತೆರೆದು ತೋರುತ್ತವೆ ಎನ್ನಬಹುದು.

೪. ಪ್ರೊ. ಉಮಾಪತಿ ಶಾಸ್ತ್ರಿಯವರ ಸಂಗ್ರಹದಲ್ಲಿಯ ಇನ್ನೆರಡು ರಕ್ಷಾ ಫಲಕಗಳು ಚಿತ್ರದ ವಸ್ತುವಿನ ದೃಷ್ಟಿಯಿಂದ ಪರಿಶೀಲಿಸಬೇಕಾದವುಗಳು. ಬೇರೆ ಬೇರೆ ಹಸ್ತ ಪ್ರತಿಗಳ ಈ ಫಲಕಗಳು ಬೇರೆ ಬೇರೆ ಚಿತ್ರಕಾರರಿಂದ ರಚಿಸಲ್ಪಟ್ಟವು ಎಂಬುದು ಸ್ಪಷ್ಟ. ವಿರಳವಾಗಿ ಸಿಕ್ಕುವ ನಿತ್ಯಜೀವನದ ವಸ್ತುವನ್ನು ಚಿತ್ರಗಳಿಗೆ ಆಯ್ಕೆ ಮಾಡಿಕೊಂಡಿದ್ದಾರೆ. ಒಂದು ಫಲಕದ ಮೇಲೆ ಕಪ್ಪು ವರ್ಣದ ತಳಹದಿಯ ಮೇಲೆ ಒಂದು ಮಂಟಪವಿದ್ದು ಅದರಲ್ಲಿ ಕರಡಿಗೆಯನ್ನು ಧರಿಸಿದ ಸ್ಥೂಲಕಾಯದ ಯತಿಗಳು ಕೈಯಲ್ಲಿ ಲಿಖಿತ ಪತ್ರವೊಂದನ್ನು ಹಿಡಿದು ನೋಡುತ್ತ ಕುಳಿತಿದ್ದಾರೆ. ಅವರ ಹಿಂದುಗಡೆ ಬೀಸಣಿಕೆಯಿಂದ ಗಾಳಿ ಹಾಕುವ ಸೇವಕ ಅವನ ಹಿಂದೆ ಕೈಯಲ್ಲಿ ಲಿಖಿತ ಪತ್ರವನ್ನು ಹಿಡಿದ ಕರಡಿಗೆ ಧರಿಸಿದ ಇನ್ನೊಬ್ಬರು ಕೆಳಗಡೆ ಲೋಡಿಗೆ ಒರಗಿ ಕುಳಿತಿದ್ದಾರೆ. ಮಂಟಪದಲ್ಲಿಯ ಯತಿಯ ಎದುರಿಗೆ ಸಾಲಂಕೃತಳಾದ ಸ್ತ್ರೀಯೊಬ್ಬಳು ಸಿತಾರನ್ನು ನುಡಿಸುತ್ತಿದ್ದಾಳೆ. ಅವಳ ಹಿಂದಿರುವ ವ್ಯಕ್ತಿಗಳಲ್ಲಿ ಒಬ್ಬ ತಾಳವನ್ನು ಮತ್ತೊಬ್ಬ ಮೃದಂಗವನ್ನೂ ನುಡಿಸುತ್ತಿದ್ದಾರೆ. ಈ ಹಸ್ತಪ್ರತಿ ಯಾವ ಮಠಕ್ಕೆ ಸಂಬಂಧಪಟ್ಟಿದೆಯೋ ಆ ಮಠದ ಯತಿಗಳ ಅಪಾರವಾದ ಸಂಗೀತಾಸಕ್ತಿಯನ್ನು ಬಿಂಬಿಸುವ ನೈಜ ಚಿತ್ರವೇನೋ ಎನ್ನುವಂತಿದೆ. ಈ ಚಿತ್ರದಲ್ಲಿ ಕಂಡು ಬರುವ ಗುಲಾಬಿ ವರ್ಣದ ಹೆಚ್ಚಳವು ಚಿತ್ರದ ವಸ್ತುವನ್ನು ಪೋಷಿಸುತ್ತಿದೆ. ಚಿತ್ರದಲ್ಲಿನ ವಾದ್ಯಕಾರರ ವೇಷವು ಮೊಗಲರ ಚಿತ್ರಗಳಲ್ಲಿನ ವೇಷಭೂಷಣವನ್ನು ಸೆರಗು ಹೊದ್ದುಕೊಂಡಿರುವ ಸ್ತ್ರೀ ಮಹಾರಾಷ್ಟ್ರದ ಸ್ತ್ರೀಯ ವೇಷಭೂಷಣಗಳನ್ನೂ ನೆನಪಿಸುತ್ತವೆ. ಒಟ್ಟು ಚಿತ್ರದ ಸಂಯೋಜನೆ, ವರ್ಣ ವಿನ್ಯಾಸ, ಸೂಕ್ಷ್ಮ ರೇಖನಗಳು ಕಲಾವಿದನ ಕಲಾ ಪ್ರೌಢಿಮೆಯ ಕುರುಹುಗಳಾಗಿ ಕಾಣುತ್ತವೆ.

ಇನ್ನೊಂದು ಫಲಕ ಕೆಂಪು ವರ್ಣದ ತಳಹದಿಯನ್ನು ಪಡೆದದ್ದು. ಅಲ್ಲಲ್ಲಿ ಬಣ್ಣದ ಪಕ್ಕಳೆಗಳು ಕಿತ್ತಿದ್ದರೂ ಚಿತ್ರದ ವಸ್ತು ಸ್ಫುಟವಾಗಿ ಕಾಣುತ್ತದೆ. ರಾಜ ಪೋಷಾಕನ್ನು ಧರಿಸಿದವನೊಬ್ಬ ಮಂಚದ ಮೇಲೆ ಒಳ್ಳೆಯ ಠೀವಿಯಿಂದ ಲೋಡಿಗೆ ಒರಗಿ ಕುಳಿತು ಎದುರಿಗಿರುವ ಎತ್ತರವಾದ ಗುಡುಗುಡಿಯನ್ನು ಸೇದುತ್ತಿದ್ದಾನೆ. ಅದರಾಚೆಗೆ ಸೇವಕಿಯೋ ಪ್ರೇಯಸಿಯೋ ಆಗಿರಬಹುದಾದ ಸ್ತ್ರೀಯ ಚಿತ್ರವಿದೆ. ವಿಲಾಸ ಪೂರ್ಣ ಜೀವನದ ಒಂದು ದೃಶ್ಯವನ್ನು ತೋರಿಸುವ ಈ ಚಿತ್ರದಲ್ಲಿ ಕೆಂಪು ಹಳದಿ ಹಸಿರು ಬಣ್ಣಗಳು ಮಾತ್ರ ಬಳಸಲ್ಪಟ್ಟಿದ್ದು ಇಲ್ಲಿನ ಕಪ್ಪು ವರ್ಣದ ಬಾಹ್ಯ ರೇಖಣ ಸೂಕ್ಷ್ಮವಾಗಿರದೆ ದಪ್ಪವಾಗಿಯೂ ಒರಟಾಗಿಯೂ ಕಂಡು ಬರುತ್ತದೆ. ಚಿತ್ರವು ನೋಡಲು ಆಕರ್ಷಕವಾಗಿರದಿದ್ದರೂ ಚಿತ್ರದ ವಸ್ತು ವಿರಳವಾದದ್ದು. ಇಂಥ ಫಲಕಗಳು ಹಸ್ತಪ್ರತಿಯ ಅಲಂಕರಣಗಳಷ್ಟೇ ಅಲ್ಲ ಅವು ಅಂದಿನ ಸಾಮಾಜಿಕ ಜೀವನದ ಕೆಲವಾದರೂ ದೃಶ್ಯಗಳನ್ನು ಕಣ್ಣಿಗೆ ಕಾಣಿಸುವ ಕನ್ನಡಿಗಳು. ಅಂದಿನವರ ವೇಷಭೂಷ, ಅಭಿರುಚಿ ಆಸಕ್ತಿಯ ವಿಚಾರಗಳನ್ನು ತಿಳಿಸುತ್ತವೆ. ಈ ದೃಷ್ಟಿ ಯಿಂದಲೂ ಹಸ್ತಪ್ರತಿಗಳ ಮೇಲಿರುವ ಈ ಚಿತ್ರಫಲಕಗಳನ್ನು ಅಭ್ಯಸಿಸಬೇಕಾದ ಅವಶ್ಯಕತೆ ಇದೆ ಎಂಬುದನ್ನಿಲ್ಲಿ ಹೇಳಬಹುದು.

ಈ ಸಂದರ್ಭದಲ್ಲಿ ಕಾಗದಗಳ ಹಸ್ತಪ್ರತಿರೂಪದಲ್ಲಿರುವ ಉದ್ಧರಣೆಗಳ ವಿಚಾರ ವನ್ನು ಹೇಳದಿದ್ದರೆ ಅನುಚಿತವಾದೀತು. ಸೌಂದರ್ಯದ ದೃಷ್ಟಿಯಿಂದಲೂ ಆಧ್ಯಾ ತ್ಮದ ದೃಷ್ಟಿಯಿಂದಲೂ ಈ ಹಸ್ತಪ್ರತಿಗಳನ್ನು ಸರಿಗಟ್ಟಬಲ್ಲ ಕೃತಿಗಳು ಮತ್ತೊಂದಿಲ್ಲ ವೆಂದೇ ಹೇಳಬೇಕಾಗುತ್ತದೆ. ಹೆಚ್ಚಾಗಿ ಮಠಗಳಲ್ಲಿರುತ್ತಿದ್ದ ಯತಿಗಳು ತಮ್ಮ ಸಾಧ ನೆಯ ಸವಿಯನ್ನುಂಡು ಆ ಅವ್ಯಕ್ತ ಅನುಭವಕ್ಕೆ ವ್ಯಕ್ತರೂಪವನ್ನು ಕೊಡಬಯಸಿ ರಚಿಸಿದ ಚಿತ್ರಸಾಹಿತ್ಯಗಳಿಂದೊಡಗೂಡಿದ ಹಸ್ತಪ್ರತಿಗಳಿವು. ಅಥವಾ ತಮ್ಮ ಅನು ಭವಗಳನ್ನು ಸಮರ್ಥ ಸಾತ್ವಿಕ ಚಿತ್ರಕಾರನಿಗೆ ಎರೆದಾಗ ಅವರಿಂದ ರಚನೆಗೊಂಡವು ಗಳು ಇವು. ಉದ್ಧರಣೆ ಹಸ್ತಪ್ರತಿಗಳಲ್ಲಿನ ಚಿತ್ರಗಳು ಕರ್ನಾಟಕದ ಚಿತ್ರಕಲೆಯ ಹಲವಾರು ಪದ್ಧತಿಗಳನ್ನು ಬಿಂಬಿಸುವ ಮಹತ್ವಪೂರ್ಣ ಆಸ್ತಿಗಳು. ಚಿತ್ರಕಲೆ ತಾನು ಸಾಧಿಸಬೇಕಾದ ಅಥವಾ ಮುಟ್ಟಬೇಕಾದ ಗುರಿಯನ್ನು ಮುಟ್ಟಿದ್ದು ಇಲ್ಲಿಯೇ ಎನ್ನ ಬಹುದು. ಇಲ್ಲಿನ ಬರವಣಿಗೆಯು ವಿನ್ಯಾಸ ಚಿತ್ರಗಳ ಸಂಯೋಜನೆ ಅಸದೃಶವಾದವು ಗಳು. ಕೇವಲ ಉದ್ಧರಣೆಗಳನ್ನಷ್ಟೆ ವಿಶೇಷ ಅಧ್ಯಯನದ ವಿಷಯವಾಗಿ ಎತ್ತಿಕೊಳ್ಳ ಬೇಕಾದ ಅವಶ್ಯಕತೆ ತುಂಬಾ ಇದೆಯೆನ್ನಬಹುದು.

ಹಾಗೆಯೆ ಪ್ರೊ. ಉಮಾಪತಿ ಶಾಸ್ತ್ರಿಗಳವರ ಸಂಗ್ರಹದಲ್ಲಿನ ಒಂದು ಕಾಗದದ ಹಸ್ತಪ್ರತಿಯಲ್ಲಿ ಶರಣರ ಅನೇಕ ಕಾಲ್ಪನಿಕ ಚಿತ್ರಗಳಿದ್ದು ಅವುಗಳದೇ ಆದ ಕಲಾ ಶೈಲಿಯೊಂದು ಒಡೆದು ಕಾಣುತ್ತದೆ. ಇಲ್ಲಿನ ಚಿತ್ರಗಳು ವ್ಯಕ್ತಿಕ್ಕಿಂತಲೂ ಹೆಚ್ಚು ಸಾಂಕೇತಿಕವಾದವುಗಳು. ಉದಾ: ಅಲ್ಲಮಪ್ರಭುವಿನ ಚಿತ್ರವನ್ನು ಬರೆಯುವಾಗ

ಪ್ರಭುವಿನ ಮುಖವನ್ನಷ್ಟೆ ಕದಳಿಯಲ್ಲಿ ಅಡಗಿಸಿ ಚಿತ್ರಿಸಿದ್ದಾನೆ ಪ್ರಭುವಿನ ಅಂಗ ಎಲ್ಲೂ ಕಾಣುವುದಿಲ್ಲ. "ಕಾಯವೆಂಬುದೊಂದು ಕದಳಿ" ಎನ್ನುವ ವಚನಕಾರರ ಮಾತಿನ ಹಿನ್ನೆಲೆಯಲ್ಲಿ ಈ ಚಿತ್ರವನ್ನು ನೋಡಿದಾಗ ಆಗುವ ಅನುಭೂತಿ ಅಪರೂಪ ದ್ದೆಂದು ಹೇಳಬಹುದು. ಇದರಂತೆಯೇ ಮಹದೇವಿಯಕ್ಕ, ತೋಂಟದ ಸಿದ್ಧಲಿಂಗ ಯತಿ ಮುಂತಾದವರ ಸಾಂಕೇತಿಕವಾದ ಚಿತ್ರಗಳು ಈ ಹಸ್ತಪ್ರತಿಯಲ್ಲಿವೆ. ಇವಲ್ಲದೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರಚಿತವಾದ, ಗ್ರಂಥದ ಒಂದೊಂದು ಪುಟವೂ ಅಲ್ಲಿ ಬರುವ ಶ್ಲೋಕಕ್ಕನುಗುಣವಾದ ಚಿತ್ರಗಳಿಂದ ಅಲಂಕೃತವಾದ ಶ್ರೀ ತತ್ವನಿಧಿಯೆಂಬ ಗ್ರಂಥ; ಪ್ರಾರಂಭದಲ್ಲಿ ಗಣಪತಿ ಮಹಿಷಾಸುರ ಮರ್ದಿನಿ ಸರಸ್ವತೀ ಲಕ್ಷ್ಮಿಯರ, ಲಿಂಗಪೂಜಾನಿರತ ಶಿವಯೋಗಿಯ ಚಿತ್ರಗಳನ್ನೂ ಅನಂತರ ಬಸವಣ್ಣ ನವರ ಚರಿತ್ರೆಯ ಕಥಾ ಸಂದರ್ಭಗಳನ್ನು ಬಿಡದೆ ಅನುಸರಿಸಿ ಚಿತ್ರಗಳನ್ನೇ ಬಿಡಿಸಲಾದ ವೃಷಭೇಂದ್ರ ವಿಲಾಸವೆಂಬ ಯಕ್ಷಗಾನ ಗ್ರಂಥ; ಪ್ರಭುದೇವ ಸಿದ್ಧರಾಮ ರಾಘವಾಂಕ ಹರಿಹರ– ಮುಂತಾದವರ ಚಿತ್ರಗಳನ್ನೊಳಗೊಂಡ ರಾಘವಾಂಕ ಚಾರಿತ್ರ; ಬಸವ ಪುರಾಣ, ನಂಜುಂಡ ಶತಕ, ಚಂದ್ರಾವಳಿ ಕಥೆ, ಮನೋವಿಜಯಕಾವ್ಯ ಈ ಮುಂತಾದ ಹಸ್ತಪ್ರತಿಗಳು ಸೌಂದರ್ಯದ ದೃಷ್ಟಿಯಿಂದ ಪ್ರೇಕ್ಷಣೀಯವಾದವುಗಳೆಂದು ಹೇಳ ಬಹುದಾಗಿದೆ.

ಕೊನೆಯದಾಗಿ, ಹಸ್ತಪ್ರತಿ ವಿನ್ಯಾಸ–ಸೌಂದರ್ಯ ಈ ನಿಟ್ಟಿನ ಅಭ್ಯಾಸವನ್ನು ನಾವು ಎಷ್ಟರ ಮಟ್ಟಿಗೆ ಪೂರೈಸಿದ್ದೇವೆ ಎಂಬುದನ್ನು ವಿಚಾರಿಸಿದಾಗ ಬೇಗನೆ ಉತ್ತರ ಸಿಕ್ಕುವುದಿಲ್ಲ. ಯಾಕಂದರೆ ಈಗಾಗಲೇ ಆಗಬೇಕಾಗಿದ್ದ ಈ ದಿಸೆಯಲ್ಲಿನ ಅಭ್ಯಾಸ ಅಷ್ಟಾಗಿ ನಡೆದಿಲ್ಲ ಎಂಬುದು ವಿಷಾದದಿಂದ ಹೇಳಬೇಕಾದ ಮಾತು ಅಷ್ಟೇ ಏಕೆ ಹಸ್ತ ಪ್ರತಿಗಳನ್ನು ಗೌರವದಿಂದ ಕಾಣುವ, ರಕ್ಷಿಸಿ ಇಟ್ಟಿರುವ ಅನೇಕ ವ್ಯಕ್ತಿಗಳು ಮತ್ತು ಸಂಸ್ಥೆಗಳು ಈ ಬಗ್ಗೆ ಹೆಚ್ಚಿನ ಆಸಕ್ತಿ ತಾಳದಿರುವ ನಿದರ್ಶನಗಳು ಇವೆ. ಹಸ್ತಪ್ರತಿಯ ವಿನ್ಯಾಸ ಚಿತ್ರಗಳು ಅವುಗಳ ಸೌಂದರ್ಯ ಕಟ್ಟಿಕೊಂಡು ನಮಗೇನಾಗಬೇಕಾಗಿದೆ? ಅಲ್ಲಿನ ವಿಷಯ ನಮಗೆ ಮುಖ್ಯ ಎಂಬ ದೃಷ್ಟಿಕೋನದ ವಿದ್ವಾಂಸರು ಮತ್ತು ಹಸ್ತ ಪ್ರತಿಯ ಒಡೆತನವನ್ನು ಪಡೆದಿರುವ ವ್ಯಕ್ತಿ, ಮಠ ಮುಂತಾದ ಸಂಸ್ಥೆಗಳು ವರ್ಣ ರಂಜಿತವಾದ ಅನುಪಮ ಚಿತ್ರಗಳ ಮೇಲೆ ಗ್ರಂಥದ ಹೆಸರನ್ನು ಸೂಚಿಸುವ ಚೀಟಿ ಯನ್ನೋ ಅದಕ್ಕೆ ಕೊಡಬೇಕಾದ ನಂಬರಿನ ಕಾಗದವನ್ನೋ ಅಂಟಿಸಿದ್ದನ್ನು ಕಾಣುತ್ತೇವೆ ಇದರಿಂದಾಗಿ ಅಲ್ಲಿನ ಚಿತ್ರಗಳು ನಷ್ಟವಾಗಿ ಹಸ್ತಪ್ರತಿಗಳು ಅಂದಗೇಡಿಗಳಾಗಿ ಬಿಡು ಕೊಂಡಿರುವುದನ್ನು ಈಗಲೂ ನೋಡಬಹುದು. ಇದು ನಿಲ್ಲಬೇಕು. ಈ ನಿಟ್ಟಿನ ಅಭ್ಯಾಸ ಆರಂಭವಾಗಬೇಕು ಯಾಕೆಂದರೆ ಹಸ್ತಪ್ರತಿಗಳ ವಿನ್ಯಾಸ–ಸೌಂದರ್ಯ ಕೇವಲ ತೋರಿಕೆಗಾಗಿ ಆಕರ್ಷಣೆಗಾಗಿ ಬಳಿದ ಬಣ್ಣವಲ್ಲ. ಅದು ಆಯಾಕಾಲದ ವ್ಯಕ್ತಿಯ ಅಭಿರುಚಿಯ, ಒಲವು–ಆಸಕ್ತಿಗಳ ದಾಖಲೆಯಾಗಬಲ್ಲುದು. ಮತ್ತು ನಾಡಿನ ಸಂಸ್ಕೃತಿಯ ಬಹುಮುಖ್ಯವಾದ ಮುಖವಾದ ಚಿತ್ರಕಲಾ ಪರಂಪರೆಯನ್ನು. ಬೇರೆ

ಬೇರೆ ಚಿತ್ರಕಲಾ ಪದ್ಧತಿಗಳನ್ನು ಅವುಗಳ ವೈಶಿಷ್ಟ್ಯಗಳನ್ನು ಎತ್ತಿ ತೋರಿಸುವ ಇತಿಹಾಸದ ಸಾಧನ ಸಲಕರಣೆಯಾಗಬಲ್ಲುದು. ಹಾಗೆಯೇ ಸದ್ಯ ಅಲ್ಲಲ್ಲಿ ಹರಿಗಡಿದಂತಾದ ಕರ್ನಾಟಕದ ಚಿತ್ರಕಲೆಯ ಚರಿತ್ರೆಯನ್ನು ಜೋಡಿಸುವ ಕೊಂಡಿಯಾಗಬಹುದು.

ಹಸ್ತಪ್ರತಿಗಳ ವಿನ್ಯಾಸ-ಸೌಂದರ್ಯಕ್ಕೆ ಸಂಬಂಧಿಸಿದಂತೆ ಇವಿಷ್ಟು ಸಂಗತಿಗಳನ್ನು ತಮ್ಮ ಮುಂದೆ ಇರಿಸಿದ್ದೇನೆ. ಇನ್ನು ಮುಂದೆ ಈ ನಿಟ್ಟಿನಲ್ಲಿ ಕೈಕೊಳ್ಳಬಹುದಾದ ಅಧ್ಯಯನದ ದಿಕ್ಕು ದೆಸೆಗಳನ್ನು ಸೂಚಿಸಿ ಈ ಪ್ರಬಂಧವನ್ನು ಮುಗಿಸಬಹುದಾಗಿದೆ.

೧. ಹಸ್ತಪ್ರತಿಗಳ ಒಟ್ಟು ರೂಪದ ವಿನ್ಯಾಸದ ಅಧ್ಯಯನ-ವಿಶೇಷ ರೀತಿಯ ವಿನ್ಯಾಸದ ಮಾದರಿಗಳ ಸಂಗ್ರಹಣ ತನ್ಮೂಲಕ ಹಸ್ತಪ್ರತಿಗಳ ವರ್ಗೀಕರಣ ಹಸ್ತಪ್ರತಿಗಳ ಪ್ರಾದೇಶಿಕತೆ. ಲಿಪಿ ವಿನ್ಯಾಸಗಳ ಪ್ರಾದೇಶಿಕತೆ, ಕನ್ನಡ ಲಿಪಿಯ ಮೇಲೆ ಅನ್ಯ ಲಿಪಿಗಳ ಪ್ರಭಾವ, ಬರವಣಿಗೆಯ ವೈಯಕ್ತಿಕ ಒಲವು-ಪದ್ಧತಿ ಮುಂತಾದವುಗಳ ಅಧ್ಯಯನ.

೨. ಹಸ್ತಪ್ರತಿಗಳಲ್ಲಿನ ಕೈವಾರ, ರೇಖಾಪಟ್ಟಿ, ಕಂಠದ ಸಹಾಯದಿಂದ ರಚಿಸಿದ ಚಿತ್ರಗಳ ಸಂಗ್ರಹಣೆ ಮತ್ತು ಅಂತಹ ಚಿತ್ರಗಳ ರಚನಾ ವಿಧಾನ ಮತ್ತು ತಂತ್ರಗಳ ಅಧ್ಯಯನ.

೩. ರಕ್ಷಾ ಫಲಕಗಳ ಸಂಗ್ರಹಣ-ರಕ್ಷಾಫಲಕಗಳ ಚಿತ್ರವಸ್ತು ವರ್ಣ ವಿನ್ಯಾಸ ಚಿತ್ರಪದ್ಧತಿಗಳು ಅವುಗಳ ಪ್ರಾದೇಶಿಕತೆ ಮತ್ತು ವಿಂಗಡಣೆ, ಪ್ರಬುದ್ಧ-ಗ್ರಾಮೀಣ ಶೈಲಿಗಳ ಅಧ್ಯಯನ-ಚಿತ್ರಗಳ ವಸ್ತು-ಅದರ ನಿರ್ವಹಣೆ ದೃಷ್ಟಿಯಲ್ಲಿಟ್ಟುಕೊಂಡು ನಡೆಯಬೇಕಾದ ತುಲನಾತ್ಮಕ ಅಧ್ಯಯನ.

೪. ನಾಡಿನ ಕಲಾ ಪರಂಪರೆಗೆ ಅಂದರೆ ನಾಡಿನುದ್ದಕ್ಕೂ ಸಿಕ್ಕುವ ಭಿತ್ತಿಚಿತ್ರಗಳ ಪರಂಪರೆಗೂ ಹಸ್ತಪ್ರತಿಗಳ ಈ ಚಿತ್ರ ಪರಂಪರೆಗೂ ಇದ್ದ ಸಂಬಂಧ ಅಲ್ಲಲ್ಲಿ ಹರಿಗಡಿದ ನಾಡಿನ ಚಿತ್ರಕಲಾ ಇತಿಹಾಸದ ಪುನರ್ ರಚನೆಗೆ ಸಾಧ್ಯವಾಗಬಹುದಾದ ದೃಷ್ಟಿಯಿಂದ ಮಾಡಬೇಕಾದ ಅಧ್ಯಯನ.

೫. ಚಿತ್ರಗಳ ರಚನೆಗಾಗಿ ಬಳಸುತ್ತಿದ್ದ ಬಣ್ಣಗಳ ಶ್ರೇಣಿ. ಬಣ್ಣಗಳ ತಯಾರಿಕೆ, ಲೇಪನ ವಿಧಾನ ಇತ್ಯಾದಿಗಳ ಅಧ್ಯಯನ.

●

ಹಸ್ತಪ್ರತಿ ಕ್ಷೇತ್ರಕಾರ್ಯ : ವಿಧಾನ - ಸಾಧನೆ


● ಎಂ. ಎಂ. ಕಲಬುರ್ಗಿ

'ಗ್ರಂಥ ಸಂಪಾದನ ಶಾಸ್ತ್ರ'ದ ನೆಲೆಯಿಂದ ಮುಕ್ತವಾಗಿ, ಸ್ವತಂತ್ರ ಶಾಸ್ತ್ರ ಮರ್ಯಾದೆ ಪಡೆಯುತ್ತಲಿರುವ 'ಹಸ್ತಪ್ರತಿ ಶಾಸ್ತ್ರ'ದ ಹಲವು ಅಂಗಗಳಲ್ಲಿ ಕ್ಷೇತ್ರ ಕಾರ್ಯ (Field work)ವೂ ಒಂದು. ಈ ಕ್ಷೇತ್ರಕಾರ್ಯ ಇಂದು ಕಲೆ, ವಿಜ್ಞಾನ, ಸಮಾಜವಿಜ್ಞಾನ ವಲಯಗಳಲ್ಲಿ ಒಂದು "ಶೈಕ್ಷಣಿಕ ಶಿಸ್ತು" (Academic discipline) ಆಗಿ ಬೆಳೆದಿದೆ. ಕ್ಷೇತ್ರಕಾರ್ಯಗಳೇ ಆಗಿದ್ದರೂ ಪ್ರಾಣಿಶಾಸ್ತ್ರಜ್ಞ ಜೀವಪ್ರಕಾರಗಳನ್ನು ಸಂಗ್ರಹಿಸುವುದಕ್ಕೂ, ಭಾಷಾವಿಜ್ಞಾನಿ ಮಾತಿನ ಘಟಕಗಳನ್ನು ಸಂಗ್ರಹಿಸುವುದಕ್ಕೂ, ಮನೋವಿಜ್ಞಾನಿ ಮಾನವನ ಆಲೋಚನೆಗಳನ್ನು ಸಂಗ್ರಹಿಸು ವುದಕ್ಕೂ ಅಂತರವಿರುವುದನ್ನು ಗಮನಿಸಿದರೆ ಕ್ಷೇತ್ರಕಾರ್ಯದಲ್ಲಿ ಕಾಯಿಕ–ವಾಚಿಕ–ಮಾನಸಿಕ ಎಂಬ ಮೂರು ಕವಲುಗಳಿರುವುದು ಸ್ಪಷ್ಟವಾಗುತ್ತದೆ. ಈ ಕವಲುಗಳ ಕ್ಷೇತ್ರಕಾರ್ಯವಿಧಾನ ಕ್ರಮವಾಗಿ Collection (ಸಂಗ್ರಹ) Interview (ಸಂದರ್ಶನ), Observation (ನಿರೀಕ್ಷಣೆ) ರೂಪದ್ದಾಗಿರುತ್ತದೆ. ಇವುಗಳಲ್ಲಿ ಹಸ್ತಪ್ರತಿ ಕ್ಷೇತ್ರಕಾರ್ಯ ಪ್ರಧಾನವಾಗಿ Collection ವರ್ಗಕ್ಕೆ ಸೇರುತ್ತಿದ್ದು, ಗೌಣವಾಗಿ Observation, Interview ಗಳನ್ನೂ ಒಳಗೊಳ್ಳುತ್ತದೆ.

ಸಂಶೋಧನೆ ಪ್ರಸಂಗದಲ್ಲಿ ಇಂಗ್ಲಿಷ್ ಭಾಷೆ Research, Invension, Discovery ಎಂಬ ಪದಗಳನ್ನು ಬಳಸುತ್ತದೆ. ಮರೆಯಲ್ಲಿ ಉಳಿದುಕೊಂಡಿರುವ ಒಂದು ವಸ್ತುವಿನ ಪ್ರಜ್ಞಾಪೂರ್ವಕ ಅಥವಾ ಆಕಸ್ಮಿಕ ಅನ್ವೇಷಣೆಯೇ Discovery. ಹಸ್ತಪ್ರತಿ ವಿಷಯವಾಗಿ ನಡೆಸುವ ಕ್ಷೇತ್ರಕಾರ್ಯ ಈ Discovery ವರ್ಗಕ್ಕೆ ಸೇರುತ್ತದೆ. ಇದಕ್ಕೆ ಸಮಾನಪದ ಶೋಧ. ಆದರೆ ಈ ಮೊದಲು ಸಿಗದಿದ್ದ ಕೃತಿಯ ಹಸ್ತಪ್ರತಿ ಹುಡುಕುವಿಕೆಗೆ 'ಶೋಧ' (Discovery) ಪದವನ್ನು. ಈ ಮೊದಲು ಸಿಕ್ಕ ಕೃತಿಯ ಹಸ್ತಪ್ರತಿಗಳ ಹುಡುಕುವಿಕೆಗೆ 'ಸಂಗ್ರಹ' (Collection) ಪದವನ್ನು ಬಳಸುವುದು ಲೇಸು. ಆದುದರಿಂದ ಹಸ್ತಪ್ರತಿ ಕ್ಷೇತ್ರಕಾರ್ಯ ಶೋಧ ಮತ್ತು ಸಂಗ್ರಹಗಳ ಸಂಯುಕ್ತ ಕ್ರಿಯೆಯಾಗಿದೆ.

'ವಸ್ತು'ವಿನ ಶೋಧ ಮತ್ತು ಸಂಗ್ರಹ ರೂಪದ ಕಾರ್ಯಕ್ಕೆ ಸರ್ವಸಾಮಾನ್ಯ ಸೂತ್ರಗಳಿರುವುದಾದರೂ ಇವು ಆಯಾ ಜ್ಞಾನಶಾಖೆಗಳಿಗೆ ಅನುಗುಣವಾಗಿ ಕೆಲ ವೊಮ್ಮೆ ಬೇರೆ ಬೇರೆಯಾಗುವುದರಿಂದ 'ಹಸ್ತಪ್ರತಿ ಕ್ಷೇತ್ರಕಾರ್ಯ'ಕ್ಕೆ ಸಂಬಂಧಿಸಿದ ವಿಶಿಷ್ಟ ವಿಭಾಗ–ವಿಚಾರಗಳನ್ನು ಇಲ್ಲಿ ಮಂಡಿಸಬಹುದು.

ಕ್ಷೇತ್ರಕಾರ್ಯಕರ್ತ, ಹಸ್ತಪ್ರತಿ, ಹಸ್ತಪ್ರತಿಗಳ ಒಡೆಯ ಈ ಮೂರು ಘಟಕಗಳನ್ನೊಳಗೊಂಡಿದೆ, ಹಸ್ತಪ್ರತಿ ಕ್ಷೇತ್ರಕಾರ್ಯ. ಅದು 'ಒಡೆಯ'ನಿಂದ 'ಹಸ್ತಪ್ರತಿ'ಗಳನ್ನು 'ಕ್ಷೇತ್ರಕಾರ್ಯಕರ್ತ' ದೊರಕಿಸಿಕೊಳ್ಳುವ ಕ್ರಿಯೆ. ಈ ತ್ರಿಕೋನದಲ್ಲಿ ಹಸ್ತಪ್ರತಿ ಶಿರೋಕೇಂದ್ರವಾಗಿದ್ದು, ಅದನ್ನು ಒಂದು ಕೇಂದ್ರದಿಂದ ಒಡೆಯ ಉಳಿಸಿಕೊಳ್ಳುವ, ಇನ್ನೊಂದು ಕೇಂದ್ರದಿಂದ ಕ್ಷೇತ್ರಕಾರ್ಯಕರ್ತ ಪಡೆಯುವ ಪ್ರಯತ್ನ ನಡೆಸುತ್ತಾರೆ.



ಒಡೆಯನನ್ನು ಕ್ಷೇತ್ರಕಾರ್ಯಕರ್ತ ಜಯಿಸುವುದೇ ಈ ಸಂದರ್ಭದ ಕ್ರಿಯೆಯಾಗಿರುವುದರಿಂದ ಇಲ್ಲಿಯ ಪ್ರಧಾನ ಘಟಕ ಕಾರ್ಯಕರ್ತನಾಗಿದ್ದಾನೆ. ಈತನಿಗೆ ಹಸ್ತಪ್ರತಿಸಂಗ್ರಹದ ೧. ಸೈದ್ಧಾಂತಿಕ ಜ್ಞಾನ ೨. ಪ್ರಾಯೋಗಿಕಜ್ಞಾನ ೩. ತಾಂತ್ರಿಕ ಜ್ಞಾನಗಳ ಅರ್ಹತೆ ಅವಶ್ಯಬೇಕು.

ಹಸ್ತಪ್ರತಿ ಕ್ಷೇತ್ರಕಾರ್ಯದ 'ಸೈದ್ಧಾಂತಿಕ ಜ್ಞಾನ' ಎಂಬ ಮಾತು ತುಂಬ ವ್ಯಾಪಕವಾದುದು. ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನ ಶಾಸ್ತ್ರಗಳ ಸಂಲಗ್ನ ಪರಿಜ್ಞಾನವಿದು. ಈ ಉಭಯಶಾಸ್ತ್ರಗಳಿಗೆ ಸಂಬಂಧಿಸಿದ ಹಸ್ತಪ್ರತಿಯ ಸ್ವರೂಪ, ಪ್ರಕಾರ, ಭಾಷೆ, ಅಕ್ಷರ, ಬರವಣಿಗೆಯ ರೀತಿ, ವಿಷಯ ಸಂಪತ್ತು, ಮಹತ್ವ ಇತ್ಯಾದಿಗಳ ತಿಳಿವಳಿಕೆಯಾದ ಇದು, ಕ್ಷೇತ್ರಕಾರ್ಯಕರ್ತನ ಮೂಲಧನ. ಆದುದರಿಂದ ಕ್ಷೇತ್ರಕಾರ್ಯಕರ್ತ ಗ್ರಂಥ ಸಂಪಾದನಶಾಸ್ತ್ರ, ಹಸ್ತಪ್ರತಿಶಾಸ್ತ್ರ ಪರಿಜ್ಞಾನಗಳೆಂಬ ಉಭಯ ಅರ್ಹತೆಗಳನ್ನು ಮೈಗೂಡಿಸಿಕೊಂಡಿರಬೇಕಾಗುತ್ತದೆ.

ಈ ಸೈದ್ಧಾಂತಿಕ ಜ್ಞಾನದಷ್ಟೇ ಪ್ರಾಯೋಗಿಕ ಪರಿಜ್ಞಾನವೂ ಕ್ಷೇತ್ರಕಾರ್ಯಕರ್ತನಿಗೆ ಬೇಕು. ದೈಹಿಕ ಶ್ರಮ-ಆರ್ಥಿಕ ತೊಂದರೆಗಳನ್ನೂ ಮೀರಿದ ಆನ್ವಯಿಕ ಪರಿಣತಿಯಿದು. ಇಲ್ಲಿ ಸೈದ್ಧಾಂತಿಕ ಮತ್ತು ಪ್ರಾಯೋಗಿಕಗಳದು ಜ್ಞಾನಕ್ರಿಯೆಗಳ ಸಂಬಂಧದಂತಿದೆ. ಸೈದ್ಧಾಂತಿಕವಲ್ಲದ ಪ್ರಾಯೋಗಿಕ ಕುರುಡ, ಪ್ರಾಯೋಗಿಕವಲ್ಲದ ಸೈದ್ಧಾಂತಿಕ ಹೆಳವ. ಆದುದರಿಂದ ಕುರುಡನೂ ಅಲ್ಲದ ಹೆಳವನೂ ಅಲ್ಲದ ವ್ಯಕ್ತಿತ್ವ ಕ್ಷೇತ್ರಕಾರ್ಯಕರ್ತನದಾಗಿದೆ.

ಇತ್ತೀಚಿನ ದಿನಗಳಲ್ಲಿ ಯಾವುದೇ ಕ್ಷೇತ್ರಕಾರ್ಯಕ್ಕೆ ಯಂತ್ರೋಪಕರಣದ ಬಳಕೆ ಅನಿವಾರ್ಯವೆನಿಸಿದೆ. ಹಸ್ತಪ್ರತಿ ಕ್ಷೇತ್ರಕಾರ್ಯಕರ್ತನಿಗೆ ಕ್ಯಾಮರಾ, ಟೇಪರೆಕಾರ್ಡರ್ ಇವುಗಳಿಗಿಂತ ಮೈಕ್ರೊಫಿಲ್ಮ, ಫೋಟೋಸ್ಟ್ಯಾಟ್, ರಿಫಿರಾಕ್ಸಯಂತ್ರ, ಚಲನಚಿತ್ರ ಯಂತ್ರಗಳನ್ನು ನಿಯಂತ್ರಿಸುವ, ಪ್ರಸಂಗಬಂದರೆ ಸಣ್ಣಪುಟ್ಟ ರಿಪೇರಿ ಮಾಡುವ ತಾಂತ್ರಿಕಜ್ಞಾನ ಇಂದು ಅವಶ್ಯವೆಂದು ಹೇಳಬೇಕು.

ಈ ತ್ರಿವಿಧ ಅರ್ಹತೆಗಳವು ಬಲದಿಂದ ಈತನು ನಡೆಸುವ ಕ್ಷೇತ್ರಕಾರ್ಯ, ಪರೋಕ್ಷ ಕ್ಷೇತ್ರಕಾರ್ಯ (Non directive field work) ಮತ್ತು ಪ್ರತ್ಯಕ್ಷ ಕ್ಷೇತ್ರಕಾರ್ಯ (Directive field work) ಎಂದು ಎರಡು ತೆರನಾದರೆ. ಸ್ಥಳವನ್ನು ಪ್ರತ್ಯಕ್ಷ ಸಂದರ್ಶಿಸಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಬದಲು ಅಂಚೆಮೂಲಕ, ಅನ್ಯವ್ಯಕ್ತಿಮೂಲಕ ಈ ಕಾರ್ಯವನ್ನು ಕೈಗೂಡಿಸಿಕೊಳ್ಳುವುದು **ಪರೋಕ್ಷ ಕ್ಷೇತ್ರಕಾರ್ಯ**. ಹಸ್ತಪ್ರತಿ ಒಡೆಯರು ತಿಳಿವಳಿಕೆಯುವರಿದ್ದರೆ, ಹಸ್ತಪ್ರತಿಗಳು ಸಾರ್ವಜನಿಕ ಸಂಪತ್ತು ಎಂಬ ಪ್ರಜ್ಞೆಯುವರಾಗಿದ್ದರೆ ಅವುಗಳ "ಪರೋಕ್ಷಕ್ಷೇತ್ರಕಾರ್ಯ" ಸಾಧ್ಯವಾಗುತ್ತದೆ. ಆದರೆ ಮೇಲೆ ಹೇಳಿದ ಪ್ರಜ್ಞೆಯ ಅಭಾವದ ಭಾರತೀಯ ಪರಿಸರದಲ್ಲಿ ಇದು ಅಸಾಧ್ಯವೇ ಸರಿ. ಅಲ್ಲದೆ "ಪ್ರತ್ಯಕ್ಷ ಕ್ಷೇತ್ರಕಾರ್ಯ"ದಿಂದ 'ಪಠ್ಯಶೋಧ'ದೊಂದಿಗೆ 'ಪರಿಸರ ಶೋಧ'ವೂ ಸಾಧ್ಯವಾಗುವುದರಿಂದ ಪರೋಕ್ಷ ಕ್ಷೇತ್ರಕಾರ್ಯಕ್ಕಿಂತ ಪ್ರತ್ಯಕ್ಷ ಕ್ಷೇತ್ರಕಾರ್ಯವೇ ಲೇಸು. ಇದರಿಂದ ಹಸ್ತಪ್ರತಿಶಾಸ್ತ್ರ ಕೇವಲ "ಪ್ರಯೋಗ ಶಾಲೆ" ಅಥವಾ "ಗ್ರಂಥಾಲಯ"ಗಳ ಜ್ಞಾನಶಾಖೆಯಾಗಿರದೆ ಅದು ಪ್ರದೇಶ ಪರ್ಯಟನವನ್ನೂ ಬಯಸುತ್ತದೆಯೆಂದು ಸ್ಪಷ್ಟವಾಗುತ್ತದೆ.

ಪ್ರತ್ಯಕ್ಷ ಕ್ಷೇತ್ರಕಾರ್ಯವು ೧. ಪೂರ್ವಸಿದ್ಧತೆ ೨. ಕ್ಷೇತ್ರಕಾರ್ಯ ಎಂದು ಎರಡು ಹಂತಗಳನ್ನೊಳಗೊಂಡಿದೆ.

ಪೂರ್ವಸಿದ್ಧತೆಗೆ ಮಾನಸಿಕ ಪೂರ್ವಸಿದ್ಧತೆಯೇ ಮುಖ್ಯ.. ಇಲ್ಲದಿದ್ದರೆ ಒಲ್ಲದ ಕುದುರೆಗೆ ನೀರು ಕುಡಿಸುವ ವ್ಯರ್ಥಪ್ರಯತ್ನವಾಗಿ ಬಿಡುತ್ತದೆ. ಮಾನಸಿಕ ಸಿದ್ಧತೆಯ ತರುವಾಯ ತನ್ನ ಕ್ಷೇತ್ರಕಾರ್ಯದ ವಿಷಯ, ಪ್ರದೇಶ ಇವುಗಳಿಗೆ ಸಂಬಂಧಪಟ್ಟ ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ತಾನು ಕೈಗೆತ್ತಿಕೊಂಡ ಭಾಷೆ, ವಿಷಯಗಳಲ್ಲಿ ಹುಟ್ಟಿದ ಕೃತಿಗಳ ವಸ್ತು, ಅವುಗಳ ಪ್ರಕಟಿತ ಅಪ್ರಕಟಿತ ಸ್ಥಿತಿ, ಹಸ್ತಪ್ರತಿ ಕ್ಯಾಟಲಾಗ್‌ಗಳ ಸವಿವರ ಅಭ್ಯಾಸ, ಕ್ಷೇತ್ರಕಾರ್ಯಕ್ಕೆ ಆಯ್ದುಕೊಂಡ ಪ್ರದೇಶದ ಭೌಗೋಲಿಕ ತಿಳಿವಳಿಕೆ, ಮಾರ್ಗವ್ಯವಸ್ಥೆ, ವಾಹನ ಸೌಕರ್ಯ, ಅಲ್ಲಿಯ ಸ್ನೇಹಿತರ, ಅಧಿಕಾರಿಗಳ ಪ್ರತಿಷ್ಠಿತರ, ಹಸ್ತಪ್ರತಿ ಒಡೆಯರ ವಿವರ ಇತ್ಯಾದಿಗಳ ತಿಳುವಳಿಕೆಯೊಂದಿಗೆ ಪ್ರಯಾಣ ಪ್ರವೃತ್ತನಾಗಬೇಕು. ಇವಲ್ಲದೆ ಹಸ್ತಪ್ರತಿಗಳು ಪ್ರತಿಷ್ಠಿತರ ಮತ್ತು ಪಂಡಿತರ ವಂಶಜರಲ್ಲಿ, ದೇವಾಲಯ ಮಠಗಳಲ್ಲಿ ಸಿಗುವುದೆಂಬುದನ್ನೂ ಆಯಾ ಮತೀಯರಲ್ಲಿ ಸ್ವಮತೀಯ ಗ್ರಂಥಗಳೇ ಸಾಮಾನ್ಯವಾಗಿ ಲಭಿಸುವವೆಂಬುದನ್ನೂ ಅರಿತಿರಬೇಕು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಜೈನ–ವೀರಶೈವ ವ್ಯಕ್ತಿಗಳಲ್ಲಿ ಕನ್ನಡ ಹಸ್ತಪ್ರತಿ, ಬ್ರಾಹ್ಮಣ ವ್ಯಕ್ತಿಗಳಲ್ಲಿ ಸಂಸ್ಕೃತ ಹಸ್ತಪ್ರತಿ ಸಿಗುತ್ತವೆ. ಉತ್ತರ ಕರ್ನಾಟಕದಲ್ಲಿ ವೀರಶೈವ ಸಾಹಿತ್ಯ, ರಾಯಚೂರು ಜಿಲ್ಲೆಯಲ್ಲಿ ದಾಸ ಸಾಹಿತ್ಯ, ಕರಾವಳಿ ಪ್ರದೇಶದಲ್ಲಿ ಭಾಗವತ, ಯಕ್ಷಗಾನ ಹಸ್ತಪ್ರತಿಗಳೇ ವಿಪುಲವಾಗಿ ಸಿಗುತ್ತವೆ. ಇಂಥ ವೈಷಯಿಕ ಮತ್ತು ವ್ಯಾವಹಾರಿಕ ತಿಳಿವಳಿಕೆ ಕ್ಷೇತ್ರಕಾರ್ಯಕರ್ತನಿಗೆ ಇರಬೇಕು.

ಗೊತ್ತಾದ ಸ್ಥಳವನ್ನು ತಲುಪಿ ಕಾರ್ಯನಿರತನಾಗುವಲ್ಲಿಯೇ ಈತನ ಅಗ್ನಿ ಪರೀಕ್ಷೆ ಆರಂಭವಾಗುವುದು. ಕ್ಷೇತ್ರಕಾರ್ಯವೆಂದರೆ ಒಡೆಯನ ವಶದಲ್ಲಿರುವ ಹಸ್ತ ಪ್ರತಿಯನ್ನು ಪಡೆಯುವುದೇ ಆಗಿದೆ. ಸಾಮಾನ್ಯವಾಗಿ ಒಡೆಯ ಮತ್ತು ಕ್ಷೇತ್ರ ಕಾರ್ಯಕರ್ತರು ಪರಸ್ಪರ ಅಪರಿಚಿತರು. ಆದುದರಿಂದ ಕಾರ್ಯಕರ್ತ ತನ್ನ ಸಮ ಯೋಚಿತ ಮಾತು–ರೀತಿಗಳಿಂದ ಅವರ ಮನಸ್ಸನ್ನು ಗೆದೆಯಬೇಕು. ಅವರಿಗೆ ತನ್ನ ಬಗೆಗೆ, ತನ್ನ ಕಾರ್ಯದ ಬಗೆಗೆ, ಹಸ್ತಪ್ರತಿಗಳನ್ನು ಭಾಂಡಾರದಲ್ಲಿ ರಕ್ಷಿಸುವ ಬಗೆಗೆ ವಿಶ್ವಾಸ ಹುಟ್ಟುವಂತೆ ವರ್ತಿಸಬೇಕು. ವೈಯಕ್ತಿಕ ಪ್ರಭಾವ, ಸಾರ್ವಜನಿಕ ಪ್ರಚಾರ ದಿಂದ ತಕ್ಕ ವಾತಾವರಣವನ್ನು ನಿರ್ಮಿಸಬೇಕು. ಈ ಸಾರ್ವಜನಿಕ ಪ್ರಚಾರಗಳಿಗೆ ಹಸ್ತಪ್ರತಿಯ ಮಹತ್ವವನ್ನು ಪ್ರತಿಪಾದಿಸುವ ಉಪನ್ಯಾಸಗಳನ್ನು ಏರ್ಪಡಿಸುವ ಆಧುನಿಕ ಪ್ರಸಾರಮಾಧ್ಯಮಗಳನ್ನು ಅದರಲ್ಲಿಯೂ ಹಸ್ತಪ್ರತಿಯ ಮಹತ್ವ, ಅವುಗಳ ಸಂರಕ್ಷ ಣೆಯ ಮಹತ್ವಗಳನ್ನು ಬಿಂಬಿಸುವ ಚಲನಚಿತ್ರ ಪ್ರದರ್ಶನ ಇತ್ಯಾದಿಗಳನ್ನು ಏರ್ಪಾಡು ಮಾಡಬಹುದು.

ಯಾವುದೇ ವಸ್ತುವಿಗೂ ಅದರ ಒಡೆಯನಿಗೂ ಇರುವ ಭೌತಿಕ ಸಂಬಂಧ, ನಿತ್ಯಸಂಪರ್ಕ ಕಾರಣವಾಗಿ ಭಾವನಾತ್ಮಕ ಸಂಬಂಧವಾಗಿ ಬೆಳೆದಿರುತ್ತದೆ; ದೇವರ ಜೊತೆ ಜಗುಲಿಯ ಮೇಲೆ ಪೂಜಿಸುವ ಹಸ್ತಪ್ರತಿಗಳ ವಿಷಯವಾಗಿ ದೈವೀ ಸಂಬಂಧ ಬೆಳೆದುಕೊಂಡಿರುತ್ತದೆ. ಈಗ ಕ್ಷೇತ್ರಕಾರ್ಯಕರ್ತ ಕ್ರಮೇಣ ಒಡೆಯನ ದೈವಿಕ, ಭಾವ ನಾತ್ಮಕ, ಭೌತಿಕ ಸಂಬಂಧ ಸಂಕೋಲೆಗಳಿಂದ ಹಸ್ತಪ್ರತಿಯನ್ನು ಬಿಡಿಸಿಕೊಳ್ಳಬೇಕಾಗು ತ್ತದೆ. ಕೆಲವು ಸಲ ಅವರು ತಮ್ಮ ವಶದಲ್ಲಿರುವುದು ಅಸಾಮಾನ್ಯ ಕೃತಿಯೆಂಬ, ಹಸ್ತಪ್ರತಿಯನ್ನು ಹಸ್ತಾಂತರಿಸುವುದರಿಂದ ತಮಗೆ ಕೇಡೆಂಬ ಭ್ರಮೆಯಲ್ಲಿರುತ್ತಾರೆ. ಕೆಲವರಂತೂ ಹಸ್ತಪ್ರತಿ ಇಟ್ಟುಕೊಳ್ಳುವುದು ಪ್ರತಿಷ್ಠೆಯೆಂದು ಭಾವಿಸಿರುತ್ತಾರೆ. ಕ್ಷೇತ್ರಕಾರ್ಯಕರ್ತ ಮೊದಲು ಒಡೆಯನನ್ನು ಈ ಭ್ರಮೆಗಳಿಂದ ಮುಕ್ತಮಾಡಿ ಅವನನ್ನು ವಾಸ್ತವ ನೆಲೆಗೆ ತಂದು ನಿಲ್ಲಿಸಬೇಕು. ಆಮೇಲೆ ಹಸ್ತಪ್ರತಿಯನ್ನು ದಾನವಾಗಿಯೋ ಹಣಕೊಟ್ಟೋ ಪಡೆಯಬಹುದು. ಹಣಕ್ಕೆ ದೇವರನ್ನೂ ಮಾರುವ ದ್ರವ್ಯಭಕ್ತರ ಇಂದಿನ ಸಮಾಜದಲ್ಲಿ ಹಸ್ತಪ್ರತಿಗಳ ಖರೀದಿ ೨೦ನೆಯ ಶತಮಾನದ ಪೂರ್ವಾರ್ಧ ಕ್ಕಿಂತ ಉತ್ತರಾರ್ಧದಲ್ಲಿ ಸರಳ ಕಾರ್ಯವಾಗಿದೆ. ಆದುದರಿಂದ ಹಣದ ಆಸೆ ಆಮಿಷ ಗಳನ್ನು ಒಡ್ಡಿ ಹಸ್ತಪ್ರತಿಗಳನ್ನು ಖರೀದಿ ಮಾಡುವುದೇ ಇಂದು ಯೋಗ್ಯವಾಗಿ ತೋರು

ತ್ತವೆ. ಆದರೆ ಈ ವಿಧಾನದಿಂದಾಗಿ ಹಸ್ತಪ್ರತಿ ಒಡೆಯರು ಬಾಯಿಗೆ ಬಂದಷ್ಟು ಹಣಕೇಳುವ ಚಟಕ್ಕೆ ಬೀಳದಂತೆ ಎಚ್ಚರವಹಿಸಬೇಕು.

ಯಾವುದೇ ಕೃತಿ ಅಚ್ಚಾಗಿದ್ದರೆ ಅದರ ಹಸ್ತಪ್ರತಿಗೆ ಬದಲು ಅಚ್ಚಿನ ಪ್ರತಿ ಕಳಿಸಿ ಕೊಡುವ, ಹಸ್ತಾಂತರಿಸಲು ಒಪ್ಪದ ಬೆಲೆಯುಳ್ಳ ಹಸ್ತಪ್ರತಿಯಿದ್ದರೆ ಪ್ರತಿಮಾಡಿ ಕೊಂಡು ಹಿಂದಿರುಗಿಸುವ ಭರವಸೆ ನೀಡಬೇಕು. ಇಷ್ಟಾಗಿಯೂ ಒಪ್ಪದಿದ್ದರೆ ಸ್ನೇಹಿತರಿಂದ ಪ್ರತಿಷ್ಠಿತರಿಂದ ಅಧಿಕಾರಿಗಳಿಂದ ಅವನ ಮೇಲೆ ಒತ್ತಾಯ ತರಬೇಕು. ಒಂದು ರೀತಿ ಸಾಮ, ದಾನ, ಭೇದ, ದಂಡ ಕ್ರಮ ಇಲ್ಲಿ ನಡೆಯಬೇಕು. ಮೂಡ ಬಿದರೆ ಜೈನಮಠದ ಶ್ರುತಭಾಂಡಾರದಿಂದ ಧವಲಾ, ಜಯಧವಲಾ, ಮಹಾಧವಲಾ ಹಸ್ತಪ್ರತಿಗಳನ್ನು ಪಡೆಯಲು ಜೈನ ವಿದ್ವಾಂಸರು ವಹಿಸಿದ ಶ್ರಮ, ವ್ಯಯಿಸಿದ ಹಣ ಸಮಯಗಳು ಕ್ಷೇತ್ರಕಾರ್ಯಕರ್ತನಿಗೆ ಆದರ್ಶವಾಗಬೇಕು. ಒಂದು ವೇಳೆ ಹಸ್ತ ಪ್ರತಿ ಕೈವಶವಾಗುವುದೇ ಅಸಾಧ್ಯವೆನಿಸಿದಾಗ ಅದರ ಟಿಪ್ಪಣಿ ಬರೆದುಕೊಳ್ಳುವ, ಇದಕ್ಕಿಂತ ಮೈಕ್ರೋಫಿಲ್ಮ ಪ್ರತಿ ಮಾಡಿಕೊಳ್ಳುವುದರೊಂದಿಗೆ ಅದರ ಆದ್ಯಂತ್ಯಗರಿಗಳ ಫೋಟೋ ತೆಗೆದುಕೊಳ್ಳಬೇಕು.

ಹಸ್ತಪ್ರತಿ ಕ್ಷೇತ್ರಕಾರ್ಯವೆಂದರೆ ಪಠ್ಯವನ್ನು ಸಂಗ್ರಹಿಸುವುದಾಗಿರುವಂತೆ ಅದರ ಪರಿಸರವನ್ನು ಸಂಗ್ರಹಿಸುವುದೂ ಆಗಿದೆ. ಇವುಗಳನ್ನು 'ಪಠ್ಯ ಶೋಧ' 'ಪರಿಸರ ಶೋಧ' ಎಂದು ಕರೆಯಬಹುದು. ಈವರೆಗೆ ಕೇವಲ ಪಠ್ಯಶೋಧ ಮತ್ತು ಒಡೆ ಯನ ವಿಳಾಸ ದಾಖಲೆಗಳಿಗೆ ಮಾತ್ರ ಮೀಸಲಾಗಿರುವ ಕ್ಷೇತ್ರಕಾರ್ಯ ಇನ್ನು ಮೇಲೆ 'ಪರಿಸರ ಶೋಧ'ವನ್ನು ಮೈಗೂಡಿಸಿಕೊಂಡು ಮುನ್ನಡೆಯ ಬೇಕಾಗಿದೆ. ಏಕೆಂದರೆ ಯಾವುದೇ ಹಸ್ತಪ್ರತಿ ತನ್ನ ಪರಿಸರದಿಂದ ಉಪೇಕ್ಷೆ ಹೊಂದಿರಬಹುದು: ಇಲ್ಲವೆ ತನ್ನ ಪರಿಸರದಲ್ಲಿ ತುಂಬ ಪ್ರಭಾವಶಾಲಿಯಾಗಿ ವ್ಯವಹರಿಸುತ್ತಿರಬಹುದು. ಈ ಆವರಣವನ್ನು ಅಂದರೆ ಅದರ ಉಗಮ, ಆಗಮ, ಅದು ಆ ಮನೆತನ ಆ ಪರಿಸರದೊಂದಿಗೆ ಹೊಂದಿದ ಸಂಬಂಧ, ಗಳಿಸಿದ ಪ್ರತಿಷ್ಠೆ ಇತ್ಯಾದಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಹಸ್ತಪ್ರತಿ ಗಳು ಬೆಳ್ಗೊಳದಿಂದ ಬಿಹಾರದ ಆರಾಪಟ್ಟಣಕ್ಕೆ ಮತ್ತು ಜರ್ಮನಿಯ ಸ್ಟ್ರಾಟ್ಸ ಬರ್ಗಕ್ಕೆ ವಲಸೆಹೋದ ಸಂಗತಿಗಳು ನಿಜಕ್ಕೂ ದಾಖಲಾರ್ಹವಾಗಿವೆ. ಹಸ್ತಪ್ರತಿ ಯನ್ನು ಸ್ನಾನಮಾಡಿಯೇ ಮುಟ್ಟುವ, ವರ್ಷಕ್ಕೊಮ್ಮೆ ಜಾತ್ರೆಯಂಥ ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಿಚ್ಚಿ ಓದುವ, ಮಳೆ ಬರಲೆಂದು ಐರಾವತನೋಂತಿ, ವಿರಾಟಪರ್ವ, ರೇವಣಸಾಂಗತ್ಯ ಓದಿಸುವ, ಗ್ರಂಥದಿಂದ ರೋಗನಿವಾರಣೆ ಮಾಡುವ, ಜ್ಞಾನಸಿಂಧುವನ್ನು ವೃದ್ಧರಿಗೆ ಮಾತ್ರ ಓದಲು ಹೇಳುವ. ಹಸ್ತಪ್ರತಿಯನ್ನು ಶಕುನ ಗ್ರಂಥದಂತೆ ಬಳಸುವ ರೋಮಾಂಚಕ, ಭಾವನಾತ್ಮಕ ಸಂಬಂಧಗಳು ಕೆಲವು ಹಸ್ತ ಪ್ರತಿಗಳ ಸುತ್ತ ಬೆಳೆದಿರುತ್ತವೆ. ಹಳ್ಳಿಯಿಂದ ದಿಲ್ಲಿಯವರೆಗೆ ಪ್ರಚಾರಪಡೆದ ಹಾರು ಹಳ್ಳಿ ಕೋಡಿಮಠದ ಗ್ರಂಥ, ಬೀಗ ಬಂಧನದಲ್ಲಿರುವ ಹೊಕ್ಕರಾಣಿಯ ವಚನಗ್ರಂ

"ಪರಿಸರ ಶೋಧ"ಕ್ಕೆ ಒಳ್ಳೆಯ ಉದಾಹರಣೆಯಾಗಿವೆ. ಹೀಗೆ ಕೆಲವು ಹಸ್ತಪ್ರತಿ ಇಲ್ಲವೆ ಹಸ್ತಪ್ರತಿ ಸಂಗ್ರಹಗಳ ಸುತ್ತ ಇಂಥ ಭಾವಪರಿವೇಷ ಬೆಳೆದಿರುತ್ತದೆ. ಕಾರಣ ಯಾವುದೇ ಹಸ್ತಪ್ರತಿಯನ್ನು ಅದರ ಸುತ್ತ ಹೆಣೆದಿರುವ ಭಾವಕೋಶದೊಂದಿಗೇ ಸಂಗ್ರಹಿಸಬೇಕು.

ಕವಿಯ ಮತ್ತು ಕೃತಿನಾಯಕರ ವಂಶಸ್ಥರಲ್ಲಿ ಸಿಗುವ ಹಸ್ತಪ್ರತಿಗೆ ಮಿಕ್ಕೆಡೆಗಳಲ್ಲಿ ಸಿಗುವ ಹಸ್ತಪ್ರತಿಗಿಂತ ವಿಶೇಷ ಮಹತ್ವವಿರುತ್ತದೆ. ಕವಿಯ ಸ್ವಹಸ್ತಾಕ್ಷರ ಪ್ರತಿ ಇದಕ್ಕಿಂತ ಬೆಲೆಯುಳ್ಳುದು. ಮುದ್ದಣ, ಪಂಚಬಾಣರು ಕೈಮುಟ್ಟಿ ಬರೆದ ರಾಮಾಶ್ವಮೇಧ, ಭುಜಬಲಿ ಚರಿತೆಯ ಪ್ರತಿಗಳು ಈ ಸಾಲಿನಲ್ಲಿ ನಿಲ್ಲುತ್ತವೆ. "ಎಲ್ಲಾ ಗ್ರಂಥ ಬಗಲಾಗ ಪ್ರಭುಲಿಂಗ ಲೀಲೆ ತಲಿಮ್ಯಾಗ" ಎನ್ನುತ್ತಿದ್ದ ಮುಸಲ್ಮಾನ ಶಿಶುನಾಳ ಶರೀಫಸಾಹೇಬರು ಸ್ವಹಸ್ತದಿಂದ ಬರೆದ ಪ್ರಭುಲಿಂಗಲೀಲೆ ಹಸ್ತಪ್ರತಿಗೆ ಇರುವ ಸಾಂಸ್ಕೃತಿಕ ಮಹತ್ವವನ್ನು ಬೇರೆ ಹೇಳಬೇಕಿಲ್ಲ. ಆದುದರಿಂದ ಹಸ್ತಪ್ರತಿಯ ಆತ್ಮ ಚರಿತ್ರೆ ರೂಪದ ಇಂಥ ಸಂಗತಿಗಳ ಸಂಗ್ರಹದ ಕಡೆಗೂ ಕಾರ್ಯಕರ್ತ ಅವಶ್ಯ ಗಮನ ಕೊಡಬೇಕು. ಕೆಲವೊಮ್ಮೆ ಆ ಹಸ್ತಪ್ರತಿಗಳನ್ನು ಇಟ್ಟಸ್ಥಳ, ಕಟ್ಟಲು ಉಪಯೋಗಿಸಿದ ವಸ್ತ್ರ, ಬಳಸಲಾದ ಕ್ರಿಮಿನಿರೋಧಕ ದ್ರವ್ಯ ಇತ್ಯಾದಿಗಳೂ ವಿಶೇಷ ಮಾಹಿತಿ ಒದಗಿಸುವ ಸಂಭವವಿರುತ್ತದೆ. ಸಾಮಾನ್ಯವಾಗಿ ಹಸ್ತಪ್ರತಿಗಳನ್ನು ಕಟ್ಟಲು ಕೆಂಪು ವಸ್ತ್ರವನ್ನು, ಒಳಗೆ ಹಾವಿನ ಪೊರೆಯನ್ನು ಬಳಸುವುದರ ಔಚಿತ್ಯ ಇತ್ಯಾದಿಗಳನ್ನೂ ಲಕ್ಷಿಸಬೇಕು.

ಕೃತಿಯೊಂದನ್ನು 'ಹಸ್ತಪ್ರತಿ ರೂಪ'ದ ಜೊತೆ, ಪಾರಂಪರಿಕವಾಗಿ 'ವಾಚಿಕ ರೂಪ'ದಲ್ಲಿಯೂ ಕೆಲವೆಡೆ ಉಳಿಸಿಕೊಂಡು ಬಂದಿರುತ್ತಾರೆ. ಸಾಲೊಟಗಿಯಲ್ಲಿ ಡಂಗುರ ಪದಗಳನ್ನು, ಕೊಡೆಕಲ್ಲದಲ್ಲಿ ಕಾಲಜ್ಞಾನ ವಚನಗಳನ್ನು ವಿಶಿಷ್ಟ ಬಗೆಯಲ್ಲಿ ವಿಶಿಷ್ಟವಾದ್ಯಗಳೊಂದಿಗೆ ಹಾಡುತ್ತಿದ್ದು ಇಂಥಲ್ಲಿ ಹಸ್ತಪ್ರತಿ ಸಂಗ್ರಹದೊಂದಿಗೆ ಧ್ವನಿ ಮುದ್ರಣ ಕಾರ್ಯವನ್ನೂ ಪೂರೈಸಿಕೊಳ್ಳಬೇಕು. ಕೆಲವೆಡೆ ಹಸ್ತಪ್ರತಿ ಎಂದೋ ಹಾಳಾಗಿ ಕೇವಲ ಅದರ ಪದ್ಯಗಳನ್ನು ಪರಂಪರಾಗತವಾಗಿ ಹಾಡುತ್ತಿರಬಹುದು. ರಾಘವಾಂಕನ ಅನುಪಲಬ್ಧ ಶರಭಚಾರಿತ್ರದ ಬಿಡಿಪದ್ಯಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಹಾಡುವುದಾಗಿ ತಿಳಿದುಬಂದಿದೆ. ಉಳಿದು ನಿಂತ ಈ ಮತ್ತು ಇಂಥ ಸಂಪತ್ತನ್ನು ಕಷ್ಟಪಟ್ಟು ರಕ್ಷಿಸಿಕೊಳ್ಳಬೇಕು.

ಅನುಪಲಬ್ಧ ಕೃತಿಗಳ ಹಸ್ತಪ್ರತಿ ಇಲ್ಲವೆ ಅಪರೂಪ ಹಸ್ತಪ್ರತಿಗಳ ಶೋಧಕ್ಕೆ ಕ್ಷೇತ್ರಕಾರ್ಯದಲ್ಲಿ ಬಹುದೊಡ್ಡ ಮಹತ್ವವಿದೆ. ಆದುದರಿಂದ ಕ್ಷೇತ್ರಕಾರ್ಯಕರ್ತ ಅಂಥವುಗಳನ್ನು ನಿರಂತರ ಬೆನ್ನಟ್ಟಿ ನಡೆಯಬೇಕು. ಕವಿರಾಜಮಾರ್ಗ ಹಸ್ತಪ್ರತಿಯ ಸುಳುಹು ಹಿಡಿದು ಬೀದರ ಜಿಲ್ಲೆಯಲ್ಲಿ ಅದನ್ನು ಪತ್ತೆಹಚ್ಚಲು ನಾನು ೧೦ ವರ್ಷ ನಿರಂತರ ಪ್ರಯತ್ನ ಮಾಡಬೇಕಾಯಿತು. ಧಾರವಾಡ ಪ್ರದೇಶದಲ್ಲಿ "ಗಂಧಹಸ್ತಿ ಮಹಾಭಾಷ್ಯ"

ಹಸ್ತಪ್ರತಿಯಿದೆಯೆಂಬ ವದಂತಿಯನ್ನು ಹಿಂಬಾಲಿಸುವ ಪ್ರಯತ್ನ ಇಂದು ನಡೆಯ ಬೇಕಾಗಿದೆ.

ಹಸ್ತಪ್ರತಿ ಸಣ್ಣದಿರಲಿ ದೊಡ್ಡದಿರಲಿ, ಉಪಯುಕ್ತವಿರಲಿ ನಿರುಪಯುಕ್ತವಿರಲಿ ಅಲಕ್ಷಿಸದೆ ಅದೆಲ್ಲವನ್ನೂ ಸಂಗ್ರಹಿಸಬೇಕು. ಏಕೆಂದರೆ ಒಂದು ದೃಷ್ಟಿಯಿಂದ ನಿರುಪ ಯುಕ್ತವೆನಿಸಿದರೂ ಇನ್ನೊಂದು ದೃಷ್ಟಿಯಿಂದ ಅದು ತುಂಬ ಉಪಯುಕ್ತವಾಗಿರು ತ್ತದೆ. ಆರಾ ಹಸ್ತಪ್ರತಿಭಾಂಡಾರದಲ್ಲಿಯ ಬಿಡಿಗರಿಯ ಮೇಲಿನ ಒಂದು ಕಂದ ಪದ್ಯ ನಾಗವರ್ಮನ ವರ್ಧಮಾನ ಪುರಾಣ ಶೋಧನೆಗೆ ಎಂಥ ಬೆಲೆಯುಳ್ಳ ಸೂಚನೆ ನೀಡಿತೆಂಬುದನ್ನು ಇಲ್ಲಿ ನೆನೆಯಬಹುದು.

ಹಸ್ತಪ್ರತಿಯನ್ನು ಅವಲೋಕಿಸುವಲ್ಲಿ ಅವಸರ ಎಷ್ಟೂ ಸಲ್ಲದು, ಇದರಿಂದಾಗಿ ಕೆಲವು ಕೃತಿಗಳು ಕಣ್ತಪ್ಪಿ ಮರೆಯಲ್ಲುಳಿಯಬಹುದು. ಶ್ರೀ ಭುಜಬಲಿಶಾಸ್ತ್ರಿಗಳ ಕಣ್ತಪ್ಪಿಸಿ ಉಳಿದಿದ್ದ ನಾಗವರ್ಮನ ವರ್ಧಮಾನ ಪುರಾಣ ಶ್ರೀ ಸಣ್ಣಯ್ಯನವರಿಂದ ಬೆಳಕಿಗೆ ಬಂದುದನ್ನು ಇಲ್ಲಿ ನೆನೆಯಬೇಕು. ಹಳಕಟ್ಟಿಯವರು "ವಿಜಾಪುರ ಜಿಲ್ಲೆ ಯಲ್ಲಿದ್ದಾಗ ನಾನು ಹೋದ ಗ್ರಾಮಗಳಲ್ಲಿ ಅವುಗಳ (ವಚನಗಳ) ವಿಷಯವಾಗಿ ನಾನು ಶೋಧ ಮಾಡುತ್ತಿದ್ದು, ನನಗೆ ದೊರೆತ ವಚನಗಳಲ್ಲಿ ನನಗೆ ಮಹತ್ವವೆಂದು ಕಂಡ ವಚನಗಳನ್ನಷ್ಟೇ ನಾನು ಬರೆದುಕೊಳ್ಳುತ್ತ ಬಂದೆನು" ಎಂದೂ, ಆರ್. ನರಸಿಂಹಾ ಚಾರ್ ಅವರು "ಹಿಂದೆ ಮದರಾಸ್ ಪ್ರಾಚ್ಯಕೋಶಾಲಯ ಮುಂತಾದ ಸ್ಥಳಗಳಲ್ಲಿ ಪುಸ್ತಕಗಳನ್ನು ಪರಿಶೀಲಿಸಿದಾಗ ಪ್ರಥಮ ಸಂಪುಟಕ್ಕೆ ಬೇಕಾದ ವಿಷಯಗಳನ್ನು ಮಾತ್ರ ವಿಸ್ತಾರವಾಗಿ ಗುರುತು ಹಾಕಿಕೊಂಡು, ಅವಶ್ಯಕತೆ ಬಿದ್ದಾಗ ಪುನಃ ಹೋಗಿ ನೋಡಬಹುದೆಂಬ ಭಾವನೆಯಿಂದ ಮಿಕ್ಕ ವಿಷಯಗಳನ್ನು ಬಹಳ ಸಂಗ್ರಹವಾಗಿ ಗುರುತು ಹಾಕಿದ್ದೆನು. ಮತ್ತೊಂದಾವೃತ್ತಿ ಹೋಗಿ ನೋಡಿದಾಗ ಹಿಂದೆ ನೋಡಿದ್ದ ಪುಸ್ತಕಗಳಲ್ಲಿ ಹಲವು ನನ್ನ ದುರಾದೃಷ್ಟದಿಂದ ಹುಳುಗಳ ಬಾಯಿಗೆ ತುತ್ತಾಗಿ ನಾಶ ವಾಗಿ ಹೋಗಿದ್ದವು. ಹೀಗೆ ನಷ್ಟವಾದ ಪುಸ್ತಕಗಳ ಪ್ರತ್ಯಂತರಗಳು ಬೇರೆಕಡೆ ಎಷ್ಟು ಹುಡುಕಿದರೂ ದೊರೆಯದ" ಹೋದುವೆಂದೂ ಹೇಳಿದ ಮಾತುಗಳಿಂದ ಕ್ಷೇತ್ರಕಾರ್ಯದಲ್ಲಿ ಇವರು ತೋರಿದ ಉದಾಸೀನತೆ ಕಾರಣವಾಗಿ ನಮಗಾದ ನಷ್ಟವನ್ನು ಊಹಿಸಿಕೊಳ್ಳಬಹುದು.

ಸಂಗ್ರಹಿತ ಅಥವಾ ಸಂದರ್ಶಿತ ಹಸ್ತಪ್ರತಿಗಳ ಸರಿಯಾದ ಸವಿವರ ಮಾಹಿತಿ ಬರೆದುಕೊಳ್ಳಲು ಕಾರ್ಯಕರ್ತ ತಪ್ಪಬಾರದು. ಇಲ್ಲದಿದ್ದರೆ ಮುಂದಿನ ಕಾಲದಲ್ಲಿ ಸಂಶೋಧಕ ತುಂಬ ತೊಂದರೆ ಪಡಬೇಕಾಗುತ್ತದೆ. ಶ್ರೀ ಕೆ. ಬಿ. ಪಾಠಕ ಅವರು ನೋಡಿದ್ದ, ಪ್ಲೀಟರೂ ಬಳಸಿದ್ದ "ಉಪಸರ್ಗ ಕೇವಲಿಗಳ ಕಥೆ" ಶೀರ್ಷಿಕೆಯ ವಡ್ಡಾ ರಾಧನೆಯ ಹಸ್ತಪ್ರತಿ ಕೊಲ್ಹಾಪುರ ಲಕ್ಷ್ಮೀಸೇನ ಭಟ್ಟಾರಕ ಭಂಡಾರಕ್ಕೆ ಸೇರಿದು ದೆಂಬುದನ್ನು ಪತ್ತೆಹಚ್ಚಲು ಡಾ. ಎ. ಎನ್. ಉಪಾಧ್ಯೆ ಅವರಿಗೆ ಹಲವು ದಶಕಗಳೇ

ಬೇಕಾದವು. ಹುಲ್ಲೂರು ಶ್ರೀನಿವಾಸ ಜೋಯಿಸರು ನೋಡಿದ್ದ ಹಂಪೆಯ ಮಹಾಲಿಂಗನ ಬಾಲರಾಮನ ಸಾಂಗತ್ಯ, ಕೆಂಚಶೆಟ್ಟಿಸುತ ರಾಮಕೃತ ಸಿರುಮನ ಸಾಂಗತ್ಯದ ಏಕೈಕ ಹಸ್ತಪ್ರತಿಗಳು ಸಂಶೋಧಕರು ಜಾಲವೊಡ್ಡಿ ಹುಡುಕಿದರೂ ಇಂದು ಸಿಗಲೊಲ್ಲವು. "ವಚನಶಾಸ್ತ್ರಸಾರ"ದಲ್ಲಿಯ ಎಷ್ಟೋ ವಚನಗಳಿಗೆ ಇದ್ದ ಮೂಲ ಆಕರ ಗ್ರಂಥಗಳು ಇಂದು ನಮಗೆ ಸಿಗುತ್ತಿಲ್ಲ. "ಮೂವರ್ರಾಯರನೆ ಮಾರುವಂತೆಸೆದಿರ್ಕುಂ" ಎಂಬ ಪದ್ಯವನ್ನೊಳಗೊಂಡ ಗಿರಿಜಾಕಲ್ಯಾಣ ಹಸ್ತಪ್ರತಿಯನ್ನು ಕವಿಚರಿತೆಕಾರರು ಎಲ್ಲಿ ನೋಡಿದ್ದರೆಂಬುದು, ಇದಲ್ಲದೆ ಕವಿಚರಿತೆಯನ್ನು ಬರೆಯುವಲ್ಲಿ ಅವರು ಬಳಸಿದ್ದ ಕೆಲವು ಹಸ್ತಪ್ರತಿಗಳು ಎಲ್ಲಿಯವು ? ಎಂಬುದು ಇನ್ನೂ ಸಮಸ್ಯೆಯಾಗಿ ಉಳಿದಿವೆ. ಈ ಎಲ್ಲ ತಿಳಿವಳಿಕೆಯ ಹಿನ್ನೆಲೆಯಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳ ಗಂಟು ಕಟ್ಟುವ. ಗ್ರಂಥಾಲಯಕ್ಕೆ ರವಾನಿಸುವ ಇತ್ಯಾದಿ ಸಾಮಾನ್ಯವೆನಿಸಬಹುದಾದ ಕೆಲಸಗಳನ್ನೂ ತುಂಬ ಜಾಗರೂಕತೆಯಿಂದ ಮಾಡಬೇಕು. ಒಡೆಯನ ವಶದಿಂದ ಕ್ಷೇತ್ರಕಾರ್ಯಕರ್ತನಿಗೆ ಹಸ್ತಾಂತರವಾಗಿಯೂ "ಮೂರ್ಖಹಸ್ತೇ ನದಾತವ್ಯಂ" ಎಂದು ಹಸ್ತಪ್ರತಿ ಹಲುಬುವಂತಾಗಬಾರದು.

ಕರ್ನಾಟಕದಲ್ಲಿ ಹಸ್ತಪ್ರತಿಗಳು ಹಾಳಾಗಿ ಹೋದುದೂ ಹೇರಳ, ಉಳಿದು ಬಂದುದೂ ಹೇರಳ. ನಮ್ಮ ನಾಡಿನಲ್ಲಿ ಇವುಗಳ ಪರಿವೀಕ್ಷಣೆ ನೂರುವರ್ಷಗಳಿಂದ ನಡೆದರೂ ಸರಕಾರವಾಗಲೀ. ವಿಶ್ವವಿದ್ಯಾಲಯದಂಥ ಸಂಸ್ಥೆಗಳಾಗಲೀ ವ್ಯವಸ್ಥಿತವಾಗಿ. ಕ್ರಮಪತ್ತಾಗಿ ಈ ಕಾರ್ಯಮಾಡುವ ಗೋಜಿಗೆ ಹೋಗದೆ ಮನಸ್ಸುಬಂದಾಗ ಆಗಿಷ್ಟು ಈಗಿಷ್ಟು ಮಾಡಿಮುಗಿಸುತ್ತಲಿವೆ. ಹೀಗಾಗಿ ಹಸ್ತಪ್ರತಿಗಳನ್ನು ಮನೆಯಲ್ಲಿ ಮಡಗಿಕೊಳ್ಳುವ ಸಾಮಾನ್ಯರು. ಭಾಂಡಾರದಲ್ಲಿ ರಕ್ಷಿಸಬೇಕಾದ ಅಧಿಕಾರಿಗಳು- ಈ ಇಬ್ಬರಿಂದಲೂ ಹಸ್ತಪ್ರತಿಗಳಿಗೆ ಅನ್ಯಾಯವಾಗುತ್ತಲಿದೆಯೆನ್ನಬೇಕು.

ಕರ್ನಾಟಕದಲ್ಲಿ ಕನ್ನಡಹಸ್ತಪ್ರತಿಗಳು, ಇವುಗಳಿಗೆ ಎರಡನೆಯದಾಗಿ ಸಂಸ್ಕೃತ ಹಸ್ತಪ್ರತಿಗಳು ಹೇರಳ. ಪ್ರಾಕೃತ. ಮರಾಠಿ. ತೆಲುಗು, ತಮಿಳು ಮಲಯಾಳಿ ಹಸ್ತಪ್ರತಿಗಳು ವಿರಳ. ಧಾರ್ಮಿಕ ಕೇಂದ್ರಗಳಲ್ಲಿ. ಪ್ರತಿಷ್ಠಿತ-ಸಾಹಿತ್ಯಾಭ್ಯಾಸಿಗಳ ಮನೆತನಗಳಲ್ಲಿ ಚದರಿಹೋದ ಇವುಗಳ ಕ್ಷೇತ್ರಕಾರ್ಯ ಕೈಕೊಂಡ ಪ್ರಥಮವ್ಯಕ್ತಿ ಕರ್ನಲ್ ಮೆಕೆಂರಿಝಿ. ಭಾರತೀಯ ಗಣಿತಶಾಸ್ತ್ರದ ಮಾಹಿತಿ ಸಂಗ್ರಹಕ್ಕೆ ಬಂದು. ಈಸ್ಟ ಇಂಡಿಯಾ ಕಂಪನಿಯಲ್ಲಿ ನೌಕರಿ ಹಿಡಿದು, ದಕ್ಷಿಣ ಭಾರತದ ಭೌಗೋಲಿಕ ಮೋಜಣಿ ಕಾರ್ಯ ಕೈಕೊಂಡ ಈತ ಈ ದೇಶದ ಸಾಂಸ್ಕೃತಿಕ ಮೋಜಣೀದಾರನೂ ಆಗಿ ಬೆಲೆಯುಳ್ಳ ಕೆಲಸಮಾಡಿದನು; ಇದರ ಫಲವಾಗಿ ಕೆಲವು ಹಸ್ತಪ್ರತಿಗಳನ್ನೂ ಸಂಗ್ರಹಿಸಿ "ಕನ್ನಡ ಹಸ್ತಪ್ರತಿ ಕ್ಷೇತ್ರಕಾರ್ಯಕ್ಕೆ" ಶ್ರೀಕಾರ ಬರೆದನು. ಸಿ. ಪಿ. ಬ್ರೌನ್‌ನಿಂದ ಈ ಸಂಖ್ಯೆ ೧೫೪೦ಕ್ಕೆ ವರ್ಧಿಸಿತು. ಮದ್ರಾಸ ಪ್ರಾಚ್ಯಕೋಶಾಲಯದಲ್ಲಿದ್ದ ಈ ಸಂಪತ್ತಿನ ಕೆಲಭಾಗವನ್ನು ೧೯೬೭ರಲ್ಲಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ,

ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ, ಮೈಸೂರಿನ ರಾಜ್ಯಪುರಾತತ್ವ ಇಲಾಖೆ ಗಳಿಗೆ ಹಂಚಿಕೊಡಲಾಯಿತು.

೧೮೮೦ರಲ್ಲಿ ಸ್ಥಾಪಿತವಾದ ಮೈಸೂರಿನ ಪ್ರಾಚ್ಯವಸ್ತು ಸಂಗ್ರಹಾಲಯದ ಮುಖ್ಯಸ್ಥರಾದ ಬಿ. ಎಲ್. ರೈಸ್, ತರುವಾಯ ಈ ಸ್ಥಾನಕ್ಕೆ ಬಂದ ಆರ್. ನರಸಿಂಹಾ ಚಾರ್ ಹಸ್ತಪ್ರತಿ ಸಂಗ್ರಹಕಾರ್ಯವನ್ನು ತೃಪ್ತಿಕರವಾಗಿ ಪೂರೈಸಿದರು. ೧೮೯೧ರಲ್ಲಿ ಇದರಿಂದ ಹಸ್ತಪ್ರತಿ ಭಾಂಡಾರವೇ ಬೇರೆಯಾಗಿ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ ಹೆಸರು ಹೊತ್ತು ಮುನ್ನಡೆದು,೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಭಾಗ ವಾಗಿ ನಿಂತಿತು. ೧೯೬೬ರಲ್ಲಿ ಇಲ್ಲಿಯ ಎಲ್ಲ ಕನ್ನಡ ಹಸ್ತಪ್ರತಿಗಳನ್ನು ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲಾಯಿತು. ಈಗ ಗೌರ್ನಮೆಂಟ ಓರಿಯಂಟಲ್ ಲೈಬ್ರರಿಯಲ್ಲಿ ೧೨೦೦೦ ಸಂಸ್ಕೃತ ಹಸ್ತಪ್ರತಿಗಳು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ೬೦೦೦ ಕನ್ನಡ ಹಸ್ತಪ್ರತಿಗಳಿವೆ. ಈ ಅಂಕಿ–ಸಂಖ್ಯೆಗೆ ಧಾರವಾಡ ಪ್ರದೇಶಕ್ಕಿಂತ ಮೈಸೂರು ಪ್ರದೇಶ ದಲ್ಲಿ ಸಂಸ್ಕೃತ ಹಸ್ತಪ್ರತಿ ಅಧಿಕವಾಗಿರುವುದೇ ಕಾರಣವಾಗಿದೆ. ಮೇಲೆ ಹೇಳಿ ದಂತೆ ನಾಮಾಂತರಗೊಳ್ಳುತ್ತ ಬಂದ ಈ ಸಂಸ್ಥೆಯ ಇತರ ಮುಖ್ಯಸ್ಥರಾದ ಶ್ರೀ ಆರ್. ಶಾಮಾಶಾಸ್ತ್ರಿ, ಶ್ರೀ ಎಂ. ಬಸವಲಿಂಗಯ್ಯ. ಶ್ರೀ ಎಚ್.ಆರ್. ರಂಗಸ್ವಾಮಿ, ಶ್ರೀ ಎಚ್. ದೇವೀರಪ್ಪ. ಶ್ರೀ ಎನ್. ಬಸವಾರಾಧ್ಯರ ಕಾಲದಲ್ಲಿ ಸಹಜವಾಗಿಯೇ ದಕ್ಷಿಣ ಕರ್ನಾಟ ಕದ ಹಸ್ತಪ್ರತಿ ಸಂಗ್ರಹ ಕಾರ್ಯ ನಡೆಯಿತು. ಇತ್ತೀಚೆ ತಲೆಯೆತ್ತಿದ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರ. ಶ್ರೀ ಎಸ್. ಶಿವಣ್ಣ ಅವರ ಅಗಾಧ ನಿಷ್ಠೆ ಕಾರಣವಾಗಿ ಅಲ್ಪಾವಧಿಯಲ್ಲಿಯೇ ೩೦೦೦ ಕನ್ನಡ ಹಸ್ತಪ್ರತಿಗಳನ್ನು ಕಲೆಹಾಕಿದೆ. ಇವಲ್ಲದೆ ಬಸವಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು, ರಾಜ್ಯಪುರಾತತ್ವ ಇಲಾಖೆಗಳಂಥ ಸರಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ, ಸಿ. ಮಹಾದೇವಪ್ಪ. ಎಲ್. ಬಸವರಾಜು. ಕೆಳದಿ ಗುಂಡಾಜೋಯಿಸ್. ಎಂ. ಎಸ್. ಬಸವರಾಜಯ್ಯನವರಂಥ ವಿದ್ವಾಂಸರ ವಶ ದಲ್ಲಿ ಹಲವು ಹಸ್ತಪ್ರತಿಗಳಿವೆ. ಇದೆಲ್ಲವನ್ನು ಲೆಕ್ಕ ಹಾಕಿದರೂ ದಕ್ಷಿಣ ಕರ್ನಾಟಕ ದಲ್ಲಿ ಈವರೆಗೆ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳ ಸಂಖ್ಯೆ ೧೦ ಸಾವಿರವನ್ನು ಮೀರದು. ಉತ್ತರ ಕರ್ನಾಟಕದಲ್ಲಿ ಈ ಕಾರ್ಯವನ್ನು ನೇರವಾಗಿ ಕೈಗೆತ್ತಿಕೊಂಡ ಪ್ರಥಮ ಶ್ರೇಯಸ್ಸು ೧೯೩೯ರಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ಸಂಶೋಧನ ಸಂಸ್ಥೆಗೆ ಸಲ್ಲುತ್ತದೆ. ೧೯೫೬ರಂದು ಕರ್ನಾಟಕ ವಿಶ್ವವಿದ್ಯಾಲಯದ ವಶಕ್ಕೆ ಬಂದ ಈ ಸಂಸ್ಥೆಯಲ್ಲಿ ಈಗ ಸುಮಾರು ೫೦೦೦ ಕನ್ನಡ ಹಸ್ತಪ್ರತಿಗಳಿವೆ. ೧೯೬೭ರಲ್ಲಿ ಡಾ. ಆರ್. ಸಿ. ಹಿರೇಮಠ ಅವರ ನೇತೃತ್ವದಲ್ಲಿ ಕನ್ನಡ ಅಧ್ಯಯನಪೀಠ ಕೈಗೆತ್ತಿಕೊಂಡ "ಸಮಗ್ರ ವಚನ ವಾಙ್ಮಯ ಸಂಗ್ರಹ. ಸಂಸ್ಕರಣ ಮತ್ತು ಪ್ರಕಟಣ ಯೋಜನೆ"ಯ ಅಂಗವಾಗಿ ಪ್ರಾರಂಭಿಸಿದ ಹಸ್ತಪ್ರತಿ ಸಂಗ್ರಹಕಾರ್ಯದಿಂದಾಗಿ ಈವರೆಗೆ ಸುಮಾರು ೪೦೦೦ ಕನ್ನಡ ಹಸ್ತಪ್ರತಿಗಳು ಶೇಖರಿಸಲ್ಪಟ್ಟಿವೆ. ಇದರಲ್ಲಿ ಡಾ. ಹಳಕಟ್ಟಿಯವರು ಸಂಗ್ರಹಿ

ಸಿದ್ದ ೧೦೦೦ ಹಸ್ತಪ್ರತಿಗಳೂ ಸೇರಿವೆಯೆಂಬುದನ್ನು ಗಮನಿಸಬೇಕು. ಇದಲ್ಲದೆ ಬಾಗಿಲುಕೋಟೆಯ ಶ್ರೀ ಉಮಾಪತಿಶಾಸ್ತ್ರಿಗಳಲ್ಲಿ ೫೦೦ ಹಸ್ತಪ್ರತಿಗಳಿವೆ. ಹೀಗಾಗಿ ಉತ್ತರ ಕರ್ನಾಟಕದಲ್ಲಿಯೂ ಈವರೆಗೆ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳ ಸಂಖ್ಯೆ ೧೦ ಸಾವಿರವನ್ನು ಮೀರದು.

ಒಳನಾಡಿನ ಕೆಲವು ಧಾರ್ಮಿಕ ಕೇಂದ್ರಗಳಾದ ಶ್ರವಣಬೆಳ್ಗೊಳ, ಮೂಡಬಿದರೆ, ಹುಮ್ಮಚ, ವರಾಂಗ, ಕಾರ್ಕಳ, ಬಳ್ಳಾರಿಯ ಕೊಟ್ಟೂರಸ್ವಾಮಿಮಠ, ಗದುಗಿನ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಶಿವಯೋಗಮಂದಿರ, ಚಿತ್ರದುರ್ಗದ ಮುರುಘಾಮಠ ಇತ್ಯಾದಿ ಮಠಗಳಲ್ಲಿಯೂ ಕೆಲವು ಹಸ್ತಪ್ರತಿಗಳಿವೆ. ಇವೆಲ್ಲ ಸೇರಿ ೫ ಸಾವಿರ ಮಿಕ್ಕವು. ಹೊರನಾಡಿನಲ್ಲಿ ಕೊಲ್ಲಾಪುರ ಲಕ್ಷ್ಮೀಸೇನ ಭಟ್ಟಾರಕ ಜೈನಮಠ, ಬಾಹುಬಲಿ ಕ್ಷೇತ್ರ, ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯ, ಬಿಹಾರದ ಆರಾ ಪಟ್ಟಣ, ಮದ್ರಾಸ ಪ್ರಾಚ್ಯ ಕೋಶಾಲಯಗಳಲ್ಲಿ ಸೇರಿ ಒಟ್ಟು ೨೦೦೦ ಹಸ್ತಪ್ರತಿಗಳು ಸಿಗುತ್ತವೆ.

ಒಟ್ಟಿನಲ್ಲಿ ಈಗ ಸರಕಾರಿ ಸಂಸ್ಥೆಗಳಲ್ಲಿ, ಧಾರ್ಮಿಕ ಕೇಂದ್ರಗಳಲ್ಲಿ, ವ್ಯಕ್ತಿಗಳ ವಶದಲ್ಲಿ ರಕ್ಷಿತ, ಅರೆರಕ್ಷಿತ ಸ್ಥಿತಿಯಲ್ಲಿ ಸಂಗ್ರಹಿತವಾಗಿರುವ ಒಟ್ಟು ಕಟ್ಟುಗಳು ೨೭ ಸಾವಿರ. ಬಹುಶಃ ನಾಡಿನ ಒಳಹೊರಗೆ ಅರಕ್ಷಿತ ಸ್ಥಿತಿಯಲ್ಲಿ ಬಿಡಿಯಾಗಿ, ಸಂಗ್ರಹ ರೂಪವಾಗಿ ಬಿದ್ದುಕೊಂಡಿರುವ ಹಸ್ತಪ್ರತಿಗಳು ೧೩ ಸಾವಿರ ಎಂದು ಲೆಕ್ಕ ಹಾಕಿದರೂ ಈ ಸಂಖ್ಯೆ ೪೦ ಸಾವಿರವನ್ನು ಮೀರದು. ಇದು ಕನ್ನಡ ಹಸ್ತಪ್ರತಿಗಳ ಒಟ್ಟು ಸಂಪತ್ತು.

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಪ್ರಾರಂಭದಿಂದಲೂ ಸಂಗ್ರಹಿಸುತ್ತ ಬಂದ ಹಸ್ತಪ್ರತಿಗಳು ಒಂದೂ ಉಳಿಯದಂತೆ ಯಾರ ಯಾರ ವಶಕ್ಕೋ ಹೋಗಿಬಿಟ್ಟವು. ವಿದ್ಯಾವರ್ಧಕ ಸಂಘ, ಇತಿಹಾಸ ಸಂಶೋಧನ ಮಂಡಲ ಈ ಕಡೆಗೆ ಕಣ್ಣೆತ್ತಿ ಸಹ ನೋಡಲಿಲ್ಲ. ಅಸ್ತಿತ್ವಕ್ಕೆ ಬಂದು ೭೫ ವರ್ಷಗಳಾದರೂ, ಆಗಾಗ ಯಾವಾವುದೋ ಕೆಲಸಗಳನ್ನು ಮಾಡುತ್ತಲಿರುವ ಕನ್ನಡ ಸಾಹಿತ್ಯ ಪರಿಷತ್ತು ಈ ವಿಷಯವಾಗಿ ಮೊದಲಿನಿಂದಲೂ ಉಪೇಕ್ಷೆ ತಾಳುತ್ತ ಬಂದಿದೆ. ಬೆಂಗಳೂರಿನ ಮಿಥಿಕ್ ಸೊಸೈಟಿಗೆ ಕನ್ನಡ ಹಸ್ತಪ್ರತಿ ಬಹುಶಃ ಅಸ್ಪೃಶ್ಯ. ರಾಜ್ಯಪುರಾತತ್ವ ಇಲಾಖೆಯ ೧೦ ಮ್ಯೂಜಿಯಂಗಳು ರಾಜ್ಯದಲ್ಲಿದ್ದರೂ ಅವುಗಳಿಗೆ ಹಸ್ತಪ್ರತಿಗಳು ಮಲಮಗ. ಆದುದರಿಂದ ಈ ಕ್ಷೇತ್ರದಲ್ಲಿ ಏನಾದರೂ ಕೆಲಸವಾಗಿದ್ದರೆ ಅದು ವಿಶ್ವವಿದ್ಯಾಲಯಗಳಿಂದ ಮಾತ್ರ. ಅದೂ ಕೆಲಮಟ್ಟಿಗೆ. ಈಗ ರಾಜ್ಯದಲ್ಲಿ ೫ ವಿಶ್ವವಿದ್ಯಾಲಯಗಳಿವೆ. ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಯೋಜನಾಬದ್ಧವಾಗಿ ಸಮಗ್ರ ಕ್ಷೇತ್ರಕಾರ್ಯವನ್ನು ಇವು ಕೈಗೆತ್ತಿಕೊಳ್ಳಬೇಕು: ತಮತಮಗೆ ಹೊಂದಿದ ಹೊರನಾಡುಗಳಿಗೂ ಕೈಚಾಚಬೇಕು. ಹೊಸದಾಗಿ ತಲೆಯೆತ್ತಿದ ಮಂಗಳೂರು ಗುಲ್ಬರ್ಗಾ ವಿಶ್ವವಿದ್ಯಾಲಯ

ಗಳ ಪರಿಸರವಂತೂ ಈ ವಿಷಯವಾಗಿ ಯಾರೂ ಕೈಯಿಡದ ಕನ್ನೆ ನೆಲಗಳು. ಕೆಲಸಕ್ಕೆ ಹೆಸರಾಗಿರುವ! ಸರಕಾರಿ ಸಂಸ್ಥೆಗಳಿಂದ ಈ ಕೆಲಸ ಖಂಡಿತ ಆಗದು. ವಿಶ್ವವಿದ್ಯಾಲಯಗಳೇ ಒಂದು ನಿರ್ದಿಷ್ಟ ಅವಧಿಯ ಯೋಜನೆ ಹಾಕಿಕೊಂಡು ಈ ಕೆಲಸವನ್ನು ಮಾಡಿ ಮುಗಿಸಬೇಕು.

ಸಂಗ್ರಹಿತ ಹಸ್ತಪ್ರತಿಗಳನ್ನು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ ಶಾಸ್ತ್ರೀಯವಾಗಿ ಕಾಪಾಡುತ್ತಲಿದೆ, ಜೀರ್ಣ, ಅಲಭ್ಯ ಹಸ್ತಪ್ರತಿಗಳನ್ನು ಮೈಕ್ರೊಫಿಲ್ಮ್ ಮಾಡಿ ರಕ್ಷಿಸುತ್ತಲಿದೆ, ಸೂಚಿಗಳನ್ನು ಪ್ರಕಟಿಸುತ್ತಲಿದೆ. (ಈ ಸೂಚಿಗಳು ಅಸಮರ್ಪಕವಾಗಿವೆ, ಅಪ್ರಾಮಾಣಿಕವಾಗಿವೆಯೆಂಬುದು ಬೇರೆ ಮಾತು). ಆದರೆ ಕರ್ನಾಟಕ, ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿಗಳು ಅರೆರಕ್ಷಿತ ಸ್ಥಿತಿಯಲ್ಲಿವೆ: ಸೂಚೀಕಾರ್ಯ ಅಲಕ್ಷಿತವಾಗಿದೆ. ಇಂದಿನ ಅನಾಸಕ್ತ ಪರಿಸರವನ್ನು ನೋಡಿದರೆ “ಕ್ಯಾಟಲಾಗಸ್ ಕ್ಯಾಟಲಾಗರಮ್ ಆಫ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್” ಸಿದ್ಧಪಡಿಸುವುದು ಕನ್ನಡಿಗರಿಗೆ ಕನಸಿನ ಮಾತೇ ಸರಿ. ಕನ್ನಡ ಅಧ್ಯಯನ ಪೀಠ ೧೦ ವರುಷದ ಹಿಂದೆ ಕೈಗೆತ್ತಿಕೊಂಡ ಇಂಥ ಒಂದು ಯೋಜನೆ ಒಳ್ಳೆಯ ಭವಿಷ್ಯವಿಲ್ಲದೆ ಕೊನೆಯುಸಿರೆಳೆಯಿತು. ಈ ಎಲ್ಲ ಕೊರತೆಗಳನ್ನು ತುಂಬಿಕೊಳ್ಳುವುದರತ್ತ ನಮ್ಮ ನಾಡಿನಲ್ಲಿ ಹಸ್ತಪ್ರತಿ ಕ್ಷೇತ್ರಕಾರ್ಯ ಇಂದು ಮುನ್ನಡೆಯಬೇಕಾಗಿದೆ.

ಹಸ್ತಪ್ರತಿಗಳ ರಕ್ಷಣೆ ಮತ್ತು ಪರಿಚಲನೆ

● ಬಿ. ಎಸ್. ಸಣ್ಣಯ್ಯ

ಪುರಾತನ ಕಾಲದಿಂದ ಜಗತ್ತಿನಲ್ಲಿ ಗಳಿಸಿದ ಜ್ಞಾನವನ್ನು ಒಂದಲ್ಲ ಒಂದು ರೀತಿಯಲ್ಲಿ ಉಳಿಸಿಕೊಂಡು ಬರಲಾಗಿದೆ. ಹೀಗೆ ಉಳಿಸಿಕೊಂಡು ಬರಲು ಜನರು ತಮಗೆ ದೊರೆತ ಸಾಧನ ಸಂಪತ್ತುಗಳನ್ನು ಬಳಸಿಕೊಂಡರು. ಕೆಲವರು ಜೊಂಡುಹುಲ್ಲಿನಿಂದ ತಯಾರಿಸಿದ ವಸ್ತುವನ್ನೇ ಬರವಣಿಗೆಯ ಸಾಧನವನ್ನಾಗಿ ಬಳಸಿದರೆ ಮತ್ತೆ ಕೆಲವರು ಮರದ ಎಲೆಗಳನ್ನೂ, ತೊಗಟೆಗಳನ್ನೂ ಉಪಯೋಗಿಸಿದರು. ಜೊತೆಗೆ ರಾಜರು ಮಾಡಿದ ಶಾಸನಗಳನ್ನೂ ನೀತಿನಿಯಮಗಳನ್ನೂ ಕಲ್ಲಿನ ಮೇಲೆ ಕೆತ್ತಿರುವುದೂ ಉಂಟು. ಹೀಗೆ ಬಳಸಿದ ಬರವಣಿಗೆಯ ಸಾಧನಗಳಲ್ಲಿ ಓಲೆ ಅಥವಾ ತಾಡಪತ್ರಗಳು ದಕ್ಷಿಣ ಭಾರತದಲ್ಲಿ ಬಹುಪ್ರಸಿದ್ಧಿಯನ್ನು ಪಡೆದಿವೆ. ಕಾಗದ ಸುಲಭವಾಗಿ ದೊರೆಯುವ ವರೆವಿಗೂ ಇವುಗಳಲ್ಲಿ ನಕಲು ಮಾಡುವ ಕೆಲಸ ಸಾಂಗೋಪಾಂಗವಾಗಿ ನಡೆದುಕೊಂಡು ಬಂದಿದೆ. ಭಾರತದಲ್ಲಿ ೧೫ನೇ ಶ. ನಕ್ಕೆ ಕಾಗದ ಬಳಕೆಗೆ ಬಂದರೂ ಸಾಮಾನ್ಯ ಜನತೆಯ ಕೈಗೆ ಸುಲಭವಾಗಿ ದೊರೆಯದೇ ಹೋದುದರಿಂದ ೧೯ನೇ ಶ. ನದ ವರೆಗೂ ಓಲೆಗಳಲ್ಲಿ ಈ ಪ್ರತಿಗಳನ್ನು ಮಾಡಿರುವುದು ಕಂಡುಬರುತ್ತದೆ. ೧೮೫೦ರಲ್ಲಿದ್ದ ಮುಮ್ಮಡಿ ಕೃಷ್ಣರಾಜ ಮತ್ತು ಅಳಿಯ ಲಿಂಗರಾಜರ ಕೃತಿಗಳು ಇದಕ್ಕೆ ಸಾಕ್ಷಿಯಾಗಿ ನಿಂತಿವೆ.

ವೇದಪುರಾಣೇತಿಹಾಸಾದಿ ಗ್ರಂಥಗಳು ಹಸ್ತಪ್ರತಿಯಲ್ಲಿಯೇ ಉಳಿದುಬಂದು ನಮಗೆ ಲಭ್ಯವಾಗಿವೆ. ಇವುಗಳಲ್ಲಿ ಬಹಳಷ್ಟು ಪಾಲು ನಷ್ಟವಾಗಿದ್ದರೂ ಉಳಿದವನ್ನಾದರೂ ರಕ್ಷಿಸಿ ಜನತೆಯ ಉಪಯೋಗಕ್ಕೆ ಬರುವಂತೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ. ಈ ಹಸ್ತಪ್ರತಿಗಳು ಹಾಳಾಗುವ ವಿವಿಧ ರೀತಿಗಳನ್ನೂ ಅದಕ್ಕೆ ನಿವಾರಣೋಪಾಯಗಳನ್ನೂ ಇಲ್ಲಿ ಸೂಚಿಸುವುದು, ಹಾಗೆಯೇ ಸಂಗ್ರಹ ಹಾಗೂ ಸಂರಕ್ಷಿತವಾದ ಈ ಗ್ರಂಥಗಳನ್ನು ಓದುಗರಿಗೆ ಹೇಗೆ ಒದಗಿಸಬಹುದು ಎಂಬುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ಭಾರತದೇಶದ ಇತಿಹಾಸವನ್ನು ನೋಡಿದರೆ ಅನೇಕ ಅತ್ಯುತ್ತಮ ಗ್ರಂಥಗಳು ಮಣ್ಣುಪಾಲಾಗಿರುವುದು ತಿಳಿದುಬರುತ್ತದೆ. ಕನ್ನಡ ಸಾಹಿತ್ಯದಲ್ಲಿ ಹರಿವಂಶ, ಶೂದ್ರಕ, ಭುವನೈಕರಾಮಾಭ್ಯುದಯದಂತಹ ಹೆಸರು ತಿಳಿಯುವ ಮಹತ್ಕೃತಿಗಳೂ, ಹೆಸರೇ ಇಲ್ಲದಂತೆ ಹಾಳಾಗಿಹೋಗಿರುವ ಹಲವಾರು ಕೃತಿಗಳೂ ನಮಗೆ ದೊರೆಯು

ದಾಗಿವೆ. ಅತ್ಯಂತ ಉಪಯುಕ್ತವಾದ ಅನೇಕ ಹಳೆಯಗ್ರಂಥಗಳು ಇಂದುಕೂಡ ಹುಳುಗಳ ಪಾಲೋ, ಕೆರೆ ನದಿಗಳ ಪಾಲೋ ಆಗುತ್ತಿವೆ. ಹಲವು ಓಲೆಗ್ರಂಥಗಳನ್ನು ಕಟ್ಟಿಗೆಗಳಾಗಿ ಉಪಯೋಗಿಸಿರುವುದುಂಟು. ಹಲವು ಮನೆಗಳಲ್ಲಿ ಇಂದಿಗೂ ಓಲೆ ಕಟ್ಟುಗಳು ಪೂಜಾಗೃಹವನ್ನು ಸೇರಿ ಹುಳುಗಳ ಆಹಾರವಾಗುತ್ತಿರುವುದು ತೀರಾ ಶೋಚನೀಯ ಸಂಗತಿ. ಕೆಲವರಲ್ಲಿ ಹೊರಗೆ ಕೊಡಬಾರದೆಂಬ ಅಂಧಶ್ರದ್ಧೆಯಿದೆ. ಇಂತಹ ಅಂಧಶ್ರದ್ಧೆ ಅಪಾರಜ್ಞಾನರಾಶಿಯನ್ನೇ ಕ್ರಿಮಿಕೀಟಗಳ ಪಾಲಿಗೆ ತುತ್ತಾಗಿಸಿದೆ.

ಹೀಗೆ ಹಲವು ಕಡೆಗಳಲ್ಲಿ ಹಾಳಾಗುತ್ತಿರುವ ಹಸ್ತಪ್ರತಿಗಳನ್ನು ಸಂಗ್ರಹಿಸುವುದರಿಂದ ಎಷ್ಟೋ ಕೃತಿಗಳನ್ನು ಸಂರಕ್ಷಿಸಿದಂತಾಗುತ್ತದೆ. ಇಂತಹ ಕಾರ್ಯದಿಂದ ಹೊಸ ಹೊಸ ಕೃತಿಗಳು ಬೆಳಕಿಗೆ ಬರುತ್ತಲೇ ಇವೆ. ಈ ಕಾರ್ಯ ವ್ಯಾಪಕವಾಗಿ ತ್ವರಿತವಾಗಿ ನಡೆಯಬೇಕಾಗಿದೆ.

ಅಪಾಯಗಳು :

ಸಂಗ್ರಹಿಸಿದ ಗ್ರಂಥಗಳನ್ನು ಕಾಪಾಡುವುದೂ ಒಂದು ಕಷ್ಟ ಸಾಧ್ಯವಾದ ಕೆಲಸವೇ ಆಗಿದೆ. ಈ ಗ್ರಂಥಗಳಿಗೆ ಬರುವ ಅಪಾಯಗಳು ವಿವಿಧ ರೀತಿಯಾಗಿವೆ. ಕೆಲವು ಹುಳುಹುಪ್ಪಟೆಗಳಿಂದ, ಮತ್ತೆ ಕೆಲವು ಗಾಳಿ ಬೆಳಕು ಬೆಂಕಿಗಳಿಂದ ಆಗಬಹುದು. ಗಾಳಿಯು ಅತಿಉಷ್ಣತೆಯಿಂದಾಗಲಿ, ಅತಿಶೀತದಿಂದಾಗಲಿ ಹಸ್ತಪ್ರತಿಗಳು ಹಾಳಾಗುವುದುಂಟು. ಹಾಗೆಯೇ ಗಾಳಿಯಲ್ಲಿ, ಅದರಲ್ಲಿಯೂ ಪಟ್ಟಣಗಳ ಗಾಳಿಯಲ್ಲಿ ಹಲವಾರು ಅನಿಲಗಳು ಸೇರಿರುತ್ತವೆ. ಇವು ಹಸ್ತಪ್ರತಿಗಳ ಮೇಲೆ ಪರಿಣಾಮ ಬೀರುವುದು ಸಹಜವಾಗಿದೆ. ಶೀತ ಹೆಚ್ಚಾದರೆ ಬೂಷ್ಟು ಬರುತ್ತದೆ. ಇದು ಓಲೆ ಗ್ರಂಥಗಳಿಗೂ ಬರುವುದುಂಟು.

ಧೂಳು:– ಧೂಳು ನೋಡಲು ಬಹಳ ಅಲ್ಪವಾದದುದಾರೂ ಇದರಿಂದ ಆಗುವ ಅನಾಹುತ ಅಲ್ಪವಲ್ಲ. ಈ ಧೂಳಿನ ಕಣಗಳ ಮೂಲಕವಾಗಿಯೇ ಕ್ರಿಮಿಕೀಟಗಳ ಅಂಡಾಣುಗಳು ಬಂದು ಹಸ್ತಪ್ರತಿಗಳಲ್ಲಿ ಸೇರುತ್ತವೆ.

ಕೀಟಗಳು :

ಜನರು ದೇಶದಿಂದ ದೇಶಕ್ಕೆ ಹೋಗುವುದು ಹಾಗೂ ಗ್ರಂಥಗಳ ಪ್ರಸಾರ ಹೆಚ್ಚಿದಂತೆಲ್ಲ ಕೀಟಗಳ ಹಾವಳಿಯೂ ಹೆಚ್ಚುತ್ತಾ ಹೋಯಿತು. ಒಂದೆಡೆಯಿಂದ ಮತ್ತೊಂದೆಡೆಗೆ ಕೀಟಗಳು ಹರಡಲು ಇದು ಸಹಕಾರಿಯಾಯಿತು. ಆದುದರಿಂದಲೇ ವಿಶ್ವದ ಎಲ್ಲಾ ಭಾಗಗಳಲ್ಲಿಯೂ ವಿವಿಧರೀತಿಯ ಎಲ್ಲ ಕ್ರಿಮಿಕೀಟಗಳೂ ಕಂಡು ಬರುತ್ತವೆ. ಪೂರ್ವ ಏಷಿಯಾ, ಕಾನ್‌ಸ್ಟಾಂಟಿನೋಪಲ್, ಗ್ರೀಸ್ ಮತ್ತು ಬ್ರಿಟನ್ ದೇಶದ ಮಠಗಳಲ್ಲಿನ ಗ್ರಂಥಾಲಯಗಳು ಗ್ರಂಥಹುಳುಗಳ ಹಾವಳಿಗೆ ತುತ್ತಾಗಿವೆ. ರೆಮೆಡಿಯಮ್ ಕಾಂಟ್ರವರ್ಮ್ಸ್ ಲಿಬ್ರೊರಮ್ (Remedium Contra Vermes

Librorum) ಎಂಬ ೧೩ನೇ ಶತಮಾನದ ಒಂದು ಹಸ್ತಪ್ರತಿ ಇದ್ದಿತು ಎಂದು ತಿಳಿದು ಬರುವುದರಿಂದ ಆ ಕಾಲಕ್ಕೆ ಗ್ರಂಥಗಳಿಗೆ ಕೀಟಗಳ ಕಾಟ ಬಹಳವಾಗಿದ್ದಿತೆಂದು ಊಹಿಸಬಹುದು. ಸಿ.ಎಂ.ಇ. ಟೋನ್ ಎಂಬಾತನು ೧೯೩೫ರಲ್ಲಿ ಪ್ರಕಟವಾದ ಆಟೋಬಯಾಗ್ರಫಿ ಆಫ್ ಮಾಸ್ಟರ್ ಬುಕ್‌ವರ್ಮ್ (Autobiography of Master Book-worm) ಎಂಬ ತನ್ನ ಗ್ರಂಥದಲ್ಲಿ ಆಜಿ ಆಫ್ ಮಾಮ್ಸ್‌ಬರಿಯಲ್ಲಿನ ಆಂಥಾಲಜಿ ಆಫ್ ಕಾಫಲಸ್ ಗ್ರಂಥವಲ್ಲಿ ಹುಟ್ಟಿದ ಒಂದು ಗ್ರಂಥಹುಳು ಕೊನೆಗೆ ಮಿಚಿಗನ್ ಸ್ಟೇಟ್ ವಿಶ್ವವಿದ್ಯಾನಿಲಯದ ಡಾ॥ ಸ್ಯಾಮ್ಯುಯಲ್ ಜಾನ್ಸನ್ ಅರ್ಥಕೋಶದ ಮೊದಲನೆಯ ಮುದ್ರಣದಲ್ಲಿ ಬದುಕಿರಬಹುದು ಎಂದು ಹೇಳಿರುವ ಮಾತು ಅರ್ಥಪೂರ್ಣವಾಗಿದೆ. ಈ ಕೀಟಗಳ ಕಾಟ ಶೀತೋಷ್ಣವಲಯಗಳಲ್ಲಿ ಯಾವಾಗಲೂ ಇದ್ದೇ ಇದೆ. ಇತ್ತೀಚೆಗೆ ಕಂಡುಹಿಡಿದ ಗ್ರಂಥಪಾಲಕರ ದೃಷ್ಟಿಗೆ ಬೀಳದೆಯೇ ಪುಸ್ತಕಗಳು ಮತ್ತು ಕಪಾಟುಗಳನ್ನು ತಿನ್ನುವ ಜೀರುಂಡೆ ಮರಿ (Beetle Carvae) ಯು ಇತರ ಎಲ್ಲ ಗ್ರಂಥ ವೈರಿಗಳಿಗಿಂತಲೂ ಹೆಚ್ಚು ಆತಂಕಕಾರಿಯಾಗಿದೆ.

ಈ ಕೀಟಗಳ ಬೆಳವಣಿಗೆಯನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ಪೂರ್ಣವಾಗಿ ಬೆಳೆಯದ ಪೊರೆಹುಳುಗಳು. ಇವು ನೋಡುವುದಕ್ಕೆ ಎಲ್ಲ ವಿಧದಿಂದಲೂ ಪೂರ್ಣವಾಗಿ ಬೆಳೆದ ಹುಳುಗಳಂತೆಯೇ ಕಂಡರೂ ರೆಕ್ಕೆಗಳು ಪೂರ್ಣವಾಗಿ ಬಂದಿರುವುದಿಲ್ಲ. ಈ ಗುಂಪಿಗೆ ಸೇರುವ ಕೀಟಗಳೆಂದರೆ ಜಿರಲೆ, ಗದ್ದಲು, ಬುಕ್ ಲೈಸ್ ಮತ್ತು ಸಿಲ್ವರ್‌ಫಿಷ್. ಎರಡನೆಯ ಗುಂಪಿಗೆ ಸೇರುವ ಕೀಟಗಳೆಂದರೆ ತಮ್ಮ ಜೀವಿತ ವೇಳೆಯಲ್ಲಿ ಗಮನಿಸಬಹುದಾದ ರೂಪಾಂತರಗಳನ್ನು ಹೊಂದುವ ಜೀರುಂಡೆಮರಿ ಅಥವಾ ಸಾಮಾನ್ಯವಾಗಿ ಕರೆಯುವ ಪುಸ್ತಕ ಕ್ರಿಮಿ. ಚೆನ್ನಾಗಿ ಬೆಳೆದ ಜೀರುಂಡೆ ಮರಿಯು ವಯಸ್ಸಾದ ಹುಳುವನ್ನು ಯಾವ ರೀತಿಯಲ್ಲಿಯೂ ಹೋಲುವುದಿಲ್ಲ. ಇದರಲ್ಲಿ ಸಿತೊದ್ರಿಪ ಪನಿಸಿಯಮ್ ಎಂಬ ಜಾತಿಯದು ಯುರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಮತ್ತೊಂದು ಜಾತಿಯ ಗ್ಯಾಸ್ಟ್ರಲಸ್ ಇಂಡಿಕಸ್ ಎಂಬುದು ಸಾಮಾನ್ಯವಾಗಿದೆ. ಇದು ಎಲ್ಲ ವಿಧವಾದ ವಸ್ತುವನ್ನೂ ತಿಂದು ಅರಗಿಸಿಕೊಳ್ಳುವ ಶಕ್ತಿಯನ್ನು ಪಡೆದುದಾಗಿದೆ. ಇದು ಮಾಡುವ ಮತ್ತೊಂದು ಕೆಡುಕೆಂದರೆ ತನಗೆ ದೊರೆತುದನ್ನು ತಿಂದು ಮುಗಿಸುವುದಲ್ಲದೆ ಗ್ರಂಥಗಳ ಅಂಚುಗಳಲ್ಲಿ ಮೊಟ್ಟೆಗಳನ್ನಿಡುತ್ತದೆ. ಈ ಮೊಟ್ಟೆಗಳು ಬೇಸಿಗೆಯಲ್ಲಿ ೫–೧೦ ದಿನಗಳಲ್ಲಿ ಮರಿಗಳಾಗಿ ತಮ್ಮ ತಾಯಿಯ ಕೆಲಸವನ್ನು ಮುಂದುವರಿಸುತ್ತವೆ. ಇವು ಗ್ರಂಥಗಳ ಒಂದು ಪಕ್ಕದಿಂದ ಹಾಳೆಗಳನ್ನು ಕೊರೆದು ತಿನ್ನುತ್ತಾ ಹೋಗಿ, ಮತ್ತೆ ಮೇಲೆ ಬಂದು ತಮ್ಮ ಕಾರ್ಯವನ್ನು ಪ್ರಾರಂಭಿಸುತ್ತವೆ. ಹೀಗೆ ಸುಮಾರು ೧೫ ದಿನಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ನಡೆಸಿದ ಮೇಲೆ ಪ್ರಾಪ್ತ ವಯಸ್ಸಿನವಾಗಿ ಬೆಳೆದು ಮೊಟ್ಟೆಯಿಡಲು ಪ್ರಾರಂಭಿಸುತ್ತವೆ.

ನುಸಿ : ಇದಕ್ಕೆ ಸಿಲ್ವರ್‌ಫಿಷ್ ಅಥವಾ ಬೆಳ್ಳಿಮೀನು ಎಂಬ ಹೆಸರು, ಹುಳುವಿನ ಬಣ್ಣ ಮತ್ತು ಆಕಾರದಿಂದಲೇ ಬಂದುದಾಗಿದೆ. ಸಮಶೀತೋಷ್ಣ ಹವಾಗುಣವು ಯಾವ ಕೀಟಗಳ ಬೆಳವಣಿಗೆಗೂ ಸಹಕಾರಿಯಾಗಿರುವುದಿಲ್ಲ. ಆದರೆ ಇಂತಹ ಹವಾ ಗುಣದಲ್ಲಿಯೂ ಈ ಹುಳುವನ್ನು ನಾವು ನೋಡಬಹುದು. ಇವು ಪುಸ್ತಕದ ರಟ್ಟು ಕಟ್ಟುವಿಕೆಗೆ ಉಪಯೋಗಿಸುವ ಅಂಟುಪದಾರ್ಥಗಳಿಂದಲೂ, ಕಾಗದದ ನುಣುಪಿ ಗಾಗಿ ಉಪಯೋಗಿಸುವ ಜಿಲಟಿನ್ ಮತ್ತು ಪಿಷ್ಟ ಪದಾರ್ಥಗಳಿಂದಲೂ ಆಕರ್ಷಿತ ವಾಗುತ್ತವೆ.

ಬೆಳ್ಳಿ ಬೂದು ಮಿಶ್ರ ಬಣ್ಣದಿಂದ ಕೂಡಿದ ಈ ನುಸಿಹುಳುವು ಅರ್ಧ ಅಂಗುಲ ಕ್ಕಿಂತ ಹೆಚ್ಚು ಉದ್ದವಾಗಿರುವುದಿಲ್ಲ. ಇದು ತನ್ನ ಎರಡೂ ತುದಿಗಳಲ್ಲಿ ಉದ್ದವಾಗಿ ಚೂಪಾಗಿರುವ ಸ್ಪರ್ಶಾಂಗಗಳನ್ನು ಹೊಂದಿದೆ. ಈ ಅಂಗಗಳಿಂದ ಗ್ರಂಥಗಳಿಗೆ ಹಾನಿ ಯುಂಟು ಮಾಡುತ್ತದೆ. ಕಾಗದದಲ್ಲಿ ರಂಧ್ರವನ್ನು ಕೊರೆಯುತ್ತದೆ. ಇದು ರಾತ್ರಿ ವೇಳೆಯಲ್ಲಿ ತನ್ನ ಕೆಲಸವನ್ನು ಚುರುಕಾಗಿ ಮಾಡಿದರೂ ಕತ್ತಲು ಪ್ರದೇಶದಲ್ಲಿ ಹಗಲೂ ತನ್ನ ಕೆಲಸವನ್ನು ಮುಂದುವರಿಸುತ್ತದೆ. ಇವುಗಳನ್ನು ಗ್ರಂಥಾಲಯಗಳಲ್ಲಿಯೇ ಅಲ್ಲದೆ ಅಡಿಗೆಮನೆಗಳಲ್ಲಿಯೂ ಕಾಣಬಹುದು.

ಜಿರಲೆ : ಕಾಕ್ ಕ್ರೋಚ್ ಪದವನ್ನು ಒಟ್ಟು ಬ್ಲಾಟಿಡೆ ಕೀಟಗಳ ಗುಂಪಿಗೆ ಉಪಯೋಗಿಸುವುದು ಸಾಮಾನ್ಯವಾಗಿದೆ. ಈ ಜಾತಿಯಲ್ಲಿ ಅನೇಕ ವಿಧವಿದೆ. ಕಪ್ಪು ಜೀರುಂಡೆಯನ್ನೇ ಜಿರಲೆ ಎಂದು ಕರೆಯುವುದು ರೂಢಿಯಲ್ಲಿದೆ. ಇದಕ್ಕೆ ಗೋಡೆಯ ಸುಣ್ಣದಿಂದ ಹಿಡಿದು ಕಾಲಿನ ಬೂಟುಗಳ ವರೆಗೆ ಎಲ್ಲವೂ ಆಹಾರವಾಗ ಬಹುದು. ಇವು ಕಣ್ಣಿಗೆ ಸುಲಭವಾಗಿ ಕಾಣದಂತೆ ಸಂದುಗೊಂದುಗಳಲ್ಲಿ ಆಶ್ರಯ ಪಡೆಯುತ್ತವೆ. ಇವುಗಳ ಹತ್ತಿಕೊಂಡಂತಿರುವ ಮೈ ಸುಲಭವಾಗಿ ಅಡಗಿಕೊಳ್ಳಲು ಸಹಾಯಕವಾಗಿದೆ. ಸಾಮಾನ್ಯವಾಗಿ ಕಕ್ಕಸುಗಳ ಮೂಲಕವೋ, ಕೊಳಾಯಿಗಳ ಮೂಲ ಕವೋ, ಕಟ್ಟಡದ ತಳಹದಿಯಿಂದಲೋ ಬಂದು ಗ್ರಂಥಾಲಯವನ್ನು ಸೇರುತ್ತವೆ. ಗಂಡು ಜಿರಲೆಗಳು ಪರದೆಯಿಲ್ಲದ ಕಿಟಕಿಗಳ ಮೂಲಕ ಹಾರಿಬರುವುದು ಉಂಟು. ಕತ್ತಲಾಗುತ್ತಿದ್ದಂತೆಯೆ ತಾವು ಅಡಗಿದ್ದ ಸ್ಥಳದಿಂದ ಹೊರಬಂದು ತಮ್ಮ ಆಡಳಿತ ವನ್ನು ಪ್ರಾರಂಭಿಸುತ್ತವೆ.

ಜಿರಲೆಗಳನ್ನು ಗ್ರಂಥಗಳ ಶತ್ರುಗಳೆಂದು ೧೬೦೨ರಲ್ಲಿಯೇ ಯೂಲಿಸಸ್ ಆಲ್ಡ್ರೊ ವಾಂಡಸ್ (Ulysses Aldrovandus) ಎಂಬಾತನು ಹೇಳಿದ್ದಾನೆ. ೧೬೫೪ರಲ್ಲಿ ಬಹಮ (Bahama) ದ್ವೀಪಗಳಲ್ಲಿ ಇವುಗಳನ್ನು ಉಪದ್ರವ ಜೀವಿಗಳೆಂದು ಕರೆದಿದ್ದಾರೆ. ೧೮೩೭ರಲ್ಲಿ ವೆಸ್ಟ್ ಇಂಡೀಸ್ ದೇಶದಲ್ಲಿ ಜಿರಲೆಗಳು ಹೆಚ್ಚು ಸಂಖ್ಯೆಯಲ್ಲಿದ್ದು ಅನೇಕ ಗ್ರಂಥಗಳನ್ನು ನಾಶಮಾಡಿದುದಲ್ಲದೆ ರೋಗಿಗಳನ್ನೂ ಸತ್ತವರನ್ನೂ ಮುತ್ತಿದ್ದುವು ಎಂದು ತಿಳಿಸಿದ್ದಾರೆ.

ಗ್ರಂಥಹುಳು (Book-worm) : ಈ ಹುಳು ಪುಸ್ತಕದಲ್ಲಿಯೇ ಹುಟ್ಟಿ ಅಲ್ಲಿಯೇ ಬದುಕುವುದರಿಂದ ಪುಸ್ತಕಕ್ರಿಮಿ ಅಥವಾ ಬುಕ್‌ವರ್ಮ್ ಎಂಬ ಹೆಸರು ಇದಕ್ಕೆ ಅನ್ವರ್ಥನಾಮವಾಗಿ ಬಂದಿದೆ. ಪುಸ್ತಕಕ್ರಿಮಿ ಎಂದಾಗ ಹಲವರು ಪುಸ್ತಕಗಳಲ್ಲಿ ಕಂಡುಬರುವ ಎಲ್ಲ ಹುಳುಗಳಿಗೂ ಈ ಹೆಸರು ಇರಬಹುದೆಂದು ತಿಳಿಯುತ್ತಾರೆ. ಆದರೆ ಗ್ರಂಥಗಳಲ್ಲಿ ಕಂಡುಬರುವ ಎಲ್ಲ ಹುಳುಗಳಿಗೂ ಈ ಹೆಸರಿಲ್ಲ. ಅವುಗಳಲ್ಲಿ ಇದೂ ಒಂದಾಗಿದೆ.

ಈ ಹುಳುಗಳು ಓಲೆ ಕಾಗದ ಎರಡರಲ್ಲಿಯೂ ಕಂಡುಬರುತ್ತವೆ. ಇವು ಹಾಳೆಗಳ ಅಥವಾ ಪತ್ರಗಳ ಮೂಲಕ ರಂಧ್ರಗಳನ್ನು ಕೊರೆದು ಗ್ರಂಥಗಳನ್ನು ಹಾಳುಮಾಡುತ್ತವೆ. ಇವು ಹೆಚ್ಚುಕಾಲ ಗ್ರಂಥದಲ್ಲಿಯೇ ನಿಂತರೆ ಓಲೆಗ್ರಂಥಗಳಾದಿಯಾಗಿ ಎಲ್ಲವೂ ಮುಟ್ಟಿದರೆ ಪುಡಿಯಾಗುವಂತಹ ಸ್ಥಿತಿಯನ್ನು ಮುಟ್ಟುತ್ತವೆ. ಕೆಲವು ಹಸ್ತಪ್ರತಿಗಳಲ್ಲಿ ಕೊರೆದಿರುವ ನೂರಾರು ನೇರವಾದ ಮತ್ತು ಚಿತ್ರವಿಚಿತ್ರವಾದ ರಂಧ್ರಗಳನು ನೋಡಿದರೆ ಯಾರಿಗಾದರೂ ಆಶ್ಚರ್ಯವುಂಟಾಗುವುದು ಸಹಜವಾಗಿದೆ. ಇಷ್ಟು ತೀವ್ರ ಹಾನಿಯನ್ನು ಈ ಸಣ್ಣಹುಳು ಮಾಡಬಲ್ಲುದೇ ಎಂಬ ಸಂದೇಹ ಮೂಡುತ್ತದೆ.

ಇವು ಗ್ರಂಥ ಹುಟ್ಟಿದಾಗಿನಿಂದಲೂ ಇದ್ದೇ ಇವೆ. ಈಜಿಪ್ಟ್ ದೇಶದಲ್ಲಿ ಪಪೈರಿಗೂ. ಭಾರತದಲ್ಲಿ ಓಲೆಗಳಿಗೂ ಹಾನಿಯನ್ನುಂಟು ಮಾಡಿವೆ. ಈಗಲೂ ಎಲ್ಲ ವಿಧವಾದ ಗ್ರಂಥಗಳಿಗೂ ಕೆಡುಕನ್ನುಂಟುಮಾಡುತ್ತಿವೆ. ಇವು ಸಮಶೀತೋಷ್ಣ ವಲಯದಲ್ಲಿ ಇಲ್ಲವೇ ಇಲ್ಲ ಎಂದು ಹೇಳುವಂತಿಲ್ಲ. ಇವುಗಳ ಹಾವಳಿ ಉಷ್ಣವಲಯ ಮತ್ತು ಅದರ ಪರಿಸರದ ಪ್ರದೇಶಗಳಲ್ಲಿ ಹೆಚ್ಚಾಗಿದೆ. ಅರಿಸ್ಟಾಟಲ್ ತತ್ತ್ವಜ್ಞಾನಿಯು ಇದನ್ನು ಉಪದ್ರವಕಾರಿ ಎಂದು ಕರೆದಿದ್ದಾನೆ. ಡಾ॥ ಪಿ. ಬ್ರೂಕ್ಸ್ ಎಂಬಾತನು ತನ್ನ ಲೇಖನದಲ್ಲಿ[೧] "ಪುಸ್ತಕಗಳಿಗೆ ಕಾಲ, ಗಾಳಿ, ಹವಾಮಾನ, ಬೆಂಕಿ ಮತ್ತು ಪ್ರವಾಹಗಳಿಂದ ಆಗುವ ಅನಾಹುತವನ್ನು ಈ ಪುಸ್ತಕಕ್ರಿಮಿಯಿಂದ ಆಗುವ ಅನಾಹುತಕ್ಕೆ ಹೋಲಿಸಿದರೆ ಮೊದಲನೆಯದರಿಂದ ಆಗುವ ಹಾನಿ ಅತ್ಯಲ್ಪ ಎಂದೇ ಹೇಳಬೇಕಾಗುತ್ತದೆ" ಎಂದಿದ್ದಾನೆ.

ಗೆದ್ದಲು ಹುಳು : ಗೆದ್ದಲು ಹುಳುಗಳಲ್ಲಿ ೧೮೦೧ ಪ್ರಭೇದಗಳಿವೆ ಎಂದು ತಿಳಿದುಬರುತ್ತದೆ. ಇದರಿಂದ ವಿಶ್ವದಲ್ಲಿ ಹಲವೆಡೆ ತೊಂದರೆಗಳಾಗಿವೆ. ಹುಲ್ಲು, ಕಸಕಡ್ಡಿ, ಒಣಗಿದ ಗಿಡಗಳು ಮತ್ತು ಮರ, ಕಟ್ಟಡಗಳಿಗೆ ಉಪಯೋಗಿಸುವ ಮರ ಮುಟ್ಟುಗಳು, ಗ್ರಂಥಗಳು, ಕಾಗದಪತ್ರಗಳು ಎಲ್ಲವೂ ಇದಕ್ಕೆ ಆಹಾರವೇ. ಇವುಗಳು ಒಂದು ಗ್ರಂಥಾಲಯವನ್ನು ಸೇರಿದರೆ ಒಂದು ರಾತ್ರಿಯಲ್ಲಿ ಮತ್ತೆ ತುಂಬಲಾರದಂತಹ ನಷ್ಟವನ್ನುಂಟುಮಾಡಬಹುದು. ಯಾವುದಾದರೂ ಗ್ರಂಥಾಲಯಕ್ಕೆ ಗೆದ್ದಲು ಬರುವ ಸಾಧ್ಯತೆಯಿದ್ದರೆ ಅದನ್ನು ನಿತ್ಯವೂ ಪರೀಕ್ಷಿಸಿ ಸೂಕ್ತ ಎಚ್ಚರಿಕೆ ವಹಿಸುವುದು

---

೧ Newyork Times : Book Review Section Jan. 1933

ಅತ್ಯವಶ್ಯಕ. ಮರದ ಕಪಾಟುಗಳನ್ನು ಗೋಡೆಗೆ ಒರಗಿಸಿಡುವುದನ್ನು ಆದಷ್ಟುಮಟ್ಟಿಗೆ ಬಿಡುವುದು ಉಚಿತ.

ಫೈರ್ ಬ್ರ್ಯಾಟ್ಸ್ (Firebrats) :

ಇವು ನುಸಿಹುಳುಗಳನ್ನೇ ಹೋಲುತ್ತವೆ. ಇವುಗಳನ್ನು ಗ್ರಂಥಾಲಯುಗಳಲ್ಲಿ ಕಾಣುವುದು ಅಪರೂಪ.

ಸೋಸಿಡ್ಸ್ (Psocids) :

ಈ ಹುಳುಗಳನ್ನು ಸಾಮಾನ್ಯವಾಗಿ ಬುಕ್‌ಲೈಸ್ ಎಂದು ಕರೆಯುತ್ತಾರೆ. ಇವು ಬೂದು ಇಲ್ಲವೆ ನಸುಹಳದಿ ಬಣ್ಣವುಳ್ಳವಾಗಿವೆ. ಇವುಗಳಿಗೆ ಮೃದುವಾದ ಮೈಯೂ ಚೆನ್ನಾಗಿ ಬೆಳೆದ ದವಡೆಗಳೂ ಇವೆ. ಬೆಳೆದ ದವಡೆಗಳಿರುವುದರಿಂದ ಅಗಿಯಲು ಅನುಕೂಲವಾಗಿರುತ್ತದೆ. ಈ ಹುಳುಗಳು ಹೆಚ್ಚಾಗಿ ಶೀತವೇರಿದ, ಉಪ ಯೋಗಿಸದೆ ಇರುವ ಹಳೆಯ ಗ್ರಂಥಗಳಲ್ಲಿರುತ್ತವೆ. ಇವು ಪುಸ್ತಕದ ರಟ್ಟಿನ ಭಾಗ ವನ್ನೂ ಅದಕ್ಕೆ ಉಪಯೋಗಿಸಿದ ಅಂಟನ್ನೂ ತಿಂದು ಪುಸ್ತಕವನ್ನು ಹಾಳುಮಾಡು ತ್ತವೆ. ಕಾಗದದ ಹಸ್ತಪ್ರತಿಗಳಿಗೆ ಇವುಗಳಿಂದ ಅಪಾಯವಾಗಬಹುದಾದರೂ ಓಲೆ ಗ್ರಂಥಗಳಿಗೆ ಇವರ ಉಪಟಳ ಇಲ್ಲವೆಂದೇ ಹೇಳಬಹುದು.

ಮೇಲೆ ಹೇಳಿದವುಗಳಲ್ಲದೆ ಕಂದುಬಣ್ಣದ ಹಾರುಕೀಟ, ಮಣ್ಣಿನ ಕಣಜಗಳು, ಗ್ರಂಥಚೇಳುಗಳಿಂದ ಅಲ್ಪಸ್ವಲ್ಪ ನಷ್ಟ ಸಂಭವಿಸಬಹುದಾದರೂ ಇವುಗಳಿಂದ ಸುಲಭ ವಾಗಿ ಗ್ರಂಥರಕ್ಷಣೆ ಮಾಡಬಹುದು.

ಬೂಷ್ಟು : ಹೀಗೆ ಕ್ರಿಮಿಕೀಟಗಳಲ್ಲದೆ ಸಸ್ಯವರ್ಗಕ್ಕೆ ಸೇರಿದ ಬೂಷ್ಟಿನಿಂದ ಹಸ್ತಪ್ರತಿಗಳಿಗೆ ಸಾಕಷ್ಟು ಹಾನಿ ಆಗುವುದು ಸಂಭವನೀಯ. ತೇವಾಂಶದಿಂದ ಉತ್ಪತ್ತಿಯಾಗುವ ಈ ಬೂಷ್ಟಿನ ಬೆಳವಣಿಗೆ ಅತಿ ಹೆಚ್ಚಾಗಿರುತ್ತದೆ. ಇದು ಒಂದು ಗ್ರಂಥಕ್ಕೆ ಬಂದರೆ ಉಳಿದವಕ್ಕೂ ಹರಡುವುದು ಸಾಮಾನ್ಯ. ಆದ್ದರಿಂದ ಬೂಷ್ಟು ಬರುವುದನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದು. ಬಂದ ಕೂಡಲೇ ಅವುಗಳನ್ನು ಬೇರ್ಪಡಿಸಿ ಅಗತ್ಯವಾದ ಉಪಚಾರ ಮಾಡುವುದು ಮತ್ತು ಉಳಿದವುಗಳಿಗೆ ಬರದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ.

ನಿವಾರಣೋಪಾಯಗಳು :

ಮೇಲೆ ಹೇಳಿದ ಅಪಾಯಗಳಿಂದ ಹಸ್ತಪ್ರತಿಗಳನ್ನು ರಕ್ಷಿಸಲು ವಿವಿಧ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಕೋಶಾಗಾರಕ್ಕೆ ಬಂದ ಹಸ್ತಪ್ರತಿ ಗಳನ್ನು ಧೂಪನ (Fumigation) ಉಪಚಾರಕ್ಕೆ ಒಳಪಡಿಸಬೇಕು: ಇದರಿಂದ ಅವುಗಳಲ್ಲಿ ಸೇರಿರಬಹುದಾದ ಹುಳುಹುಪ್ಪಟೆಗಳು ನಾಶವಾಗುತ್ತವೆ ಅನಂತರ ಅವು ಗಳನ್ನು ಶುದ್ಧೀಕರಿಸಿ ಧೂಳು ಮತ್ತು ಇತರ ಅಶುದ್ಧ ಪದಾರ್ಥಗಳಿಂದ ಮುಕ್ತಗೊಳಿಸ

ಬಹುದು. ಹೀಗೆ ಶುದ್ಧವಾದ ಹಸ್ತಪ್ರತಿಗಳನ್ನು ಕೋಶಾಗಾರಕ್ಕೆ ಸೇರಿಸುವುದು, ಅವುಗಳ ದುರಸ್ತುಕಾರ್ಯ ಕೈಗೊಳ್ಳುವುದು ಅತ್ಯವಶ್ಯಕ.

ಓಲೆಗ್ರಂಥಗಳ ಕಟ್ಟುಗಳಿಗೆ ಎರಡು ಕಡೆಯೂ ಮರದ ಪಟ್ಟಿಗಳನ್ನು ಹಾಕಿ, ಕಟ್ಟುಗಳ ರಂಧ್ರದಿಂದ ದಾರವನ್ನು ಪೋಣಿಸಿ ಕಟ್ಟಿಡುವುದು ಸಾಮಾನ್ಯ. ಇವುಗಳನ್ನು ಜೋಡಿಸುವಾಗ ಹಲಗೆಯ ಒಂದು ಕಡೆ ಪಟ್ಟಿಯು ಕಪಾಟಿನ ಕೆಳಗಣ ಹಲಗೆಯ ಮೇಲೂ, ಮತ್ತೊಂದು ಭಾಗದ ಪಟ್ಟಿಯು ಮೇಲ್ಭಾಗಕ್ಕೂ ಬರುವಂತೆ ಜೋಡಿಸಿಡಬೇಕು. ಒಂದು ಕಟ್ಟಿಗೂ ಮತ್ತೊಂದು ಕಟ್ಟಿಗೂ ಸ್ವಲ್ಪ ಸ್ಥಳವನ್ನು ಬಿಡಬೇಕು. ಇಲ್ಲದಿದ್ದಲ್ಲಿ ಪತ್ರಗಳ ಅಂಚುಗಳು ಮುರಿಯುವ ಸಂಭವ ಇದೆ. ಕೆಲವು ಕೋಶಾಗಾರಗಳಲ್ಲಿ ಈ ಕಟ್ಟುಗಳನ್ನು ಅವುಗಳ ಅಳತೆಗೆ ತಕ್ಕಂತೆ ಮಾಡಿಸಿದ ಮರದ ಪೆಟ್ಟಿಗೆಗಳಲ್ಲಿ ಇಟ್ಟಿರುವುದು ಕಂಡುಬರುತ್ತದೆ. ಕಾಗದದ ಹಸ್ತಪ್ರತಿಗಳನ್ನು ಅವುಗಳ ಅವಶ್ಯಕತೆಗೆ ತಕ್ಕಂತೆ ಅವುಗಳಲ್ಲಿ ಸೇರಿರುವ ಆಮ್ಲಗಳನ್ನು ಹೋಗಲಾಡಿಸಿ ದುರಸ್ತು ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ.

ಇಂತಹ ಸಾಮಾನ್ಯ ರೀತಿಯ ರಕ್ಷಣೋಪಾಯಗಳಲ್ಲದೆ ಹಸ್ತಪ್ರತಿಗಳಿಗೆ ಒದಗುವ ವಿವಿಧ ರೀತಿಯ ಅಪಾಯಗಳಿಗೆ ತಕ್ಕಂತಹ ವಿಶೇಷ ನಿವಾರಣೋಪಾಯಗಳನ್ನು ಎಲ್ಲ ಹಸ್ತಪ್ರತಿ ಭಾಂಡಾರಿಗಳೂ ಕೈಗೊಳ್ಳಬೇಕಾಗುತ್ತದೆ.

ಗೆದ್ದಲು :– ಹಸ್ತಪ್ರತಿಗಳನ್ನಿಡುವ ಕಟ್ಟಡವನ್ನು ಕಟ್ಟುವಾಗಲೇ ಗೆದ್ದಲಿನಿಂದ ರಕ್ಷಣೆಯನ್ನು ಪಡೆಯುವ ಮುಂಜಾಗರೂಕತೆಯನ್ನು ವಹಿಸಬಹುದು. ಕಟ್ಟಡದ ತಳಭಾಗದಲ್ಲಿ ಗೆದ್ದಲನ್ನು ತಡೆಗಟ್ಟುವ ಅನೇಕ ವಿಧ ವಿಷಪದಾರ್ಥಗಳನ್ನು ಉಪಯೋಗಿಸಿದರೂ ಈಚೆಗೆ ಡೈಲ್ಡ್ರಿನ್ ಎಂಬ ವಸ್ತುವನ್ನು ಉಪಯೋಗಿಸುವುದು ಸಾಮಾನ್ಯವಾಗಿ ರೂಢಿಗೆ ಬಂದಿದೆ. ಈ ಡೈಲ್ಡ್ರಿನ್ ತಯಾರಕರು ತಾವು ಕ್ಲುಪ್ತ ಪ್ರಮಾಣದಲ್ಲಿ ಒದಗಿಸುವ ಡೈಲ್ಡ್ರಿನ್ ದ್ರಾವಣದ ಶೇಕಡ ೩೦ರಷ್ಟು ಭಾಗವನ್ನು ಒಂದು ಗ್ಯಾಲನ್ ನೀರಿನೊಡನೆ ಬೆರೆಸಿ ತೆಳ್ಳಗೆ ಮಾಡಿ, ತರುವಾಯ ಆ ದ್ರಾವಣಕ್ಕೆ ೮೦–೧೦೦ ಗ್ಯಾಲನ್ ನೀರನ್ನು ಬೆರೆಸಿ ಕಟ್ಟಡ ನಿವೇಶನಗಳ ತಳಪಾಯಕ್ಕೆ ಸಿಂಪಡಿಸಬೇಕೆಂದು ಸೂಚಿಸುತ್ತಾರೆ. ಈಗಾಗಲೇ ಕಟ್ಟಿದ ಕಟ್ಟಡಗಳಿಗೆ ದ್ರಾವಣವನ್ನು ಹೊರಗಣ ಗೋಡೆಗಳ ಸಂದುಗಳಲ್ಲಿಯೂ, ನೆಲದಲ್ಲಿರುವ ಗುಳಿಗಳ ಮೂಲಕವೂ ಉಪಯೋಗಿಸಿದರೆ ಉತ್ತಮ. ಈ ದ್ರಾವಣವನ್ನು ಮರದ ಕಿಟಕಿ ಮತ್ತು ಬಾಗಿಲುಗಳ ಮೇಲೆಯೂ, ಅವು ಜೋಡಣೆಯಾಗಿರುವ ಗೋಡೆಗಳ ಅಂಚಿನ ಮೇಲೆಯೂ ಸಿಂಪಡಿಸಬಹುದು.

ಬೂಷ್ಟು :– ಇದು ಹೆಚ್ಚು ಶೀತಾಂಶದಿಂದ ಬರುವುದಾದುದರಿಂದ ಹವಾನಿಯಂತ್ರಣ ಉತ್ತಮ ವಿಧಾನವೆಂದು ಹೇಳಲಾಗಿದೆ. ಹವಾನಿಯಂತ್ರಣ ಇಲ್ಲದೆಡೆಗಳಲ್ಲಿ ಚೆನ್ನಾಗಿ ಗಾಳಿ ಬೆಳಕು ಬರುವಂತೆ ವ್ಯವಸ್ಥೆ ಮಾಡಬೇಕು. ಗ್ರಂಥಗಳಿರುವ ಕಪಾಟುಗಳಿಗೆ ಅರಗಿನಿಂದ ತಯಾರಿಸಿದ ಮೆರುಗೆಣ್ಣೆಯನ್ನು ಸಿಂಪಡಿಸುವುದು ಉತ್ತಮ.

ಈ ಮೆರುಗೆಣ್ಣೆಯು ಬೂಷ್ಟು ಹಿಡಿಯದಂತೆ ಮಾಡುವುದಲ್ಲದೆ ಅದು ಹರಡುವುದನ್ನು ತಡೆಗಟ್ಟುತ್ತದೆ. ಹಸ್ತಪ್ರತಿಗಳನ್ನು ಕಪ್ಪು, ಗಾಢನೀಲಿ ಮತ್ತು ಕೆಂಪುಬಟ್ಟೆಗಳಿಂದ ಕಟ್ಟಿಟ್ಟರೆ ಬೂಷ್ಟು ಸುಲಭವಾಗಿ ಬರುವುದಿಲ್ಲ. ಹಸುರು ಹಳದಿ ಬಣ್ಣಗಳಿಗೆ ಈ ನಿರೋಧ ಶಕ್ತಿ ಇಲ್ಲವೆಂದು ತಿಳಿದುಬರುತ್ತದೆ.

ಪ್ರಧೂಮನ ಉಪಚಾರ :- ರಾಸಾಯನಿಕ ವಸ್ತುಗಳ ಹಬೆ ಅಥವಾ ಧೂಪದಿಂದ ಹಸ್ತಪ್ರತಿಗಳಿಗೆ ಬಂದ ಕ್ರಿಮಿಕೀಟಗಳು, ಬೂಷ್ಟು ಮೊದಲಾದುವನ್ನು ನಾಶ ಮಾಡಬಹುದು. ಹೊರಗಣಿಂದ ಬಂದ ಯಾವುದೇ ಹಸ್ತಪ್ರತಿಯನ್ನು ಹಸ್ತಪ್ರತಿ ಭಂಡಾರಕ್ಕೆ ಸೇರಿಸುವ ಮೊದಲು ಕ್ರಿಮಿನಾಶಕ ಹಬೆಯ ಒತ್ತಡಕ್ಕೆ ಒಳಪಡಿಸುವುದು ಸೂಕ್ತವಾದುದು. ಹೀಗೆ ಮಾಡಿದಾಗ ಇದರಲ್ಲಿರಬಹುದಾದ ಹುಳುಗಳೂ. ಅವುಗಳ ಮೊಟ್ಟೆಗಳೂ ಸಹ ನಾಶವಾಗಿ ಕ್ರಿಮಿಕೀಟಗಳು ಕೋಶಾಗಾರವನ್ನು ಸೇರಲು ಸಾಧ್ಯವಾಗುವುದಿಲ್ಲ.

ಒಟ್ಟು ಕೋಶಗಾರವನ್ನೇ ಈ ಒತ್ತಡಕ್ಕೆ ಒಳಪಡಿಸಿ ಕೆಲವು ದಿನಗಳ ವರೆಗೆ ತೆರೆಯದಿರುವುದು ಸೂಕ್ತ. ಇದಕ್ಕೆ ಹೈಡ್ರೊಜನ್ ಸೈನೆಡ್, ಕಾರ್ಬನ್ ಡೈಸಲ್ಫೈಡ್ ಅಥವಾ ಮೆಥಿಲ್ ಬ್ರೊಮೈಡ್ ಉಪಯೋಗಿಸಬಹುದು.

ಕೆಲವು ಹಸ್ತಪ್ರತಿಗಳು ಮಾತ್ರ ಕೀಟಗಳ ಬಾಧೆಗೆ ತುತ್ತಾದಾಗ ಆ ಪುಸ್ತಕಗಳನ್ನು ಬೇರೆ ತೆಗೆದು ವಾಯುರೇಚನ ಹಬೆಯ ಒತ್ತಡದಲ್ಲಿಟ್ಟು ಕೀಟಗಳನ್ನು ನಾಶಪಡಿಸಬಹುದು.

ವಾಯುಶೂನ್ಯವಾದ ಕೊಠಡಿಯಲ್ಲಿ ಅಥವಾ ಕಪಾಟಿನಲ್ಲಿ ಹಸ್ತಪ್ರತಿಗಳನ್ನಿಟ್ಟು ಕ್ರಿಮಿನಾಶಕ ರಾಸಾಯನಿಕ ವಸ್ತುಗಳ ಹಬೆಯ ಒತ್ತಡಕ್ಕೊಳಪಡಿಸಬಹುದು. ಇದಕ್ಕೆ ಪ್ಯಾರ ಡೈಕ್ಲೊರೊಬೆಂಜಿನ್ ಗಟ್ಟಿಗಳನ್ನೋ ಅಥವಾ ಟೆರಕ್ಲೊರೈಡ್ ಮತ್ತು ಎಥಿಲಿನ್ ಡೈಕ್ಲೊರೈಡ್ ಮಿಶ್ರಿತ ಕಿಲ್ಲೊಪ್ವೆರ ದ್ರಾವಣವನ್ನೋ ಉಪಯೋಗಿಸಬಹುದು. ಕಿಲ್ಲೊಪ್ವೆರ ಗಾಳಿಗಿಂತ ತೂಕವಾಗಿರುವುದರಿಂದ ಅದನ್ನು ಕಪಾಟಿನ ಮೇಲ್ಭಾಗದ ಅರೆಯಲ್ಲಿ ಅಥವಾ ಪುಸ್ತಕದ ಸಾಲಿನಲ್ಲಿ ಇಡಬೇಕಾಗುತ್ತದೆ. ಉಳಿದವನ್ನು ಕಪಾಟಿನ ಕೆಳಗಣ ಹಂತದಲ್ಲಿಡಬೇಕಾಗುತ್ತದೆ. ಹೀಗೆ ಇಡುವಾಗ ಕಪಾಟಿಗೆ ಅಳವಡಿಸಿದ ಉಕ್ಕಿನ ಬಟ್ಟಲಿನಲ್ಲಿ ರಾಸಾಯನಿಕ ವಸ್ತುವನ್ನು ಹಾಕಿ ಅದು ವಿದ್ಯುಚ್ಛಕ್ತಿ ದೀಪದಿಂದ ಕಾಯುತ್ತಿರಬೇಕು. ನವದೆಹಲಿಯಲ್ಲಿರುವ ಭಾರತ ರಾಷ್ಟ್ರೀಯ ಪತ್ರಾಗಾರ ಥೈಮಾಲ್ ಪ್ರಧೂಮನವನ್ನೇ ಹೆಚ್ಚಾಗಿ ಬಳಸುತ್ತಿದೆ.

ನ್ಯಾಪ್ತಲಿನ್ ಬಿಲ್ಲೆಗಳನ್ನು ಕೋಶಾಗಾರದ ಕಪಾಟುಗಳಲ್ಲಿ ಅಲ್ಲಲ್ಲಿಯೇ ಇಡುವುದರಿಂದಲೂ ಕೆಲವುಮಟ್ಟಿನ ರಕ್ಷಣೆ ದೊರೆಯುತ್ತದೆ. ಇದಲ್ಲದೆ ಪೈರಾತ್ರಮ್ ಪುಡಿಯನ್ನು ಉಪಯೋಗಿಸಬಹುದು. ಇದು ಮನುಷ್ಯರಿಗೆ ಅಪಾಯಕಾರಿಯಾದುದ

ರಿಂದ ಬಹಳ ಜಾಗರೂಕತೆಯಿಂದ ಉಪಯೋಗಿಸಬೇಕು. ಸೋಡಿಯಂ ಫ್ಲೋರೈಡ್‌ನ್ನು ೧೨:೧೦೦೦ರ ಪ್ರಮಾಣದಲ್ಲಿ ಗೋಧಿಯ ಹಿಟ್ಟಿನೊಡನೆ ಬೆರೆಸಿ ಕಪಾಟುಗಳಲ್ಲಿ ಅಥವಾ ಕತ್ತಲೆ ಮೂಲೆಗಳಲ್ಲಿಟ್ಟರೆ ಜಿರಲೆಗಳನ್ನು ನಾಶಮಾಡಬಹುದು.

ಈ ದೆಸೆಯಲ್ಲಿ ಭಾರತದಲ್ಲಿ ಹಲವಾರು ಪ್ರಯತ್ನಗಳು ನಡೆದಿವೆ. ಕೆಲವೆಡೆ ಮಂಡ್ರಿ ಎಂಬ ಒಂದು ವಿಧವಾದ ಹುಲ್ಲು ಮತ್ತು ಘೋರ ಬಾಚ್ (Ghora Bach : Achorus Calamus) ಇವುಗಳ ಪುಡಿಯನ್ನು ಹಸ್ತಪ್ರತಿಗಳೊಡನಿಟ್ಟಿದ್ದುದು ತಿಳಿದುಬರುತ್ತದೆ. ಈ ಪುಡಿಯಲ್ಲಿರುವ ಎಣ್ಣೆಯು ಕ್ರಿಮಿಕೀಟಗಳನ್ನು ದೂರವಿಡಲು ಸಹಾಯಕವಾಗುವುದೆಂದು ತೋರುತ್ತದೆ. ಮತ್ತೆ ಕೆಲವೆಡೆ ಹಸ್ತಪ್ರತಿಗಳನ್ನು ಬಣ್ಣದ ಬಟ್ಟೆಗಳಿಂದ ಸುತ್ತಿಟ್ಟಿರುವುದೂ ಉಂಟು. ಇದರಿಂದ ಗ್ರಂಥಗಳನ್ನು ಧೂಳಿನಿಂದ ರಕ್ಷಿಸಬಹುದು. ಕೆಂಪು ಹಳದಿ ಮೊದಲಾದ ಕೆಲವು ಬಣ್ಣಗಳು ಕೀಟ ನಿರೋಧಕಗಳಾಗಿವೆ.

ಕೀಟನಾಶಕ ಮೆರುಗೆಣ್ಣೆಗಳು :– ದೇವದಾರು ಎಣ್ಣೆಯೇ ಗ್ರಂಥಗಳಿಗೆ ಮೊದಲು ಉಪಯೋಗಿಸಿದ ಕೀಟನಾಶಕ ಎಣ್ಣೆಯಾಗಿದೆ. ಅನಂತರ ಮರ್ಕ್ಯುರಿಕ್ ಕ್ಲೋರೈಡ್, ಡೈಲ್ಡ್ರಿನ್ ಮತ್ತು ಯುರಿಯ ಫಾರ್ಮಲ್ ಡಿಹೈಡ್ (urea formal Dehyde) ಮೊದಲಾದ ಎಣ್ಣೆಗಳು ಬಳಕೆಗೆ ಬಂದುವು.

ಪ್ರಪಂಚದ ಎಲ್ಲಕಡೆಯೂ ಜಿರಲೆಗಳ ಕಾಟವನ್ನು ಡೈಲ್ಡ್ರಿನ್‌ನಿಂದ ತಡೆಗಟ್ಟಬಹುದು. ಕೆಲವು ಕೀಟಗಳಿಗೆ ಡೈಲ್ಡ್ರಿನ್‌ಗೆ ಬದಲಾಗಿ ಡಿ. ಡಿ. ಟಿ., ಬೆಂಜಿನ್ ಹೆಕ್ಸಾಕ್ಲೋರೈಡ್, ಆಲ್ಡ್ರಿನ್ ಮತ್ತು ಇತ್ತೀಚಿನವುಗಳಾದ ಎಂಡ್ರಿನ್, ಐಸೊಡ್ರಿನ್–ಮೊದಲಾದ ಕ್ರಿಮಿನಾಶಕಗಳನ್ನು ಉಪಯೋಗಿಸುವುದು ಆವಶ್ಯಕ. ಹೀಗೆ ಅವುಗಳನ್ನು ಉಪಯೋಗಿಸುವಾಗ ಕೀಟಗಳು ಬರಬಹುದಾದ ಕಡೆಗಳಲ್ಲಿ ಮತ್ತು ಅವು ಅಡಗಿಕೊಳ್ಳಬಹುದಾದ ಸ್ಥಳಗಳಲ್ಲಿ ಎಂದರೆ ನೆಲದ ಮತ್ತು ಗೋಡೆಯ ಬಿರುಕುಗಳು, ಸಂದಿಗೊಂದಿಗಳು, ಕಪಾಟುಗಳ ಕೆಳಭಾಗ, ಕಿಟಕಿಯ ಅಂಚುಪಟ್ಟಿಗಳು—ಮೊದಲಾದೆಡೆಗಳಲ್ಲಿ ಕುಂಚದಿಂದ ಸವರಬೇಕು. ಅಥವಾ ಪಿಚಕಾರಿಗಳಿಂದ ಸಿಂಪಡಿಸಬೇಕು. ಹೀಗೆ ಮಾಡುವುದರಿಂದ ಜಿರಲೆ, ಬೆಳ್ಳಿಮೀನು, ಗ್ರಂಥಹುಳುಗಳು ಮೊದಲಾದುವನ್ನು ತಡೆಗಟ್ಟಬಹುದು.

ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯ ಮತ್ತು ಕನ್ನಡ ಅಧ್ಯಯನ ಸಂಸ್ಥೆ ಇವುಗಳಲ್ಲಿ ತಾಳೆಗರಿಗಳಿಗೆ ಉಪಯೋಗಿಸುವ ಸ್ಥಳೀಯವಾಗಿ ತಯಾರಾಗುವ ಎಣ್ಣೆಯು ಗಿಡಮೂಲಿಕೆಗಳಿಂದ ತಯಾರಾಗುತ್ತದೆ ಎಂದು ಹೇಳುತ್ತಾರೆ. ಆದರೆ ಇದು ಹೇಗೆ ತಯಾರಾಗುತ್ತದೆಂಬ ವಿವರ ಇದುವರೆಗೆ ಬಹಿರಂಗವಾಗಿಲ್ಲ. ಈ ಎಣ್ಣೆಯಿಂದ ಓಲೆಗಳು ಮೃದುವಾಗುವುದಲ್ಲದೆ, ಮಂಕಾದ ಅಕ್ಷರಗಳು ಸ್ಫುಟವಾಗಿ ಕಾಣುತ್ತವೆ. ಅಲ್ಲದೆ,

ಕ್ರಿಮಿಕೀಟಗಳು ತಾಳೆಗೆ ಸೇರದಂತೆ ಮಾಡುವುದರಲ್ಲಿಯೂ ಇದು ಪರಿಣಾಮಕಾರಿಯಾಗಿದೆ. ಆದರೆ, ಈ ಎಣ್ಣೆಯನ್ನು ಉಪಯೋಗಿಸುವಲ್ಲಿ ಬಹಳ ಎಚ್ಚರ ಅವಶ್ಯ. ಇದು ಸುಲಭವಾಗಿ ಬೂಷ್ಟನ್ನು ಬರಮಾಡಿಕೊಳ್ಳುವುದರಿಂದ, ಹದವರಿತು ಗರಿಯಲ್ಲಿ ಶೈತ್ಯಾಂಶ ನಿಲ್ಲದಂತೆ ಉಪಯೋಗಿಸಬೇಕು.

ಹವಾನಿಯಂತ್ರಣ :– ಕೀಟಗಳನ್ನು ತಡೆಗಟ್ಟುವುದರಲ್ಲಿ, ಹವಾಮಾನ ವೈಪರೀತ್ಯಗಳಿಂದ ಹಸ್ತಪ್ರತಿಗಳನ್ನು ಸಂರಕ್ಷಿಸುವಲ್ಲಿ ಮೇಲೆ ಹೇಳಿದ ಎಲ್ಲ ನಿವಾರಣೋಪಾಯಗಳಿಗೂ ಮೇಲಾದ ಹಾಗೂ ಅತ್ಯಂತ ಪರಿಣಾಮಕಾರಿಯಾದ ಕ್ರಮವೆಂದರೆ ಹವಾನಿಯಂತ್ರಣ. ಈ ಹವಾನಿಯಂತ್ರಣ ಕ್ರಮವು ಒಂದು ಕಾಲಕ್ಕೆ ಭೋಗವೆಂದು ಪರಿಗಣಿತವಾಗಿದ್ದಿತು. ಆದರೆ ಗ್ರಂಥಮೌಲ್ಯದೊಡನೆ ಇದರ ವೆಚ್ಚವನ್ನು ಹೋಲಿಸಿ ನೋಡಿದಾಗ ಇದು ಅತ್ಯಂತ ಅವಶ್ಯಕಕ್ರಮವೆಂದು ಹೇಳಬೇಕಾಗುತ್ತದೆ. ಹವಾನಿಯಂತ್ರಣ ಸಾಧ್ಯವಿಲ್ಲವೆಂದಾಗ ನೀರನ್ನಾಗಲಿ, ಕ್ಯಾಲ್ಸಿಯಂ ಕ್ಲೋರೈಡನ್ನಾಗಲಿ ಋತುಮಾನಕ್ಕೆ ತಕ್ಕಂತೆ ಉಪಯೋಗಿಸಿ ಹವಾನಿಯಂತ್ರಣವನ್ನು ಸ್ವಲ್ಪಮಟ್ಟಿಗೆ ಸಾಧಿಸಬಹುದಾದರೂ, ಇದರಿಂದ ಗಾಳಿಯ ಶುದ್ಧತೆಯನ್ನು ಕಾಪಾಡಲು ಸಾಧ್ಯವಾಗುವುದಿಲ್ಲ.

ಈ ಎಲ್ಲ ನಿವಾರಣೋಪಾಯಗಳಲ್ಲದೆ, ಅತ್ಯಂತ ಸುಲಭವಾಗಿ ಮಾಡಬಹುದಾದ ಕೆಲಸವೆಂದರೆ ಹಸ್ತಪ್ರತಿಗಳಿಗೆ ಧೂಳು ಸೇರದಂತೆ ನೋಡಿಕೊಳ್ಳುವುದು. ತಿಂಗಳಿಗೊಮ್ಮೆಯಾದರೂ ಇವುಗಳನ್ನು ಶುದ್ಧೀಕರಿಸಿದರೆ ಇದರಿಂದ ಬಹುಮಟ್ಟಿನ ರಕ್ಷಣೆ ಸಾಧ್ಯವಾಗುತ್ತದೆ. ಜೊತೆಗೆ ಸುಂಡ, ಇಲಿ ಹಾಗೂ ಹೆಗ್ಗಣಗಳು ಕೋಶಾಗಾರವನ್ನು ಸೇರದಂತೆ ನೋಡಿಕೊಳ್ಳುವುದು ಅವಶ್ಯಕ.

ದುರಸ್ತಿಕಾರ್ಯ :– ಶೇಖರವಾಗಿರುವ ಹಸ್ತಪ್ರತಿಗಳ ರಕ್ಷಣೆಯ ಜೊತೆಗೆ ನಶಿಸಿ ಹೋಗಿರುವುದನ್ನು ಜೀರ್ಣೋದ್ಧಾರ ಮಾಡುವುದೂ ಮುಖ್ಯ ಕರ್ತವ್ಯವಾಗಿದೆ.

ಕಾಗದದ ಹಸ್ತಪ್ರತಿಗಳಾಗಿದ್ದರೆ, ಅವುಗಳಲ್ಲಿ ಮಡಿಸಿಕೊಂಡಿರಬಹುದಾದ ಹಾಳೆಗಳನ್ನು ಬಿಚ್ಚಿ ಒತ್ತು ಕಾಗದದೊಳಗಿಟ್ಟು ಒದ್ದೆಯ ಸ್ಪಂಜಿನ ಸಹಾಯದಿಂದ ತೇವ ಮಾಡಬೇಕು. ಅನಂತರ ಒತ್ತುಕಾಗದದ ಮಡಿಕೆಯೊಳಗಿಟ್ಟು ಇಸ್ತ್ರಿಪೆಟ್ಟಿಗೆಯ ಸಹಾಯದಿಂದ ತಕ್ಕಷ್ಟು ಶಾಖದಿಂದ ಇಸ್ತ್ರಿ ಮಾಡಬೇಕು. ಆಗ ಅದರ ಮಡಿಕೆಯು ಅಳಿದು ನೇರವಾಗುತ್ತದೆ.

ಹಾಗೆಯೆ ಬಿಡಿಹಾಳೆಗಳು ಮತ್ತು ನಶಿಸಿದ ಹಾಳೆಗಳ ದುರಸ್ತುಕಾರ್ಯವನ್ನು ಕೆಲವು ನಿಯಮಗಳೊಡನೆ ಕೈಗೊಳ್ಳಬೇಕು. ಅದರಲ್ಲಿರುವ ಯಾವ ಅಕ್ಷರವೂ ಹೋಗದಂತೆ ಬಹಳ ಎಚ್ಚರಿಕೆ ವಹಿಸಬೇಕು. ಈ ದುರಸ್ತಿಕಾರ್ಯದಲ್ಲಿ ಉಪಯೋಗಿಸುವ

ಕಾಗದ ಕೈಯಿಂದ ಮಾಡಿದ ಉತ್ತಮ ಕಾಗದವಾಗಿರಬೇಕು; ದಾರ ಅಂಟು ಮೊದಲಾದುವುಗಳ ಗುಣಮಟ್ಟ ಚೆನ್ನಾಗಿರಬೇಕು. ಟಿಸ್ಯೂ, ಚಿಫನ್ ಮೊದಲಾದುವನ್ನು ಉಪಯೋಗಿಸಿ ಹಸ್ತಪ್ರತಿಗಳ ದುರುಸ್ತುಕಾರ್ಯ ಮಾಡಲಾಗುತ್ತದೆ. ಈ ಕಾರ್ಯವಿಧಾನದ ವಿವರವನ್ನು 'ಗ್ರಂಥರಕ್ಷಣೆ'[೧] ಪುಸ್ತಕದಲ್ಲಿ ನೋಡಬಹುದು.

ಅಮೂಲ್ಯವಾದ ದಾಖಲೆ ಪತ್ರಗಳನ್ನೂ, ಹಸ್ತಪ್ರತಿಗಳನ್ನೂ ದುರಸ್ತುಪಡಿಸುವುದರಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಯಶಸ್ಸನ್ನು ಗಳಿಸಿರುವ ವಿಧಾನವೆಂದರೆ ಲ್ಯಾಮಿನೇಶನ್ ರಿಪೇರಿ ಕ್ರಮ. ಭದ್ರಪಡಿಸಬೇಕಾದ ಹಾಳೆಗಳ ಎರಡುಕಡೆಯೂ ಅಸಿಟೇಟ್ ತೆಳು ಹಾಳೆಗಳನ್ನು ಹೊದಿಸುತ್ತಾರೆ. ಇದಕ್ಕಾಗಿಯೇ ಒಂದು ಪ್ರೋಟೋ ರೀತಿಯ ಹೈಡ್ರಾಲಿಕ್ ಪ್ರೆಸ್ಸೊಂದನ್ನು ನಿರ್ಮಿಸಿದ್ದಾರೆ. ಈ ವಿಧಾನದಲ್ಲಿ ಹೊದಿಸಿದ ತೆಳು ಹಾಳೆ ಮೂಲಹಾಳೆಯೊಡನೆ ಸೇರಿಕೊಂಡು ಅದರ ಶಕ್ತಿಯನ್ನು ಹೆಚ್ಚಿಸುತ್ತದೆ. ಯಂತ್ರದ ಮೂಲಕ ಮಾಡುವ ಲ್ಯಾಮಿನೇಶನ್ ಅಲ್ಲದೆ ಕೈಯಿಂದ ಮಾಡುವ ಲ್ಯಾಮಿನೇಶನ್ ಕೂಡ ಬಳಕೆಯಲ್ಲಿದೆ.

ಓಲೆಗರಿ ಮತ್ತು ಭೂರ್ಜಪತ್ರಗಳ ಬರವಣಿಗೆಯ ಮಸಿ ಅಳಿಸದಂತಿದ್ದರೆ ಪ್ರತಿ ಎಲೆಯನ್ನೂ ಗ್ಲಿಸರಿನ್ ಮತ್ತು ನೀರನ್ನು ೧:೧ ಪ್ರಮಾಣದಲ್ಲಿ ಸೇರಿಸಿ ಅದರಿಂದ ಶುದ್ಧಗೊಳಿಸಬಹುದು. ಮಸಿಯು ಅಳಿಸುವಂತಿದ್ದರೆ ಕಾರ್ಬನ್ ಟೆಟ್ರಕ್ಲೋರೈಡ್ ಅಥವಾ ಅಸಿಟೋನ್‌ಗಳಿಂದ ಸ್ವಚ್ಛಗೊಳಿಸಬೇಕು. ಕಂಠದಿಂದ ಅಕ್ಷರಗಳನ್ನು ಕೊರೆದಿರುವ ಓಲೆಗಳಿಗೆ ಗ್ರ್ಯಾಫೈಟ್ ಪುಡಿಯನ್ನು ಹಚ್ಚಿ ಅಕ್ಷರಗಳು ಚೆನ್ನಾಗಿ ಕಾಣುವಂತೆ ಮಾಡಬಹುದು. ಕೆಲವು ಸಲ ಶೀತದಿಂದಲೋ ಅಥವಾ ಮತ್ಯಾವ ಕಾರಣದಿಂದಲೋ ಓಲೆಗರಿಗಳು ಒಂದಕ್ಕೊಂದಕ್ಕೆ ಅಂಟಿಕೊಂಡಿರುತ್ತವೆ. ಈ ಗರಿಗಳನ್ನು ಫ್ಯಾರಾಫಿನ್ ದ್ರಾವಣದಲ್ಲಿ ನೆನೆಯಿಸಿ ಬಿಡಿಸಲು ಪ್ರಯತ್ನಿಸಬೇಕು.

ನೀರಿನಲ್ಲಿ ನೆನೆದ ಹಾಳೆಗಳ ದುರಸ್ತು :– ಹಸ್ತಪ್ರತಿಗಳು ನೀರಿನಲ್ಲಿ ನೆನೆದಾಗ ಅದರಲ್ಲಿರುವ ನೀರನ್ನು ಸೋರಿಸಿ ಹಾಳೆಗಳನ್ನು ನೆರಳಿನಲ್ಲಿ ಹರಡಿ ಒಣಗಿಸಬೇಕು. ಸಾಕಷ್ಟು ಗಾಳಿ ಬೆಳಕುಗಳಿದ್ದರೆ ಉತ್ತಮ. ಹಾಳೆಗಳು ಒಂದಕ್ಕೊಂದಕ್ಕೆ ಅಂಟಿಕೊಂಡಿದ್ದರೆ ಕಾಗದದ ಚಾಕುವನ್ನು ಉಪಯೋಗಿಸಿ ಜೋಪಾನವಾಗಿ ಬಿಡಿಸಬೇಕು. ಹಾಳೆಗಳನ್ನು ಆಗಾಗ ಮಗುಚಿ ಹಾಕುತ್ತಿರಬೇಕು. ಒಣಗಿದ ನಂತರ ಅದಕ್ಕೆ ಯಾವ ರಿಪೇರಿ ಅಗತ್ಯವೊ ಅದನ್ನು ಮಾಡಬೇಕು.

ಸುಟ್ಟ ಹಾಳೆಗಳ ದುರಸ್ತು . ಹಾಳೆಗಳು ಸುಟ್ಟುಹೋದರೆ ಅಲ್ಲಿಗೆ ಅವು ನಾಶವಾದುವೆಂದೇ ಭಾವಿಸುತ್ತೇವೆ. ಆದರೆ ಆ ಭಾವನೆ ಸರಿಯಲ್ಲ. ಇವುಗಳನ್ನು

---

೧ ಬಿ. ಎಸ್. ಸಣ್ಣಯ್ಯ, ಗ್ರಂಥಸಂರಕ್ಷಣೆ. ಮೈಸೂರು ವಿಶ್ವವಿದ್ಯಾಲಯ, ೧೯೭೧.

ಕದಲಿಸದೆ ಹಾಗೆಯೇ 'ಇನ್‌ಫ್ರಾ-ರೆಡ್' ಬೆಳಕಿನಲ್ಲಿಟ್ಟು ಓದಬಹುದಾಗಿದೆ. ಸುಟ್ಟ ಹಾಳೆಗಳ ರಿಪೇರಿ ಅವುಗಳ ಸ್ಥಿತಿಯನ್ನು ಅವಲಂಬಿಸಿದೆ.

ಹೀಗೆ ಹಲವು ವಿಧಾನಗಳಿಂದ ಹಸ್ತಪ್ರತಿಗಳನ್ನು ರಕ್ಷಿಸುವುದಲ್ಲದೆ, ಅವುಗಳ ಮರುಪ್ರತಿಗಳನ್ನು ಕಾಗದದ ಮೇಲೆ ಬರೆದಿಡಬಹುದು. ಇಲ್ಲವೆ ಮೈಕ್ರೊಫಿಲಂ ಮೂಲಕ ನಕಲು ಮಾಡಬಹುದು. ಕೈಯಿಂದ ಬರೆದ ಮರುಪ್ರತಿ ಮೂಲದ ಮೌಲ್ಯವನ್ನು ಕಳೆದುಕೊಂಡರೆ, ಮೈಕ್ರೊಫಿಲಂ ಪ್ರತಿಯು ಅದರ ಬೆಲೆಯನ್ನು ಉಳಿಸಿ ಕೊಳ್ಳುತ್ತದೆ. ಮೈಕ್ರೊಫಿಲಂನಿಂದ ಮೂಲವನ್ನು ಶಾಶ್ವತವಾಗಿ ರಕ್ಷಿಸಿದಂತಾಗುವು ದಲ್ಲದೆ ಹಲವಾರು ಪ್ರತಿಗಳನ್ನು ಮಾಡಿಕೊಂಡು ಎಲ್ಲಿಗೆ ಬೇಕಾದರೂ ಕಳುಹಿಸ ಬಹುದು. ಯಾವುದೇ ಪ್ರತಿ ಹಾಳಾದರೂ ಮೂಲಪ್ರತಿಯಿಂದ ಎಂದಾದರೂ ಪ್ರತಿಯನ್ನು ಮಾಡಿಕೊಳ್ಳಬಹುದಾಗಿದೆ: ಅವುಗಳಿಂದ ಸುಲಭವಾಗಿ ಓದಲು ಸಾಧ್ಯ ವಾಗುವಂತೆ ಫೋಟೋ ಕಾಗದದ ಮೇಲೆ ಅಚ್ಚು ಹಾಕಿಕೊಳ್ಳಬಹುದಾಗಿದೆ.

ಕೇಂದ್ರ ಹಸ್ತಪ್ರತಿ ಭಂಡಾರವನ್ನು ಮಾಡಲು ಈ ಮೈಕ್ರೊಫಿಲಂ ಅತ್ಯಂತ ಉತ್ತಮ ಸಾಧನವಾಗಿದೆ. ಎಲ್ಲೆಲ್ಲಿಯೂ ಸಂಗ್ರಹವಾಗಿರುವ ಹಸ್ತಪ್ರತಿಗಳನ್ನು ಈ ಮೂಲಕ ಒಂದೆಡೆ ಕೂಡಿಸಬಹುದು. ಕೈಯಿಂದ ಬರೆದು ಪ್ರತಿ ಮಾಡುವ ಕೆಲಸಕ್ಕೆ ಹೋಲಿಸಿದರೆ ಕಾಲ ಮತ್ತು ಖರ್ಚು ಎರಡರಿಂದಲೂ ಮೈಕ್ರೊಫಿಲಂ ಬಹಳ ಸರಳ ಹಾಗೂ ಸುಲಭವಾದುದಾಗಿದೆ.

ಪರಿಚಲನೆ :

ಮೇಲೆ ಹಸ್ತಪ್ರತಿಗಳ ಸಂರಕ್ಷಣೆಯ ಬಗೆಗೆ ಕೆಲವು ಮಾತುಗಳನ್ನು ಸ್ಥೂಲವಾಗಿ ಹೇಳಲಾಗಿದೆ. ಇದರೆ ಹೀಗೆ ಸಂರಕ್ಷಿಸಿದ ಹಸ್ತಪ್ರತಿಗಳ ಪರಿಚಲನೆ (Circulation) ಹೇಗೆ ? ಇದು ಯಾವ ರೀತಿಯಿದ್ದರೆ ಉತ್ತಮ ? ಎಂದು ಯೋಚಿಸಬೇಕಾದುದು ಸಹಜವೇ ಆಗಿದೆ.

ಹಸ್ತಪ್ರತಿಗಳನ್ನು ಉಪಯೋಗಿಸ ಬಯಸುವವರು ಸಾಮಾನ್ಯವಾಗಿ ಹಸ್ತಪ್ರತಿ ಭಂಡಾರದಲ್ಲಿಯೇ ಕುಳಿತು ನೋಡುವುದು ರೂಢಿಯಲ್ಲಿದೆ. ಕೆಲವು ವ್ಯಕ್ತಿಗಳಿಗೆ ಎರ ವಲು ಮೂಲಕ ಮನೆಗೆ ಕೊಡುವುದೂ ಕೆಲವೆಡೆ ಉಂಟು. ಆದರೆ ಮನೆಗೆ ಕೊಡು ವುದರಿಂದ ಅಪಾಯವಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಏಕೆಂದರೆ ಮೂಲಪ್ರತಿ ಯಾವುದೇ ಕಾರಣದಿಂದ ಕಳೆದುಹೋದರೆ ಅದನ್ನು ಮತ್ತೆ ಪಡೆಯು ವುದು ಸಾಧ್ಯವಿಲ್ಲದ ಮಾತು. ಇದು ವ್ಯಕ್ತಿಗಳಿಗೆ ಮಾತ್ರವಲ್ಲದೆ ಸಂಸ್ಥೆಗಳಿಗೂ ಅನ್ವಯವಾಗುತ್ತದೆ. ಎಷ್ಟೇ ಮೌಲ್ಯವನ್ನು ತೋರಿಸಿ ಜೀವವಿಮಾ ಮಾಡಿ ಅಂಚೆ ಮೂಲಕ ಕಳುಹಿಸಿದರೂ, ಆ ಜೀವವಿಮೆಯ ಹಣ ನಮಗೆ ಬಂದರೂ ಮೂಲಪ್ರತಿ ಮಾತ್ರ ನಮಗೆ ದೊರೆತಂತಾಗುವುದಿಲ್ಲ. ಆದುದರಿಂದ ಯಾವುದೇ ಹಸ್ತಪ್ರತಿಯನ್ನು ವ್ಯಕ್ತಿ, ಸಂಸ್ಥೆ ಯಾರೇ ಬಯಸಿದರೂ ಅದರ ನಕಲನ್ನು ಕೈಯಿಂದ ಮಾಡುವ ಮೂಲಕ

ವಾಗಲಿ ಅಥವಾ ಮೈಕ್ರೊಫಿಲಂ, ಫೋಟೋಸ್ಟ್ಯಾಟ್ ಪ್ರತಿಯ ರೂಪದಲ್ಲಾಗಲಿ ಒದಗಿಸುವುದು ಉತ್ತಮ ಮಾರ್ಗವೆಂದು ನಾನಾದರೂ ಭಾವಿಸಿದ್ದೇನೆ. ಅದರಲ್ಲಿಯೂ ಏಕೈಕ ಹಸ್ತಪ್ರತಿಯನ್ನಂತೂ ಹೊರಗೆ ಕೊಡುವುದು ಅತ್ಯಂತ ಅಪಾಯಕರ.

ಕೋಶಾಗಾರದಲ್ಲಿಯೇ ಅಭ್ಯಾಸ ನಡೆಸಲು ಕೊಡುವ ಹಸ್ತಪ್ರತಿಗಳಿಗೂ ಅಪಾಯ ತಪ್ಪಿದ್ದಲ್ಲ. ಏಕೆಂದರೆ ಬರುವ ಎಲ್ಲ ಓದುಗರೂ ಒಂದೇ ಗುಣಮಟ್ಟದವರಾಗಿರಲು ಸಾಧ್ಯವಿಲ್ಲ. ಹಾಗೆ ಕೊಟ್ಟಾಗ ಅದರ ಉಸ್ತುವಾರಿಕೆಯನ್ನು ವಹಿಸಿಕೊಂಡ ಜನವೂ ಒಂದೇ ಸಮನಾಗಿರುವುದಿಲ್ಲ. ಹೀಗೆ ನೋಡಲು ಬಂದ ಜನ ಸಮಯ ಸಾಧಿಸಿ ಅದರಲ್ಲಿನ ಕೆಲವು ಹಾಳೆಗಳನ್ನೇ ಎಗರಿಸಬಹುದು. ಇದು ತೀರಾ ಅಲ್ಪರು ಮಾಡುವ ಕೆಲಸವೆಂದೂ ಅಂತಹವರು ಇಂತಹ ಕಡೆಗಳಲ್ಲಿ ಬರುವುದು ಅಪರೂಪವೆಂದೂ ಪರಿಗಣಿಸಿದರೂ ಅದರ ಸಾಧ್ಯತೆಯನ್ನು ಯಾರೂ ತಳ್ಳಿಹಾಕುವಂತಿಲ್ಲ. ಅಲ್ಲದೆ ಓದುಗರು ಆಗಾಗ್ಗೆ ಬಳಸುವ ಹಸ್ತಪ್ರತಿಗಳು ಜೀರ್ಣವಾಗುವ ಸಾಧ್ಯತೆ ಇದೆ. ಆದುದರಿಂದ ಕೋಶಾಗಾರದ ಯಾವುದೇ ಹಸ್ತಪ್ರತಿಯನ್ನು ಮೈಕ್ರೊಫಿಲಂ ಮೂಲಕ ಕಾಪಾಡುವುದು ಮೊದಲ ಕೆಲಸವಾಗಬೇಕು. ಹಾಗಾದಾಗ ಮಾತ್ರ ಹಸ್ತಪ್ರತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಸರಿದೂಗಿಸಿಕೊಳ್ಳಲು ಸಾಧ್ಯವಾಗುತ್ತದೆ; ಹಸ್ತಪ್ರತಿಗಳ ಶಾಶ್ವತ ರಕ್ಷಣೆ ಆದಂತಾಗುತ್ತದೆ.

ಹಸ್ತಪ್ರತಿಗಳ ವರ್ಗೀಕರಣ ಹಾಗೂ ಸೂಚೀಕರಣ

● ಕೆ. ಎಸ್. ದೇಶಪಾಂಡೆ

ಪ್ರಸ್ತಾವನೆ :

ಕನ್ನಡ ನಾಡು ನುಡಿಗಳ ಪುನರುಜ್ಜೀವನಕ್ಕಾಗಿ, ವಚನ ಸಾಹಿತ್ಯದ ಉಳಿವು. ಉದ್ಧಾರ, ಅಭಿವೃದ್ಧಿಗಾಗಿ ಅಪಾರ ಸ್ವಾರ್ಥತ್ಯಾಗಗೈದು, ತಮ್ಮ ಹಿರಿಯ ಜೀವನವನ್ನು ಗಂಧದಂತೆ ತೆಯ್ದು ಸಣ್ಣಾಗಿ, ಹಣ್ಣಾಗಿ, ಕೀರ್ತಿಶೇಷರಾಗಿ ಬಾಳಿದ ಲಿಂ. ಫ. ಗು. ಹಳಕಟ್ಟಿ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಹಸ್ತಪ್ರತಿಗಳನ್ನು ಕುರಿತಾದ ಈ ವಿಚಾರ ಸಂಕಿರಣವನ್ನು ಕನ್ನಡ ಅಧ್ಯಯನ ಪೀಠದವರು, ಹಮ್ಮಿಕೊಂಡಿದ್ದು ತುಂಬಾ ಶ್ಲಾಘನೀಯ ಹಾಗೂ ಸಮಯೋಚಿತವಾಗಿದೆ. ವಿಜ್ಞಾನ ವಿರಾಡ್ರೂಪ ತಳೆದು ತಾಂಡವವಾಡುತ್ತಿರುವ ಈ ಯುಗದಲ್ಲಿ ಸಮಾಜಶಾಸ್ತ್ರಗಳು, ಮಾನವಿಕ ಶಾಸ್ತ್ರಗಳು ಮೂಲೆ ಗುಂಪಾಗಿ ಕುಳಿತಾಗ ಹಸ್ತಪ್ರತಿಶಾಸ್ತ್ರದ ಕೂಗು ಅರಣ್ಯರೋದನ ವಾಗಿದ್ದರೆ ಅಚ್ಚರಿಪಡಬೇಕಿಲ್ಲ. ಈ ಮಹತ್ವದ ಶಾಸ್ತ್ರಕ್ಕೆ ಸರಿಯಾದ ಗಮನವನ್ನು ತಕ್ಕ ಸಮಯದಲ್ಲಿ ಕೊಡದಿದ್ದ ತಪ್ಪಿಗೆ ನಮ್ಮ ಪ್ರಾಚೀನ ಇತಿಹಾಸದ ಹಾಗೂ ಸಾಹಿತ್ಯದ ಅದೆಷ್ಟು ಮಹತ್ವದ ಕೊಂಡಿಗಳು ಕಳೆದು ಹೋಗಿವೆಯೋ ? ಈ ದೃಷ್ಟಿ ಯಿಂದ ಈ ವಿಚಾರ ಸಂಕಿರಣ ಅತಿ ಮಹತ್ವದ್ದೆಂದು ಪರಿಗಣಿಸಬಹುದು. ಈ ವಿಷಯ ವಾಗಿ ಧಾರವಾಡದಂಥ ವಿದ್ಯಾಕೇಂದ್ರದಲ್ಲಿ ಇಂಥ ವಿಚಾರ ಸಂಕಿರಣ ಜರುಗುತ್ತಿರುವುದು ಇದೇ ಮೊದಲ ಸಲ. ಈ ವಿಚಾರ ಸಂಕಿರಣವನ್ನು ಯೋಜಿಸಿ ನಿರ್ವಹಿಸುತ್ತಿರುವ ಕನ್ನಡ ಅಧ್ಯಯನ ಪೀಠಕ್ಕೆ, ಅದರ ಉತ್ಸಾಹೀ ಧುರೀಣರಿಗೆ ಈ ನಿಮಿತ್ತ ಉತ್ತರ ಕರ್ನಾಟಕದ ಸಮಸ್ತ ಸಂಶೋಧಕರು ಅಭಿನಂದನೆಗಳನ್ನು, ಹಾಗು ಧನ್ಯವಾದಗಳನ್ನು ಮನಸಾರೆ ಅರ್ಪಿಸಲೇಬೇಕು.

ಹಸ್ತಪ್ರತಿಗಳ ಮಹತಿ :

ಹಸ್ತಪ್ರತಿಗಳ ಮಹತಿ, ಅವುಗಳ ವ್ಯವಸ್ಥಿತ ಸಂಗ್ರಹಣೆ, ಸಂರಕ್ಷಣೆ, ಪರಿಷ್ಕರಣ ಇವುಗಳತ್ತ ಗಣನೀಯವಾಗಿ ಭಾರತೀಯರ ಗಮನ ಸೆಳೆದವರು ಪಾಶ್ಚಾತ್ಯರೇ. ಮೊದಲು ಕೇವಲ ವ್ಯಾಪಾರಕ್ಕೆಂದು ಬಂದ ಈಸ್ಟ ಇಂಡಿಯಾ ಕಂಪನಿಯ ಅಧಿಕಾರಿ ಗಳಲ್ಲಿ, ಇಂಥವೇ ಹಲವು ಉದ್ದೇಶಗಳನ್ನಿಟ್ಟುಕೊಂಡು ಬಂದ ಫ್ರೆಂಚ ಅಧಿಕಾರಿಗಳಲ್ಲಿ. ಕ್ರೈಸ್ತಮತ ಪ್ರಚಾರ, ಪ್ರಸಾರಕ್ಕೆಂದು ಬಂದ ಇಂಗ್ಲೀಷ, ಪೋರ್ಚುಗೀಜ, ಡಚ್ಚ, ಜರ್ಮನ, ಮುಂತಾದ ಮಿಶನರಿಗಳಲ್ಲಿ ಅನೇಕರು, ಭಾರತ ಹಿರಿಮೆಗೆ, (ಗರಿಮೆಗೆ)

ಮಾರುಹೋಗಿ ಆ ಉಚ್ಚ ಸಂಸ್ಕೃತಿಯ ಸಂಕೇತಗಳಾದ ಅಮೂಲ್ಯ ಹಸ್ತಪ್ರತಿಗಳನ್ನು ಹಾಗೂ ಇತರೇ ಕಲಾತ್ಮಕವಾದ ಪ್ರಾಚೀನ ಅವಶೇಷಗಳನ್ನು ಸಂಕಲಿಸಿ ಅವುಗಳನ್ನೆಲ್ಲ ಕೊಂಡೊಯ್ದು ತಮ್ಮ ದೇಶದ ಸಾಂಸ್ಕೃತಿಕ ಕೇಂದ್ರಗಳೆನಿಸಿದ ವಸ್ತುಸಂಗ್ರಹಾಲಯ ಗಳಿಗೆ, ಗ್ರಂಥಾಲಯಗಳಿಗೆ ಅವನ್ನು ಕಾಣಿಕೆಯಾಗಿ ಕೊಡುವ ಪರಿಪಾಠ ಇಟ್ಟು ಕೊಂಡಿದ್ದರು. ಹೀಗಾಗಿ ಇಂದು ನಮ್ಮ ದೇಶದ ಅತ್ಯುತ್ತಮ ಹಾಗೂ ಬೆಲೆಯುಳ್ಳ ಪ್ರಾಚೀನ ಸಂಸ್ಕೃತಿಯ ಅವಶೇಷಗಳು, ಸಂಕೇತಗಳು. ಬ್ರಿಟಿಶ್ ಮ್ಯೂಜಿಯಮ್‌ದಲ್ಲಿ, ಇಂಡಿಯಾ ಆಫೀಸಿನ ಗ್ರಂಥಾಲಯದಲ್ಲಿ, ಫ್ರಾನ್ಸದ ರಾಷ್ಟ್ರೀಯ ಗ್ರಂಥಾಲಯದಲ್ಲಿ ಹಾಗೂ ಇನ್ನಿತ್ತರ ಪರದೇಶಗಳ ಸಾಂಸ್ಕೃತಿಕ ಕೇಂದ್ರಗಳಲ್ಲಿ ದೊರಕುತ್ತವೆ. (ಸೆರೆಸಿಕ್ಕಿವೆ).

ಸುಮಾರು ಹತ್ತನೇ ಶತಮಾನದಿಂದ ನಮ್ಮ ದೇಶದ ಮೇಲೆ ಪರಕೀಯರ ದಾಳಿಗಳು ಅವ್ಯಾಹತವಾಗಿ ನಡೆದು ಬಂದು ನಮ್ಮ ಪ್ರಾಚೀನ ಸರಸ್ವತೀ ಭಂಡಾರ ಗಳಲ್ಲಿನ ಅಮೂಲ್ಯ ಹಸ್ತಪ್ರತಿಗಳು. ಗುಡಿ–ಗುಂಡಾರಗಳಲ್ಲಿಯ ಬೆಲೆಬಾಳುವ ಶಿಲ್ಪಕಲಾಕೃತಿಗಳು. ಹಾಗೂ ಇನ್ನಿತರ ಸಂಸ್ಕೃತಿಯ ಪ್ರತೀಕಗಳು ನಾಶವಾಗಿ ಹೋಗಿವೆ. ಆದಾಗ್ಯೂ ನಮ್ಮ ಕೆಲವು ಧಾರ್ಮಿಕ ಸಂಸ್ಥೆಗಳ ಸತತ ಜಾಗರೂಕತೆ ಹಾಗೂ ಪರಿ ಶ್ರಮದಿಂದ. ತಂಜಾವೂರಿನಲ್ಲಿ ಸ್ಥಾಪಿತವಾದ ಸರಸ್ವತೀಮಹಾಲ ಗ್ರಂಥಾಲಯ ಮುಂತಾದ ಸಂಸ್ಥೆಗಳಲ್ಲಿ ಲಕ್ಷಗಟ್ಟಲೆ ಹಸ್ತಪ್ರತಿಗಳೂ ಹಾಗೂ ಇನ್ನಿತರ ಸಾಂಸ್ಕೃತಿಕ ಅವಶೇಷಗಳೂ ಇಲ್ಲಿಯವರೆಗೆ ಉಳಿದುಕೊಂಡು ಬಂದಿವೆ. ಮೊಗಲರ ಆಳ್ವಿಕೆಯ ಕಾಲದಲ್ಲಿನ ಪರ್ಶಿಯನ್. ಅರೆಬಿಕ್ ಮುಂತಾದ ಭಾಷೆಗಳಲ್ಲಿನ ಸುಂದರ ಚಿತ್ರ ಗಳಿಂದೊಡಗೂಡಿದ ಅಂದವಾಗಿ ರಟ್ಟುಕಟ್ಟಲ್ಪಟ್ಟ ಹಸ್ತಪ್ರತಿಗಳನ್ನು ಪರಕೀಯರ ಕೈಗೆ ಬೀಳದ ಹಾಗೆ ಸಂರಕ್ಷಿಸಿದ. ಬಿದ್ದವುಗಳನ್ನು ಮರಳಿ ಪಡೆಯುವಲ್ಲಿ ಅಸಾಮಾನ್ಯ ಚಾಣಾಕ್ಷತನ. ಹಾಗೂ ನಿಷ್ಠೆತೋರಿಸಿದ ಪಾಟ್ನಾ ನಗರದ ಮಹಮ್ಮದ ಖುದಾಬಕ್ಷರ ಪ್ರಯತ್ನಗಳು ಮಾದರಿ ಪ್ರಯತ್ನಗಳು. ಇಂಥ ಪ್ರಯತ್ನಗಳು ನಮ್ಮ ತಾಡೋಲೆಯ ಹಸ್ತಪ್ರತಿಗಳನ್ನು ಸಂರಕ್ಷಿಸಿಕೊಳ್ಳುವಲ್ಲಿ ನಡೆಯಲಿಲ್ಲವೆಂದು ವಿಷಾದದಿಂದ ಹೇಳ ಬೇಕಾಗುತ್ತದೆ. ಇಂದಿಗೂ ನಮ್ಮ ಸಂಸ್ಕೃತಿಯ ಅವಶೇಷಗಳು ಕಳ್ಳತನದಿಂದ ಪರ ದೇಶಕ್ಕೆ ಸಾಗಿಸಲ್ಪಡುತ್ತಿರುವದು ನಮ್ಮ ದುರ್ದೈವವೇ ಸರಿ.

ಹಸ್ತಪ್ರತಿಗಳ ಶೋಧ ಹಾಗೂ ಸಂರಕ್ಷಣೆ:

ಮುದ್ರಣ ಯುಗ ಭಾರತದಲ್ಲಿ ಪ್ರಾರಂಭವಾದದ್ದು ೧೫೫೬ರಲ್ಲಿ. ಅಂದಿನಿಂದ ಇಂದಿನವರೆಗೆ ಪ್ರಕಟವಾದ ಮುದ್ರಿತ ಗ್ರಂಥಗಳ ಸಂರಕ್ಷಣೆಯ ಬಗ್ಗೆಯೂ ನಾವು ಇಂಥದೇ ಉದಾಸೀನ ಮನೋಭಾವ ತಳೆಯುತ್ತ ಬಂದಿದ್ದೇವೆ. ಭಾರತೀಯ ಮುದ್ರಿತ ಗ್ರಂಥಗಳ ಸಂರಕ್ಷಣೆ, ಸೂಚೀಕರಣ ವಿಷಯದಲ್ಲೂ ಪಾಶ್ಚಾತ್ಯರೇ ಪ್ರಥಮ ಹೆಜ್ಜೆ ಇಟ್ಟವರು. ಭಾರತದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪುಸ್ತಕ ಪ್ರಕಟಣೆಯಾಗುತ್ತಿದ್ದು ದನ್ನು ಗಮನಿಸಿದ ಲಂಡನ್ನಿನಲ್ಲಿರುವ ರಾಯಲ್ ಏಶಿಯಾಟಿಕ್ ಸೊಸೈಟಿಯ ಸದಸ್ಯರ

೧೮೬೩ರ ಪ್ರಯತ್ನದ ಫಲವಾಗಿ ಭಾರತ ಸರಕಾರ ೧೮೬೭ರಲ್ಲಿ Press and Registration of Books Act ಎಂಬ ಕಾಯ್ದೆ ಪಾಸು ಮಾಡಿದರು. ಇದೇ ಅವಸರದಲ್ಲಿ ಅವರು ಪ್ರಾಂತೀಯ ಸರಕಾರಗಳಿಗೆ ಭಾರತೀಯ ಹಸ್ತಪ್ರತಿಗಳ ಸಂಗ್ರಹಣ ಹಾಗೂ ಸಂರಕ್ಷಣ ಕಾರ್ಯಗಳಲ್ಲಿ ಆಸಕ್ತಿ ವಹಿಸಲು ಆದೇಶವಿತ್ತರು. ತತ್ಪರಿಣಾಮವಾಗಿ ಅಲ್ಲಲ್ಲಿ ಪೌರ್ವಾತ್ಯ ಹಸ್ತಪ್ರತಿಗಳ ಸರಕಾರೀ ಗ್ರಂಥಾಲಯಗಳು ತಲೆದೋರಿದವು. ಇಂದು ಭಾರತದಲ್ಲಿರುವ ೨೦೦ಕ್ಕೂ ಮಿಕ್ಕಿದ ಪೌರ್ವಾತ್ಯ ಸಂಶೋಧನ ಸಂಸ್ಥೆಗಳ ಹಾಗೂ ಇನ್ನಿತರ ಸಾಂಸ್ಕೃತಿಕ ಸಂಸ್ಥೆಗಳ ಗ್ರಂಥಾಲಯಗಳಲ್ಲಿ ೧೦ ಲಕ್ಷಕ್ಕೂ ಮಿಕ್ಕಿ ಹಸ್ತಪ್ರತಿಗಳಿವೆ ಎಂದು ಅಂದಾಜು ಮಾಡಲಾಗಿದೆ. ಅಚ್ಚರಿಯ ಮಾತೆಂದರೆ– ಪರದೇಶಗಳ ಗ್ರಂಥಾಲಯಗಳಲ್ಲಿಯೇ ೧ ಲಕ್ಷಕ್ಕೂ ಮಿಕ್ಕಿ ಭಾರತೀಯ ಹಸ್ತಪ್ರತಿಗಳಿವೆ. ಇನ್ನು ಅಲ್ಲಲ್ಲಿ ಮನೆ–ಮಠಗಳಲ್ಲಿದ್ದ ಹಸ್ತಪ್ರತಿಗಳ ಲೆಕ್ಕ ಬೇರೆ.

೭ನೇ ಶತಮಾನದಲ್ಲಿ ಭಾರತದ ಖ್ಯಾತಿವೆತ್ತ ನಲಂದಾ ವಿಶ್ವವಿದ್ಯಾಲಯಕ್ಕೆ ಚೀನಾ ದೇಶದ ಬೌದ್ಧ ಸನ್ಯಾಸಿ ಹುಯೆನ್ ತ್ಸಾಂಗ ಭೇಟಿ ಇತ್ತ. ಆ ಒಂದು ವಿಶ್ವವಿದ್ಯಾಲಯದ ಗ್ರಂಥಾಲಯವೇ "ರತ್ನೋದಧಿ", "ರತ್ನಸಾಗರ" ಹಾಗೂ "ರತ್ನ ರಂಜಕ" ಎಂಬ ಮೂರು ವಿಶಾಲವಾದ, ಭವ್ಯವಾದ ಭವನಗಳಲ್ಲಿ ಕಂಗೊಳಿಸುತ್ತಿತ್ತಂತೆ. ಅವುಗಳಲ್ಲೂ "ರತ್ನೋದಧಿ" ಭವನ ಒಂಭತ್ತು ಅಂತಸ್ತಿನದಿತ್ತಂತೆ. ಈ ಮೂರೂ ಭವನಗಳಲ್ಲಿ ಲಕ್ಷಗಟ್ಟಲೆ ಹಸ್ತಪ್ರತಿಗಳಿದ್ದವೆಂದು ಪ್ರತೀತಿ. ಇಲ್ಲಿಂದ ಹುಯೆನ್‌ತ್ಸಾಂಗ ಸ್ವದೇಶಕ್ಕೆ ಮರುಳುವಾಗ "ಚಕ್ಕಡಿಗಟ್ಟಲೆ" ಹಸ್ತಪ್ರತಿಗಳನ್ನು ಕೊಂಡೊಯ್ದನಂತೆ. ಇನ್ನುಳಿದ ಆಗಿನ ಕಾಲದ ವಿಶ್ವವಿದ್ಯಾಲಯಗಳಲ್ಲೂ ಗಣನೀಯವಾದ. (ಅಪಾರವಾದ) ಗ್ರಂಥ ಸಂಪತ್ತು ಇದ್ದಿರಲಿಕ್ಕೆ ಸಾಕು. ಹೀಗಾಗಿ ಇಂದು ಅಳಿದುಳಿದು ನಮಗೆ ಲಭ್ಯವಾಗಿರುವ ಕೇವಲ ೧೧ ಲಕ್ಷದಷ್ಟು ಹಸ್ತಪ್ರತಿಗಳು ತೀರ ಕಡಿಮೆಯವು ಎಂದೆನಿಸುತ್ತದೆ.

ಪ್ರಾಚೀನ ಗ್ರಂಥಾಲಯಗಳಲ್ಲಿಯ ಈ ಬಹುಸಂಖ್ಯೆಯ ಗ್ರಂಥ ಸಂಗ್ರಹ ಆಗಿನ ಗ್ರಂಥಪಾಲಕರಿಂದ ಸೂಕ್ಷ್ಮವಾಗಿ ವರ್ಗೀಕರಿಸಲ್ಪಟ್ಟು. ಸಮರ್ಥವಾಗಿ ಸೂಚೀಕರಿಸಲ್ಪಟ್ಟಿದ್ದಿತು. ಆದರೆ ನಮಗೆ ಆಗಿನ ಕಾಲದ ವರ್ಗೀಕರಣ ಪದ್ಧತಿಯ ಬಗ್ಗೆ ಅಲ್ಪ–ಸ್ವಲ್ಪ ಮಾಹಿತಿ ದೊರೆಯುತ್ತದಾದರೂ ಸೂಚೀಕರಣದ ಬಗ್ಗೆ ವಿಶೇಷ ಮಾಹಿತಿ ದೊರೆಯುತ್ತಿಲ್ಲ.

ಹಸ್ತಪ್ರತಿಗಳ ಸೂಚೀಕರಣದ ಮೊದಲ ಪ್ರಯತ್ನಗಳು :

ಇಂತು ದೇಶದ ಹಾಗೂ ಪರದೇಶಗಳ ಗ್ರಂಥಾಲಯಗಳಲ್ಲಿ ಅಳಿದುಳಿದ ಹಸ್ತಪ್ರತಿಗಳ ವ್ಯವಸ್ಥಿತ ವರ್ಗೀಕರಣ ಸೂಚೀಕರಣದ ಕೆಲಸದಲ್ಲೂ ಪಾಶ್ಚಾತ್ಯರೇ ಮುಂದಾದರು. ಆಕ್ಸ್‌ಫರ್ಡ ವಿಶ್ವವಿದ್ಯಾಲಯದ ಬಾಡ್ಲೆಯನ್ ಗ್ರಂಥಾಲಯದಲ್ಲಿದ್ದ ಭಾರತೀಯ ಹಸ್ತಪ್ರತಿಗಳ ಸೂಚಿಯೊಂದನ್ನು ಥಿಯೋಡೋರ ಜೌಫ್ರೆಟ್ ಎಂಬ ಪಾಶ್ಚಾತ್ಯ

ವಿದ್ವಾಂಸ ಸಂಕಲಿಸಿ ೧೮೯೯ರಲ್ಲಿಯೇ ಪ್ರಕಟಿಸಿದ; ತದನಂತರ ಫ್ರಾಂರ್ಝ ಕೀಲ್‌ಹಾರ್ನ ಜಾರ್ಜ್ ಬುಹ್ಲರ್, ಎ. ಸಿ.ಬರ್ನೆಲ್ಲ, ಮುಂತಾದವರು ಈ ಕೆಲಸ ಮುಂದೆ ಸಾಗಿಸಿಕೊಂಡು ಬಂದು ಭಾರತದಲ್ಲಿನ ಕೆಲವೊಂದು ಗ್ರಂಥಾಲಯುಗಳಲ್ಲಿನ ಹಸ್ತಪ್ರತಿಗಳ ಸೂಚಿಗಳನ್ನು ಸಂಕಲಿಸಿ ಈ ಮಹಾ ಕಾರ್ಯಕ್ಕೆ ನಾಂದಿ ಹಾಡಿದರು. ಕೀಲ ಹಾರ್ನರು ಆಗಿನ ಮುಂಬೈ ಪ್ರಾಂತದ ದಕ್ಷಿಣ ಹಾಗೂ ಮಧ್ಯಪ್ರಾಂತದಲ್ಲಿನ ವಿಭಾಗದಲ್ಲಿದ್ದ ಖಾಸಗಿ ಹಸ್ತಪ್ರತಿಗಳ ಗ್ರಂಥಾಲಯುಗಳ ಸೂಚಿಗಳನ್ನು ತಯಾರಿಸಿದರೆ, ಬುಹ್ಲರ ಅವರು ಗುಜರಾತ, ಸಿಂಧ, ರಾಜಪುತಾನಾ– ಮುಂತಾದವುಗಳಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಗಳನ್ನು ಹಾಗೂ ಬರ್ನೆಲ್ ಅವರು ತಂಜಾವೂರ ಅರಮನೆಯಲ್ಲಿನ ಹಸ್ತಪ್ರತಿಗಳ ಸೂಚಿಗಳನ್ನು ತಯಾರಿಸಿದರು. ಈ ದಿಸೆಯಲ್ಲಿ ಆ ಅರುಣೋದಯ ಕಾಲದಲ್ಲಿ ಕೃಷಿ ಮಾಡಿದ ಪ್ರಪ್ರಥಮ ಭಾರತೀಯರೆಂದರೆ ರಾಮಕೃಷ್ಣ ಗೋಪಾಳ ಭಂಡಾರಕರ, ಹರಿಪ್ರಸಾದಶಾಸ್ತ್ರಿ, ನ್ಯಾಯಭೂಷಣ ಕುಂಜವಿಹಾರಿ ಮುಂತಾದವರು.

ಇವರು ಸಂಕಲಿಸಿದ ಸೂಚಿಗಳೇ ಮಾದರಿ ಸೂಚಿಗಳಾದವು. ಇವರು ರೂಪಿಸಿದ ವರ್ಗೀಕರಣ ಪದ್ಧತಿಯೇ ಮಾದರಿಯದಾಯಿತು. ಈ ಪ್ರಾರಂಭದ ಸೂಚಿಗಳು ಅಳವಡಿಸಿಕೊಂಡ ವರ್ಗೀಕರಣ ಹಾಗೂ ಸೂಚೀಕರಣದ ವ್ಯವಸ್ಥೆಗಳನ್ನೇ ಕೆಲಮಟ್ಟಿಗೆ ವಿಶ್ಲೇಷಿಸಿ ನೋಡುವುದು ಇಲ್ಲಿ ಅವಶ್ಯವಾಗುತ್ತದೆ.

ವರ್ಗೀಕರಣ ಪದ್ಧತಿ:

ಈ ಸೂಚಿಗಳಲ್ಲಿ ಗೋಚರವಾಗುವ ವರ್ಗೀಕರಣ ಪದ್ಧತಿಯು ಹೀಗಿದೆ:

ಹಸ್ತಪ್ರತಿಗಳು ಹುಟ್ಟಿಕೊಂಡ ಕಾಲದಲ್ಲಿ ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಭಾಗಗಳು ಇನ್ನೂ, ಆಧುನಿಕ ದೃಷ್ಟಿಯಿಂದ, ಶೈಶವಾವಸ್ಥೆಯಲ್ಲಿಯೇ ಇದ್ದವು. ಅದೇ ವೇಳೆಗೆ ಮಾನವಿಕಶಾಸ್ತ್ರಗಳಾದ ಧರ್ಮ, ತತ್ವಜ್ಞಾನ, ಗಣಿತ, ಜ್ಯೋತಿಷ, ಸಾಹಿತ್ಯ, ಭಾಷಾಶಾಸ್ತ್ರ, ಔಷಧಶಾಸ್ತ್ರ ಮುಂತಾದವುಗಳಲ್ಲಿ ನಮ್ಮ ಪೂರ್ವಜರು ಅತ್ಯುನ್ನತವಾದ ಶಿಖರಗಳನ್ನೇ ಮುಟ್ಟಿದ್ದರು. ಹೀಗಾಗಿ ಆಗಿನ ಕಾಲದ ಗ್ರಂಥಗಳೆಲ್ಲ ಈ ವಿಷಯುಗಳ ಚರ್ಚೆಗೆ ಮೀಸಲಾಗಿದ್ದವು. ಇಲ್ಲಿಯವರೆಗೆ ಪ್ರಕಟವಾದ ಸುಮಾರು ೪೦೦ ಹಸ್ತಪ್ರತಿಗಳ ಸೂಚಿಗಳನ್ನು ಹಾಗೂ ಪಟ್ಟಿಗಳನ್ನು ಪರಿಶೀಲಿಸಿದಾಗ ಆಗಿನ ಕಾಲ ಜ್ಞಾನದ ಹರಹು ಹಾಗೂ ಅದರ ಭಾಗಗಳ ಬಗ್ಗೆ ನಮ್ಮಲ್ಲಿ ಕಲ್ಪನೆ ಮೂಡುತ್ತದೆ. ಈ ಸೂಚಿಗಳಲ್ಲಿ ನಮೂದಿಸಲಾದ ಹಸ್ತಪ್ರತಿಗಳನ್ನು ಕೆಳಗೆ ಕಾಣಿಸಿದ ಪ್ರಮುಖ ವರ್ಗಗಳಲ್ಲಿ ವಿಂಗಡಿಸಲಾಗಿದೆ:

೧ ವೇದ ಹಾಗೂ ವೈದಿಕ ಸಾಹಿತ್ಯ,
ಉಪನಿಷತ್ತುಗಳು, ವೇದಾಂಗಗಳು
ಗೃಹ್ಯ ಸೂತ್ರ, ಧರ್ಮಶಾಸ್ತ್ರ
ಸ್ಮೃತಿ ನಿಬಂಧ
ಮಂತ್ರ, ತಂತ್ರ, ಯಂತ್ರ
ಪೂಜಾ
ವೃತ
ಭಕ್ತಿ
ಸ್ತೋತ್ರ
೨ ಇತಿಹಾಸ ಹಾಗೂ ಪುರಾಣ
ಮಹಾಭಾರತ (ಇದನ್ನು ಮಹಾ
ಕಾವ್ಯದಲ್ಲಿ ನಾವೀಗ
ವರ್ಗೀಕರಿಸುತ್ತೇವೆ)
ಭಗವದ್ಗೀತೆ (ಇದು ನ್ಯಾಯವಾಗಿ
ತತ್ವಜ್ಞಾನಕ್ಕೆ ಸೇರಬೇಕಾದುದು)
೩ ತತ್ವ ಜ್ಞಾನ
ನ್ಯಾಯಾನ್ಯಾಯ
ವೈಶೇಷಿಕ
ಯೋಗ ಇತ್ಯಾದಿ
೪ ಬೌದ್ಧ ಸಾಹಿತ್ಯ
೫ ಜೈನ ಸಾಹಿತ್ಯ
೬ ವೀರಶೈವ ಸಾಹಿತ್ಯ
(ಇವುಗಳಲ್ಲಿ ಸೇರಿಸಲ್ಪಡುವ
ಗ್ರಂಥಗಳು ಧರ್ಮ ಹಾಗೂ
ತತ್ವಜ್ಞಾನಕ್ಕೆ ಸೇರಿದವುಗಳು)
೭ ಭಾಷಾ ಶಾಸ್ತ್ರ
ವ್ಯಾಕರಣ
ನಿಘಂಟು ಶಾಸ್ತ್ರ
೮ ಕಾವ್ಯ
ಮಹಾಕಾವ್ಯ, ಲಘುಕಾವ್ಯ
ಗದ್ಯ, ಚಂಪೂ
ನಾಟಕ
ಅಲಂಕಾರ
ಛಂದ :ಶಾಸ್ತ್ರ
ಸುಭಾಷಿತ
೯ ರಾಜನೀತಿ ಶಾಸ್ತ್ರ
೧೦ ಔಷಧ ಶಾಸ್ತ್ರ
೧೧ ಗಣಿತ ಶಾಸ್ತ್ರ
೧೨ ಜ್ಯೋತಿಷ ಶಾಸ್ತ್ರ
೧೩ ಶಿಲ್ಪ ಶಾಸ್ತ್ರ
೧೪ ಕೃಷಿ ಶಾಸ್ತ್ರ
ಉಪವನ ಶಾಸ್ತ್ರ
೧೫ ಅಶ್ವ ಶಾಸ್ತ್ರ
ಗಜ ಶಾಸ್ತ್ರ
೧೬ ಸೂಪ ಶಾಸ್ತ್ರ
೧೭ ರತ್ನ ಶಾಸ್ತ್ರ
೧೮ ಧನುರ್ವಿದ್ಯೆ
೧೯ ಸಂಗೀತ ನೃತ್ಯ
೨೦ ಕ್ರೀಡೆ
೨೧ ಕಾಮಶಾಸ್ತ್ರ

ಹೀಗೆ ಮೇಲೆ ಕಾಣಿಸಿದ ೨೧ ಮುಖ್ಯ ವರ್ಗಗಳಲ್ಲಿ ಹಾಗೂ ಅವುಗಳಲ್ಲಿ ಅಡಕವಾದ ಚಿಕ್ಕ ಚಿಕ್ಕ ಉಪ ವಿಭಾಗಗಳಲ್ಲಿ ಹಸ್ತಪ್ರತಿಗಳು ವರ್ಗೀಕೃತವಾಗಿವೆ.

ಸೂಚೀಕರಣ :

ಹಸ್ತಪ್ರತಿಗಳನ್ನು ಗ್ರಂಥಾಲಯಗಳಲ್ಲಿ ವ್ಯವಸ್ಥಿತಗೊಳಿಸುವ ದೃಷ್ಟಿಯಿಂದ ಅವುಗಳ ವರ್ಗೀಕರಣ ಕೆಲಸ ಹಗುರಾಗಿದ್ದರೆ ಅವುಗಳ ಸೂಚೀಕರಣ ಬಹಳ ಕ್ಲಿಷ್ಟ

ವಾದ ಕಾರ್ಯ. ಅದರಲ್ಲೂ ಭಾರತೀಯ ಹಸ್ತಪ್ರತಿಗಳು ಹಲವಾರು ವೈಶಿಷ್ಟ್ಯಗಳಿಂದ ಕೂಡಿದವಾಗಿದ್ದರಿಂದ, ಹಾಗೂ ಈ ವೈಶಿಷ್ಟ್ಯಗಳ ಸ್ಥೂಲ ಜ್ಞಾನ ಸಂಶೋಧಕರಿಗೆ ಒಂದು ದೃಷ್ಟಿಯಲ್ಲಿ ಅವಶ್ಯವೆಂದೆನಿಸುವದರಿಂದ ಸೂಚಿಗಳಲ್ಲಿ ಅವುಗಳ ಬಗ್ಗೆ ವಿವರಣೆ ಅವಶ್ಯವೆನಿಸಿತು. ಭಾರತೀಯ ಹಸ್ತಪ್ರತಿಗಳ ಆ ವೈಶಿಷ್ಟ್ಯಗಳು ಹೀಗಿವೆ.

ಹಸ್ತಪ್ರತಿಗಳ ವೈಶಿಷ್ಟ್ಯಗಳು :

ತಾವು ಸಂಗ್ರಹಿಸಿದ ಜ್ಞಾನ ಭಂಡಾರ ತಮ್ಮ ಪೀಳಿಗೆಯ ಪ್ರಯೋಜನಕ್ಕಿರಲೆಂದು, ಪ್ರಾಚೀನ ಭಾರತೀಯರು ಆ ಜ್ಞಾನಭಂಡಾರವನ್ನು ಬರಹಕ್ಕಿಳಿಸಿದರು. ಹೀಗೆ ಬರೆದಿಡಲಿಕ್ಕೆ ಅವರು ಉಪಯೋಗಿಸಿದ ಅನೇಕ ವಸ್ತುಗಳಲ್ಲಿ ಶಿಲೆ, ತಾಡೋಲೆ, ಭೂರ್ಜ ಪತ್ರ, ಬಟ್ಟೆ, ತಾಮ್ರ– ಇವೇ ಮುಂತಾದವು ಪ್ರಮುಖವಾದವು. ಇತ್ತೀಚಿನ ಹಸ್ತಪ್ರತಿಗಳು ಮಾತ್ರ ಕಾಗದದ ಮೇಲಿವೆ. ಮದ್ರಾಸು ಸರಕಾರದ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿಯ ಕನ್ನಡ ಹಸ್ತಪ್ರತಿಗಳ ಅಕ್ಷರಾನುಕ್ರಮ ಸೂಚಿಯಲ್ಲಿ ಒಟ್ಟು ೧೫೪೦ ಹಸ್ತಪ್ರತಿಗಳ ಉಲ್ಲೇಖವಿದ್ದು ಇವುಗಳಲ್ಲಿ ಬೇರೆ ಬೇರೆ ವಸ್ತುಗಳ ಮೇಲೆ ಬರೆದ ಹಸ್ತಪ್ರತಿಗಳು ಈ ಕೆಳಗಿನಂತಿವೆ:

ತಾಡೋಲೆ	...	೧೦೩೭
ಕಾಗದ	...	೪೪೨
ಕಡತ	...	೬೧
	ಒಟ್ಟು	೧೫೪೦

ಹೀಗೆ ಹಸ್ತಪ್ರತಿ ಸಂಗ್ರಹಗಳಲ್ಲಿ ತಾಡೋಲೆಯ ಮೇಲಿನ ಹಸ್ತಪ್ರತಿಗಳ ಸಂಖ್ಯೆಯೇ ಹೆಚ್ಚು. ಇದಕ್ಕೆ ಕಾರಣ ತಾಡೋಲೆ ಹೇರಳವಾಗಿ ದೊರೆಯುತ್ತಿತ್ತಲ್ಲದೇ ಅದು ಬಹುಕಾಲ ಬಾಳುವಂಥದೂ ಆಗಿದೆ. ಈ ನಾನಾ ತೆರನಾದ ಹಸ್ತಪ್ರತಿಗಳಲ್ಲಿ ಉಪಯೋಗಿಸಿದ ಲಿಪಿ. ಭಾಷೆಗಳಲ್ಲಿ ಕೂಡ ವೈವಿಧ್ಯತೆಯಿದೆ. ಇವು ಜನಿಸಿದ ಸ್ಥಳಗಳು ಅನೇಕ. ಮೂಲಪ್ರತಿ (ಸ್ವತಃ ಕವಿಯೇ ಮಾಡಿದ ಪ್ರತಿ Autograph Holograph) ಕವಿಯ ಮನೆ ಅಥವಾ ಅವನು ವಾಸಿಸುತ್ತಿದ್ದ ಮಠದಲ್ಲಿ ಸೃಜಿತವಾಗಿದ್ದರೆ ಅದರ ಇತರ ಪ್ರತಿಗಳು ರೂಪುಗೊಂಡ ಸ್ಥಳಗಳು ಹಲವಾರು. ಅವುಗಳಲ್ಲಿ ಪ್ರಮುಖವಾದವು ಅರಮನೆಗಳು, ಗುರುಮನೆಗಳು, ಗುಡಿ–ಗುಂಡಾರಗಳು, ಸರಸ್ವತೀ ಭಂಡಾರಗಳು, ದಾನಿಗಳ ಹಾಗೂ ಲಿಪಿಕಾರರ ವಾಸ ಸ್ಥಳಗಳು ಇತ್ಯಾದಿ. ಇನ್ನು ಲಿಪಿಕಾರರು ಒಬ್ಬರೇ, ಇಬ್ಬರೇ, ಒಂದೇ ಕಾಲದವರೇ, ಒಂದೇ ಬುದ್ಧಿಮಂತಿಕೆ, ಪಾಂಡಿತ್ಯದ ಮಟ್ಟದವರೇ, ಒಂದೇ ಮತದವರೇ, ಒಂದೇ ನಾಡಿನವರೇ, ಒಂದೇ ಮನೋಧರ್ಮ ಅಭಿರುಚಿಯುವರೇ ? ಅವರು ಬರೆದಿಟ್ಟಿರುವ ಹಸ್ತಪ್ರತಿಗಳಲ್ಲಿ ಅನೇಕ ವ್ಯತ್ಯಾಸಗಳು ಗೋಚರಿಸುತ್ತವೆ. ಪಂಡಿತ ಲಿಪಿಕಾರರ ಕೈಯಲ್ಲಿ ಮೂಲ

ಪಾಠಗಳಲ್ಲಿ ಚಮತ್ಕಾರಿಕ ವ್ಯತ್ಯಾಸಗಳು ಸೇರಿಕೊಂಡಿವೆ; ಅಥವಾ ಹತ್ತಾರು ಹೊಸ ಪದ್ಯಗಳನ್ನು ಅವರೇ ಹೆಣೆದು ಹಾಕಿದ್ದಾರೆ. ಇದಲ್ಲದೆ ಲಿಪಿಕಾರರು ಎಷ್ಟೇ ಶ್ರದ್ಧಾವಂತರಾಗಿದ್ದರೂ ಅವರ ಕಣ್ತಪ್ಪಿಸಿ, ಕಿವಿ ತಪ್ಪಿಸಿ ಹಾಗೂ ಕೈ ತಪ್ಪಿಸಿ ಅನೇಕ ತೆರನಾದ ಸ್ಖಾಲಿತ್ಯಗಳು ಅವರು ತಯಾರು ಮಾಡಿದ ಪ್ರತಿಗಳಲ್ಲಿ ನುಸುಳಿಕೊಂಡಿವೆ. ಹೀಗಾಗಿ ಲಿಪಿಕಾರರು ಲಿಖಿಸಿ ತಯಾರಿಸಿದ ಹಸ್ತಪ್ರತಿಗಳಲ್ಲಿ ಶುದ್ಧವಾದುವು, ಅಶುದ್ಧವಾದುವು ಎಲ್ಲವೂ ಸೇರಿರುತ್ತವೆ. ಮೂಲ ಪ್ರತಿಗಳಲ್ಲಿ ಕೂಡ ಕವಿ ರಚಿತವಾದ ಬದಲಾವಣೆಗಳಿರಬಹುದು; ಇನ್ನುಳಿದವುಗಳಲ್ಲಿ ಬುದ್ಧಿವಂತ ಲಿಪಿಕಾರ ಹೆಣೆದ ಪ್ರಕ್ಷಿಪ್ತಗಳು ಸೇರಿಕೊಂಡಿರಬಹುದು. ಅಲ್ಲಲ್ಲಿ ಕ್ವಚಿತ್ತಾಗಿ ಏಕ ಪ್ರತಿಗಳು[೧], ಸಂರಕ್ಷಿತ[೨] ಪ್ರತಿಗಳು ದೊರೆಯಬಹುದಷ್ಟೇ.

ಹಸ್ತಪ್ರತಿಗಳಲ್ಲಿ ಪುಟ ಸಂಖ್ಯೆಯ ಬದಲು ಪಾನು (folio) ಸಂಖ್ಯೆ ಕೊಡುವದು ರೂಢಿ. ಕೆಲವೊಂದು ಹಸ್ತಪ್ರತಿಗಳಲ್ಲಿ ಬರಹ ಒಂದೇ ಮಗ್ಗಲು ಮೇಲೆ ಇರುವದು. ಹೀಗಾಗಿ ಇವೆಲ್ಲ ಅಂಶಗಳ ಬಗ್ಗೆ ಸೂಚಿಯಲ್ಲಿ ವಿವರವಾದ ಉಲ್ಲೇಖಗಳು ಅವಶ್ಯವೆನಿಸಿದವು. ಈ ಹಿನ್ನೆಲೆಯಲ್ಲಿ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತೀಯ ಹಸ್ತ ಪ್ರತಿಗಳ ಸೂಚೀಕರಣ ಕಾರ್ಯ ಪ್ರಾರಂಭವಾಯಿತು. ಈ ಪರಂಪರೆಯಲ್ಲಿಯೇ, ಮದ್ರಾಸು ಸರಕಾರದ, ಮೈಸೂರು ಹಾಗೂ ಉಸ್ಮಾನಿಯಾ ವಿಶ್ವವಿದ್ಯಾಲಯಗಳ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ ಗ್ರಂಥಾಲಯಗಳು ತಮ್ಮಲ್ಲಿದ್ದ ಸಂಗ್ರಹಗಳ ಸೂಚಿ ತಯಾರಿಕೆಯ ಕಾರ್ಯವನ್ನು ಭರದಿಂದ ಪ್ರಾರಂಭಿಸಿದವು. ಇವುಗಳಲ್ಲಿ ಮೊದಲಿನ ಸೂಚಿಗಳಾದ ಪ್ರೊ. ಕುಪ್ಪುಸ್ವಾಮಿಶಾಸ್ತ್ರಿ ಮುಂತಾದ ಪಂಡಿತ ಮಹನೀಯರಿಂದ ಸಂಕಲಿತವಾದ, ಮದ್ರಾಸು ಸರಕಾರದ ಹಸ್ತಪ್ರತಿ ಗ್ರಂಥಾಲಯದ ಸೂಚಿಯ ಸಂಪುಟಗಳನ್ನು ಅವಲೋಕಿಸುವದು ಅವಶ್ಯ.

ಈ ಸಂಪುಟಗಳಲ್ಲಿ ನಮೂದಿಸಲಾದ ಪ್ರತಿಯೊಂದು ಹಸ್ತಪ್ರತಿಯನ್ನು ಕುರಿತು ಈ ಕೆಳಗಿನ ಅಂಶಗಳನ್ನು ಕೊಡಲಾಗಿದೆ:

೧ ಕ್ರಮಾಂಕ	೪ ಆಕಾರ
೨ ಶಿರೋನಾಮೆ (ಕನ್ನಡ ಹಾಗೂ ಇಂಗ್ಲೀಷಿನಲ್ಲಿ)	೫ ಪುಟಸಂಖ್ಯೆ
	೬ ಪುಟಕ್ಕೆ ಸಾಲುಗಳು
೩ ವಸ್ತು	೭ ಲಿಪಿ

---

೧ ಏಕಪ್ರತಿ : ಕೆಲವೊಂದು ಕೃತಿಗಳು ಜನರ ಮನಸೆರೆ ಹಿಡಿಯದೇ ಇದ್ದ ಕಾರಣ, ದ್ವಿಪ್ರತಿ ತ್ರಿಪ್ರತಿ, ಅನೇಕ ಪ್ರತಿ ಆಗದೇ ಉಳಿದ ಕೃತಿಗಳ ಪ್ರತಿ.

೨ ಸಂರಕ್ಷಿತ ಪ್ರತಿ : ಮೂಲಪ್ರತಿ (ಮಧ್ಯಪ್ರತಿ) ಲಿಪಿಕಾರರ ಹೊಣೆಗೇಡಿತನದಿಂದ ಅಶುದ್ಧವಾದೀತೆಂಬ, ಭಯದಿಂದ ಸಂರಕ್ಷಿತವಾಗಿಡಲ್ಪಟ್ಟುದು. ಮೂಡುಬಿದರೆಯ ಸಿದ್ಧಾಂತ ಬಸದಿಯಲ್ಲಿ ಇಡಲ್ಪಟ್ಟ ಧವಲ ಗ್ರಂಥಗಳು ಈ ಕುಲಕ್ಕೆ ಸೇರಿದವುಗಳು.

೮ ಸ್ಥಿತಿ
೯ ಬರವಣಿಗೆ
೧೦ ಪೂರ್ಣಾಪೂರ್ಣ
೧೧ ವಿವರಣೆ
೧೨ ಪ್ರಾರಂಭ
೧೩ ಕೊನೆ
೧೪ ಸಮಾಪ್ತಿ ವಚನ

ಇನ್ನುಳಿದ ಕೆಲವು ಸೂಚಿಗಳಲ್ಲಿ ಹಸ್ತ ಪ್ರತಿಗಳು ಎಲ್ಲಿಂದ ಬಂದವು, ಯಾರ ಪ್ರೇರಣೆಯಿಂದ ಬರೆಯಲ್ಪಟ್ಟವು[1] ಇತ್ಯಾದಿ ಮಾಹಿತಿಯನ್ನು ಕೊಡಲಾಗಿರುತ್ತದೆ. ಇಂಥ ವಿವರಗಳನ್ನೆಲ್ಲ ನೋಂದಣಿ ದಾಖಲೆಯಲ್ಲಿ (Accession register) ದಾಖಲೆ ಮಾಡಿದರೆ ಸಾಕು ಈ ತೆರನಾದ ವಿವರಣೆಗಳು ಸುದೀರ್ಘವಾಗಿದ್ದು ಕೆಲವೊಂದು ನಮೂದುಗಳ ಸುಮಾರು ೧೦ ಪುಟಗಳಷ್ಟು ವಿಸ್ತಾರವಾಗಿವೆ[2]

ಈ ೧೪ ಅಂಶಗಳಲ್ಲಿ ಕೊನೆಯ ನಾಲ್ಕು ಅಂಶಗಳು ಕೆಳಗೆ ವಿವರಿಸಿದ ಕಾರಣಗಳಿಗಾಗಿ ಬಹಳಷ್ಟು ವಿಸ್ತಾರವಾಗಿ ಬಂದಿವೆ.

ವಿವರಣೆ: ವಿವರಣೆಯ ಅಂಶದಲ್ಲಿ ಲೇಖಕನ ಕಾಲ, ಮತ, ಹಾಗೂ ಅವನ ಕೃತಿಯ ಬಗ್ಗೆ ವಿವರಗಳು ಬಂದಿವೆ.

ಪ್ರಾರಂಭ: ಪ್ರಾಚೀನ ಕಾವ್ಯಗಳ ಕೃತಿಗಳ ಪ್ರಾರಂಭದಲ್ಲಿ ಈ ಕೆಳಗಿನ ಪ್ರಮುಖ ಅಂಶಗಳು ಅಡಕವಾಗಿರುತ್ತಿದ್ದರಿಂದ ಈ ಭಾಗಗಳನ್ನು ವಿಸ್ತೃತವಾಗಿ ಕೊಡಲಾಗಿದೆ:

ಅ ಕವಿಯ ಕುಲದೇವತಾ ಸ್ತುತಿ
ಆ ಆಗಿ ಹೋದ ಕವಿಗಳ ಸ್ತುತಿ
ಇ ಕಾವ್ಯದ ಮಹತಿ, ಪ್ರಯೋಜನ ಹಾಗೂ ಕಾವ್ಯೋದ್ದೇಶ
ಈ ಕಥಾ ವಸ್ತು
ಉ ಕವಿ ಪರಿಚಯ......ಇತ್ಯಾದಿ.

ಈ ಅಂಶಗಳು ಕವಿಯ ಮತ, ಕಾಲ, ಕಥಾವಸ್ತು— ಮುಂತಾದ ವಿಷಯಗಳ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತವೆ. ಉದಾಹರಣೆಗಾಗಿ ಮದ್ರಾಸ ಸರಕಾರದ ಸೂಚಿಯ ಆರನೇ ಸಂಪುಟದ ೧೧೪೪ನೇ ನಮೂದನ್ನು ತೆಗೆದುಕೊಳ್ಳೋಣ. ಸದಾಶಿವಯೋಗಿ ವಿರಚಿತ **ರಾಮನಾಥ ವಿಲಾಸ** ದ ಪ್ರಾರಂಭ ಈ ರೀತಿ ಇದೆ:

---

೧ ಕನ್ನಡ ನಾಡಿನಲ್ಲಿ ೧೦ನೆಯ ಶತಮಾನದಲ್ಲಿ ಸಫಲ ಬದುಕನ್ನು ಬಾಳಿ, ಮಿಂಚಿ ಹೋದ ಮಹಿಳೆ ದಾನಚಿಂತಾಮಣಿ ಅತ್ತಿಮಬ್ಬೆ ಪೊನ್ನನ ಶಾಂತಿ ಪುರಾಣದ ೧೦೦೦ ಪ್ರತಿಗಳನ್ನು ಮಾಡಿಸಿ ಸಜ್ಜನರಿಗೆ ದಾನ ಮಾಡಿದ ಉದಾತ್ತ ಉದಾಹರಣೆಯನ್ನು ನಾವಿಲ್ಲಿ ಸ್ಮರಿಸಬಹುದು.

೨ ಮದ್ರಾಸು ಸರಕಾರದ ಸೂಚಿಗಳ ೩ನೇ ಸಂಪುಟದಲ್ಲಿ ನಮೂದಿಸಲಾದ ಪದ್ಮರಾಜ ವಿರಚಿತ ಪೂಜ್ಯ ಪಾದ ಚರಿತ್ರೆಯ ಉದಾಹರಣೆ ತೆಗೆದುಕೊಳ್ಳಿ. ಈ ನಮೂದು (ನಂ. ೩೮೮) ಪುಟ ೬೩೨ ರಿಂದ ಪ್ರಾರಂಭವಾಗಿ ೬೪೧ರ ವರೆಗೆ ವಿಸ್ತಾರವಾಗಿದೆ.

"ಸ್ವಸ್ತಿ ಸಮಸ್ತ ವಿಷಯ ವಿಶ್ರುತ ವಿನೂತನಾಗಣ್ಯ ಪುಣ್ಯ ಪ್ರದೇಶವಾದ ಹೊಯ್ಸಳ ರಾಜ್ಯದೊಳೊಪ್ಪುತಿರ್ಪ ಮದ್ರಾಪುರದೊಳ್ ತತ್ಪುರವಾಸಿಯಾದ ಸಕಲ ಬ್ರಹ್ಮಾಂಡ ಪರಿಪೂರ್ಣ ಚತುರ್ದಶ ಭುವನಾಧೀಶ್ವರ ಶ್ರೀ ರಾಮೇಶ್ವರ ಲಿಂಗ ಮೂರ್ತಿಯಿಂ ವೀರಶೈವ ದೀಕ್ಷೆಯಂ ಪಡೆದದಂ ಪುಸಿಯೆಂದು ತಿಳಿದು ಶಂಕೆಯಂ ಮಾಡಿದ ಶೈವರ್ಗೆ ಯಾ ರಾಮೇಶ್ವರ ಲಿಂಗಮಂ ಸಾಕ್ಷಿಯಂ ನುಡಿಯಿಸಿ ಮೆರೆದು ಭೂಲೋಕದೊಳ್ ವೀರಶೈವ ಮತಮೆ ವೇದಾಗಮ ಶಾಸ್ತ್ರ ಪುರಾಣಂಗಳೊಳುತ್ತರ ಮೆಂಬುದಂ ಪ್ರಾಚಾರ್ಯರ್ಂಗೆಯ್ದ **ರಾಮನಾಥಾಚಾರ್ಯರ ಚಾರಿತ್ರಮಂ** ಪೇಳ್ವೀ ರಾಮನಾಥ ವಿಲಾಸಮೆಂಬ ಪೆಸರನುಳ್ಳ ಮಹಾ **ದಸ್ತ್ರಕ** ಪ್ರಬಂಧದೊಳೀಕೃತಿ–ಪೀಠಿಕಾ ರೂಪವಾದ ಪ್ರಥಮೋಲ್ಲಾಸಮಂ ಪೇಳ್ವಿನದಂತೆಂದೊಡೆ—

ಕೊನೆ :–[೧] ಕೃತಿಯ ಕೊನೆಯಲ್ಲಿ ಕವಿ ತನ್ನ ಬಗ್ಗೆಯೇ ಹೇಳಿಕೊಳ್ಳಬಹುದು. ಉದಾಹರಣೆಗೆ ಪಂಪನ **ವಿಕ್ರಮಾರ್ಜುನ ವಿಜಯದ** ಕೊನೆಯನ್ನೇ ತೆಗೆದು ಕೊಳ್ಳೋಣ :

"ಇದು ವಿಧ ವಿವಿಧ ಜನ ವಿನುತ ಜಿನ ಪದಾಂಭೋಜ ವರ
ಪ್ರಸಾದೋತ್ಪನ್ನ ಗಂಭೀರ ವಚನ ರಚನ ಚತುರ ಕವಿತಾ
ಗುಣಾರ್ಣವ ವಿರಚಿತಮಪ್ಪ
ವಿಕ್ರಮಾರ್ಜುನ ವಿಜಯದೋಳ ಚತುರ್ದಶಾಶ್ವಸಂ".

ಸಮಾಪ್ತಿ ವಚನ (Colophon) : ಇಲ್ಲಿ ಕಂಡು ಬರುವ ಅಂಶಗಳು ಲಿಪಿಕಾರ ಯಾರು, ಅವನು ಯಾರ ಆದೇಶದ ಮೇರೆಗೆ ಪ್ರತಿ ಮಾಡುವ ಕಾರ್ಯ ಕೈಕೊಂಡ. ಬರೆದ ಸ್ಥಳ ಹಾಗೂ ಕಾಲ– ಮುಂತಾದ ವಿಷಯಗಳ ಬಗ್ಗೆ ವಿವರ ನೀಡುತ್ತವೆ. ಉದಾಹರಣೆಗೆ ಮೇಲೆ ಉಲ್ಲೇಖಿಸಿದ ರಾಮನಾಥ ವಿಲಾಸದ ಕೊನೆಯನ್ನು ನೋಡೋಣ. (ರಾಮನಾಥ ವಿಲಾಸ ನಮೂದು–೧೧೪೫)

ಕರಿ ಗಿರಿ ನಗ ವಾರಿಧಿ ಚಂದ್ರಂ
ನಿರುತಂ ಶಕವರ್ಷ ರಾಕ್ಷಸಾಬ್ದಂ ಶ್ರಾವಣ
ವರ ಕೃಷ್ಣ ಪಂಚಮಿ ಯೊಳಂ
ಬರೆದಂ ಬ್ರಹ್ಮಂ ಸದಾಶಿವಾಖ್ಯಾನ ಕೃತಿಯಂ

(ಈ ಪ್ರತಿಯನ್ನು ಬ್ರಹ್ಮನೆಂಬ ಲಿಪಿಕಾರನು ರಾಕ್ಷಸನಾಮ ಸಂವತ್ಸರದ ಶ್ರಾವಣ ಮಾಸದ ಕೃಷ್ಣಪಂಚಮಿ– ಯಂದು ಬರೆದು ಮುಗಿಸಿದನು.)

---

೧ ಇದೇ ರೀತಿ ಪಾಶ್ಚಾತ್ಯ ಹಸ್ತಪ್ರತಿಗಳು Incipit, (Here begins the text) ಎಂಬ ಲ್ಯಾಟಿನ್ ಪದದಿಂದ ಪ್ರಾರಂಭವಾಗಿ Explicit (Here ends the text.) ಎಂಬ ಪದದಿಂದ ಮುಕ್ತಾಯಗೊಳ್ಳುವವು.

ಹೀಗೆ ಸಂಶೋಧಕ ಸೂಚೀಕಾರರು ಈ ಅಂಶಗಳನ್ನು ತಮ್ಮ ಸೂಚಿಗಳಲ್ಲಿ ಧಾರಾಳವಾಗಿಯೇ ಕೊಟ್ಟಿದ್ದಾರೆ.

ವಿವರಣಾತ್ಮಕ ಸೂಚಿಗಳ ಪ್ರಯೋಜನ ಹಾಗೂ ನೈಫಲ್ಯ :

ಮೇಲೆ ಬಣ್ಣಿಸಿದ ರೀತಿಯಲ್ಲಿ ೧೯ನೆಯ ಶತಮಾನದ ಸಂಶೋಧಕ- ಸೂಚೀಕಾರರು ವಿದ್ವತ್ಪೂರ್ಣವಾದ. ಸಂಶೋಧಕರಿಗೆ ನೆರವಾಗುವ, ವಿವರಣಾತ್ಮಕ ಸೂಚಿಗಳನ್ನು ಪ್ರಕಟಿಸಿ ಕೃತಾರ್ಥರೆನಿಸಿದರು. ಅವರು ಸೂಚೀಕರಣ ಕಾರ್ಯದಲ್ಲಿ ತೋರಿಸಿದ ಜಾಣ್ಮೆ ಹಾಗೂ ವಿಸ್ತಾರದಿಂದ ಅವರು ಪ್ರಕಟಿಸಿದ ಸೂಚಿಗಳು ಸಂಶೋಧನ ಪ್ರಬಂಧ ಗ್ರಂಥಗಳಾಗಿ ಪರಿಣಮಿಸಿದವು.

ಈ ವಿಧಾನ ಸಾಕಷ್ಟು ಸಮಯ ಹಾಗೂ ಹಣದ ಆಹುತಿ ತೆಗೆದುಕೊಂಡಿದೆ. ಹೀಗಾಗಿ ಮಾಡಬೇಕಾದ ಕೆಲಸದ ಮೊತ್ತ ಬೆಳೆಯುತ್ತ ಹೋಗಿ ಸೂಚಿಗಳನ್ನು ಪ್ರಕಟಿಸುವ ಕೆಲಸ ಹಿಂದುಬಿದ್ದು ಹೋಗಿದೆ. ಇದರಿಂದ ಸಂಶೋಧಕರಿಗೇ ಅನಾನುಕೂಲತೆಯಾಗಿದೆ. ಮೇಲಾಗಿ ಎಲ್ಲ ಹಸ್ತಪ್ರತಿಗಳಿಗೂ ಸೂಚಿಗಳಲ್ಲಿ ಕಾಣಿಸಿದ, ೧೪ ಅಂಶಗಳ ಬಗ್ಗೆ ಅಷ್ಟೊಂದು ವಿವರಗಳು ಬೇಕೆ ?

ಇದೇ ಸಂದರ್ಭದಲ್ಲಿ ನಾವು ಇನ್ನೊಂದು ಅಂಶವನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಇಂಥ ವಿವರಣಾತ್ಮಕ, ಪಾಂಡಿತ್ಯಪೂರ್ಣ ಸೂಚಿಗಳನ್ನು ಕೂಡ ಸಂಶೋಧಕನು ಸಂಶಯದ ದೃಷ್ಟಿಯಿಂದ ನೋಡುವ ಸಂಭವವಿದೆ. ಅವನ ದೃಷ್ಟಿಯಲ್ಲಿ ಹಸ್ತಪ್ರತಿಗಳಲ್ಲಿ ಗೋಚರಿಸುವ ಬೆಲೆಯುಳ್ಳ ಅಂಶಗಳನ್ನು ಸೂಚೀಕಾರ ಬಿಟ್ಟಿರುವ ಸಂಭವವಿರಬಹುದು. ಅದಕ್ಕಾಗಿ ಸಂಶೋಧಕನು ಸ್ವತಃ ಹಸ್ತಪ್ರತಿಗಳನ್ನು ಪರಿಶೀಲಿಸಲೇ ಬೇಕಾಗುತ್ತದೆ. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಸಾರಿಗೆ ಸಂಪರ್ಕ ಸಾಧನಗಳ ಅಭಾವ ಇದ್ದಿತು. ಅದರಂತೆ ಈ ಶತಮಾನದ ಪೂರ್ವಾರ್ಧದವರೆಗೂ ಹಸ್ತಪ್ರತಿಗಳ ದ್ವಿಪ್ರತಿ ಮಾಡುವ ಉಪಕರಣಗಳು ವಿರಳವಾಗಿದ್ದವು. ಮೇಲಾಗಿ ಹಸ್ತಪ್ರತಿಗಳ ಸಂಗ್ರಹಗಳು ಹೆಚ್ಚಾಗಿ ಸಾಮಾಜಿಕ ಸ್ವಾಮ್ಯದವಾಗಿರದೆ ವೈಯಕ್ತಿಕ ಸ್ವಾಮ್ಯದವಿದ್ದವು. ಈ ಕಾರಣಗಳಿಂದಾಗಿ ವಿವರಗಳನ್ನೊಳಗೊಂಡ ಸೂಚಿಗಳ ಅವಶ್ಯಕತೆ ಆಗ ಇದ್ದಿತ್ತೇನೋ ? ಆದರೆ ಈಗ ?

ಸೂಚಿಯ ಉದ್ದೇಶ :

ಇವೆಲ್ಲ ಅಂಶಗಳಿಗಿಂತ ಮೇಲಾಗಿ ಇನ್ನೊಂದು ವಾದಸರಣಿಯನ್ನು ನಾವು ಈಗ ಗಮನಿಸಬೇಕಾಗುತ್ತದೆ. ಅದೆಂದರೆ : ಸೂಚಿಯ ಕಾರ್ಯೋದ್ದೇಶಗಳೇನು ? ಸಂಶೋಧಕನಿಗೆ. ಓದುಗನಿಗೆ ಅವನಿಗೆ ಬೇಕಾದ ಬರಹ. ಗ್ರಂಥ ಎಲ್ಲಿದೆ ಹಾಗೂ ಅದು ಎಷ್ಟು ಸುಲಭದಲ್ಲಿ ಶೀಘ್ರವಾಗಿ ದೊರೆಯಬಹುದು- ಇತ್ಯಾದಿ ಎಂಬುದನ್ನು ತಿಳಿಸುವದೋ ಅಥವಾ ಆ ಬರಹಗಳಲ್ಲಿ ಏನಿದೆಯೆಂಬುದನ್ನು ವಿವರವಾಗಿ ತಿಳಿಸುವದೋ ?

ಈ ವಿಷಯದಲ್ಲಿ ಪೆಕ್ ಹ್ಯಾಮ್ ಎಂಬ ಪಾಶ್ಚಾತ್ಯ ಗ್ರಂಥಪಾಲಕನ ವಿಚಾರ ಧಾರೆಯನ್ನು ಕೇಳಿ :

". . . . the reader is doing the research; the staff need not do it for him. The Curator's duty ends with steering the reader to the right or relevant collection . . . . the reader should be prepared to dig through a pack of chaff to reach his grain of wheat. That is what constitutes research."[೧]

ಅಡ್ಯಾರ ಲೈಬ್ರರಿಯಲ್ಲಿನ ಹಸ್ತಪ್ರತಿಗಳ (ವಿಶ್ವಭಾರತಿ ಸಂಗ್ರಹದ) ವಿವರಣಾತ್ಮಕ ಸೂಚಿ ತಯಾರಿಸುವ ಹೊಣೆಹೊತ್ತುಕೊಂಡು ಕಾರ್ಯಾರಂಭಿಸಿದ ಡಾ. ಈ. ಆರ್. ಶ್ರೀ ಕೃಷ್ಣ ಶರ್ಮರ ಅನುಭವವನ್ನೇ ನಾವಿಲ್ಲಿ ನೆನೆಯಬಹುದು. ಡಾ. ಶರ್ಮ ಹಳೇ ಮಾದರಿಯ ಮೇಲೆ ವಿವರಣಾತ್ಮಕವಾದ. ಪಾಂಡಿತ್ಯ ಪೂರ್ಣವಾದ ಸೂಚಿ ಸಂಕಲನ ಕಾರ್ಯ ಕೈಕೊಂಡರು. ದೀರ್ಘಕಾಲ ಉರುಳಿದರೂ ಕೆಲಸ ಮಾತ್ರ ಮುಗಿಯಲೇ ಇಲ್ಲ. ಕೊನೆಗೆ ಬೇಸತ್ತು. ಭಾರತ ಸರಕಾರದವರು ಸೂಚಿಸಿದ ಸುಲಭ ಮಾದರಿಗೆ ಶರಣು ಹೋಗಿ ಕಾರ್ಯ ಪೂರೈಸಿದರು. ಆದರೂ ತಾವು ಸಂಕಲನಕ್ಕೆ ಕೈಕೊಂಡ ೧೩ನೇ ಸಂಪುಟದಲ್ಲಿ ಜಾಪಾನಿ, ಬರ್ಮಿ, ಕನ್ನಡ ಹಾಗೂ ತಮಿಳು ಭಾಷೆಗಳಲ್ಲಿನ ಹಸ್ತ ಪ್ರತಿಗಳನ್ನು ನಮೂದಿಸಲಾಗಲಿಲ್ಲ.

ಈ ಹಳೆಯ ಮಾದರಿಯನ್ನೇ ಮಾರ್ಪಡಿಸಿಕೊಂಡು. ವೃದ್ಧಿಸಿಗೊಂಡು ಹಸ್ತಪ್ರತಿ ಸೂಚಿಗಳ ಸಂಪುಟಗಳನ್ನು ನಮ್ಮ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆ ಪ್ರಕಟಿಸುತ್ತಿದೆ. ಇಲ್ಲಿಯವರೆಗೆ ೫.೦೦೦ ಕ್ಕೂ ಮಿಕ್ಕ ಹಸ್ತಪ್ರತಿಗಳನ್ನು ಸಂಗ್ರಹಿಸಿದ ಈ ಸಂಸ್ಥೆ ಹಸ್ತಪ್ರತಿ ಸೂಚಿಗಳ ಹತ್ತು ಸಂಪುಟಗಳನ್ನು ಪ್ರಕಟಿಸಿದೆ. ಇವುಗಳಲ್ಲಿ ೬೭೩ ಕೃತಿಗಳು ನಮೂದು ಮಾಡಲ್ಪಟ್ಟಿವೆ.

ಈ ಅನುಭವದಿಂದ ನಾವೆಲ್ಲ ಒಪ್ಪಬೇಕಾದ ಮಾತೆಂದರೆ

"Excessive elaboration has collapsed of its own weight – and therefore the describers must give way to the finders".

ಭಾರತ ಸರಕಾರದ ಮಾದರಿ :

೧೯ನೆಯ ಶತಮಾನದ ಮಾದರಿಯ ವಿವರಣಾತ್ಮಕ ಹಸ್ತಪ್ರತಿಗಳ ಸೂಚಿಗಳು : ೧) ಸಂಕಲಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತವೆ. ೨) ತತ್ಪರಿಣಾಮವಾಗಿ

---

1 Peckham, H. H. Arranging and cataloguing manuscripts in the William L. Clements Library *American Archivist* 1:215–229 Oct. 1938.

ಸೂಚಿ ಸಂಕಲನ ಕಾರ್ಯ ಭರದಿಂದ ಸಾಗದೆ ಕುಂಟುತ್ತ, ಎಡಹುತ್ತ ಸಾಗುತ್ತದೆ. ೩) ಇಂಥ ಸೂಚಿಗಳನ್ನು ಮುದ್ರಿಸುವುದೂ ವೇಳೆ ಹಾಗೂ ಹೆಚ್ಚಿನ ಹಣ ತೆಗೆದುಕೊಳ್ಳುತ್ತದೆ. ೪) ಇಷ್ಟೆಲ್ಲ ಸಮಯ, ಸಂಶೋಧಕ-ಸೂಚೀಕಾರರ ಪಾಂಡಿತ್ಯ ಹಾಗೂ ಸಾಮರ್ಥ್ಯ ಮತ್ತು ಹಣ ವ್ಯಯಮಾಡಿ ಪ್ರಕಟಗೊಂಡ ಸೂಚಿಗಳ ಪ್ರಯೋಜನ ಅಷ್ಟೊಂದು ಗಣನೀಯವಾಗಲಿಲ್ಲೆಂಬ ನಾಲ್ಕು ಅಂಶಗಳನ್ನು, ಇಂಥ ಸಂಕಲನ ಯೋಜನೆಗಳಿಗೆ ಧನಸಹಾಯ ಒದಗಿಸುತ್ತಿದ್ದ ಭಾರತ ಸರಕಾರ, ಗಮನಿಸಿತು. ಆದ್ದರಿಂದಲೇ ಸರಕಾರ. ಸಂಶೋಧಕರ ಸಹಾಯ-ಸಲಹೆಯ ಮೇರೆಗೆ ಸಂಕ್ಷಿಪ್ತವಾದ ಆದರೂ ಸಾಕಷ್ಟು ಅಂಶಗಳನ್ನೊಳಗೊಂಡ ಸೂಚಿಯ ಮಾದರಿಯನ್ನು ಸಿದ್ಧಪಡಿಸಿ ಎಲ್ಲ ಹಸ್ತಪ್ರತಿ ಗ್ರಂಥಾಲಯಗಳಿಗೆ, ಅದರಲ್ಲೂ ಹಸ್ತಪ್ರತಿ ಸೂಚಿಗಳ ಸಂಕಲನ ಕಾರ್ಯ ಕೈಕೊಂಡು ತಮ್ಮಿಂದ ಧನಸಹಾಯ ಕೇಳುವ ಸಂಘ-ಸಂಸ್ಥೆಗಳಿಗೆ ಕಳಿಸಿಕೊಟ್ಟಿತು. ಈ ಮಾದರಿಯ ರೂಪರೇಷೆಗಳ ಪ್ರಕಾರ ಸೂಚಿಯಲ್ಲಿ ಅಳವಡಿಸಲ್ಪಡುವ ಎಲ್ಲ ನಮೂದುಗಳ ಬಗ್ಗೆ ಈ ಕೆಳಗಿನ ೧೧ ಅಂಶಗಳನ್ನು ಮಾತ್ರ ಉಲ್ಲೇಖಿಸಬಹುದಾಯಿತು :

೧	ಕ್ರಮಾಂಕ ಹಾಗೂ ವಿಷಯ	೭	ಲಿಪಿ
೨	ಅನುಕ್ರಮಾಂಕ (Accession no)	೮	ಆಕಾರ (ಪುಟ, ಸಾಲು, ಅಕ್ಷರ)
೩	ಶಿರೋನಾಮೆ		
೪	ಲೇಖಕ	೯	ಪೂರ್ಣಾಪೂರ್ಣ
೫	ಭಾಷ್ಯಕಾರ	೧೦	ಸ್ಥಿತಿ
೬	ವಸ್ತು	೧೧	ಇನ್ನಿತರ ವಿವರ

ಇದರಲ್ಲಿ ಹಳೆಯ ಮಾದರಿಯಲ್ಲಿದ್ದ ಲಿಪಿಕಾರ, ಕಾಲ, ನಿರ್ಮಾಣಗೊಂಡ ಸ್ಥಳ, ಭಾಷೆ, ಪ್ರಾರಂಭ, ಕೊನೆ ಇತ್ಯಾದಿ ವಿವರಗಳಿಗೆ ಅವಕಾಶವಿಲ್ಲ. ಹೀಗಾಗಿ ಈ ಮಾದರಿ ಸಂಕ್ಷಿಪ್ತವಾಗಿದ್ದರೂ, ಸರಕಾರ ಈ ಎಲ್ಲ ಅಂಶಗಳನ್ನು ಒಂದು ಪಟ್ಟಿಯ (Tabular form) ರೂಪದಲ್ಲಿ ಪ್ರಕಟಿಸಬೇಕೆಂದು ಸೂಚಿಸಿದ್ದರಿಂದ ಈ ಮಾದರಿಯ ಪ್ರಕಾರ ಪ್ರಕಟಗೊಂಡ ಸೂಚಿಗಳಲ್ಲಿ ಕೂಡ ಸ್ಥಳದ ಮಿತವ್ಯಯವಿಲ್ಲದಂತಾಗಿ ಸೂಚಿಗಳು ಅನೇಕ ಪುಟಗಳ ವಿಸ್ತಾರ ಹೊಂದಿ, ವೆಚ್ಚ ಜಾಸ್ತಿಯಾಗಿದೆ.

ಲೇಖಕರಿಗೆ ಪ್ರಾಶಸ್ತ್ಯವಿಲ್ಲ :

ಮೇಲೆ ಹೇಳಿದ ಎರಡೂ ಮಾದರಿ ಸೂಚಿಗಳಲ್ಲಿ ಲೇಖಕನಿಗೇ ಪ್ರಾಶಸ್ತ್ಯವಿಲ್ಲ.[೧] ಆಧುನಿಕ ಸೂಚೀ ಶಾಸ್ತ್ರದ ಪ್ರಕಾರ ಸೂಚೀಕರಣದಲ್ಲಿ ಪ್ರಧಾನ ಪತ್ರಕ ತಯಾರಾಗು

---

೧ ಮದ್ರಾಸ ಸರಕಾರದ ಸೂಚಿಗಳಲ್ಲಿ ಲೇಖಕನ ಹೆಸರು ಕೆಲವೆಡೆ ಶಿರೋನಾಮೆ ಜೊತೆ ಬಂದಿದ್ದರೆ ಇನ್ನು ಕೆಲವು ಕಡೆ ವಿವರಣೆಯಲ್ಲಿ ಕಾಣಿಸಿಕೊಳ್ಳುತ್ತದೆ. ಹೀಗೆ ಹಳೆಯ ಮಾದರಿಯ ಸೂಚಿಗಳಲ್ಲಿ ಏಕರೂಪತೆಯ ಅಭಾವವೂ ಉಂಟು.

ಏದು ಲೇಖಕನ ಹೆಸರಿನಲ್ಲಿ. ಮೇಲೆ ಉಲ್ಲೇಖಿಸಿದ ಎರಡೂ ಮಾದರಿಗಳಲ್ಲಿ ಕ್ರಮಾಂಕಕ್ಕೆ ಅಗ್ರ ಸ್ಥಾನ. ನಂತರ ವಿಷಯ. ಆ ನಂತರ ಶೀರ್ಷಿಕೆ. ಆ ಮೇಲೆ ಲೇಖಕ. ಯಾವುದೇ ಒಂದು ನಿರ್ದಿಷ್ಟವಾದ ಬರಹ ಸಂಶೋಧಕನಿಗೆ ಬೇಕಾದಾಗ ಅವನು ಅದನ್ನು ಶೋಧಿಸುವದು ಆ ಬರಹದ ಲೇಖಕನ ಹೆಸರಿನ ಮೂಲಕ ಅಥವಾ ಆ ಬರಹದ ಶಿರೋನಾಮೆಯ ಮೂಲಕ. ಆದರೆ ಒಮ್ಮೊಮ್ಮೆ ಶಿರೋನಾಮೆ ಬದಲಾಗುವದುಂಟು. ಲೇಖಕನ ಹೆಸರು ಬದಲಾಗುವದು ಅವನು ಕಾವ್ಯನಾಮದಲ್ಲಿ ಕೃತಿರಚನೆ ಮಾಡಿದಾಗ ಮಾತ್ರ. ಅದ್ದರಿಂದ ಸೂಚೀಕರಣದಲ್ಲಿ ಲೇಖಕನಿಗೆ ಅಗ್ರ ಸ್ಥಾನ ಸಲ್ಲಬೇಕು. ಮದ್ರಾಸು ಸರಕಾರದ ಕನ್ನಡ ಹಸ್ತಪ್ರತಿಗಳ ಅಕ್ಷರಾನುಕ್ರಮ ಸೂಚಿಯಲ್ಲಿ ಒಟ್ಟು ೧೫೪೦ ನಮೂದುಗಳು ಇವೆ. ಇವುಗಳಲ್ಲಿ ೯೭೪ ನಮೂದು ಗಳಿಗೆ ಲೇಖಕರಿದ್ದಾರೆ. ಉಳಿದ ೫೬೬ ನಮೂದುಗಳಲ್ಲಿ ಹೆಚ್ಚಾಗಿ ಶಾಸನಗಳ ಕಾಗದ ಪ್ರತಿಗಳು. ಕೈಫಿಯತ್ತುಗಳು. ಅರಸರ ವಂಶಾವಳಿಗಳು. ಇತ್ಯಾದಿ ಇವೆ. ಅಂದ ಮೇಲೆ ಲೇಖಕರಿಗೆ ಸೂಚಿಯಲ್ಲಿ ಆದ್ಯತೆ ಕೊಡಲು ಅಭ್ಯಂತರವೇನು ?

ಆಧುನಿಕ ಗ್ರಂಥಾಲಯಗಳಲ್ಲಿ ಉಪಯೋಗಿಸಲ್ಪಡುವ ವರ್ಗೀಕರಣ ಹಾಗೂ ಸೂಚೀಕರಣ ಪದ್ಧತಿಗಳನ್ನು ಹಸ್ತಪ್ರತಿ ಗ್ರಂಥಾಲಯಗಳಿಗೆ ಅನ್ವಯಿಸಬಹುದು :

"The child is the father of man ಎಂದು ಆಂಗ್ಲ ಮಹಾಕವಿ ವರ್ಡ್ಸ್‌ವರ್ಥ ಹಾಡಿದ. ೧೫ನೆಯ ಶತಮಾನದಲ್ಲಿ ಗುಟ್ಟೆನಬರ್ಗ ಮುದ್ರಣಯಂತ್ರ ಶೋಧಿಸಿ ಹಸ್ತ ಪ್ರತಿಗಳನ್ನುಆಧುನಿಕ ಗ್ರಂಥರೂಪದಲ್ಲಿ ರಾಶಿಗಟ್ಟಲೆ (mass production) ತಯಾರಿಕೆಗೆ ನಾಂದಿ ಹಾಡಿದ. ಅಂದಮೇಲೆ ಹಸ್ತಪ್ರತಿ ಎಂದರೆ ಗ್ರಂಥದ ತಂದೆ– ಅಥವಾ "ಮುದ್ರಿತ ಹಸ್ತಪ್ರತಿ" ಎಂದು ವರ್ಣಿಸಿದರೆ ಪ್ರಮಾದವೇನಲ್ಲ. ಹೀಗಿದ್ದಲ್ಲಿ ಪ್ರಪಂಚದ ಗ್ರಂಥಾಲಯಗಳಲ್ಲಿ ಪ್ರಚಲಿತವಿದ್ದ ವರ್ಗೀಕರಣ ಹಾಗೂ ಸೂಚೀಕರಣ ಪದ್ಧತಿಗಳನ್ನೇ ಹಸ್ತ ಪ್ರತಿಗಳಿಗೂ ಅನ್ವಯಿಸಲು ಸಾಧ್ಯವಿಲ್ಲವೇ ?

ಹಸ್ತಪ್ರತಿ ಹಾಗೂ ಗ್ರಂಥಗಳ ನಡುವೆ ಈ ರೀತಿ ಅತಿ ನಿಕಟವಾದ ಸಂಬಂಧ ವಿರುವದರಿಂದ ಆಧುನಿಕ ಗ್ರಂಥಾಲಯ ಶಾಸ್ತ್ರ ಹಸ್ತಪ್ರತಿಗಳ ಸಂಗ್ರಹ. ಸಂರಕ್ಷಣೆ. ವರ್ಗೀಕರಣ. ಸೂಚೀಕರಣ. ಇತ್ಯಾದಿ ವಿಷಯಗಳ ಬಗ್ಗೆ ಖಚಿತವಾದ ನೀತಿ–ನಿಯಮ ಗಳನ್ನು ರೂಪಿಸುವದು ತರ್ಕಬದ್ಧವಾಗಿದೆ. ಆಧುನಿಕ ಗ್ರಂಥಾಲಯ ಚಳವಳಿಯ ಅಗರವಾದ ಅಮೇರಿಕೆಯಲ್ಲಿ ಇವುಗಳ ಬಗ್ಗೆ ಗಮನ ಹರಿಸಲಾಯಿತು. ಸಿ ಎ ಕಟ್ಟರ. ಲೈಬ್ರರಿ ಆಫ್ ಕಾಂಗ್ರೆಸ್ ಹಾಗೂ ಮಿನ್ನೆಸೋಟಾ ಹಿಸ್ಟಾರಿಕಲ್ ರಿಸರ್ಚ ಸೊಸೈಟಿ– ಇವರೆಲ್ಲ ಹಸ್ತಪ್ರತಿಗಳ ಸೂಚೀಕರಣದ ಬಗ್ಗೆ ವಿವರವಾದ ನಿಯಮ ಗಳನ್ನು ರೂಪಿಸಿಕೊಂಡರು. ಆದರೆ ಹಸ್ತಪ್ರತಿ ಎಂದೊಡನೆ ಅಮೇರಿಕೆಯ ಸಂಶೋ ಧಕರ ಹಾಗೂ ಗ್ರಂಥಪಾಲಕರ ಕಣ್ಣೆದುರು ಕುಣಿಯುವ ಪ್ರಮುಖವಾದ ವಸ್ತು ಗಳೆಂದರೆ ಕೈಯಿಂದ ಮಾಡಿದ ಕಾಗದದ ಮೇಲೆ ಕೈಯಿಂದ ಬರೆದ ದಾಖಲೆಗಳು.

ಲೇಖಕ ಟೈಪ್ ಮಾಡಿದ ಪ್ರತಿಗಳು, ಚಲನಚಿತ್ರಗಳು, ಸರಕಾರೀ ಕಾಗದದ ಪತ್ರಗಳು, ದಿನಚರಿಗಳು, ಧ್ವನಿ ಮುದ್ರಿಕೆಗಳು– ಇವುಗಳಲ್ಲಿ ಚರ್ಚ ಗಂಟೆಯ ನಿನಾದವನ್ನು ಯುದ್ಧದ ತೋಫುಗಳ ಗರ್ಜನೆಯನ್ನೂ ಸೆರೆ ಹಿಡಿದಂತಹವುಗಳೂ ಸೇರುತ್ತವೆ– ಇತ್ಯಾದಿ. ನಮ್ಮಲ್ಲಿ ದೊರಕುವಂತಹ ಪ್ರಾಚೀನ ತಾಡೋಲೆಗಳು ಅವರಿಗ ಅಪರಿಚಿತ. ಆದರೆ ನಮ್ಮ ದೇಶದಲ್ಲಿ ಗ್ರಂಥಾಲಯ ಶಾಸ್ತ್ರದಲ್ಲಿ ಹಸ್ತಪ್ರತಿ ಶಾಸ್ತ್ರ ಅಡಕವಾಗದೇ ಉಳಿದುದು ಅದರ ಬೆಳವಣಿಗೆಗೆ ಅಡ್ಡಿ ಆದಂತಾಗಿ ನಿರುಪಾಯವಾಗಿ, ಸಂಶೋಧಕರೇ ಅದರಲ್ಲಿ ಆಸಕ್ತಿ ವಹಿಸುವಂತಾಯಿತು.

ಹಸ್ತ ಪ್ರತಿ ಗ್ರಂಥಾಲಯಗಳಲ್ಲಿ ಕೂಡ ಆಧುನಿಕ ಗ್ರಂಥಗಳ ಸಂಗ್ರಹವೊಂದನ್ನು ಪೂರಕವಾಗಿ ಬೆಳೆಸಿಕೊಂಡು ಬರಲೇ ಬೇಕಾಗುತ್ತದೆ. ಈ ಗ್ರಂಥ ಸಂಗ್ರಹವನ್ನು ಪ್ರಚಲಿತವಿದ್ದ ವರ್ಗೀಕರಣ ಪದ್ಧತಿಯಿಂದ ವಿಂಗಡಿಸಿ, ವ್ಯವಸ್ಥಿತವಾಗಿ ಸೂಚೀಕರಿಸಿ ಇಡಬೇಕಾಗುತ್ತದೆ. ಇವೇ ವರ್ಗೀಕರಣ ಹಾಗೂ ಸೂಚೀಕರಣ ಪದ್ಧತಿಗಳನ್ನು ಅಲ್ಲಲ್ಲಿ ಮಾರ್ಪಡಿಸಿ ಹಸ್ತಪ್ರತಿಗಳನ್ನು ವ್ಯವಸ್ಥಿತಗೊಳಿಸಬಹುದು. ಇದರಿಂದ ಗ್ರಂಥಾಲಯದ ಇವೆರಡು ತೆರನಾದ ಸಂಗ್ರಹಗಳ ತಾಂತ್ರಿಕ ವ್ಯವಸ್ಥೆಯಲ್ಲಿ ಏಕರೂಪತೆ ಯನ್ನು ಸಾಧಿಸಿದಂತಾಗುತ್ತದೆ. ಅದರಿಂದ ಓದುಗರಿಗೂ, ಸಿಬ್ಬಂದಿಗೂ ಅನುಕೂಲ ವಾಗಬಹುದು.

ವರ್ಗೀಕರಣ ಪದ್ಧತಿ :

ಆಧುನಿಕ ಗ್ರಂಥಾಲಯ ವರ್ಗೀಕರಣ ಪದ್ಧತಿಗಳಲ್ಲಿ ಡ್ಯೂಯಿ ರಚಿಸಿದ ದಶ ಮಾಂಶ ಪದ್ಧತಿ ಹಾಗೂ ರಂಗನಾಥನ್ ನಿರ್ಮಿಸಿದ ಕೋಲನ್ ಪದ್ಧತಿಗಳು ಬಹಳಷ್ಟು ಪ್ರಚಾರದಲ್ಲಿವೆ. ಡ್ಯೂಯಿ ಪದ್ಧತಿಯಲ್ಲಿ ಬರೀ ಅಂಕಿ–ಸಂಖ್ಯೆಗಳನ್ನೂ, ದಶಮಾಂಶ ಗಳನ್ನೂ ಉಪಯೋಗಿಸಿರುವದರಿಂದ ಅದು ಹೆಚ್ಚು ಸುಲಭ ಎನ್ನುವ ದೃಷ್ಟಿಯಿಂದ ಹಸ್ತಪ್ರತಿ ಗ್ರಂಥಾಲಯಗಳಲ್ಲಿ ಸಂಗ್ರಹವಾಗಿರುವ ಹಸ್ತಪ್ರತಿಗಳ ವಿಷಯಗಳಿಗೆ ಸಂಬಂಧಿಸಿದ ಡ್ಯೂಯಿಯ ತಪಶೀಲುಗಳನ್ನು (Schedules) ತಕ್ಕಂತೆ ಬದಲಿಸಿ, ವಿಸ್ತರಿಸಿ ಅವನ್ನೇ ಉಪಯೋಗಿಸಬಹುದು.

ಸೂಚೀಕರಣ :

ಹಸ್ತಪ್ರತಿಗಳನ್ನು ವಿರಳ, ಅಪರೂಪ, ಅದಕ್ಕಾಗಿಯೇ ಅತಿ ಮಹತ್ವದ ಅಮೂಲ್ಯ ಗ್ರಂಥಗಳೆಂದು ಬಣ್ಣಿಸಲಾಯಿತು. ಯುರೋಪಿನಲ್ಲಿ ಮುದ್ರಣ ಯುಗದ ಉಷಃ ಕಾಲದಲ್ಲಿ ಮುದ್ರಣಗೊಂಡ ಅನೇಕ ಗ್ರಂಥಗಳು ಇಂದಿಗೆ ಅಪರೂಪದ ಗ್ರಂಥಗಳಾಗಿ ಯುರೋಪದ ಮಹತ್ವದ ಗ್ರಂಥಾಲಯಗಳಲ್ಲಿ ಕಂಗೊಳಿಸುತ್ತಿವೆ. ಇವುಗಳನ್ನು

ಇನ್‌ಕ್ಯೂನಾಬ್ಯುಲಾ (Incunabula)[೧] ಎಂದು ಕರೆಯುತ್ತಾರೆ. ಇವೂ ವಿರಳ ಕುಲಕ್ಕೆ ಸೇರಿದವುಗಳಾದುದರಿಂದ ಇವುಗಳ ಸೂಚೀಕರಣದಲ್ಲಿ ಸಾಮಾನ್ಯ ಗ್ರಂಥಗಳಿಗಿಂತ ಹೆಚ್ಚಿನ ವಿವರಗಳನ್ನು ಕೊಡಬೇಕಾಗಿ ಬರುತ್ತದೆ. ಅದರಂತೆ ಹಸ್ತಪ್ರತಿಗಳಿಗೂ ಸೂಚೀಕರಣದಲ್ಲಿ ಇವುಗಳಿಗಿಂತ ವಿಶೇಷ ಲಕ್ಷ್ಯ ಪೂರೈಸಬೇಕಾಗುತ್ತದೆ.

ಒಂದೇ ಕೃತಿಯು ಅನೇಕ ಹಸ್ತಪ್ರತಿಗಳಿದ್ದಾಗ್ಯೂ ಕೂಡ ಅವೆಲ್ಲವೂ ವಿರಳವಾದ ವಸ್ತುಗಳೇ. ಅವೆಲ್ಲ ಬೇರೆ ಬೇರೆ ಲಿಪಿಕಾರರಿಂದ, ಬೇರೆ ಬೇರೆ ಕಾಲಗಳಲ್ಲಿ, ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ವಸ್ತುಗಳ ಮೇಲೆ ಲಿಖಿತವಾದವಿರಬಹುದು. ಇಂತು ವೈಶಿಷ್ಟ್ಯಪೂರ್ಣವಾದ ಹಸ್ತಪ್ರತಿಗಳಿಗೆ ಸೂಚೀಕಾರ ವಿಶೇಷ ರೀತಿಯಿಂದ ಸೂಚೀ ಪತ್ರಗಳನ್ನು ತಯಾರಿಸಬೇಕಾಗುತ್ತದೆ. ಆದುದರಿಂದ ಗ್ರಂಥಗಳನ್ನು ಸೂಚೀಕರಿಸಲು ನಾವು ಉಪಯೋಗಿಸುವ ೩″ × ೫″ ಆಕಾರದ ಸೂಚೀಪತ್ರಕಗಳು ಹಸ್ತಪ್ರತಿಗಳನ್ನು ಸೂಚೀಕರಿಸಲು ಚಿಕ್ಕವೆನಿಸಬಹುದು. ಆದಕ್ಕಾಗಿ ಹಸ್ತ ಪ್ರತಿಗಳ ಸೂಚಿ ತಯಾರಿಸಲು ೪″ × ೬″ ಗಾತ್ರದ ಪತ್ರಕಗಳನ್ನು ಉಪಯೋಗಿಸಬಹುದು. ಒಂದೊಂದು ಹಸ್ತಪ್ರತಿಗೆ ಈ ಕೆಳಗಿನಂತೆ ಹಲವಾರು ಪತ್ರಕಗಳನ್ನು ತಯಾರಿಸಿಡಬಹುದು.

೧ ಲೇಖಕ ಪತ್ರಕ. ಇದು ಮುಖ್ಯ ಪತ್ರಕ. ಇದರಲ್ಲಿ ಪ್ರತಿಯೊಂದು ಹಸ್ತಪ್ರತಿಯು ಬಗ್ಗೆ ಕೊಡಬೇಕಾದ ಈ ಕೆಳಗಿನ ಎಲ್ಲ ವಿವರಗಳನ್ನು ನಮೂದಿಸಬಹುದು :

ಅ ಲೇಖಕನ ಹೆಸರು, ಕಾಲ

ಆ ಶಿರೋನಾಮ ಹಾಗೂ ಸಹ ಲೇಖಕನ, ಟೀಕಾಕಾರನ, ಚಿತ್ರಕಾರನ, ಭಾಷಾಂತರಕಾರನ ಹೆಸರು

ಇ ಬರೆದ ಸ್ಥಳ, ಲಿಪಿಕಾರ. ಹಾಗೂ ಹಸ್ತಪ್ರತಿಯ ಕಾಲ

---

೧ ಇಂಥ ಪುಸ್ತಕಗಳು ಒಂದೇ ಕೃತಿಯು ಹಲವಾರು ಪ್ರತಿಗಳಿದ್ದರೂ ಅವುಗಳಲ್ಲಿ ಅನೇಕ ಮುದ್ರಣ ವ್ಯತ್ಯಾಸಗಳು ಕಂಡು ಬರುತ್ತವೆ. ಈ ವ್ಯತ್ಯಾಸಗಳನ್ನು ಬರಿಗಣ್ಣಿನಿಂದ ಗುರುತಿಸಲು ಅಸಾಧ್ಯ. ಅಮೇರಿಕೆಯ ಗ್ರಂಥಪಾಲಕರು ಈ ಸಮಸ್ಯೆಯ ಪರಿಹಾರಕ್ಕಾಗಿ ಇಲೆಕ್ಟ್ರಾನಿಕ್ ಕಣ್ಣುಗಳನ್ನು (Electronic light beams) ಉಪಯೋಗಿಸುತ್ತಾರೆ. ಈ ಉಪಕರಣದ ಎರಡು ಬೆಳಕಿನ ಸೆಳಕುಗಳು ಒಂದೇ ಕೃತಿಯ ಎರಡು ಬೇರೆ ಬೇರೆ ಮುದ್ರಿತ ಗ್ರಂಥಗಳನ್ನು ಏಕಕಾಲಕ್ಕೆ ಓದಲು ಪ್ರಾರಂಭಿಸುತ್ತವೆ. ಯಾವುದೇ ಒಂದು ಪ್ರತಿಯಲ್ಲಿ ವ್ಯತ್ಯಾಸವೇನಾದರೂ ತೋಚಿದರೆ ಅದನ್ನು ಓದುತ್ತಿರುವ ಬೆಳಕಿನ ಕಿರಣ ಮುಂದೆ ಓದುವದನ್ನು ನಿಲ್ಲಿಸಿಬಿಡುತ್ತದೆ. ಈ ವಿಧಾನದಿಂದ ಗ್ರಂಥಪಾಲಕರು ಇಂಥ ಗ್ರಂಥಗಳಲ್ಲಿನ ವ್ಯತ್ಯಾಸಗಳನ್ನು ಕಂಡುಕೊಂಡು ಟಿಪ್ಪಣಿ ಮಾಡಿಕೊಳ್ಳುತ್ತಾರೆ. ಇಂಥ ಉಪಕರಣಗಳಿಂದ ಒಂದೇ ಕೃತಿಯ ಹಲವಾರು ಹಸ್ತ ಪ್ರತಿಗಳನ್ನು ಓದಿಸಿ ಅವುಗಳಲ್ಲಿನ ವ್ಯತ್ಯಾಸಗಳನ್ನು, ಸ್ಖಾಲಿತ್ಯಗಳನ್ನು ಕಂಡುಹಿಡಿಯಲು ಉಪಯೋಗಿಸಿಕೊಂಡು ಭಾರತೀಯ ಹಸ್ತಪ್ರತಿ ಗ್ರಂಥಾಲಯಗಳು ಸೂಚೀಕರಣ ಹಾಗೂ ಸಂಪಾದನ ಕೆಲಸಗಳನ್ನು ಸುಲಭವಾಗಿ ಹಾಗೂ ಶೀಘ್ರವಾಗಿ ಮಾಡಿಕೊಳ್ಳಬಹುದು.

ಈ ವಿಷಯ, ಭಾಷೆ, ಲಿಪಿ ಹಾಗೂ ಶೈಲಿ

ಉ ವಸ್ತು (ಬರೆಯಲು ಉಪಯೋಗಿಸಿದ) ಬರಹ (ಎರಡೂ ಮಗ್ಗಲು– ಒಂದೇ ಮಗ್ಗಲು).
ಪುಟ ಸಂಖ್ಯೆ, ಪುಟಕ್ಕೆ ಸಾಲುಗಳು, ಸಾಲಿಗೆ ಅಕ್ಷರಗಳು, ಪೂರ್ಣ, ಅಪೂರ್ಣ, ಸೈಜು, ಬರವಣಿಗೆ, ಸ್ಥಿತಿ

ಊ ವಿವರಣೆ

ಎ ಪ್ರಾರಂಭ

ಏ ಕೊನೆ

ಐ ವರ್ಗೀಕರಣ ನಂ. ಕ್ರಮಾಂಕ :

ಸೂಚಿಗಳನ್ನು ಅಚ್ಚು ಮಾಡುವಾಗ ೬ ರಿಂದ ೯ರ ವರೆಗಿನ ಅಂಶಗಳ ವಿವರಗಳಲ್ಲಿ ಬಹಳಷ್ಟು ಮಿತವ್ಯಯ ಮಾಡಿ, ಸಂಶೋಧಕರಿಗೆ ಸರಿಯಾದ ಹಸ್ತಪ್ರತಿಯೆಡೆಗೆ ನೇರ ವಾಗಿ ಲಕ್ಷ್ಯ ಹರಿಸಲು ಅವಶ್ಯವಿದ್ದ ವಿವರಗಳನ್ನು ಮಾತ್ರ ಮುದ್ರಿಸಬಹುದು.

೨ ಶಿರೋನಾಮೆ ಪತ್ರಕ : ಇದರ ಮೇಲೆ ಶಿರೋನಾಮೆ. ಲೇಖಕನ ಹೆಸರು. ವರ್ಗೀಕರಣ ನಂಬರು ಹಾಗೂ ಅನುಕ್ರಮಾಂಕ ಇವನ್ನಷ್ಟೇ ನಮೂದಿಸಬಹುದು.

೩ ವಿಷಯ ಪತ್ರಕ : ಇದರಲ್ಲಿ ವರ್ಗೀಕರಣ ಸಂಖ್ಯೆ, ಅನುಕ್ರಮಾಂಕ, ಲೇಖಕ ಹಾಗೂ ಶಿರೋನಾಮೆ ಇವನ್ನು ತೋರಿಸಿದರೆ ಸಾಕು.

೪ ಹೆಚ್ಚಿನ ನಮೂದುಗಳು– ಭಾಷ್ಯಕಾರ, ಚಿತ್ರಕಾರ, ಲಿಪಿಕಾರ, ವರ್ಗದ ಸಂಖ್ಯೆಯ ಬದಲು ಆ ವಿಶಿಷ್ಟ ವಿಷಯದ ಹೆಸರು– ಇವುಗಳಿಗೆ ಹೆಚ್ಚಿನ ನಮೂದು ಗಳನ್ನು ತಯಾರಿಸಿ ಲೇಖಕ ಹಾಗೂ ಶಿರೋನಾಮೆ ಪತ್ರಕದೊಡನೆ ಅಕಾರಾದಿಯಾಗಿ ಹೊಂದಿಸಿ ಸೂಚಿ ಪೆಟ್ಟಿಗೆಗಳಲ್ಲಿ ಇಡಬಹುದು. ಇವುಗಳ ಜೊತೆಗೆ ಒಂದು ಹೆಸರಿ ನಿಂದ ಇನ್ನೊಂದು ಹೆಸರಿಗೆ ಅಥವಾ ಒಂದು ಹೆಸರಿನ ಜೊತೆಗೆ ಇನ್ನೊಂದು ಹೆಸರನ್ನು ನೋಡಲು ಸೂಚಿಸುವ "ನೋಡಿರಿ" (See) ಹಾಗೂ "ಇದನ್ನು ನೋಡಿರಿ" (See also) ಎಂಬ ಪ್ರಕರಾಣಂತರ ಸೂಚನೆಯ ಪತ್ರಕಗಳನ್ನೂ ಓದುಗರ ಅನು ಕೂಲಕ್ಕಾಗಿ ಮಾಡಬೇಕಾಗಬಹುದು. ಇಂಥ ಪತ್ರಕಗಳು ಲೇಖಕನ ಹೆಸರಿನಲ್ಲಿ ಒಂದು ಹಸ್ತ ಪ್ರತಿಯಿಂದ ಇನ್ನೊಂದರಲ್ಲಿ ವ್ಯತ್ಯಾಸವಿದ್ದರೆ, ಅಥವಾ ಶಿರೋನಾಮೆಯಲ್ಲಿ ವ್ಯತ್ಯಾಸಗಳಿದ್ದರೆ. ಅವಶ್ಯವಾಗುತ್ತವೆ. ಇದಕ್ಕೆ ಉದಾಹರಣೆಯಾಗಿ ಸ್ತೋತ್ರ ಸಂಗ್ರಹಗಳ ಶಿರೋನಾಮೆಯಲ್ಲಿ ಕಾಣುವ ವ್ಯತ್ಯಾಸಗಳನ್ನೇ ಗಮನಿಸುವಾ : ಸ್ತೋತ್ರ ಗಳಿಗೆ ಹೆಸರು ಬರುವದು ಈ ಕೆಳಗಿನ ಕಾರಣಗಳಿಂದಾಗಿ :

೧ ಯಾವ ದೇವರನ್ನು ಕುರಿತು ಆ ಸ್ತೋತ್ರ ಇದೆಯೋ ಆ ದೇವರ ಹೆಸರಿನಿಂದ

೨ ಪೌರಾಣಿಕ ಸ್ತೋತ್ರವಿದ್ದಲ್ಲಿ ಸ್ತೋತ್ರದ ಕರ್ತೃವಿನ ಹೆಸರಿನಿಂದ ಅಥವಾ ಆ ಸ್ತೋತ್ರವನ್ನು ಪ್ರಪ್ರಥಮವಾಗಿ ಹಾಡಿದವನಹೆಸರಿನಿಂದ.

೩ ಶ್ಲೋಕಗಳ ಕೊನೆಯಲ್ಲಿ ಪುನರಾವೃತ್ತವಾಗುವ ಚರಣ ಅಥವಾ ಪಲ್ಲವಿಯಿಂದ (refrain).

೪ ಸ್ತೋತ್ರಕ್ಕೆ ಸಂಬಂಧಿಸಿದಂತೆ ಇರುವ ವೈಶಿಷ್ಟ್ಯದಿಂದ. ಉದಾಹರಣೆಗೆ: ಪದ್ಮ ಪುರಾಣದಲ್ಲಿ ಗೋಚರಿಸುವ ಶಿವಸ್ತುತಿಯನ್ನೇ ತೆಗೆದುಕೊಳ್ಳೋಣ ಈ ಸ್ತೋತ್ರಕ್ಕೆ ಈ ಕೆಳಗಿನ ಹೆಸರುಗಳಿವೆ:

ಅ ಮಾರ್ಕಾಂಡೇಯ ಸ್ತೋತ್ರ: ಮಾರ್ಕಾಂಡೇಯ ಹಾಡಿದ ನಿಮಿತ್ತವಾಗಿ

ಆ ಚಂದ್ರಶೇಖರ ಸ್ತೋತ್ರ: ಚಂದ್ರಶೇಖರ ಪದ ಪ್ರತಿ ಶ್ಲೋಕದಲ್ಲಿ ಪುನರಾವೃತ್ತಿಗೊಳ್ಳುತ್ತದಾದುದರಿಂದ

ಇ ಮೃತ್ಯುಂಜಯ ಸ್ತೋತ್ರ: ಶಿವನ ಹೆಸರುಗಳಲ್ಲೊಂದಾದ ಮೃತ್ಯುಂಜಯ ಹೆಸರು ಪ್ರಮುಖವಾದುದರಿಂದ.

ಇಂಥದೇ ಇನ್ನೊಂದು ಉದಾಹರಣೆಯೆಂದರೆ ಸ್ಕಾಂದ ಪುರಾಣದಲ್ಲಿರುವ ಕಾಶೀಖಾಂಡದಲ್ಲಿ ಬರುವ ೧೨ ಶ್ಲೋಕಗಳುಳ್ಳ ಶಿವ ಹಾಗೂ ವಿಷ್ಣು ಇವರನ್ನು ಕುರಿತಾದ ಸ್ತೋತ್ರ. ಇದು ಯಮಧರ್ಮರಾಯನಿಂದ ಹಾಡಲ್ಪಟ್ಟಿದೆ ಹಾಗೂ ಏಳು ಹೆಸರುಗಳನ್ನು ಹೊತ್ತಿದೆ. ಆ ಏಳು ಹೆಸರುಗಳು ಇಂತಿವೆ:

೧ ತ್ರಿಮೂರ್ತಿ ಸ್ತೋತ್ರ
೨ ಧರ್ಮರಾಜ ಸ್ತೋತ್ರ
೩ ಯಮ ಸ್ತೋತ್ರ
೪ ವಿಷ್ಣು–ಶಿವ ಸ್ತೋತ್ರ
೫ ವಿಷ್ಣು–ಶಿವಾಷ್ಟೋತ್ತರ ಶತಕ
೬ ಹರಿಹರ ದಶಕ
೭ ಹರಿಹರಾಷ್ಟೋತ್ತರ ಶತನಾಮ ಸ್ತೋತ್ರ

ಹೀಗೆ ಆಧುನಿಕ ಗ್ರಂಥಾಲಯ ಶಾಸ್ತ್ರದ ತಾಂತ್ರಿಕ ವಿಧಾನಗಳನ್ನು ಉಪಯೋಗಿಸಿ ಹಸ್ತಪ್ರತಿ ಗ್ರಂಥಾಲಯಗಳನ್ನು ವ್ಯವಸ್ಥಿತಗೊಳಿಸಬಹುದು.

ಸಮಾರೋಪ:

ಈ ದಿಸೆಯಲ್ಲಿಯ ಮಂದಗತಿಯಿಂದಾಗಿ ದೇಶದಲ್ಲಿ ಇಂದು ೫ ಲಕ್ಷಕ್ಕೂ [illegible] ಹಸ್ತ ಪ್ರತಿಗಳು ಅನಾಮಧೇಯವಾಗಿ ಗುಪ್ತನಿಧಿಯಂತೆ ಕುಳಿತಿವೆ. ನಮ್ಮ [illegible] ಪರಂಪರೆಯ ಅರಿವು ಮಾಡಿಕೊಳ್ಳಲು, ನಮ್ಮ ಇತಿಹಾಸವನ್ನು ಸಮಗ್ರವಾಗಿ [illegible]

ರ್‍ರಚಿಸಲು, ನಮ್ಮ ಸಾಹಿತ್ಯಗಳ ಚರಿತ್ರೆಗಳನು ಪರಿಪೂರ್ಣವಾಗಿ ನಿರ್ಮಿಸಲು ಹಸ್ತಪ್ರತಿಗಳ ಪರಿಚಯ, ಅಭ್ಯಾಸ, ಅವಶ್ಯವಾಗುತ್ತದೆ. ಹಸ್ತಪ್ರತಿಗಳು ನಮ್ಮ ಭವ್ಯ ಸಂಸ್ಕೃತಿಯ ಭಾರಿ ನಿಕ್ಷೇಪಗಳು; ನಂದಾದೀಪಗಳು. ದೇಶದಲ್ಲಿನ ಸಹಸ್ರಾರು ಸಂಶೋಧಕರು ಅವುಗಳ ಪೂರ್ಣ ಪರಿಚಯಕ್ಕಾಗಿ ಹಾತೊರೆಯುತ್ತಿದ್ದಾರೆ. ಸರಳ ಸುಲಭ ಸೂಚೀಕರಣದ ವಿಧಾನಗಳನ್ನು ಮೂಡಿಸಿ, ಇನ್ನೂ ಸೂಚಿಗಳಲ್ಲಿ ನಮೂದಿಸಲಾಗದ ಹಸ್ತಪ್ರತಿಗಳ ಸೂಚಿಗಳನ್ನು ಎಷ್ಟು ಬೇಗ ನಾವು ತಯಾರಿಸುತ್ತೇವೆಯೋ ಅಷ್ಟು ಸಂಶೋಧಕರಿಗೆ ಕ್ಷೇಮ. ಅವರಿಗೆ ಬೇಕಾದ ಹಸ್ತಪ್ರತಿ ಇಂಥಲ್ಲಿದೆಯೆಂದು ಗೊತ್ತಾದರೆ ಅದನ್ನು ಫೋಟೋಪ್ರತಿಯ ಮೂಲಕವಾಗಲೀ ಅಥವಾ ಮೈಕ್ರೊಫಿಲ್ಮ ಪ್ರತಿಯ ಮೂಲಕ ವಾಗಲೀ ಒದಗಿಸಿ ಕೊಡಬಹುದು. ನಮ್ಮ ವಿಶ್ವವಿದ್ಯಾಲಯದ ಸಂಶೋಧಕರೊಬ್ಬ ರಿಗೆ ಜೈಸಾಲಮರದಲ್ಲಿನ ಜೈನ ಮಂದಿರದ ಗ್ರಂಥಾಲಯದಲ್ಲಿದ್ದ ಹಸ್ತಪ್ರತಿಯ ಫೋಟೋ ಪ್ರತಿಯನ್ನು ನಮ್ಮ ಗ್ರಂಥಾಲಯ ಒದಗಿಸಿದ್ದನ್ನು ಇಲ್ಲಿ ನೆನೆಸಿಕೊಳ್ಳ ಬಹುದಾಗಿದೆ.

ಕನ್ನಡ ಹಸ್ತಪ್ರತಿಗಳ ಸಂಯುಕ್ತ ಸೂಚಿ :

ಕನ್ನಡ ನಾಡಿನ ಮಟ್ಟಿಗೆ ಹೇಳುವದಾದರೆ ಇಂದಿಗೂ ಹಸ್ತಪ್ರತಿ ಗ್ರಂಥಾಲಯ ಗಳಲ್ಲಿದ್ದ ಸಹಸ್ರಾರು ಹಸ್ತ ಪ್ರತಿಗಳು ಸೂಚಿಯಲ್ಲಿ ಸ್ಥಳಾವಕಾಶ ಸಿಗದೆ ಸಂಶೋಧಕ ರಿಂದ ಕಣ್ಮರೆಯಾಗಿ ಕುಳಿತಿವೆ. ಇವಲ್ಲದೆ ಹಳ್ಳಿ-ಹಳ್ಳಿಗಳಲ್ಲಿ, ಮನೆ-ಮಠಗಳಲ್ಲಿ, ಸಹಸ್ರ ಹಸ್ತಪ್ರತಿಗಳು ಧೂಳು ಮುಕ್ಕುತ್ತ ಬೆಳಕು ಕಾಣದೆ ಕತ್ತಲಲ್ಲಿ ಕುಕ್ಕ ರಿಸಿವೆ. ಇವೆಲ್ಲವುಗಳನ್ನು, ಅವು ಗೆದ್ದಲು ಹುಳುಗಳ ಮೇಜವಾನಿ ಆಗುವ ಮೊದಲೇ ಒಂದೆರಡು ಕಡೆ ಶೇಖರಿಸಿಡುವದು ಅಗತ್ಯದ, ಜರೂರಿಯ ಕೆಲಸವಾಗಿದೆ. ಕರ್ನಾಟಕ ಸರಕಾರ ರಾಜ್ಯದಲ್ಲಿನ ಐದೂ ವಿಶ್ವವಿದ್ಯಾಲಯಗಳಿಗೂ ತಮ್ಮ ತಮ್ಮ ಪ್ರದೇಶದಲ್ಲಿನ ಇಂಥ ನಿರ್ಗತಿಕ ಹಸ್ತಪ್ರತಿಗಳ ಸಂಗ್ರಹಣ ಕಾರ್ಯವನ್ನು ಕಡ್ಡಾಯಗೊಳಿಸಿ, ಆ ಕಾರ್ಯ ಕೃತಿಗಿಳಿಸಲು ತಕ್ಕ ಧನಸಹಾಯ ಒದಗಿಸಬೇಕು. ಹೀಗೆ ಸಂಗ್ರಹ ಕಾರ್ಯ ಅವರು ಪೂರೈಸಿದ ನಂತರ ರಾಜ್ಯದಲ್ಲಿನ ಎಲ್ಲ ಹಸ್ತ ಪ್ರತಿಗಳ ಸರಳ ಸಂಯುಕ್ತ ಸೂಚಿಯ (Union List) ಯೋಜನೆಯೊಂದನ್ನು ಹಾಕಿಕೊಂಡು ಕಾರ್ಯಗತ ಮಾಡುವ ಸಂಕಲ್ಪ ಮಾಡಿಕೊಳ್ಳಬೇಕು. ನಂತರ ವಿವರಣಾತ್ಮಕ ಸೂಚಿ ಸಂಕಲನ ಕಾರ್ಯದ ವಿಚಾರ. ಇವುಗಳ ಜೊತೆಗೆ ಪ್ರಮುಖವಾದ ಹಾಗೂ ಮಹತ್ವದವಾದ ಹಸ್ತ ಪ್ರತಿಗಳನ್ನು ಅರ್ಥೈಸಿ ಹೇಳುವ ಹಾಗೂ ಹಸ್ತಪ್ರತಿ ಶಾಸ್ತ್ರವನ್ನು ಕುರಿತಾದ ಲೇಖನಗಳನ್ನೊಳಗೊಂಡ ನಿಯತಕಾಲಿಕೆಯೊಂದನ್ನು ಪ್ರಕಟಿಸುವ ಯೋಜನೆಯ ಹೊಣೆಹೊಂದನ್ನು ಹಾಕಿಕೊಂಡು ಕಾರ್ಯರೂಪಕ್ಕಿಳಿಸಬೇಕು.

ಪ್ರಾಚೀನ ಹಸ್ತ ಪ್ರತಿಗಳ ಸಂಗ್ರಹಣೆ, ರಕ್ಷಣೆ ಇತ್ಯಾದಿ ಸಮಸ್ಯೆಗಳ ಬಗ್ಗೆ ಈ ಎರಡು ದಿನ ಜರುಗಿದಂಥ ವಿಚಾರ ಸಂಕಿರಣವನ್ನು ಆಧುನಿಕ ಹಸ್ತಪ್ರತಿಗಳು ಅಂದರೆ– ಇತ್ತೀಚಿನ ಸಾಹಿತಿಗಳು, ರಾಜಕಾರಣಿಗಳು, ಸಮಾಜ ಸೇವಾ ಕಾರ್ಯಕರ್ತರು- ಇವರು ಬರೆದಿಟ್ಟ ದಿನಚರಿಗಳು, ಪತ್ರಗಳು, ಇತರೇ ಕಾಗದ ಪತ್ರಗಳು– ಇವುಗಳ ಸಂರಕ್ಷಣೆ ಕುರಿತು ಏರ್ಪಡಿಸುವದು ಅತ್ಯವಶ್ಯ. ಅವುಗಳ ಮಹತ್ವ ಅರಿಯದೆ ಅವುಗಳನ್ನು ಉಪೇಕ್ಷಿಸುವ ಮುಗ್ಧತನ ಹಾಗೂ ಅಚಾತುರ್ಯವನ್ನು ನಾವು ಪ್ರದರ್ಶಿಸಿದ್ದೇವೆ. ಅದರಿಂದಾಗಿ ೧೯ನೆಯ ಶತಮಾನದ ಹಾಗೂ ಇದೇ ಶತಮಾನದ ಪೂರ್ವಾರ್ಧದ ಇಂಥ ಎಷ್ಟೋ ಮಹತ್ವದ ಹಸ್ತ ಪ್ರತಿಗಳಿಗೆ ನಾವು ಎರವಾಗಿದ್ದೇವೆ.

ಈ ದಿಸೆಯಲ್ಲಿ ಶರಗತಿಯಿಂದ ಸಾಗಲು ಈ ವಿಚಾರ ಸಂಕಿರಣ ಸ್ಫೂರ್ತಿಯನ್ನು ನೀಡಲಿ; ಒಂದು ನೀಲ ನಕ್ಷೆ ನಮ್ಮ ಕಣ್ಣೆದುರು ಕುಣಿದಾಡಲಿ ಎಂದು ಆಶಿಸಿ, ಇದರಲ್ಲಿ ಪಾಲ್ಗೊಳ್ಳಲು ನನಗೆ ಅವಕಾಶ ಮಾಡಿಕೊಟ್ಟುದುದಕ್ಕಾಗಿ ಅದರ ಪ್ರವರ್ತಕರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ವಿರಮಿಸುತ್ತೇನೆ.

●

ಕರ್ನಾಟಕ ಭಾರತಿ (ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ: ಯಾವುದೇ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳು ರೂ. ೧೦೦–೦೦ (ಒಂದು ನೂರು ರೂ. ಗಳು) ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ (ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮–೦೦ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ : ರೂ. ೨–೫೦ (ಅಂಚೆವೆಚ್ಚ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ರೂ. ೪–೦೦

ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ

ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಈ ಸಂಚಿಕೆಯ ಲೇಖಕರು

೧. ಪ್ರೊ. ಸ. ಸ. ಮಾಳವಾಡ
"ಪ್ರಶಾಂತ" ಕಲ್ಯಾಣ ನಗರ, ಧಾರವಾಡ.

೨. ಡಾ. ಎಸ್. ಶಿವಣ್ಣ
ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

೩. ಡಾ. ಎಚ್. ದೇವೀರಪ್ಪ
೫೨, ಹರಿಹರ, ಕಾರ್ಡರಸ್ತೆ, ವಿಜಯನಗರ, ಬೆಂಗಳೂರು-೪೦

೪. ಡಾ. ಬಿ. ಆರ್. ಹಿರೇಮಠ
ಅಧ್ಯಾಪಕರು
ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ವೀರಣ್ಣ ರಾಜೂರ
ಅಧ್ಯಾಪಕರು
ಕನ್ನಡ ಅಧ್ಯಯನಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. ಡಾ. ಎನ್. ಬಸವಾರಾಧ್ಯ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೭. ಡಾ. ಬಿ. ಕೆ. ಹಿರೇಮಠ
ಕನ್ನಡ ಪ್ರಾಧ್ಯಾಪಕರು, ಬಸವೇಶ್ವರ ಆರ್ಟ್ಸ ಕಾಲೇಜು, ಬಾಗಲಕೋಟ

೮. ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಡಾ. ಬಿ. ಎಸ್. ಸಣ್ಣಯ್ಯ
ಕನ್ನಡ ಅಧ್ಯಾಪಕರು, ಮಾನಸಗಂಗೋತ್ರಿ, ಮೈಸೂರು,

೧೦. ಶ್ರೀ ಕೆ. ಎಸ್. ದೇಶಪಾಂಡೆ
ಗ್ರಂಥಪಾಲಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ